ಮಾನವಿಕ ಕರ್ಣಾಟಕ

ಸಂಪುಟ ೧೪ ಸಂಚಿಕೆ ೩

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೧೯೮೪

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ' ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸ ಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕ ಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿ ಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೪ ಸಂಚಿಕೆ ೩

೫೫

ನೇ ಸಂಚಿಕೆ

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೧೯೮೪

MANAVIKA KARNATAKA, Kannada quarterly of the University of Mysore, Volume 14, Number 3, May 1984
Edited by Dr. B.K. Gururaja Rao and Dr. C.K. Renukarya

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ|| ಬಿ. ಕೆ. ಗುರುರಾಜ ರಾವ್
ಡಾ|| ಸಿ. ಕೆ. ರೇಣುಕಾರ್ಯ

ಪ್ರಕಾಶಕರು

ಕೆ. ಟಿ. ವೀರಪ್ಪ
ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೬

ಮುದ್ರಕರು
ಶ್ರೀಲಕ್ಷ್ಮೀ ಮುದ್ರಣಾಲಯ, ರವೆ ಬೀದಿ, 2 ನೇ ಕ್ರಾಸ್, ಮೈಸೂರು - 1

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧ ಸಿ.ಕೆ. ರೇಣುಕಾರ್ಯ	ಅರ್ಥಶಾಸ್ತ್ರ ಪ್ರವಾಚಕರು, ಮಾನಸ ಗಂಗೋತ್ರಿ, ಮೈಸೂರು–೬. ಮಾನವಿಕ ಕರ್ಣಾಟಕದ ಸಂಪಾದಕರು
೨ ಕೆ. ಯಶೋಧರ	ಅಧ್ಯಾಪಕಿ, ಶಿಕ್ಷಣ ವಿಭಾಗ, ಮಾನಸ ಗಂಗೋತ್ರಿ, ಮೈಸೂರು–೬.
೩ ಎಚ್.ಎಂ. ನಾಗರಾಜ ರಾವ್	ಸಹಾಯಕ ಸಂಶೋಧಕರು, ಎಪಿಗ್ರಾಫಿಯ ಕರ್ನಾಟಿಕಾ ಪುನರ್ಮುದ್ರಣ ಯೋಜನೆ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–೬.
೪ ಕೆ.ಎಸ್. ರಾಮಕೃಷ್ಣರಾವ್	ನಿವೃತ್ತ ತತ್ತ್ವಶಾಸ್ತ್ರ ಪ್ರಾಧ್ಯಾಪಕರು, ೩೬, ೧ನೇ ಮುಖ್ಯರಸ್ತೆ, ಜಯಲಕ್ಷ್ಮಿಪುರಂ, ಮೈಸೂರು–೧೨
೫ ಸಿ. ಮಹಾದೇವ	ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ವಿಭಾಗ, ಮಾನಸ ಗಂಗೋತ್ರಿ, ಮೈಸೂರು–೬.
೬ ಕೆ.ಎಸ್. ಶಿವಣ್ಣ	ಇತಿಹಾಸ ಪ್ರವಾಚಕರು, ಮಾನಸ ಗಂಗೋತ್ರಿ, ಮೈಸೂರು–೬.
೭ ಸೀತಾರಾಮ ಜಾಗೀರ್‌ದಾರ್	ಸಹಾಯಕ ಸಂಶೋಧಕರು, ಎಪಿಗ್ರಾಫಿಯ ಕರ್ನಾಟಿಕಾ ಪುನರ್ಮುದ್ರಣ ಯೋಜನೆ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–೬.
೮ ಎನ್. ಸಿಂಗಯ್ಯ	ಅಧ್ಯಾಪಕರು, ಮಾನವ ಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ, ಮೈಸೂರು–೬.
೯ ಎಂ. ರಾಧಾಪಟೇಲ್	ಅಧ್ಯಾಪಕಿ, ಪ್ರಾಚೀನ ಇತಿಹಾಸ ವಿಭಾಗ, ಮಾನಸ ಗಂಗೋತ್ರಿ, ಮೈಸೂರು–೬
೧೦ ಅನ್ನಪೂರ್ಣಾ ಎಂ. ನಾಯಕ್	ಅಧ್ಯಾಪಕಿ, ಮಾನವ ಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ, ಮೈಸೂರು–೬
೧೧ ಯಮುನಾಬಾಯಿ ಆರ್. ರಾವ್	ಶ್ರೀ, ೪೮೯, ೧೨ನೇ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು–೬
೧೨ ಬಿ. ಕೆ. ಜಿ. (ಡಾ|| ಬಿ.ಕೆ. ಗುರುರಾಜ ರಾವ್)	ಪ್ರಾಚೀನ ಇತಿಹಾಸ ಪ್ರವಾಚಕರು, ಮಾನಸ ಗಂಗೋತ್ರಿ, ಮೈಸೂರು–೬. ಮಾನವಿಕ ಕರ್ಣಾಟಕದ ಸಂಪಾದಕರು

೧೩ ವೆಂಕಟೇಶ	ಸಹಾಯಕ ಶಾಸನ ತಜ್ಞರು, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ, ಮೈಸೂರು–೫.
೧೪ ಎಸ್. ನಿಂಗಯ್ಯ	ಅಧ್ಯಾಪಕರು, ಮಾನವ ಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ; ಮೈಸೂರು–೬.
೧೫ ಎ. ವಿ. ಎನ್.	ಪ್ರಾಚೀನ ಇತಿಹಾಸ ಪ್ರಾಧ್ಯಾಪಕರು, ಮಾನಸ ಗಂಗೋತ್ರಿ, ಮೈಸೂರು–೬.
೧೬ ಎಸ್. ನಾಗರಾಜು	ಅರ್ಥಶಾಸ್ತ್ರ ಪ್ರವಾಚಕರು, ಮಾನಸ ಗಂಗೋತ್ರಿ, ಮೈಸೂರು–೬.

ಸಿ. ಕೆ. ರೇಣುಕಾರ್ಯ

ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿ ವಿಜೇತ ಗೆರಾರ್ಡ್ ಡಿಬ್ರ್ಯೂ

1983ರ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿ ಅಮೆರಿಕೆಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಹಾಗೂ ಗಣಿತಶಾಸ್ತ್ರದ ಪ್ರಾಧ್ಯಾಪಕ ಗೆರಾರ್ಡ್ ಡಿಬ್ರ್ಯೂರವರ ಪಾಲಾಗಿದೆ. 1969ರಲ್ಲಿ ಪ್ರಾರಂಭವಾದ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಪಡೆಯುತ್ತಿರುವವರಲ್ಲಿ ಡಿಬ್ರ್ಯೂ 12ನೆಯ ಅಮೆರಿಕನ್ನರು.

63 ವರ್ಷ ವಯಸ್ಸಿನ ಡಿಬ್ರ್ಯೂ 1921ರಲ್ಲಿ ಫ್ರಾನ್ಸ್‌ನಲ್ಲಿ ಜನಿಸಿದರು. 1956ರಲ್ಲಿ ಪ್ಯಾರಿಸ್ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿಯನ್ನು ಗಳಿಸಿದರು. 1950 ಮತ್ತು 1955ರ ನಡುವೆ ಚಿಕಾಗೋ ವಿಶ್ವವಿದ್ಯಾನಿಲಯದ ಕೌಲ್ಸ್ ಸಮಿತಿಯಲ್ಲಿ ಸಂಶೋಧನ ಸಹಾಯಕರಾಗಿದ್ದರು. ನಂತರ 1955 ಮತ್ತು 60ರ ನಡುವೆ ಯೇಲ್ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದರು. 1960 ಮತ್ತು 61ರ ನಡುವೆ "ಸ್ಟಾನ್‌ಫೋರ್ಡ್ ಸ್ಟಡಿ ಸೆಂಟರ್ ಫಾರ್ ಅಡ್ವಾನ್ಸ್‌ಡ್ ಸ್ಟಡಿ ಇನ್ ಬಿಹೆವಿರಲ್ ಸೈನ್ಸ್"ನಲ್ಲಿ ಫೆಲೋ ಆಗಿದ್ದರು. 1962ರಲ್ಲಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರವನ್ನು ಬೋಧಿಸಲು ಪ್ರಾರಂಭಿಸಿದರು. ನಂತರ ಅಲ್ಲೇ 1975ರಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕರಾದರು. 1982ರಲ್ಲಿ ಅಮೆರಿಕನ್ ಎಕನಾಮಿಕ್ ಅಸೋಸಿಯೇಷನ್ ಅವರನ್ನು ಅತ್ಯಂತ ಮೇಧಾವಿ ಅರ್ಥವಿಜ್ಞಾನಿಯೆಂದು ಗುರುತಿಸಿತ್ತು.

ಬಂಡವಾಳಷಾಹಿ ಅರ್ಥವ್ಯವಸ್ಥೆಯಲ್ಲಿನ ಸ್ಪರ್ಧಾತ್ಮಕ ಸಮತೋಲನ ನಿರ್ಧಾರಕ ತತ್ವಗಳ ಬಗ್ಗೆ ಗಣಿತೀಯ ಮಾದರಿಗಳನ್ನು ಅಭಿವೃದ್ಧಿ ಪಡಿಸಿರುವುದರಲ್ಲಿ ಡಿಬ್ರ್ಯೂರವರ ಸಾಧನೆ ಅದ್ವಿತೀಯವಾದುದು. 'ಸ್ಪರ್ಧಾತ್ಮಕ ಅರ್ಥವ್ಯವಸ್ಥೆಯಲ್ಲಿ ಆರ್ಥಿಕ ಚಲಗಳು (Economic variables) ಹೇಗೆ ಸಮತೋಲನವನ್ನು ಮುಟ್ಟುತ್ತವೆ ಎಂಬುದರ ಬಗ್ಗೆ ಪ್ರಾರಂಭಿಕ ವ್ಯವಸ್ಥಿತ ಮಾದರಿಯನ್ನು ಅಭಿವೃದ್ಧಿ ಪಡಿಸಿದವನು ಅರ್ಥಶಾಸ್ತ್ರದ ಪಿತಾಮಹನಾದ ಆಡಂಸ್ಮಿತ್ (1976). ಇದಕ್ಕೆ ಸ್ಮಿತ್, ಸ್ಪರ್ಧಾತ್ಮಕ ಅರ್ಥ

ವ್ಯವಸ್ಥೆಯಲ್ಲಿ ಸರಕು ಮತ್ತು ಸೇವೆಗಳ ಬೇಡಿಕೆ ಮತ್ತು ನೀಡಿಕೆಗಳು ಹೇಗೆ ಅರ್ಥ ವ್ಯವಸ್ಥೆಯ ಸಮತೋಲನವನ್ನು ಕಾಯ್ದುಕೊಳ್ಳುತ್ತವೆ ಎಂಬುದನ್ನು ವಿವರಣಾತ್ಮಕವಾಗಿ ತನ್ನ ಉದ್ಗ್ರಂಥವಾದ "ರಾಷ್ಟ್ರಗಳ ಸಂಪತ್ತು" ಗ್ರಂಥದಲ್ಲಿ ಚರ್ಚಿಸಿದ. ಮುಂದೆ ವಾಲ್‌ರಾ ಗಣಿತೀಯವಾಗಿ ಮಾರುಕಟ್ಟೆಯ ಸಾರ್ವತ್ರಿಕ ಸಮತೋಲನ ಮಾದರಿಯನ್ನು ಅಭಿವೃದ್ಧಿಪಡಿಸಿದ. ಡಿಬ್ರೂ್ಯ ಈ ಸಿದ್ಧಾಂತಗಳಿಗೆ ಗಣಿತೀಯ ಬೆಂಬಲವನ್ನು ಒದಗಿಸಿದ. ಈ ಬಗ್ಗೆ ಡಿಬ್ರೂ್ಯವಿನ ಗ್ರಂಥಗಳಾದ "ಥಿಯರಿ ಆಫ್ ವ್ಯಾಲ್ಯೂ" "ಎಕ್ಸಿಸ್‌ಟೆನ್ಸ್ ಆಫ್ ಈಕ್ವಿಲಿಬ್ರಿಯಂ ಫಾರ್ ಎ ಕಾಂಪಿಟಿಟಿವ್ ಎಕಾನಮಿ" ಬಹಳ ಮುಖ್ಯವಾದವು. ಇತ್ತೀಚೆಗೆ ಅಂದರೆ 1983ರಲ್ಲಿ ಡಿಬ್ರೂ್ಯವಿನ "ಮಾಥಮಾಟಿಕಲ್ ಎಕನಾಮಿಕ್ಸ್, ಟ್ವೆಂಟಿ ಪೇಪರ್ಸ್ ಆಫ್ ಗೆರಾರ್ಡ್ ಡಿಬ್ರೂ್ಯ ಪ್ರಕಟವಾಗಿವೆ.

ಡಿಬ್ರೂ್ಯ ಅಭಿವೃದ್ಧಿ ಪಡಿಸಿರುವ ಗಣಿತೀಯ ಮಾದರಿಗಳನ್ನು ಅರ್ಥವ್ಯವಸ್ಥೆಯ ಅಂಶಲಕ್ಷಿ ಮಾರುಕಟ್ಟೆ ಸಮತೋಲನ ವಿಶ್ಲೇಷಣೆಗೆ ವ್ಯಾಪಕವಾಗಿ ಬಳಸಲಾಗಿದೆ. ವಿಶ್ವ ಬ್ಯಾಂಕ್ ಸಹ ಡಿಬ್ರೂ್ಯವಿನ ಮಾದರಿಗಳನ್ನಾಧರಿಸಿ, ವಿವಿಧ ಅರ್ಥವ್ಯವಸ್ಥೆಗಳಲ್ಲಿನ ಆರ್ಥಿಕ ಅಭಿವೃದ್ಧಿಗಳನ್ನು ಅಧ್ಯಯನಮಾಡಿದೆ. ಡಿಬ್ರೂ್ಯವಿಗೆ ದೊರೆತಿರುವ ಈ ಸನ್ಮಾನ ಅರ್ಥಶಾಸ್ತ್ರದಲ್ಲಿ ವ್ಯಾಪಕವಾಗಿ ಬೆಳೆಯುತ್ತಿರುವ ಗಣಿತಶಾಸ್ತ್ರದ ಪ್ರಾಮುಖ್ಯತೆಯನ್ನೇ ಎತ್ತಿ ಹಿಡಿಯುತ್ತದೆ.

— o O o —

"ಹಂದಿಯ ಬೆಲೆ ಹೆಚ್ಚು ಏಕೆ ಗೊತ್ತೆ ಅದು ಬೃಹತ್ ಗಾತ್ರದ್ದು. ಮತ್ತು ಅದು ತಿನ್ನುವ ಧಾನ್ಯದ ಬೆಲೆ ಹೆಚ್ಚು, ಅದಕ್ಕೆ. ಧಾನ್ಯದ ಬೆಲೆ ಏಕೆ ಹೆಚ್ಚು ? ಏಕೆಂದರೆ ಅದನ್ನು ಬೆಳೆಯುವ ಜಮೀನಿನ ಬೆಲೆ ಹೆಚ್ಚು. ಹಾಗಾದರೆ ಜಮೀನಿನ ಬೆಲೆ ಏಕೆ ಹೆಚ್ಚು ? ಏಕೆಂದರೆ ಅದು ಹೆಚ್ಚು ಬೆಲೆ ಬಾಳುವ ಧಾನ್ಯವನ್ನು ಸೃಷ್ಟಿಸುತ್ತದೆ ಮತ್ತು ಆ ಧಾನ್ಯ ಹೆಚ್ಚು ಬೆಲೆ ಬಾಳುವ ಹಂದಿಯನ್ನು ಸಾಕುತ್ತದೆ ; ಅದಕ್ಕಾಗಿ."

ಹೆಚ್.ಜೆ. ದಾವೆನ್‌ಪೋರ್ಟ್

ಕೆ. ಯಶೋಧರ

ಪ್ರೌಢಶಾಲಾ ತರಬೇತಿ ಶಿಕ್ಷಕರಿಗೆ ಕನ್ನಡ ವ್ಯಾಕರಣದಲ್ಲಿ ಸ್ವಯಂಕಲಿಕಾ ಸಾಮಗ್ರಿಯ ಪರಿಣಾಮ

ಸಂಯೋಜಿತ ಕಲಿಕಾಸಾಮಗ್ರಿಯನ್ನು ಸಾಮಾನ್ಯ ಬೋಧನಾ ಕಾರ್ಯಕ್ರಮದಲ್ಲಿ, ಕಲಿಕೆಯನ್ನು ಶ್ರೀಮಂತಗೊಳಿಸುವ ಕಾರ್ಯಕ್ರಮದಲ್ಲಿ ಹಾಗೂ ಪರಿಹಾರಾತ್ಮಕ ಕಾರ್ಯಕ್ರಮದಲ್ಲಿ ಸ್ವಯಂಕಲಿಕಾ ಸಾಧನವಾಗಿ ಉಪಯೋಗಿಸಬಹುದೆಂಬುದಾಗಿ ಅನೇಕ ಸಂಶೋಧನಾ ಅಧ್ಯಯನಗಳಿಂದ ದೃಢಪಡಿಸಲಾಗಿದೆ. ಬ್ಲೈತ್ (1960,) ಡೇವಿಸ್ (1961), ಹಾಲ್ಯಾಂಡ್ (1961), ಶರ್ಮಾ (1966), ಕುಲಕರ್ಣಿ ಮತ್ತು ಮಾಲಿಕ್ (1967), ಷಾ (1969)—ಇವರ ತೌಲನಿಕ ಅಧ್ಯಯನಗಳಿಂದ ಸಂಯೋಜಿತ ಕಲಿಕಾ ಸಾಮಗ್ರಿಯ ಬಳಕೆಯು ಸಾಂಪ್ರದಾಯಿಕ ಬೋಧನಾಕ್ರಮಕ್ಕಿಂತ ಉತ್ತಮ ಬೋಧನಾಕ್ರಮವಾಗಿ, ಉನ್ನತ ಗಳಿಕೆಯನ್ನುಂಟುಮಾಡುವಲ್ಲಿ ಪರಿಣಾಮಕಾರಿಯಾಗಿದೆ ಎಂದು ತಿಳಿದು ಬಂದಿದೆ. ಸಂಯೋಜಿತ ಕಲಿಕಾ ಸಾಮಗ್ರಿಯು ಸ್ವಯಂ ಅಧ್ಯಯನಕ್ಕೆ ಹಾಗೂ ನಿವಾರಣೋಪಾಯಕ ಬೋಧನೆಗೆ ಉಪಯುಕ್ತ ಸಾಧನವಾಗಿದೆ ಎಂಬುದನ್ನು ಗಿಬ್ಸನ್ (1960), ಮತ್ತು ಜೋಷಿ (1972) ಅವರಿಂದ ದೃಢೀಕರಿಸಲಾಗಿದೆ. SIE ಗುಜರಾತ್ (1970) ಅಧ್ಯಯನದಿಂದ ವಿಷಯದ ಅತಿಸೂಕ್ಷ್ಮ ವಿಶ್ಲೇಷಣೆಯಿಂದಾಗಿ ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದರಿಂದ ಸಂಯೋಜಿತ ಕಲಿಕಾ ಸಾಮಗ್ರಿ ಬೋಧಕರಿಗೆ ಪ್ರಯೋಜನಕಾರಿಯಾಗಿದೆ ಎಂಬುದು ತಿಳಿದುಬಂದಿದೆ. ಮೀರತ್ ವಿಶ್ವವಿದ್ಯಾನಿಲಯ ಹಾಗೂ ಬರೋಡ ಎಂ. ಎಸ್. ವಿಶ್ವವಿದ್ಯಾನಿಲಯಗಳಿಂದ ಕ್ರಮವಾಗಿ ಶಿಕ್ಷಣದಲ್ಲಿ ತತ್ವಶಾಸ್ತ್ರ ಹಾಗೂ ಶೈಕ್ಷಣಿಕ ಮೌಲ್ಯಮಾಪನದ ಪರಿಕಲ್ಪನೆಯ ಒಗೆಗೆ ತರಬೇತಿ ಶಿಕ್ಷಕರಿಗಾಗಿ ಸಂಯೋಜಿತ ಪಠ್ಯಪುಸ್ತಕವನ್ನು ತಯಾರಿಸಲಾಗಿದೆ. ಇನ್ನೂ ಕೆಲವಾರು ಪಠ್ಯವಿಷಯಗಳಲ್ಲಿ ಸಂಯೋಜಿತ ಕಲಿಕಾಸಾಮಗ್ರಿಯ ತಯಾರಿ ಮುಂದುವರಿಯುತ್ತಲಿರುವುದು ಗಮನಾರ್ಹವಾಗಿದೆ.

ಬೋಧಕನು ತಾನು ಬೋಧಿಸಬೇಕಾದ ವಿಷಯದಲ್ಲಿ ಪಾಂಡಿತ್ಯ ಪಡೆದಿರಬೇಕಾದುದು ಪರಿಣಾಮಕಾರಿ ಬೋಧನೆಗೆ ಅಗತ್ಯವಾದ ಅಂಗಗಳಲ್ಲೊಂದಾಗಿದೆ. ಬೋಧನಾ ವಿಷಯದಲ್ಲಿ ಆಳವಾದ ಪಾಂಡಿತ್ಯವಿಲ್ಲದಿದ್ದರೂ, ಸ್ಪಷ್ಟ ಪರಿಕಲ್ಪನೆ ಹಾಗೂ ಯಥೋಚಿತ ತಿಳುವಳಿಕೆಯಿರುವುದು ಅತ್ಯಗತ್ಯ. ಅಂತೆಯೇ ಯಾವುದೇ ವಿಷಯ ವಿಭಾಗದ ತರಬೇತಿ ಶಿಕ್ಷಕರೇ ಆಗಲೀ ತಮ್ಮ ಬೋಧನಾ ವಿಷಯದಲ್ಲಿ ಯಥೋಚಿತ ಜ್ಞಾನ ಪಡೆದಿರಬೇಕಾದುದು ಅನಿವಾರ್ಯ. ಆದರೆ ಇತ್ತೀಚೆಗೆ ಕನ್ನಡ ಬೋಧನಾ ಪದ್ಧತಿಯನ್ನು ಐಚ್ಛಿಕವಾಗಿ ಆಯ್ಕೆ ಮಾಡಿಕೊಂಡಿರುವ ಪ್ರೌಢಶಾಲಾ ತರಬೇತಿ ಶಿಕ್ಷಕರಲ್ಲಿ ಬಹುಸಂಖ್ಯಾತರು ಕನ್ನಡ ವ್ಯಾಕರಣದಲ್ಲಿ ಅನೇಕ ಪರಿಕಲ್ಪನೆಗಳ ಹಾಗೂ ಸೂತ್ರಗಳ, ನಿಯಮಗಳ ಅಸ್ಪಷ್ಟ ಗ್ರಹಿಕೆಯಿಂದಾಗಿ ಪರಿಣಾಮಕಾರಿ ಬೋಧನೆಯಲ್ಲಿ ಕುಂಠಿತರಾಗುತ್ತಿರುವುದು ಗಮನಾರ್ಹವಾಗಿದೆ. ಅದರಲ್ಲೂ ಹೆಚ್ಚಿನ ಸಂಖ್ಯೆಯ ತರಬೇತಿ ಶಿಕ್ಷಕರು ವಿವಿಧ ಸಮಾಸಪದಗಳನ್ನು ಗುರುತಿಸಿ, ವಿಗ್ರಹವಾಕ್ಯ ಮಾಡಿ, ಸಮಾಸಕಾರ್ಯವನ್ನು ಗುರುತಿಸಿ ಆ ಸಮಾಸಗಳನ್ನು ಹೆಸರಿಸಲು ಅಸಮರ್ಥರಾಗಿರುವುದು ಉಲ್ಲೇಖಾರ್ಹವಾಗಿದೆ. ಇಷ್ಟೇ ಅಲ್ಲದೆ, ಹಲವಾರು ತರಬೇತಿ ಶಿಕ್ಷಕರ, ತರಬೇತಿ ಶಿಕ್ಷಕ-ಬೋಧಕರ ಹಾಗೂ ಪ್ರೌಢಶಾಲಾ ಕನ್ನಡ ಬೋಧಕರ ಅಭಿಪ್ರಾಯದ ಮೇರೆಗೆ ಉಕ್ಕಿನ ಕಡಲೆಯೆಂದು ಪರಿಗಣಿಸಲ್ಪಟ್ಟಿರುವ ಕನ್ನಡ ವ್ಯಾಕರಣದಲ್ಲಿ 'ಸಮಾಸ ಪ್ರಕರಣ'ವು ಅತ್ಯಧಿಕ ಕ್ಲಿಷ್ಟತೆಯನ್ನು ಹೊಂದಿದ್ದು ಅರ್ಥಮಾಡಿಕೊಳ್ಳಲು ಕಷ್ಟಸಾಧ್ಯವಾಗಿದೆಯೆಂದೂ, ಅಂತೆಯೇ ಬೋಧನಾ ಹಂತದಲ್ಲಿಯೂ ಮುಗ್ಗರಿಸುವಂತಾಗಿದೆಯೆಂದೂ ತಿಳಿದುಬಂದಿತು. ಆದ್ದರಿಂದ ಕ್ಲಿಷ್ಟತೆಯಿಂದ ಕೂಡಿರುವ 'ಸಮಾಸ ಪ್ರಕರಣ'ವನ್ನೇ ಆಯ್ಕೆ ಮಾಡಿಕೊಂಡು, ಸಂಯೋಜಿತ ಕಲಿಕಾ ಕ್ರಮದ ನಿಯಮಗಳನ್ನಾಧರಿಸಿದ ಸ್ವಯಂ ಕಲಿಕಾ ಸಾಮಗ್ರಿಯನ್ನು ತಯಾರಿಸಿ, ತರಬೇತಿ ಶಿಕ್ಷಕರಿಗೆ ವ್ಯಾಕರಣ ತಿಳುವಳಿಕಾಮಟ್ಟದಲ್ಲಿರುವ ಕೊರತೆಯನ್ನು ತುಂಬಲು ಸಹಾಯಕವಾದ ಸಾಮಗ್ರಿಯಂತೆ ಉಪಯೋಗಿಸಲು ಪ್ರಯತ್ನಿಸಲಾಯಿತು. ಈ ದಿಸೆಯಲ್ಲಿ ತಯಾರಿಸಿದ ಸ್ವಯಂಕಲಿಕಾ ಸಾಮಗ್ರಿಯು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿದೆ ಎಂಬುದನ್ನು ಅಧ್ಯಯನ ಮಾಡಲು ನಿರ್ಧರಿಸಲಾಯಿತು.

ಗುರಿಗಳು : ಪರಿಹಾರಾತ್ಮಕ ಬೋಧನಾಕ್ರಮ ಸಾಧನವಾಗಿ ಸ್ವಯಂಕಲಿಕಾ ಸಾಮಗ್ರಿಯು ಪ್ರೌಢಶಾಲಾ ತರಬೇತಿ ಶಿಕ್ಷಕರಿಗೆ ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿದೆ ಎಂಬುದನ್ನು ಗುರುತಿಸುವುದು.

ಪ್ರಾಕ್ಕಲ್ಪನೆ : ಸ್ವಯಂಕಲಿಕಾ ಸಾಮಗ್ರಿಯು ಸಮಾಸ ಪ್ರಕರಣದಲ್ಲಿಯ ತರಬೇತಿ ಶಿಕ್ಷಕರ ಸಾಧನಾ ಮಟ್ಟದಲ್ಲಿ ಮಹತ್ವಪೂರ್ಣ ಗಳಿಕೆಯನ್ನುಂಟು ಮಾಡುತ್ತದೆ.

ಇತಿಮಿತಿಗಳು : (1) ಕನ್ನಡ ವ್ಯಾಕರಣದಲ್ಲಿ 'ಸಮಾಸ ಪ್ರಕರಣಕ್ಕೆ' ಮಾತ್ರ ಸ್ವಯಂ ಕಲಿಕಾ ಸಾಮಗ್ರಿಯನ್ನು ತಯಾರಿಸಲಾಗಿದೆ.

(2) ಈ ಅಧ್ಯಯನಕ್ಕೆ ಶಂಕರಗೌಡ ಶಿಕ್ಷಣ ಕಾಲೇಜಿನ ಕನ್ನಡ ಬೋಧನಾ ಪದ್ಧತಿ ವಿಭಾಗದ ಅಭ್ಯರ್ಥಿಗಳನ್ನು ಮಾತ್ರ ಆಯ್ಕೆಮಾಡಿಕೊಳ್ಳಲಾಗಿದೆ.

ಅಧ್ಯಯನಕ್ಕೆ ಅಳವಡಿಸಿದ ಕ್ರಮ : ಮಂಡ್ಯ ನಗರದ ಶಂಕರಗೌಡ ಶಿಕ್ಷಣ ಕಾಲೇಜಿನ ಕನ್ನಡ ಬೋಧನಾ ಪದ್ಧತಿ ವಿಭಾಗದ ಎಲ್ಲಾ ಅಂದರೆ 38 ತರಬೇತಿ ಶಿಕ್ಷಕರನ್ನು ಆಯ್ಕೆಮಾಡಿಕೊಂಡು, ಪೂರ್ವ ಪರೀಕ್ಷೆ ಹಾಗೂ ಅಂತಿಮ ಪರೀಕ್ಷಾಕ್ರಮವನ್ನು ಅಳವಡಿಸಿಕೊಳ್ಳಲಾಯಿತು. ಶಿಕ್ಷಣ ಕಾಲೇಜಿನ ಬೋಧನಾ ಕಾರ್ಯಕ್ರಮದಿಂದ ತರಬೇತಿ ಶಿಕ್ಷಕರು ಯಾವುದೇ ರೀತಿಯಿಂದಲೂ ಪ್ರಭಾವಿತರಾಗುವ ಮೊದಲೇ ಅಂದರೆ ವರ್ಷದ ಆರಂಭದಲ್ಲಿಯೇ ಸಮಾಸ ಪ್ರಕರಣದಲ್ಲಿ ಅವರ ಜ್ಞಾನ ಮಟ್ಟವನ್ನು ಅಥವಾ ಸಾಧನಾ ಮಟ್ಟವನ್ನು ಪರೀಕ್ಷಿಸಲು 50 ಅಂಕದ 1 ಗಂಟೆ ಅವಧಿಯ ವಸ್ತುನಿಷ್ಠ ಸಾಧನಾ ಪರೀಕ್ಷೆಯನ್ನು ಪ್ರಯೋಗಿಸಲಾಯಿತು (ಆರಂಭ ಪರೀಕ್ಷೆ–Pretest). ಈ ಪರೀಕ್ಷೆಗೆ ಪೂರ್ವ ತಯಾರಿ ನಡೆಸಲು ತರಬೇತಿ ಶಿಕ್ಷಕರು ವ್ಯಾಕರಣಕ್ಕೆ ಸಂಬಂಧಪಟ್ಟಂತೆ, ಯಾವುದೇ ಪುಸ್ತಕವನ್ನಾದರೂ ಓದಲು ಅವಕಾಶಕೊಡಲಾಗಿತ್ತು. ಆರಂಭ ಪರೀಕ್ಷೆಯಿಂದ ನಾಲ್ಕು ವಾರಗಳ ಅವಧಿಯ ನಂತರ (ಸ್ಮರಣ ಶಕ್ತಿಯ ಪ್ರಭಾವವನ್ನು ಶೂನ್ಯಗೊಳಿಸಲು) 38 ತರಬೇತಿ ಶಿಕ್ಷಕರಿಗೂ 'ಸಮಾಸ ಪ್ರಕರಣಕ್ಕೆ' ರಚಿಸಲ್ಪಟ್ಟ ಸ್ವಯಂಕಲಿಕಾ ಸಾಮಗ್ರಿಯನ್ನು ಒದಗಿಸಿ, ಅಧ್ಯಯನ ಮಾಡಲು ನಿರ್ದೇಶಿಸಲಾಯಿತು. ಪುನಃ 2 ವಾರಗಳ ಅವಧಿಯ ನಂತರ ಆರಂಭ ಪರೀಕ್ಷೆಗಾಗಿ ಉಪಯೋಗಿಸಿದ್ದ ಅದೇ ಸಾಧನಾ ಪರೀಕ್ಷೆಯನ್ನು ಮತ್ತೊಮ್ಮೆ ಪ್ರಯೋಗಿಸಲಾಯಿತು (ಅಂತಿಮ ಪರೀಕ್ಷೆ–Post test). ಪೂರ್ವೋತ್ತರ ಪರೀಕ್ಷೆಗಳೆರಡರಲ್ಲಿಯೂ ಗಳಿಸಿದ ಅಂಕಗಳ ವಿಶ್ಲೇಷಣೆಗಾಗಿ, ಒಂದೇ ಗುಂಪಿನ ಮೇಲೆ ಆರಂಭ ಹಾಗೂ ಅಂತಿಮ ಪರೀಕ್ಷಾ ಅಂಕಗಳ ಮಧ್ಯಮಾಂಕಗಳಲ್ಲಿ ಕಂಡುಬರುವ ವ್ಯತ್ಯಾಸದ ಮಹತ್ವವನ್ನು ಗುರುತಿಸಬಹುದು 't' ಪರೀಕ್ಷಾಕ್ರಮವನ್ನು ಅಳವಡಿಸಿಕೊಳ್ಳಲಾಯಿತು.

ಫಲಿತಾಂಶಗಳು ಮತ್ತು ಚರ್ಚೆ : ದತ್ತಾಂಶಕ್ಕೆ ಲೆಕ್ಕಾಚಾರ ಮಾಡಿದ 't' ಬೆಲೆ 9.93, ಪಟ್ಟಿಯಲ್ಲಿರುವ 't' ಬೆಲೆ 2.44 ಕ್ಕಿಂತ (dt=37, 0.01 ಹಂತ) ಹೆಚ್ಚಾಗಿದ್ದುದರಿಂದ 0.01 ಹಂತದಲ್ಲಿ ಮಹತ್ವಪೂರ್ಣವಾಗಿದೆ ಎಂದಾಯಿತು. ಅಂತೆಯೇ ಸಂಶೋಧನಾ ಪ್ರಾಕ್ಕಲ್ಪನೆಯನ್ನು ಪುರಸ್ಕರಿಸಿ, ಆರಂಭ ಪರೀಕ್ಷೆಗಿಂತ ಅಂತಿಮ ಪರೀಕ್ಷೆಯ ಸಾಧನಾಮಟ್ಟ ಉನ್ನತವಾಗಿದೆ ಎಂಬುದನ್ನು ಅನುಮೋದಿಸಲಾಯಿತು. ಅಂದರೆ ಸ್ವಯಂಕಲಿಕಾ ಸಾಮಗ್ರಿಯನ್ನು ಉಪಯೋಗಿಸಿಕೊಂಡು ಕೈಗೊಂಡ ಸ್ವಯಂ ಅಧ್ಯಯನದ ಫಲವಾಗಿ (ಪರಿಹಾರಾತ್ಮಕ ಕಾರ್ಯಕ್ರಮ) ಸಮಾಸ ಪ್ರಕರಣದ ಸಾಧನಾಮಟ್ಟದಲ್ಲಿ ಮಹತ್ವಪೂರ್ಣ ಗಳಿಕೆಯುಂಟಾಗಿದೆ ಎಂದಾಯಿತು. ಇದೇ ರೀತಿ ಕನ್ನಡ ವ್ಯಾಕರಣದ ಇತರ ಪ್ರಕರಣಗಳಲ್ಲಿಯೂ ಉತ್ತಮವಾದ ಸ್ವಯಂಕಲಿಕಾ ಸಾಮಗ್ರಿಯನ್ನು ತಯಾರುಮಾಡಿ ಬಳಸಿಕೊಂಡಲ್ಲಿ ತರಬೇತಿ ಶಿಕ್ಷಕರ ಸಾಧನಾಮಟ್ಟದಲ್ಲಿ ಮಹತ್ವಪೂರ್ಣ ಗಳಿಕೆಯನ್ನು ಪಡೆಯಲು ಸಾಧ್ಯವಾಗಬಹುದೆನಿಸುವುದು.

ಇದೇ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಂಡವರಲ್ಲಿ ಕೆಲವರಾದ ಬ್ಲೈತ್ (1960,) ಡೇವಿಸ್ (1961), ಕುಲಕರ್ಣಿ ಮತ್ತು ಮಾಲಿಕ್ (1969), ಷಾ (1969),

ಶರ್ಮಾ (1966), ದೇಸಾಯಿ (1966)—ಇವರು ತುಲನಾತ್ಮಕ ಅಧ್ಯಯನಗಳನ್ನು ಕೈಗೊಂಡು ಸಾಂಪ್ರದಾಯಿಕ ಬೋಧನಾಕ್ರಮಕ್ಕಿಂತ ಸಂಯೋಜಿತ ಕಲಿಕಾಸಾಮಗ್ರಿಯು ಉತ್ತಮ ಕ್ರಮವಾಗಿದ್ದು, ಉನ್ನತ ಸಾಧನಾಮಟ್ಟವನ್ನುಂಟುಮಾಡುವಲ್ಲಿ ಪರಿಣಾಮಕಾರಿಯಾಗಿದೆ ಎಂಬುದನ್ನು ದೃಢಪಡಿಸಿದ್ದರೆ, ಪ್ರಸ್ತುತ ಅಧ್ಯಯನವನ್ನು ಪರಿಹಾರಾತ್ಮಕಕಾರ್ಯಕ್ರಮದಲ್ಲಿ ಸಂಯೋಜಿತ ಕಲಿಕಾ ಸಾಮಗ್ರಿಯ ಪರಿಣಾಮವನ್ನು ತಿಳಿಯಪಡಿಸುವ ಗಿಬ್ಸನ್ (1960) ಮತ್ತು ಜೋಷಿ (1972) ಯವರ ಅಧ್ಯಯನಗಳ ಸಾಲಿನಲ್ಲಿ ಸೇರಿಸಬಹುದಾಗಿದೆ. ಇಡೀ ತರಗತಿಯಲ್ಲಿ ಸಂಯೋಜಿತ ಕಾರ್ಯಕ್ರಮವನ್ನು ನಿವಾರಣೋಪಾಯಕ ಕಾರ್ಯಕ್ರಮದಂತೆ ಉಪಯೋಗಿಸಿಕೊಂಡಾಗ ಪರಿಣಾಮಕಾರಿ ಕಲಿಕೆಗೆ ಸಹಾಯಕವಾಗಿ, ಉನ್ನತ ಸಾಧನಾಮಟ್ಟವನ್ನುಂಟುಮಾಡುವಲ್ಲಿ ಯಶಸ್ವಿಯಾಗಿದೆ ಎಂಬುದನ್ನು ಸಮರ್ಥಿಸುತ್ತದೆ.

ಇದೇ ಸ್ವಯಂಕಲಿಕಾ ಸಾಮಗ್ರಿಯನ್ನುಪಯೋಗಿಸಿಕೊಂಡ ತುಲನಾತ್ಮಕ ಅಧ್ಯಯನದಲ್ಲಿ, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 'ಸಮಾಸ ಪ್ರಕರಣ'ವನ್ನು ಬೋಧಿಸಲು ಉಪಯೋಗಿಸಿದಾಗ ಸಾಂಪ್ರದಾಯಿಕ ಬೋಧನಾಕ್ರಮಕ್ಕಿಂತ ಉತ್ತಮವಾಗಿದ್ದು ವಿದ್ಯಾರ್ಥಿಗಳಲ್ಲಿ ಉನ್ನತ ಸಾಧನಾಮಟ್ಟವನ್ನುಂಟುಮಾಡುವುದರಲ್ಲಿ ಪರಿಣಾಮಕಾರಿಯಾಗಿ ಕಂಡುಬಂದಿರುವುದು ಉಲ್ಲೇಖಾರ್ಹವಾಗಿದೆ. ಈ ಸ್ವಯಂಕಲಿಕಾ ಸಾಮಗ್ರಿಯು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸಾಮಾನ್ಯ ಬೋಧನಾಕ್ರಮದಲ್ಲಿ ಪರಿಣಾಮಕಾರಿಯಾಗಿ ಬಳಕೆಯಾಗಿದ್ದರೆ, ತರಬೇತಿ ಶಿಕ್ಷಕರಿಗೆ ವ್ಯಾಕರಣ ತಿಳುವಳಿಕಾ ಮಟ್ಟದಲ್ಲಿರುವ ಕೊರತೆಯನ್ನು ತುಂಬಲು ಸಹಾಯಕವಾದ ಪರಿಹಾರಾತ್ಮಕ ಸಾಧನವಾಗಿ ಪ್ರಯೋಜನಕ್ಕೆ ಬಂದಿರುವುದು ಗಮನಾರ್ಹ.

ಅನುಮಿತಿ: ಈ ಅಧ್ಯಯನದ ಮೇರೆಗೆ ಕೆಳಕಂಡ ತೀರ್ಮಾನವನ್ನು ಕೈಗೊಳ್ಳಲಾಗಿದೆ—ಸ್ವಯಂಕಲಿಕಾ ಸಾಮಗ್ರಿಯ ಬಳಕೆ ತರಬೇತಿ ಶಿಕ್ಷಕರ ಸಾಧನಾಮಟ್ಟದಲ್ಲಿ ಮಹತ್ವಪೂರ್ಣ ಗಳಿಕೆಯನ್ನುಂಟುಮಾಡಿದೆ. ಅಂದರೆ ಈ ಸ್ವಯಂಕಲಿಕಾ ಸಾಮಗ್ರಿಯು ತರಬೇತಿ ಶಿಕ್ಷಕರಿಗೆ ವ್ಯಾಕರಣ ಕಲಿಕೆಯಲ್ಲಿ ಕಂಡುಬಂದ ಕೊರತೆಯನ್ನು ಪೂರೈಸಲೋಸುಗ ಕೈಗೊಂಡ ಪರಿಹಾರಾತ್ಮಕ ಕಾರ್ಯಕ್ರಮದಲ್ಲಿ ಫಲಪ್ರದ ಸಾಧನವಾಗಿ ಬಳಸಲ್ಪಟ್ಟು ಕನ್ನಡ ವ್ಯಾಕರಣದ ಪರಿಕಲ್ಪನೆಗಳು ಹಾಗೂ ಸೂತ್ರಗಳ ಸ್ಪಷ್ಟ ಗ್ರಹಿಕೆಯನ್ನುಂಟುಮಾಡಲು ಸಹಾಯಕಾರಿಯಾಗಿದೆ.

BIBLIOGRAPHY

1. Buch M. B. (Ed)—A Survey of Research in Education, CABE, M. S. University of Baroda, Baroda 1974.
2. Blyth J. W.—Teaching Machines & Human beings. Educational Record, XLI, April 1960 pp 116-125.

3. Davis N. H.—A Sccond Teacher, Audio-visual Instruction, Vol. VI, 1981, pp 134-135.

4. Gibson—Programmed Teaching, Journal of Education, Ajmer: Rajasthan, Board of Sec. Edu July 1966 pp 22-41.

5. Joshi G. K.—A Programmed Remedial Course in Modern English Usage for the B A. Pre University classes, Central Institute of English & Foreign Languages, Hyderabad 1972.

6 SIE (Gujarat) To find out the effeetiveness of programmed learning, Ahmedabad 1970 in Buch M. B. (Ed).—A survey of Research in Education, CABE, M. S. University of Baroda, Baroda 1974.

7 Kulkarni S S. & Mallick S P.—Correspondence Course and Programmed Learning Approach. Journal of the Regional College of Edn. Bhopal. Vol 1, No. 3, 1967.

"ರಾಜಕೀಯ ಸಮಸ್ಯೆಗಳೆಲ್ಲಾ ಶೈಕ್ಷಣಿಕ ಸಮಸ್ಯೆಗಳಾಗುವ ದಿನ ಬಂದೇ ಬರುತ್ತದೆ. ಅಂತಹ ದಿನ ಈಗ ಇಲ್ಲದಿರಬಹುದು. ಶಿಕ್ಷಣ ಇಂದು ಹಲವು ದೇಶಗಳಲ್ಲಿ ಬೃಹದಾಕಾರವಾಗಿ ಸಮಸ್ಯೆಗಳನ್ನು ಎದುರಿಸುತ್ತಿದೆ. ಪ್ರತಿ ಶಿಕ್ಷಣ ಪದ್ಧತಿಯೂ ಸಮಾಜದ ಒಂದು ಅವಿಭಾಜ್ಯ ಅಂಗ ; ಅವಕ್ಕೆ ರಾಷ್ಟ್ರೀಯ ಪಾತ್ರವಿರುತ್ತವೆ. ಆದ್ದರಿಂದ ಅದು ರಾಜಕೀಯ ಹತೋಟಿಗೆ ಒಳಪಡುತ್ತದೆ. ಶಿಕ್ಷಣದ ಗುರಿ ಮುಖ್ಯವಾಗಿ ಮೂರು :

ವ್ಯಕ್ತಿ ಮತ್ತು ಗುಂಪುಗಳಿಗೆ ಹೆಚ್ಚಿನ ಪ್ರಮಾಣದ ಜಾಗೃತಿ, ಅನುಭವ ಮತ್ತು ಕೌಶಲ್ಯಗಳನ್ನು ದೊರಕಿಸಲು, ಸ್ವಂತ ಮತ್ತು ಸಾಮಾಜಿಕ ಜೀವನ ನಡೆಸಲು ಇದು ಸಹಾಯ ಮಾಡಬೇಕು.

ಎಲ್ಲ ಪೌರರಿಗೂ ಮೂಲಭೂತವಾದ ಶಿಕ್ಷಣವನ್ನು ದೊರಕಿಸಲು ಸಾಂಸ್ಕೃತಿಕ ಆರ್ಥಿಕ ಪುನರ್ನಿರ್ಮಾಣಗೊಳಿಸಲು ಇದು ಅವಶ್ಯಕ.

ಪ್ರತಿ ಜನಾಂಗವೂ ತನ್ನ ಸಾಂಸ್ಕೃತಿಕ ಹಿರಿಮೆಯನ್ನು ಉಳಿಸಿ, ಬೆಳಸಿ, ಮುಂದಿನ ಜನಾಂಗಕ್ಕೆ ಸಾಗಿಸಬೇಕಾದುದಕ್ಕಾಗಿ ಇದು ಇರಬೇಕು.

ಫ್ರೆಡ್‌ರಿಕ್ ನೀಥೆ

ಎಚ್. ಎಂ. ನಾಗರಾಜರಾವ್

ಬ್ರಾಹ್ಮೀ

ಯಾವುದೇ ಸಂಸ್ಕೃತಿಯಲ್ಲಿ ಬರಹ ನಿರ್ವಹಿಸುವ ಪಾತ್ರ ಪ್ರಧಾನವಾದುದು. ಬರಹವೆಂದರೆ "ವ್ಯಕ್ತಿ-ವ್ಯಕ್ತಿ ನಡುವೆ ಸಂವಹನತೆಗಾಗಿ ಬಳಸುವ ಸಾಂಪ್ರದಾಯಿಕ ಚಾಕ್ಷುಷ ವ್ಯವಸ್ಥೆ. ಭಾಷೆ ಶ್ರವಣಾತ್ಮಕ. ಇದು ಚಾಕ್ಷುಷವೂ ಆಗದಿದ್ದರೆ ಇದರ ಪ್ರಯೋಜನ ತೀರ ಸೀಮಿತವಾಗುತ್ತದೆ. ಭಾಷೆಯ ಈ ಪರಿಮಿತ ಸ್ವರೂಪ ಕಳೆದು ಅವನ್ನು ಸಾರ್ವಕಾಲಿಕವಾಗಿ ಮಾಡುವುದೇ ಬರಹ. ಭಾಷೆಯ ಮಾಧ್ಯಮ ಧ್ವನಿ. ಬರಹವ ಮಾಧ್ಯಮ ಲಿಪಿ." ನಾಗರಿಕತೆಯ ವಿಕಾಸದಲ್ಲಿ ಭಾಷೆಯ ಉಗಮವನ್ನು ಮೊದಲ ಕ್ರಾಂತಿ ಎಂದೂ ಬರಹದ (ಲಿಪಿಯ) ಉಗಮವನ್ನು ಎರಡನೆಯ ಕ್ರಾಂತಿ ಎಂದೂ ಪರಿಗಣಿಸಿದೆ.

ಮಾನವ ಇತಿಹಾಸದಲ್ಲಿ ಲಿಪಿಯ ಅನ್ವೇಷಣೆ ಒಂದು ಮಹತ್ತರ ಸಾಧನೆ. ಲಿಪಿ ನಾಗರಿಕತೆಯ ಮೂಲ. ಭಾಷೆ-ಲಿಪಿಗಳೇ ಮಾನವನನ್ನು ಪ್ರಾಣಿಪ್ರಪಂಚದಿಂದ ಬೇರಾಗಿಸುವ ಪ್ರಮುಖ ಸಾಂಸ್ಕೃತಿಕ ವ್ಯತ್ಯಾಸ. ಲಿಪಿ ಜ್ಞಾನಕ್ಕೆ ಮೊದಲ ಮೆಟ್ಟಿಲು ; ಅಜ್ಞಾನಕ್ಕೆ ಅನಕ್ಷರತೆಯದೇ ಅಡಿಪಾಯ. ಲಿಪಿ "ಮಾನವನ ಇತಿಹಾಸದ ಅನೇಕ ರಹಸ್ಯ ಅಧ್ಯಾಯಗಳನ್ನು ಪರಿಚಯ ಮಾಡಿಕೊಳ್ಳಲು ಅತಿಮುಖ್ಯ ಸಾಧನ." ಮಾನವ ಅಭಿವ್ಯಕ್ತಿಯ ಮೊದಮೊದಲ ಪ್ರಯತ್ನಗಳು ಪ್ರಾಚೀನತರವಾದರೂ ನಿರ್ದಿಷ್ಟ ಲಿಪಿಗಳ ಉಗಮ ಸುಮಾರು ಆರು ಸಾವಿರ ವರ್ಷಗಳಷ್ಟು ಹಿಂದಿನದೆಂದು ಹೇಳಲಾಗಿದೆ. ಸುಮೆರ್, ಈಜಿಪ್ಟ್, ಕ್ರೀಟ್, ಭಾರತ, ಏಷ್ಯಾ ಮೈನರ್, ಸಿರಿಯಾ, ಚೀನಾ, ಮಧ್ಯ ಅಮೆರಿಕ ಮುಂತಾದ ಭೂಭಾಗಗಳಲ್ಲಿ ಪ್ರಾಚೀನ ಲಿಪಿಗಳು ಉಪಲಬ್ಧವಾಗಿವೆ. "ಪ್ರಪಂಚದ ಪ್ರಾಚೀನತಮ ಲಿಪಿಯು ಚಿತ್ರಲಿಪಿಯಾಗಿದ್ದು ಅತ್ಯಂತ ಅರ್ವಾಚೀನ ಲಿಪಿಗಳು ವರ್ಣಲಿಪಿಗಳಾಗಿವೆ. ಈ ಎರಡು ಲಿಪಿಗಳ ಮಧ್ಯೆ ಬೇರೆ ಬೇರೆ ಹಂತಗಳಲ್ಲಿ ಬೇರೆ ಬೇರೆ ಲಿಪಿಗಳು ಕಾಣಿಸಿಕೊಂಡವು." ಚಿತ್ರಬರಹ, ಭಾವಾತ್ಮಕ ಬರಹ, ಧ್ವನ್ಯಾತ್ಮಕ ಬರಹ, ಪದಾತ್ಮಕ ಬರಹ, ಅಕ್ಷರಾತ್ಮಕ ಬರಹ ಮತ್ತು ವರ್ಣಮಾಲಾತ್ಮಕ ಬರಹ ಎಂದು ಆರು ವಿಧವಾಗಿ ಬರಹವನ್ನು ವರ್ಗೀಕರಿಸಿದೆ.

ಲಿಪಿಗಳಿಗೆ ಧಾರ್ಮಿಕ ಮಹತ್ವ ನೀಡಿರೋ ಅಥವಾ ಅವಕ್ಕೆ ಪಾವಿತ್ರ್ಯದ ಪಟ್ಟ ಕಟ್ಟಿಯೋ ಅವು ದೇವಸೃಷ್ಟಿ ಎಂದು ಭಾವಿಸಿರುವುದು ಹೆಚ್ಚಿನ ಸಂಸ್ಕೃತಿಗಳಲ್ಲಿ ಕಂಡು ಬರುವ ವೈಶಿಷ್ಟ್ಯ. ನಬೂ ಬ್ಯಾಬಿಲೋನಿಯದ ಜನರ ಪಾಲಿಗೆ ದೇವಶಿಲ್ಪಿ, ಜ್ಞಾನ ಪೋಷಕ ಮತ್ತು ಲಿಪಿಯ ಅನ್ವೇಷಕ. ಅವರಿಗಿಂತ ಹಿಂದಿದ್ದ ಮೆಸೊಪೊಟೋಮಿಯನ್ನ ರಿಗೆ ನಿಸಬ ಲಿಪಿ ದೇವತೆ. ಥಾಥ್ ಮತ್ತು ಇಸಿಸ್ ಈಜಿಪ್ಟಿನ ಜನರ ಲಿಪಿಗೆ ಸಂಬಂಧಿಸಿದ ದೇವತೆಗಳು ; ಬರಹ ಈ ಜನರಿಗೆ 'ದೇವವಾಣಿ'. ವಾಣಿಜ್ಯ ಸಂಸ್ಥಾಪಕ ಫೂಹಿ ಅಥವಾ ಚತುರಾಕ್ಷ ಡ್ರಾಗನ್ ಮುಖದ ತ್ಸಾಂಗ್ ಚಿಯೆನ್ ಚೀನೀ ಲಿಪಿಗೆ ಸಂಬಂಧಿಸಿದ ದೇವತೆಗಳು. ಗ್ರೀಕರ ಪ್ರಕಾರ ಹರ್ಮಿಸ್ ಲಿಪಿ ದೇವತೆ. ಹೀಬ್ರೂ ಜನರಿಗೆ ಮೋಸೆಸ್ ಲಿಪಿ ಕರ್ತ; ಇವರ ಪ್ರಕಾರ ಬರಹ ಎರಡು ವಿಧ : ದೇವ ಬರಹ ಮತ್ತು ಮಾನವ ಬರಹ. ಐರಿಷ್ ದಂತ ಕಥೆಯೊಂದು ಒಗ್ಮಿಯೊಸ್ ಲಿಪಿಯ ಅನ್ವೇಷಕ ನೆಂದು ತಿಳಿಸುತ್ತದೆ. ದೇವರೇ ಲಿಪಿಯನ್ನು ಸೃಜಿಸಿದನೆಂಬುದು ಇಸ್ಲಾಮಿನ ಸಾಂಪ್ರ ದಾಯಿಕ ನಂಬುಗೆ. ಈ ಉದಾಹರಣೆಯ ಪಟ್ಟಿಯನ್ನು ಇನ್ನೂ ಬೆಳೆಸಬಹುದು.

ಭಾರತೀಯರೂ ಬರಹದ ಮಹತ್ವವನ್ನು ಮನಗಂಡವರೇ. ಬ್ರಹ್ಮ ಲಿಪಿಯನ್ನು ಸೃಷ್ಟಿಸಿದನೆಂಬುದು ಹಿಂದೂ ಸಂಪ್ರದಾಯದ ನಂಬುಗೆ. "ನೋಟಕ್ಕೆ ಉತ್ತಮವಾದ ಈ ಲಿಖಿತ (ಸಾಹಿತ್ಯ)ವನ್ನು ಬ್ರಹ್ಮನು ಒಂದು ವೇಳೆ ಸೃಷ್ಟಿ ಮಾಡಿರದಿದ್ದರೆ, ಈ ಲೋಕಕ್ಕೆ ಶುಭಗತಿ ಎಂದೂ ಇರುತ್ತಿರಲಿಲ್ಲ" ಎಂಬ ನಾರದ ಸ್ಮೃತಿಯ ಹೇಳಿಕೆಯಿಂದ ಬರಹಕ್ಕೆ ನೀಡಿರುವ ಪ್ರಾಧಾನ್ಯ ಮನವರಿಕೆಯಾಗುತ್ತದೆ. ಲಿಪಿಯ ಅಗತ್ಯ ಏಕೆ ಉಂಟಾಯಿತೆಂಬುದನ್ನು ಕುರಿತು ಬೃಹಸ್ಪತಿ ತನ್ನ ವಾರ್ತಿಕದಲ್ಲಿ "ಒಂದು ನಿರ್ದಿಷ್ಟ ವಸ್ತುವಿನ ಬಗೆಗೆ ಇರುವ ನೆನಪು ಆರು ತಿಂಗಳ ಅವಧಿಯೊಳಗೇ ಮಾಸಿಹೋಗಿ ಭ್ರಾಂತಿ ಯಾಗಿಬಿಡುವುದರಿಂದ ಪ್ರಾಚೀನ ಕಾಲದಲ್ಲಿ ಬ್ರಹ್ಮನು ಎಲೆಗಳ ಮೇಲೆ ಬಿಡಿಸಿದ ಅಕ್ಷರ ಗಳನ್ನು ಸೃಷ್ಟಿಸಿದ" ಎಂದು ಹೇಳಿರುವುದು ಗಮನೀಯ. ಮಾನವನ ಜ್ಞಾಪಕ ಶಕ್ತಿಗಿರುವ ಮಿತಿಯನ್ನು ಇದು ಸೂಚಿಸುತ್ತದೆ. ವ್ಯಕ್ತಿಯಿಂದ ವ್ಯಕ್ತಿಗೆ ಪ್ರಮಾಣ ಭಿನ್ನವಾಗ ಬಹುದಾದರೂ ಮಿತಿ ಇದ್ದೇ ಇರುತ್ತದೆ. "ನದೀ ಮುಖದಿಂದ ಹೊರಟು ಸಮುದ್ರ ವನ್ನು ಸೇರುವ ಹಾಗೆ ಲಿಪಿಯ ಸರಿಯಾದ ಗ್ರಹಿಕೆಯಿಂದ ಅಪಾರ ಸಾಹಿತ್ಯನಿಧಿಯನ್ನು ಸೇರುತ್ತೇವೆ" ಎನ್ನುವುದು ಕಾಳಿದಾಸನ ಮಾತು.

ಭಾರತ ವಿವಿಧ ಲಿಪಿ–ಭಾಷೆಗಳ ನಾಡು. ಭಾಷೆ ಲಿಪಿಗಳ ಪ್ರಧಾನಪಾತ್ರ ನಮಗೀಗ ಸುವಿದಿತ. ಈ ದೇಶದ ಬೇರೆ ಬೇರೆ ಭಾಗಗಳಲ್ಲಿರುವ ಆಧುನಿಕ ಲಿಪಿಗಳ ಉಗಮವನ್ನು ಅನ್ವೇಷಿಸಿ ವಿಶ್ಲೇಷಿಸುವುದು ಸ್ವಾರಸ್ಯಕರವಾದ ಕಾರ್ಯ. ಲಿಪಿಶಾಸ್ತ್ರಜ್ಞರ ಪ್ರಕಾರ ಪ್ರಾಚೀನ ಕಾಲದಲ್ಲಿ ಭಾರತದಲ್ಲಿಡೀ ಒಂದೇ ಲಿಪಿ ಬಳಕೆಯಲ್ಲಿದ್ದು, ಅದರಿಂದ ಇಂದಿನ ಲಿಪಿಗಳೆಲ್ಲ ಬೆಳೆದುಬಂದಿವೆ. ಹಾಗೆ ಪ್ರಾಚೀನ ಕಾಲದಲ್ಲಿದ್ದ ಲಿಪಿಯೆ ಬ್ರಾಹ್ಮೀ. ಬ್ರಹ್ಮನಿಂದ ಸೃಷ್ಟಿಯಾದುದೆಂಬ ಸಾಂಪ್ರದಾಯಿಕ ನಂಬುಗೆಯನ್ನು ಬ್ರಾಹ್ಮೀ ಎಂಬ ಹೆಸರೇ ಪ್ರತಿನಿಧಿಸುತ್ತದೆ.

ಭಾರತದಲ್ಲಿ ಉಪಲಬ್ಧವಿರುವ ಅತಿಪ್ರಾಚೀನ ಲಿಪಿ ಎಂದರೆ ಆದ್ಯೇತಿಹಾಸ ಅವಧಿಗೆ (ಪ್ರೋಟೋ-ಹಿಸ್ಟಾರಿಕ್ ಪಿರಿಯಡ್) ಸೇರುವ ಸಿಂಧೂ ಲಿಪಿ. ಹಲವಾರು ಮುದ್ರೆಗಳ ಮೇಲೆ ಕಂಡುಬಂದಿರುವ ಈ ಲಿಪಿ ಇಂದಿಗೂ ನಿಗೂಢ ರಹಸ್ಯವಾಗಿಯೆ ಉಳಿದಿವೆ. ಈಜಿಪ್ಟ್ ಮೆಸೊಪೊಟೇಮಿಯಾಗಳಲ್ಲಿ ಲಭ್ಯವಾಗಿರುವ ಹಾಗೆ ಅಪಾರ ಪ್ರಮಾಣದಲ್ಲಿ ಸಿಂಧೂ ಲಿಪಿ ಲಭ್ಯವಾಗಿಲ್ಲದಿರುವುದೂ ಒಂದು ದೊಡ್ಡ ಕೊರತೆ. ಈ ಲಿಪಿಯನ್ನು ಓದಲು ಕಳೆದ ಕೆಲವಾರು ದಶಕಗಳಿಂದ ಅನೇಕ ವಿದ್ವಾಂಸರು ಪ್ರಯತ್ನಪಟ್ಟಿದ್ದರೂ ಸಾಫಲ್ಯ ಸಿದ್ಧಿಸಿಲ್ಲ. 'ಸಫಲ'ವೆನ್ನಿಸಿಕೊಂಡ ಇತ್ತೀಚಿನ ಸಂಶೋಧನೆಗೆ ಕೂಡ ಇನ್ನೂ ಸಾರ್ವತ್ರಿಕ ಮಾನ್ಯತೆ ಲಭಿಸಿಲ್ಲ.

ಸಿಂಧೂಮುದ್ರೆಯ ಶಾಸನಗಳ ಅನಂತರ ನಮಗೆ ಕಂಡುಬರುವ ಬರಹವೆಂದರೆ ಚಾರಿತ್ರಿಕ ಯುಗದ ಅಶೋಕನ ಬ್ರಾಹ್ಮೀ ಶಾಸನಗಳು. ಈ ಎರಡೂ ಲಿಪಿಗಳ ನಡುವಣ ಸಹಸ್ರಾರು ವರ್ಷಗಳ ಕಂದರವನ್ನು ವೈದಿಕ ಮತ್ತು ವೈದಿಕೇತರ ಸಾಹಿತ್ಯದಿಂದ ಆರಿಸಿಕೊಂಡ ಶಬ್ದಸಮುದಾಯದಿಂದ ತುಂಬಿಸುವ ಪ್ರಯತ್ನ ನಡೆದಿದೆಯಾದರೂ ನಿರ್ದಿಷ್ಟವಾದ ಪುರಾತತ್ವ ಆಧಾರಗಳು ಇಲ್ಲವೆಂಬುದನ್ನು ಮುಕ್ತಮನಸ್ಸಿನಿಂದ ಒಪ್ಪಿಕೊಳ್ಳಬೇಕಾಗುತ್ತದೆ. ಭಾರತೀಯರಿಗೆ ಪುರಾತನಕಾಲದಿಂದಲೂ ಬರಹದ ಪರಿಚಯ ಇತ್ತೆಂದು ವಾದಿಸಬಹುದಾದರೂ ಖಚಿತವಾದ ಮತ್ತು ಪ್ರತ್ಯಕ್ಷವಾದ ಸಾಕ್ಷ್ಯಾಧಾರಗಳ ಪ್ರಶ್ನೆ ಬಂದಾಗ ನಿರುತ್ತರರಾಗಬೇಕಾಗುತ್ತದೆ. ಆದ್ದರಿಂದ ಬರಹದ ಬಗೆಗೆ ವೈದಿಕ ಮತ್ತು ವೈದಿಕೇತರ ಸಾಹಿತ್ಯದಲ್ಲಿನ, ವಿದ್ವಾಂಸರು ಉಲ್ಲೇಖಿಸುವಂಥ, 'ಆಧಾರ'ಗಳೆಲ್ಲವನ್ನೂ ಕೈಬಿಟ್ಟು, ಖಚಿತವಾಗಿ ದೊರೆಯುವ ಅಶೋಕನ ಶಾಸನಗಳಲ್ಲಿನ ಬ್ರಾಹ್ಮೀ ಲಿಪಿಯ ಉಗಮದ ಬಗೆಗೆ ಇರುವ ವಿವಿಧ ಸಿದ್ಧಾಂತಗಳ ಸ್ಥೂಲ ಮತ್ತು ಸಂಕ್ಷಿಪ್ತ ಪರಿಚಯಕ್ಕೆ ಮಾತ್ರ ಪ್ರಸ್ತುತ ಲೇಖನದ ವ್ಯಾಪ್ತಿ ಸೀಮಿತವಾಗಿದೆ.

ಬೌದ್ಧ ಗ್ರಂಥ ಲಲಿತವಿಸ್ತರದಲ್ಲಿ ಬ್ರಾಹ್ಮೀ ಲಿಪಿಯನ್ನು ಕುರಿತ ಸ್ಪಷ್ಟ ಉಲ್ಲೇಖ ನಮಗೆ ಕಾಣಸಿಗುತ್ತದೆ. ಈ ಕೃತಿ ಹೆಸರಿಸುವ ಅರವತ್ನಾಲ್ಕು ಲಿಪಿಗಳಲ್ಲಿ ಬ್ರಾಹ್ಮೀ ಮೊದಲನೆಯದು. ಪಣ್ಣವಾಂಗ (ಕ್ರಿ.ಪೂ. 168), ಸಮವಾಯಂಗ (ಕ್ರಿ.ಪೂ. 300) ಮುಂತಾದ ಜೈನ ಸೂತ್ರಗಳು ಪ್ರಸ್ತಾಪಿಸುವ ಹದಿನೆಂಟು ಲಿಪಿಗಳ ಪಟ್ಟಿಯಲ್ಲಿ ಕೂಡ ಈ ಲಿಪಿಗೆ ಅಗ್ರಸ್ಥಾನ. ಭಗವತೀ ಸೂತ್ರವು 'ಬ್ರಾಹ್ಮೀ ಲಿಪಿಗೆ ನಮನ' (ನಮೋ ಭಂಭೀಯೆ ಲಿವಿಯೆ) ಎಂದು ಆರಂಭವಾಗುತ್ತದೆ. ಸುಮಾರು ಕ್ರಿ.ಶ. 668ಕ್ಕೆ ಸೇರಿದ್ದೆನ್ನಲಾದ ಫಾನ್-ವಾನ್-ಸು-ಲಿನ್ ಎಂಬ ಚೀನೀ ವಿಶ್ವಕೋಶದಲ್ಲಿ ಬ್ರಾಹ್ಮೀ ಹೆಸರಿಸಲ್ಪಟ್ಟಿದ್ದು ಇದನ್ನು ಎಡಗಡೆಯಿಂದ ಬಲಗಡೆಗೆ ಬರೆಯಲಾಗುತ್ತಿತ್ತೆಂದೂ ಹೇಳಿದೆ. ಬ್ರಾಹ್ಮೀ ಲಿಪಿಯ ಉಲ್ಲೇಖ ಮೊದಲು ಬರುವುದೆಲ್ಲ ವೈದಿಕೇತರ ಸಾಹಿತ್ಯದಲ್ಲಿ ಎಂಬುದು ವಿಚಾರಣೀಯ.

ಮಧ್ಯಯುಗದ ಹೊತ್ತಿಗೆ ಭಾರತೀಯರು ತಮ್ಮ ಪ್ರಾಚೀನ ಲಿಪಿಯನ್ನು ಓದುವ ಕ್ರಮವನ್ನು ಮರೆತುಬಿಟ್ಟಿದ್ದರು. ಕ್ರಿ.ಶ. 14ನೆಯ ಶತಮಾನದಲ್ಲಿ ಫಿರೋಜ್‌ಷಾ

ತುಘಲಕ್ ಎಂಬ ರಾಜ ತನ್ನ ರಾಜಧಾನಿಯಾದ ದೆಹಲಿಗೆ ತೋಪ್ರಾ ಮತ್ತು ಮೀರತ್‌ಗಳಿಂದ ಅಶೋಕಸ್ತಂಭಗಳನ್ನು ಸಾಗಿಸಿ, ಪಂಡಿತರಿಂದ ಅವುಗಳ ಮೇಲಿನ ಶಾಸನಗಳನ್ನು ಓದಿಸುವ ಪ್ರಯತ್ನಗಳನ್ನು ನಡೆಸಿದ. ಆದರೆ ಆತನ ಪ್ರಯತ್ನಗಳಿಗೆ ಫಲ ಸಿಕ್ಕಲಿಲ್ಲ. ಅಕ್ಬರನಿಗೂ ಈ ಸ್ತಂಭಶಾಸನಗಳ ಬಗೆಗೆ ಆಸಕ್ತಿ ಇದ್ದಿತು. ಈ ಶಾಸನಗಳ ಬಗೆಗೆ ಸಾಮಾನ್ಯ ಜನ ಮಹಾಭಾರತ–ಭಾಗವತಗಳಿಗೆ ಸಂಬಂಧಿಸಿದ ದಂತಕಥೆಯೊಂದನ್ನು ಕಟ್ಟಿಕೊಂಡು ಸಮಾಧಾನ ಕಂಡುಕೊಳ್ಳಬೇಕಾಯಿತು.

1784ರ ಜನವರಿ 15ರಂದು ಆರಂಭವಾದ 'ರಾಯಲ್ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್' ಎಂಬ ಸಂಸ್ಥೆ ಭಾರತೀಯ ಇತಿಹಾಸ ಸಂಶೋಧನೆಗೆ ಹೊಸ ಚಾಲನೆಯನ್ನು ನೀಡಿತು. ಅನೇಕ ಶಾಸನಲಿಪಿಗಳನ್ನು ಓದುವಲ್ಲಿ ಕೆಲವಾರು ವಿದ್ವಾಂಸರು ಯಶಸ್ವಿಯಾದರು. ಎಲ್ಲೋರಾ ಗುಹೆಗಳಲ್ಲಿನ ಬ್ರಾಹ್ಮೀ ಶಾಸನಗಳು ಮೊದಲು ವಿದ್ವಾಂಸರ ಆಸಕ್ತಿ ಸೆಳೆದವು. 1795ರಲ್ಲಿ ಸರ್ ಚಾರ್ಲ್ಸ್ ಮೆಲೆಟ್ ಎಂಬಾತ ಈ ಶಾಸನಗಳ ಪಡಿಯಚ್ಚುಗಳನ್ನು ವಿಲಿಯಂಜೋನ್ಸ್‌ನಿಗೆ ಕಳಿಸಿಕೊಟ್ಟ. ಜೋನ್ಸ್ ಅವನ್ನು ಓದಲು ವಿಲ್ಫೋರ್ಡ್ ಎಂಬ ವಿದ್ವಾಂಸನಿಗೆ ತಲುಪಿಸಿದ. ಸಂಸ್ಕೃತ ಪಂಡಿತನೊಬ್ಬನ ತಪ್ಪು ಮಾರ್ಗದರ್ಶನದಿಂದಾಗಿ ಆತ ಶಾಸನ ಪಡಿಯಚ್ಚುಗಳನ್ನು ತಪ್ಪುಪಾಠಗಳ ಸಹಿತ ಜೋನ್ಸ್‌ನಿಗೆ ಹಿಂದಿರುಗಿಸಿದ. ಆ ಶಾಸನ ಪಾಠಗಳು ಸಂಪೂರ್ಣ ಕಾಲ್ಪನಿಕ ಎಂಬುದು ಮುಂದೆ ಗೊತ್ತಾಯಿತು.

1836ರಲ್ಲಿ ಇಂಡೋ–ಬ್ಯಾಕ್ಟ್ರಿಯನ್ ದೊರೆ ಅಗಾಥೊಕ್ಲೀಸ್‌ನ ನಾಣ್ಯಗಳ ಮೇಲಿನ ಬ್ರಾಹ್ಮೀ ಆಲೇಖವನ್ನು ಓದಲು ಲ್ಯಾಸನ್ ಎಂಬ ವಿದ್ವಾಂಸನಿಗೆ ಸಾಧ್ಯವಾಯಿತು. ಆದರೆ ಈ ಆಲೇಖಗಳು ತೀರ ಚಿಕ್ಕವಾದ್ದರಿಂದ ಕೆಲವು ಅಕ್ಷರಗಳಷ್ಟೆ ಓದಲು ದೊರೆತವು. ಪೂರ್ಣಪ್ರಮಾಣದಲ್ಲಿ ಬ್ರಾಹ್ಮೀ ಲಿಪಿಯನ್ನು ಓದಲು ಸಾಧ್ಯವಾದುದು ಜೇಮ್ಸ್‌ಪ್ರಿನ್ಸೆಪ್‌ನಿಗೆ. 1834–35ರಲ್ಲಿ ಅಲಹಾಬಾದ್, ರಾಧಿಯಾ ಮತ್ತು ಮಥಿಯಾ ಸ್ತಂಭ ಶಾಸನ ಪಡಿಯಚ್ಚುಗಳನ್ನು ದೆಹಲಿ ಸ್ತಂಭಶಾಸನದ ಪಡಿಯಚ್ಚಿನೊಂದಿಗೆ ಹೋಲಿಸಿ ನೋಡಿದಾಗ ಎಲ್ಲವೂ ಒಂದೇ ಶಾಸನದ ಪ್ರತಿಗಳೆಂಬುದು ಸ್ಥಿರಪಟ್ಟಿತು. ಈ ಫಲಿತಾಂಶದಿಂದ ಉತ್ತೇಜಿತನಾದ ಆತ ಈ ಶಾಸನಗಳ ಅಕ್ಷರ–ಅಕ್ಷರಗಳನ್ನು ವಿಂಗಡಿಸಿ ವಿಶ್ಲೇಷಿಸಿದ. ಪ್ರಾಚೀನ ಬ್ರಾಹ್ಮೀ ಮತ್ತು ಗುಪ್ತಲಿಪಿಗಳ ನಡುವೆ ಇದ್ದ ಸಂಬಂಧಸಾತತ್ಯ ಸ್ಥಾಪಿತವಾಯಿತು. ಹಿಂದಿನ ವಿದ್ವಾಂಸರು ಈ ಬ್ರಾಹ್ಮೀ ಲಿಪಿಯನ್ನು ಗ್ರೀಕ್ ಎಂದು ತಪ್ಪಾಗಿ ಭಾವಿಸಿದ್ದರು. ಇದೇ ಕಾಲದಲ್ಲಿ ಫಾದರ್ ಜೇಮ್ಸ್ ಸ್ಟೀವನ್‌ಸನ್ ಎಂಬಾತ ಸಹ ಕೆಲವು ಬ್ರಾಹ್ಮೀ ಅಕ್ಷರಗಳನ್ನು ಗುರುತಿಸಿದ್ದ.

1837ರಲ್ಲಿ ಸಾಂಚಿಯಲ್ಲಿದ್ದ ಹಲವು ಪುಟ್ಟ ಶಾಸನ ಪಡಿಯಚ್ಚುಗಳನ್ನು ಪ್ರಿನ್ಸೆಪ್ ಓದಲು ಪ್ರಯತ್ನಿಸಿದಾಗ ಪ್ರತಿಯೊಂದು ಶಾಸನದ ಕೊನೆಯಲ್ಲಿ 'ಸ ದಾನಂ' ಎಂದಿತ್ತು. ಈ ಹೊತ್ತಿಗೆ ಈ ಲಿಪಿಯ ಭಾಷೆ ಸಂಸ್ಕೃತವಲ್ಲ, ಪ್ರಾಕೃತ ಎಂಬುದೂ ತಿಳಿದಿತ್ತು. ಬ್ರಾಹ್ಮೀ ವರ್ಣಮಾಲೆಯೊಂದು ರೂಪುಗೊಂಡು, ಅವರಲ್ಲಿ ತಪ್ಪಿಹೋಗಿದ್ದ ಆರು ಅಕ್ಷರ

ಗಳು—'ಇ, ಉ, ಠ, ಸ, ಳ' ಮತ್ತು ಗ್ರಿಯರ್‌ಸನ್ ಗಯಾ ಶಾಸನವೊಂದರಲ್ಲಿ ಅನ್ವೇಷಿಸಿದ 'ಙ'—ಬ್ಯೂಲರ್‌ನ ಕೃತಿಯಲ್ಲಿ ಪ್ರಕಟವಾದವು. 'ಊ' ಮತ್ತು 'ಶ' ಅಕ್ಷರಗಳನ್ನು ಮೊದಲು ಕನಿಂಗ್‌ಹ್ಯಾಮ್ ಗುರುತಿಸಿದ್ದ. 'ಷ' ಅಕ್ಷರದ ಒಂದು ರೂಪವನ್ನು ಸೆನಾರ್ಟ್ ಗುರುತಿಸಿದ್ದರೆ ಇನ್ನೊಂದು ರೂಪವನ್ನು ಹೊಯರ್ನಲ್ ಪತ್ತೆ ಹಚ್ಚಿದ್ದ. ಬ್ಯೂಲರ್ 'ಳ' ಅಕ್ಷರವನ್ನು ಗುರುತಿಸಿದ್ದ. ಬ್ರಾಹ್ಮೀ ಅಕ್ಷರಗಳ ಸಂಪೂರ್ಣ ಮತ್ತು ವೈಜ್ಞಾನಿಕ ಪಟ್ಟಿಯನ್ನು ಸಿದ್ಧಪಡಿಸಿದ ಕೀರ್ತಿ ನಿಶ್ಚಿತವಾಗಿ ಬ್ಯೂಲರ್‌ನಿಗೆ ಸಲ್ಲುತ್ತದೆ.

ಬ್ರಾಹ್ಮೀ ಲಿಪಿಯ ಉಗಮವನ್ನು ಕುರಿತು ವಿದ್ವಾಂಸರಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿವೆ. ಈ ಲಿಪಿಯನ್ನು ಕಂಡುಹಿಡಿದ ಅನಂತರದ ಸುಮಾರು ಒಂದೂವರೆ ಶತಮಾನದಲ್ಲಿ ಹತ್ತುಹಲವು ಸಿದ್ಧಾಂತಗಳನ್ನು ಮುಂದಿಡಲಾಗಿದೆ. ಇವುಗಳಲ್ಲಿ ಕೆಲವಂತೂ ಬಾಲಿಶವಾದ ಮತ್ತು ಹಾಸ್ಯಾಸ್ಪದ ಸಿದ್ಧಾಂತಗಳಾಗಿದ್ದು ವಿದ್ವಾಂಸರಿಂದ ಮಾನ್ಯವಾಗದೆ ಮರೆಯಾಗಿವೆ. ಉಳಿದ ಕೆಲವು ಸಿದ್ಧಾಂತಗಳು ವಿದ್ವಾಂಸರ ಪರಿಗಣನೆಗೆ ಪಾತ್ರವಾಗಿವೆಯಾದರೂ ಈ ವಿಷಯದಲ್ಲಿ ಸರ್ವಸಮ್ಮತ ಸಿದ್ಧಾಂತ ಯಾವುದೂ ಇಲ್ಲ ಎಂಬುದನ್ನು ಮರೆಯುವಂತಿಲ್ಲ.

ಬ್ರಾಹ್ಮೀ ಲಿಪಿಯ ಉಗಮದ ಬಗೆಗೆ ಇರುವ ವಿವಿಧ ಸಿದ್ಧಾಂತಗಳನ್ನು ಸ್ಥೂಲವಾಗಿ ಎರಡು ಗುಂಪುಗಳಾಗಿ ವಿಂಗಡಿಸಿ ಪರಿಶೀಲಿಸಬಹುದು :

(1) ಬ್ರಾಹ್ಮೀ ಲಿಪಿ ವಿದೇಶಿ ಮೂಲದಿಂದ ಬಂದುದೆಂದು ತಿಳಿಸುವ ಸಿದ್ಧಾಂತಗಳು

(2) ಬ್ರಾಹ್ಮೀ ಲಿಪಿ ಈ ದೇಶದಲ್ಲೇ ಹುಟ್ಟಿ ಬೆಳೆದುದೆಂಬ ನಿಲುವಿನ ಸಿದ್ಧಾಂತಗಳು

ಬ್ರಾಹ್ಮೀ ಲಿಪಿಯು ವಿದೇಶಿ ಮೂಲದಿಂದ ಭಾರತಕ್ಕೆ ಬಂದಿತೆಂದು ವಾದಿಸುವ ವಿದ್ವಾಂಸರಲ್ಲಿ ಕೂಡ ಅದು ಯಾವ ದೇಶದಿಂದ, ಯಾವ ಮಾರ್ಗವಾಗಿ ಮತ್ತು ಯಾವ ಕಾಲದಲ್ಲಿ ಭಾರತಕ್ಕೆ ಬಂದಿತೆಂಬ ವಿಷಯದಲ್ಲಿ ಒಮ್ಮತವಿಲ್ಲ.

(i) ಬ್ರಾಹ್ಮೀ ಲಿಪಿಯ ರಹಸ್ಯಗಳನ್ನು ಯಶಸ್ವಿಯಾಗಿ ಅನಾವರಣಗೊಳಿಸಿದ ಮೊದಲ ವಿದ್ವಾಂಸ ಜೇಮ್ಸ್‌ಪ್ರಿನ್ಸೆಪ್. ಅಶೋಕನ ಬಹುಪಾಲು ಶಾಸನಗಳ ಲಿಪಿಯಾದ ಬ್ರಾಹ್ಮೀ ಗ್ರೀಕ್ ಮೂಲದ್ದೆಂದು ಹೇಳುವತ್ತ ಈತನ ಒಲವು. ಈ ವಿಷಯದಲ್ಲಿ ಈತನನ್ನು ಅನುಸರಿಸಿದವರೆಂದರೆಂದರೆ ಆಟ್‌ಫ್ರೆಡ್ ಮ್ಯೂಲರ್ ಮತ್ತು ಸ್ವಲ್ಪ ಅನಂತರ ಕಾಲದಲ್ಲಿ ಉಮಿಲಿ ಸೆನಾರ್ಟ್. ರಾಲ್ ಡಿ ರಾಷೆಟ್, ಗಾಬ್ಲೆಟ್ ಡ ಆಲ್ವಿಲ್ಲಾ ಮತ್ತಿತರರು ಬಹುಮಟ್ಟಿಗೆ ಇದೇ ಅಭಿಪ್ರಾಯವನ್ನು ಹೊಂದಿದಂತೆ ಕಾಣುತ್ತದೆ. "ಅಶೋಕನ ಕಾಲದ ಬೌದ್ಧರು ತಮ್ಮ ಲಿಪಿಯನ್ನು ಗ್ರೀಕ್ ಅಥವಾ ಫಿನಿಷಿಯನ್ ಮಾದರಿಗಳಿಂದ ಪಡೆದರು" ಎಂಬ ವಿಲ್ಸನನ ಹೇಳಿಕೆಯ ಪೂರ್ವಾರ್ಧವನ್ನು ಸ್ವೀಕರಿಸಿ ಪ್ರಿನ್ಸೆಪ್ ಮತ್ತು ಮ್ಯೂಲರ್ ಇಂಥ ಅಭಿಪ್ರಾಯ ತಳೆದಂತೆ ತೋರುತ್ತದೆ. ಗ್ರೀಕ್ ಮತ್ತು ಬ್ರಾಹ್ಮೀ ಲಿಪಿಗಳ ನಡುವೆ ಕಂಡುಬರುವ ಅಲ್ಪಸ್ವಲ್ಪ ರೂಪಸಾದೃಶ್ಯವಾದರೂ ಕೇವಲ ಕಾಕತಾಳೀಯವಾದುದು. ಭಾಷಾಶಾಸ್ತ್ರ ಮತ್ತು ಕಾಲಾನುಪೂರ್ವಿಗೆ

ಸಂಬಂಧಿಸಿದಂತೆ ಸಹ ಅಡ್ಡಿ ಅಡಚಣೆಗಳಿವೆ. ಅಶೋಕನ ಶಾಸನಗಳ ಬ್ರಾಹ್ಮೀ ಲಿಪಿಯ ವೈವಿಧ್ಯ ಪ್ರಮಾಣವನ್ನು ಗಮನಿಸಿದರೆ ಸಾಕಷ್ಟು ಕಾಲಾವಕಾಶದಲ್ಲಿ ಮತ್ತು ಸ್ವಾಭಾವಿಕ ವಿಕಾಸವಲ್ಲಿ ಆ ವೈವಿಧ್ಯ ಉಂಟಾಗಿರಬೇಕೆಂದು ಭಾವಿಸುವುದು ತಪ್ಪಾಗದು. ಭಾರತೀಯರಿಗೆ ಗ್ರೀಕರೊಡನೆ ಸಂಬಂಧ ಸಂಪರ್ಕ ಉಂಟಾದುದು ವರ್ಣಲಿಪಿಯನ್ನು ಬಳಸುತ್ತಿದ್ದ ಇತರ ಜನಾಂಗಗಳೊಡನೆ ಸಂಪರ್ಕ ಉಂಟಾದ ಅನಂತರವೇ. ಅಲ್ಲದೆ ಗ್ರೀಕ್ ಲಿಪಿಯೇ ಬೇರೊಂದು ಮೂಲದ್ದು ; ಸೆಮೆಟಿಕ್ ಲಿಪಿಯನ್ನು ಗ್ರೀಕ್ ಲಿಪಿಯಾಗಿ ಪರಿವರ್ತಿಸಿಕೊಳ್ಳಲಾಯಿತು. ಅಶೋಕನ ಕಾಲದ ಬ್ರಾಹ್ಮೀ ಲಿಪಿಯಾದರೋ ಆಗಲೇ ಪರಿಪೂರ್ಣವಾಗಿ ಬೆಳೆದಿದ್ದ ವರ್ಣಲಿಪಿ. ಈ ರೀತಿಯಲ್ಲಿ ಗ್ರೀಕ್ ಉಗಮ ಸಿದ್ಧಾಂತದಲ್ಲಿ ಕೆಲವು ಅಸಾಂಗತ್ಯಗಳು ಕಂಡುಬರುತ್ತವೆ.

(ii) ಜೋಸೆಫ್ ಹಾಲ್ವಿ ಮತ್ತು ಇತರರು ಬ್ರಾಹ್ಮೀ ಲಿಪಿಯ ಮೇಲೆ ಹೆಲ್ನಿಸ್ಟಿಕ್ ಪ್ರಭಾವವಿದೆ ಎಂದು ಅಭಿಪ್ರಾಯಪಟ್ಟು, ಕ್ರಿ. ಪೂ. ನಾಲ್ಕನೆಯ ಶತಮಾನದಲ್ಲಿ ಅರಾಮೇಯಿಕ್, ಖರೋಷ್ಠೀ ಮತ್ತು ಗ್ರೀಕ್ ಲಿಪಿಗಳ ಒಂದು ಸಮ್ಮಿಶ್ರದಿಂದ ಈ ಲಿಪಿ ಉಗಮಿಸಿತೆಂದು ಸೂಚಿಸಿದರು. ಆದರೆ ಸಾಹಿತ್ಯಿಕ ಮತ್ತು ಲಿಪಿಶಾಸ್ತ್ರೀಯ ಸಾಕ್ಷ್ಯಾಧಾರಗಳೊಡನೆ ಇದು ಹೊಂದುವುದಿಲ್ಲ ಎಂಬ ಪ್ರತ್ಯುತ್ತರದೊಡನೆ ಈ ಸಿದ್ಧಾಂತವನ್ನು ಕೈ ಬಿಡಲಾಗಿದೆ.

(iii) ಟೆರ್ರೀನ್ ಡಿ ಲಾ ಕೂಪೆರಿ ಎಂಬ ವಿದ್ವಾಂಸ ಬ್ರಾಹ್ಮೀ ಲಿಪಿಗೆ ಚೀನಾದ ಚಿತ್ರ ಲಿಪಿಯೇ ಮೂಲ ಎಂದು ಪ್ರತಿಪಾದಿಸಿದ. ಆದರೆ ಇದು ಅಸಂಭವ. ಹಿಂದಿನ ಚೀನೀ ಲಿಪಿ ಭಾವಾತ್ಮಕ (ಐಡಿಯೋಗ್ರಾಫಿಕ್) ಸ್ವರೂಪದ್ದು ; ಅದೆಂದೂ ಅಕ್ಷರಾತ್ಮಕ (ಸಿಲಬಿಕ್) ರೂಪವನ್ನು ಹೊಂದಲೇ ಇಲ್ಲ. ಬ್ರಾಹ್ಮೀಲಿಪಿಯಾದರೋ ಪರಿಪೂರ್ಣವಾಗಿ ಬೆಳೆದ ವರ್ಣಲಿಪಿ. ಸ್ಥಿತ್ಯಂತರ ಹೊಂದದ ಒಂದು ಲಿಪಿಯಿಂದ ಪರಿಪೂರ್ಣವಾದ ಇನ್ನೊಂದು ಲಿಪಿ ಉಗಮಿಸಲಾರದು. ಈ ಸಿದ್ಧಾಂತವನ್ನು ಯಾರೂ ಗಂಭೀರವಾಗಿ ಪರಿಗಣಿಸಿಲ್ಲ.

(iv) ಬ್ರಾಹ್ಮೀ ಲಿಪಿಯು ಅಸ್ಸೀರಿಯನ್ ಬೆಣೆ ಲಿಪಿಯಿಂದ ದಕ್ಷಿಣ ಸೆಮೆಟಿಕ್ ಮೂಲಕವಾಗಿ ಉಗಮಿಸಿರಬೇಕೆಂಬ ಸಿದ್ಧಾಂತವನ್ನು ಡೀಕ್, ಟೇಲರ್ ಮುಂತಾದ ವಿದ್ವಾಂಸರು ಮುಂದಿಟ್ಟಿದ್ದಾರೆ. ಬಹುಮಟ್ಟಿಗೆ ರಿಸ್‌ಡೇವಿಸರ ಅಭಿಪ್ರಾಯವೂ ಇದೇ; ಉತ್ತರ ಅಥವಾ ದಕ್ಷಿಣ ಸೆಮೆಟಿಕ್ ಜನರು ಬಳಸುತ್ತಿದ್ದ ವರ್ಣಲಿಪಿಗೂ ಹಿಂದೆ ಯೂಫ್ರಟಿಸ್ ಕಣಿವೆಯಲ್ಲಿ ಬಳಕೆಯಲ್ಲಿದ್ದ, ಆದರೆ ಈಗ ಉಪಲಬ್ಧವಿಲ್ಲದ, ಪ್ರಾಗ್-ಸೆಮೆಟಿಕ್ ಲಿಪಿರೂಪದಿಂದ ಬ್ರಾಹ್ಮೀ ಹುಟ್ಟಿಬಂದಿರಬೇಕೆಂಬುದು ಇವರ ನಿಲುವು. ಆದರೆ ತಮ್ಮ ಅಭಿಪ್ರಾಯ ಸಮರ್ಥನೆಗೆ ಆಧಾರಗಳನ್ನು ಒದಗಿಸುವಲ್ಲಿ ಅವರು ಸೋಲುತ್ತಾರೆ. ಹೀಗಾಗಿ ಅಸ್ಸೀರಿಯನ್ ಮೂಲದ ಸಿದ್ಧಾಂತ ಕೂಡ ಸಮ್ಮತವಾಗಿಲ್ಲ.

ಬ್ರಾಹ್ಮೀ ಲಿಪಿಗೆ ಸೆಮೆಟಿಕ್ ಮೂಲವನ್ನು ಪ್ರತಿಪಾದಿಸುವ ವಿದ್ವಾಂಸರಲ್ಲಿ ಕೂಡಾ ಒಮ್ಮತವಿಲ್ಲ. ಕೆಲವರು ಫಿನಿಷಿಯನ್ ಎಂದೂ ಮತ್ತೆ ಕೆಲವರು ದಕ್ಷಿಣ

ಸೆಮೆಟಿಕ್ (ಸಬೇಯನ್ ಮುಖಾಂತರ) ಎಂದೂ ಇತರರು ಉತ್ತರ ಸೆಮೆಟಿಕ್ (ಅರಾಮೇಯಿಕ್ ಮೂಲಕ) ಎಂದೂ ವಾದಿಸುತ್ತಾರೆ.

(v) ಫಿನಿಷಿಯನ್ ಮೂಲದಿಂದ ಬ್ರಾಹ್ಮೀ ಬಂದಿತೆಂಬ ವೆಬರ್ ಎಂಬ ವಿದ್ವಾಂಸನ ಅಭಿಪ್ರಾಯವನ್ನು ಜೆನ್‌ಫಿ, ಜೆನ್‌ಸನ್ ಮತ್ತಿತರರು ಬೆಂಬಲಿಸಿದರು. ಇವರ ವಾದಕ್ಕೆ ಪ್ರಮುಖ ಆಧಾರಗಳಿವು :

(ಅ) ಫಿನಿಷಿಯನ್ ಲಿಪಿಯ ಮೂರನೆಯ ಒಂದು ಭಾಗದಷ್ಟು ಅಕ್ಷರಗಳು ಬ್ರಾಹ್ಮೀ ಲಿಪಿಯ ಪ್ರಾಚೀನ ರೂಪಗಳಿಗೆ ಸಂವಾದಿಯಾಗಿವೆ.

(ಆ) ಫಿನಿಷಿಯನ್ ಲಿಪಿಯ ಮೂರನೆಯ ಒಂದು ಭಾಗದಷ್ಟು ಅಕ್ಷರಗಳು 'ಬಹುಮಟ್ಟಿಗೆ' ಬ್ರಾಹ್ಮೀ ಲಿಪಿಯ ಪ್ರಾಚೀನ ರೂಪಗಳನ್ನು ಹೋಲುತ್ತವೆ.

(ಇ) ಫಿನಿಷಿಯನ್ ಲಿಪಿಯ ಉಳಿದ ಮೂರನೆಯ ಒಂದು ಭಾಗದಷ್ಟು ಅಕ್ಷರಗಳನ್ನು ಬ್ರಾಹ್ಮೀ ಲಿಪಿಯ ಪ್ರಾಚೀನ ರೂಪಗಳಿಗೆ 'ಹೆಚ್ಚುಕಡಿಮೆ' ಸಮನ್ವಯಗೊಳಿಸಲು ಸಾಧ್ಯ.

ಕ್ರಿ.ಪೂ. 9–8 ನೆಯ ಶತಮಾನದ ಸುಮಾರಿಗೆ ಫಿನಿಷಿಯನ್ ಮತ್ತು ಭಾರತೀಯರ ನಡುವಣ ಸಂಪರ್ಕ ಸಂಬಂಧಗಳು ಕೊನೆಗೊಂಡವೆಂಬುದು ತಿಳಿದ ಸಂಗತಿ. ಹೀಗಿರುವಾಗ ಐದು ಶತಮಾನಗಳ ತರುವಾಯ ಇದ್ದಕ್ಕಿದ್ದಂತೆ ಬ್ರಾಹ್ಮೀ ಲಿಪಿ ಉಗಮಿಸಿದ್ದೇಕೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅಲ್ಲದೆ ಫಿನಿಷಿಯನ್ ಲಿಪಿಯೇ ಸೆಮೆಟಿಕ್ ಮೂಲದ ಕ್ಯಾನನೈಟ್ (ಉತ್ತರ) ಶಾಖೆಯಿಂದ ವ್ಯುತ್ಪತ್ತಿಯಾದುದು. ಫಿನಿಷಿಯನ್ ಜನರೇ ಬೇರೆಡೆಯಿಂದ ವಲಸೆ ಬಂದು ನೆಲಸಿದವರು. ಅವರು ಭಾರತೀಯ ಮೂಲದವರೆಂಬ ಮತ್ತು ಇಲ್ಲಿಂದಲೇ ಲೇಖನ ಕಲೆಯನ್ನು ತಮ್ಮೊಡನೆ ಕೊಂಡೊಯ್ದು ಪಶ್ಚಿಮ ಏಷ್ಯ ಮತ್ತು ಗ್ರೀಸ್‌ಗಳಲ್ಲಿ ಹರಡಿದರೆಂಬ ಅಭಿಪ್ರಾಯವಿದೆ. ಈ ಎಲ್ಲ ಕಾರಣಗಳಿಂದ ಈ ಸಿದ್ಧಾಂತ ಸಹ ಸ್ವೀಕೃತವಾಗಿಲ್ಲ.

ಈ ಹಿಂದೆ ಗಮನಿಸಿರುವಂತೆ ಡೀಕ್, ಟೇಲರ್ ಮತ್ತು ಈಚಿನ ವರ್ಷಗಳಲ್ಲಿ ಸೇಥ್ ಮೊದಲಾದ ವಿದ್ವಾಂಸರ ಪ್ರಕಾರ ಬ್ರಾಹ್ಮೀ ಲಿಪಿಯು ದಕ್ಷಿಣ ಸೆಮೆಟಿಕ್ ಮೂಲದಿಂದ ಬಂದ ಲಿಪಿ. ಆದರೆ ಇವೆರಡೂ ಲಿಪಿಗಳ ನಡುವಣ ವೈದೃಶ್ಯಗಳನ್ನು ಬ್ಯೂಲರ್ ಗುರುತಿಸಿದ್ದಾರೆ. ಅಲ್ಲದೆ ದಕ್ಷಿಣ ಸೆಮೆಟಿಕ್ (ಸಬೇಯನ್) ಲಿಪಿಯ ಶಾಸನಗಳು ಕ್ರಿ.ಪೂ. ಎರಡನೆಯ ಶತಮಾನಕ್ಕಿಂತ ಹಿಂದೆ ಹೋಗುವುದಿಲ್ಲ ; ಬ್ರಾಹ್ಮೀ ಲಿಪಿಯ ಪ್ರಾಚೀನ ಶಾಸನಗಳು ಕ್ರಿ.ಪೂ. ಮೂರನೆಯ ಶತಮಾನಕ್ಕೆ ಸೇರುತ್ತವೆ ಎನ್ನುವುದು ಗಮನಿಸಬೇಕಾದ ಅಂಶ. ಧ್ವನಿ ಮೌಲ್ಯದಲ್ಲಿ ಕೂಡ ಇವೆರಡೂ ಲಿಪಿಗಳಲ್ಲಿ ವ್ಯತ್ಯಾಸವಿದೆ (ಸೆಮೆಟಿಕ್ ಬ್–ಬ್ರಾಹ್ಮೀ ವ ; ಹೀಗೆಯೇ ಕ್ರಮವಾಗಿ ಫ್–ಖ, ಜ್–ಷ, ಇತ್ಯಾದಿ).

(vi) 1806ರಲ್ಲಿ ಸರ್ ವಿಲಿಯಂ ಜೋನ್ಸ್ ಬ್ರಾಹ್ಮೀ ಉತ್ತರ ಸೆಮೆಟಿಕ್

ಮೂಲದಿಂದ ಬಂದ ಲಿಪಿ ಎಂಬ ಸಿದ್ಧಾಂತವನ್ನು ಮಂಡಿಸಿದರು. ಅನಂತರ 1811ರಲ್ಲಿ ಫಾನ್ ಸೀಜೆನ್, 1821ರಲ್ಲಿ ಕಾಪ್, 1834 ರಲ್ಲಿ ಲೆಪ್ಸಿಯಸ್ ಉತ್ತರ ಸೆಮೆಟಿಕ್ ಮೂಲದ ಸಿದ್ಧಾಂತವನ್ನೇ ಪ್ರತಿಪಾದಿಸಿದರು. ೧೮೫೬ ರಲ್ಲಿ ವೆಬರ್ ಮತ್ತು ಕಳೆದ ಶತಮಾನದ ಕೊನೆಯಲ್ಲಿ ಬ್ಯೂಲರ್ ಈ ಅಭಿಪ್ರಾಯವನ್ನು ವಿಶದೀಕರಿಸಿದರು. ಇತ್ತೀಚೆಗೆ ಎ.ಎಚ್. ದಾನಿ ಎನ್ನುವವರದೂ ಇದೇ ನಿಲುವು. ಈ ವಿದ್ವಾಂಸರ ಪ್ರಕಾರ ಭಾರತದ ವರ್ಣಮಾಲೆ ಭಾರತೀಯರ ಸ್ವತಂತ್ರ ಅನ್ವೇಷಣೆಯೇ ಅಲ್ಲ ; ಆದರೆ ತಾವು ಪಡೆದ ಲಿಪಿಯನ್ನು ಅದ್ಭುತ ರೀತಿಯಲ್ಲಿ ಭಾರತೀಯರು ವಿಸ್ತೃತಗೊಳಿಸಿದರು. ಬ್ರಾಹ್ಮೀ ಲಿಪಿಯ ಉಗಮಕ್ಕೆ ಕಾರಣವಾದ ಲಿಪಿ ಯಾವುದೆಂಬುದನ್ನು ತೋರಿಸಿ, ಕೊಡಲು ಅನೇಕರಿಗೆ ಸಾಧ್ಯವಾಗಲಿಲ್ಲ. ಬ್ಯೂಲರ್ ಮಾತ್ರ ಎಲ್ಲ ಟೀಕೆ ಟಿಪ್ಪಣಿ ಗಳನ್ನೂ ಎದುರಿಸಿ ಮತ್ತು ಉತ್ತರಿಸಿ ಬ್ರಾಹ್ಮೀ ಉತ್ತರ ಸೆಮೆಟಿಕ್ ಮೂಲದಿಂದ ಬಂದ ಲಿಪಿ ಎಂಬುದನ್ನು ಸಾಬೀತುಗೊಳಿಸಲು ಪ್ರಯತ್ನಿಸಿದರು. ಡೇವಿಡ್ ಡಿರಿಂಜರ್ ಎಂಬ ಮತ್ತೊಬ್ಬ ವಿದ್ವಾಂಸರದೂ ಇದೇ ಅಭಿಪ್ರಾಯ. ಉತ್ತರ ಸೆಮೆಟಿಕ್ ಮೂಲದ ಸಿದ್ಧಾಂತಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿರುವುದರಿಂದ ಇದನ್ನು ವಿವರವಾಗಿ ಪರಿಶೀಲಿಸ ಬೇಕಾದುದು ಅವಶ್ಯಕ. ಈ ಸಿದ್ಧಾಂತ ಪ್ರತಿಪಾದಕರು ನೀಡುವ ಕಾರಣಗಳು ಇವು :

(ಅ) ಕ್ರಿ.ಪೂ. ಐದನೆಯ ಶತಮಾನಕ್ಕೆ ಹಿಂದಿನ ಲಿಪಿ ಮಾದರಿಗಳ ಅನುಪಸ್ಥಿತಿ.

(ಆ) ಸೆಮೆಟಿಕ್ ಮತ್ತು ಬ್ರಾಹ್ಮೀ ಲಿಪಿಗಳ ನಡುವೆ ಇರುವ ರೂಪಸಾದೃಶ್ಯ.

(ಇ) ಮೊದಲು ಬ್ರಾಹ್ಮೀ ಲಿಪಿಯನ್ನು ಬಲದಿಂದ ಎಡಕ್ಕೆ ಬರೆಯುತ್ತಿದ್ದ ಪದ್ಧತಿ.

ಸಿಂಧೂ ಲಿಪಿಮುದ್ರೆಗಳ ಅನ್ವೇಷಣೆಯಿಂದಾಗಿ ಮೊದಲ ಕಾರಣವನ್ನು ಈಗ ಸ್ವಲ್ಪ ಬದಲಾಯಿಸಲಾಗಿದೆ. ಭಾರತದ ಪ್ರಾಚೀನತಮ ಲಿಪಿಯಾದ ಸಿಂಧೂಲಿಪಿಯು ಚಿತ್ರಲಿಪಿ ಅಥವಾ ಭಾವಾತ್ಮಕ ಲಿಪಿ. ಬ್ರಾಹ್ಮೀ ವರ್ಣಲಿಪಿ. ಉತ್ತರ ಸೆಮೆಟಿಕ್ ಲಿಪಿ ಕೂಡ ವರ್ಣಲಿಪಿ. ಒಂದು ವರ್ಣಲಿಪಿಯಿಂದ ಇನ್ನೊಂದು ವರ್ಣಲಿಪಿ ಉಗಮಿಸು ವುದು ಸ್ವಾಭಾವಿಕ. ಆದುದರಿಂದ ಉತ್ತರ ಸೆಮೆಟಿಕ್ ಮೂಲದಿಂದಲೇ ಈ ಲಿಪಿ ಉಗಮಿಸಿತು ಎನ್ನುವುದು ಈ ವಾದದ ತಿರುಳು.

ಸೆಮೆಟಿಕ್ ಮತ್ತು ಬ್ರಾಹ್ಮೀ ಲಿಪಿಗಳ ನಡುವೆ ಇರುವ ರೂಪ ಸಾದೃಶ್ಯ ಈ ಸಿದ್ಧಾಂತದ ಪ್ರಬಲ ಸಮರ್ಥನಾಂಶಗಳಲ್ಲಿ ಒಂದು. ಈ ವಿಷಯದ ಬಗೆಗೆ ಬ್ಯೂಲರ್ ವಿವರವಾದ ಒಂದು ದೀರ್ಘಪಟ್ಟಿಯನ್ನೇ ನೀಡಿದ್ದಾರೆ. ಬ್ರಾಹ್ಮೀ ಲಿಪಿಯ ಇಪ್ಪತ್ತೆ ರಡು ಅಕ್ಷರಗಳು ಉತ್ತರ ಸೆಮೆಟಿಕ್ ಲಿಪಿಯಿಂದ (ಕೆಲವು ಪೂರ್ವ ಫಿನಿಷಿಯನ್), ಕೆಲವು ಮೆಸಾ ಶಿಲಾಶಾಸನದ ಲಿಪಿಯಿಂದ ಹಾಗೂ ಐದು ಅಕ್ಷರಗಳು ಅಸ್ಸೀರಿಯದ ತೂಕದ ಬೊಟ್ಟುಗಳ ಮೇಲಿನ ಲಿಪಿಯಿಂದ ಉಗಮಿಸಿವೆ ಎನ್ನುವುದು ಈ ವಿದ್ವಾಂಸರ ವಾದ. ಆದರೆ ಈ ವಾದವನ್ನು ಹೀಗೆ ವಿರೋಧಿಸಲಾಗಿದೆ :

(ಅ) ಉತ್ತರ ಸೆಮೆಟಿಕ್ ಲಿಪಿಯ ಹತ್ತಕ್ಕಿಂತ ಹೆಚ್ಚು ಅಕ್ಷರಗಳಿಗೂ ಬ್ರಾಹ್ಮೀ ಅಕ್ಷರಗಳಿಗೂ—ಬ್ಯೂಲರ್ ತಿಳಿಸುವ 'ಮಧ್ಯವರ್ತಿ'—ಇರುವ ರೂಪ ಸಾದೃಶ್ಯ ಕೇವಲ ಊಹಾತ್ಮಕವಾದುದು.

(ಆ) ಬ್ರಾಹ್ಮೀ ಲಿಪಿಯ 'ಗ' ಎಂಬ ಒಂದೇ ಒಂದು ಅಕ್ಷರ 'ಮೂಲ' ಎಂದು ಹೇಳಲಾದ ಅಕ್ಷರವನ್ನು ಹೋಲುತ್ತದೆ.

(ಇ) ಉಳಿದ ಅಕ್ಷರಗಳಲ್ಲಿ ಕೇವಲ ಐದು ಅಕ್ಷರಗಳು 'ಮೂಲ' ಎಂದು ಹೇಳಲಾದ ಅಕ್ಷರಗಳನ್ನು 'ಬಹುಮಟ್ಟಿಗೆ' ಹೋಲುತ್ತವೆ ಎಂದು ಹೇಳಬಹುದು.

ಎರಡು ಭಿನ್ನ ಲಿಪಿಗಳ ನಡುವೆ ಕಂಡುಬರಬಹುದಾದ ರೂಪಸಾದೃಶ್ಯ ಅನೇಕ ವೇಳೆ ಕಾಕತಾಳೀಯವಾಗಿರುತ್ತವೆ. ಅವು ಹೊಂದಿರುವ ಅಥವಾ ಅವಕ್ಕೆ ನೀಡಲಾದ ಧ್ವನಿ ಮೌಲ್ಯದ ಸಾಮ್ಯತೆಯನ್ನು ಪರಿಶೀಲಿಸಬೇಕಾದುದು ಅತ್ಯಗತ್ಯ. ಈ ದೃಷ್ಟಿಯಿಂದ ನೋಡಿದಾಗ ಉತ್ತರ ಸೆಮೆಟಿಕ್ 'ಮೂಲ' ಮತ್ತು ಬ್ರಾಹ್ಮೀ ರೂಪಗಳ ನಡುವೆ ಅತ್ಯವಶ್ಯಕವಾಗಿ ಇರಬೇಕಾಗಿದ್ದ ಅಭಿನ್ನ ಧ್ವನಿಮೌಲ್ಯ ಇಲ್ಲದಿರುವುದು ಗಮನಾರ್ಹ. (ಉದಾ : ಬ್ರಾಹ್ಮೀ ಣ—ಉತ್ತರ ಸೆಮೆಟಿಕ್ ಜಯಿನ್ ; ಹೀಗೆ ಕ್ರಮವಾಗಿ ಕ—ತನ್ ; ಇತ್ಯಾದಿ). ಹೀಗೆ ಧ್ವನಿಮೌಲ್ಯದಲ್ಲಿ ಅನನ್ಯತೆ ಇಲ್ಲದಿರುವುದನ್ನು—ಎಂದರೆ ಒಂದು ನಿರ್ದಿಷ್ಟ ರೂಪಕ್ಕೆ ಇವೆರಡೂ ಲಿಪಿಗಳಲ್ಲಿನ ಧ್ವನಿಮೌಲ್ಯದಲ್ಲಿ ವ್ಯತ್ಯಾಸ ಉಂಟಾಗುವುದು ಏಕೆ ಮತ್ತು ಹೇಗೆ ಎಂಬ ಪ್ರಶ್ನೆಗಳನ್ನು—ಈ ಸಿದ್ಧಾಂತದ ಪ್ರತಿಪಾದಕರು ಉತ್ತರಿಸಬೇಕಾಗುತ್ತದೆ. ಅಲ್ಲದೆ ಬಲಗಡೆಯಿಂದ ಎಡಗಡೆಗೆ ಬರೆದ ಬ್ರಾಹ್ಮೀ ಶಾಸನಗಳೂ ಅತಿವಿರಳ ; ಅವು ಕಂಡರಣೆಕಾರರ ಪ್ರಯೋಗ ಪ್ರವೃತ್ತಿಯ ಉದಾಹರಣೆಗಳ ತುಣುಕುಗಳಾಗಿದ್ದಿರಲೂಬಹುದು. ರೂಪಸಾದೃಶ್ಯವೇ ಅಂತಿಮವಲ್ಲ ; ಧ್ವನಿಮೌಲ್ಯದ ವೈದೃಶ್ಯದಿಂದಾಗಿ ಈ ಸಿದ್ಧಾಂತ ನಿಲ್ಲದು. ಅಲ್ಲದೆ, ಧ್ವನಿಶಾಸ್ತ್ರಕ್ಕೆ ಸಂಬಂಧಿಸಿದಂತೆ ಪ್ರಾಚೀನ ಭಾರತೀಯರು ಎಷ್ಟು ಕಟ್ಟುನಿಟ್ಟಿನವರಾಗಿದ್ದರೆಂಬುದು ಸುವಿದಿತ ಸಂಗತಿ.

ಖರೋಷ್ಠೀ ಲಿಪಿ ಇದೇ ಉತ್ತರ ಸೆಮೆಟಿಕ್ ಮೂಲದಿಂದ ಬಂದದ್ದೆಂದು ತಿಳಿಯಲಾಗಿದೆ. ಈ ಬಗ್ಗೆ ಹೆಚ್ಚು ವಿವಾದಗಳೂ ಇಲ್ಲ. ಆದರೆ ಒಂದೇ ಮೂಲದಿಂದ ಏಕಕಾಲದಲ್ಲಿ ಪರಸ್ಪರ ಸದೃಶಾಂಶಗಳೇ ಇಲ್ಲದ ಭಿನ್ನ ಭಿನ್ನ ಲಿಪಿಗಳು—ಬ್ರಾಹ್ಮೀ ಹಾಗೂ ಖರೋಷ್ಠೀ — ಉಗಮಿಸುವುದು ಹೇಗೆ ಸಾಧ್ಯ ? ಈ ದೃಷ್ಟಿಯಿಂದಲೂ ಈ ಸಿದ್ಧಾಂತ ಅಸಂಗತವಾಗುತ್ತದೆ.

ಬ್ರಾಹ್ಮೀ ಲಿಪಿಯ ಉಗಮಸ್ಥಾನ ಭಾರತವೇ ಎಂದು ವಾದಿಸುವ ವಿದ್ವಾಂಸರಲ್ಲಿ ಕೂಡ ಏಕಾಭಿಪ್ರಾಯವಿಲ್ಲ. ದೇಶೀಯ ಉಗಮದ ಸಿದ್ಧಾಂತಗಳನ್ನೂ ಇಲ್ಲಿ ಸ್ಥೂಲವಾಗಿ ಸಮೀಕ್ಷಿಸಬಹುದು :

(1) ಲ್ಯಾಸನ್ ಎಂಬಾತ ಬ್ರಾಹ್ಮೀ ಲಿಪಿಗೆ ಆರ್ಯ ಅಥವಾ ವೈದಿಕ ಉಗಮವನ್ನು ಪ್ರತಿಪಾದಿಸಿದವರಲ್ಲಿ ಮೊದಲಿಗರು. ಇವರ ಅಭಿಪ್ರಾಯವನ್ನು ಜನರಲ್ ಅಲೆ

ಗ್ಸಾಂಡರ್ ಕನಿಂಗ್‌ಹ್ಯಾಮ್ ಸಮರ್ಥಿಸಿದರು. ಪೂರ್ವದಲ್ಲಿ ಭಾರತದಲ್ಲಿದ್ದ ಚಿತ್ರಲಿಪಿಯನ್ನು ಆಧರಿಸಿ ಪುರೋಹಿತ ವರ್ಗದ ಆರ್ಯರು ಬ್ರಾಹ್ಮೀ ವರ್ಣಮಾಲೆಯನ್ನು ಸಿದ್ಧಪಡಿಸಿದರೆಂಬುದು ಇವರ ವಾದದ ತಿರುಳು. ಆದರೆ ಇವರು ತಮ್ಮ ಅಭಿಪ್ರಾಯ ಸಮರ್ಥನೆಗೆ ಕೊಡುವ ಆಧಾರಗಳು ತುಂಬ ದುರ್ಬಲವಾದವು. ಉದಾಹರಣೆಗೆ, ಬ್ರಾಹ್ಮೀ 'ವ' ಅಕ್ಷರವು ವೀಣೆ, ವಾಹು(ಬಾಹು) ಅಥವಾ ವಿಂದು (ಬಿಂದು) ಚಿತ್ರಗಳಿಂದ ಬಂದಿತೆನ್ನುವುದು ಇವರ ನಿಲುವು (ಹೀಗೆಯೇ ಆಕಾಶದ ಚಿತ್ರದಿಂದ 'ಗ', ಬಿಲ್ಲಿನ ಚಿತ್ರದಿಂದ 'ಧ', ಮೂಗಿನ ಚಿತ್ರದಿಂದ 'ನ' ಇತ್ಯಾದಿ). ಆದರೆ ಟೇಲರ್ ಸಮುಚಿತವಾಗಿ ಹೇಳುವಂತೆ ಇದೊಂದು ಎಗುರುಗುಣವುಳ್ಳ (ಎಲಾಸ್ಟಿಕ್) ವಿಧಾನವಾಗುತ್ತದೆ. ಇದರಿಂದ ಏನನ್ನು ಬೇಕಾದರೂ ಸಾಧಿಸಬಹುದಾದರೂ ವಾಸ್ತವವಾಗಿ ಏನನ್ನೂ ಸಾಧಿಸಿದಂತಾಗುವುದಿಲ್ಲ.

(2) ದೇವತೆಗಳನ್ನು ಪ್ರತಿನಿಧಿಸುವ ಅನೇಕ ತಾಂತ್ರಿಕ ಚಿಹ್ನೆ-ಸಂಕೇತಗಳಿಂದ ಬ್ರಾಹ್ಮೀ ಉಗಮಿಸಿತು ಮತ್ತು ಹೀಗೆ ಹುಟ್ಟಿ ಬೆಳೆದ ಲಿಪಿಯೇ ದೇವನಾಗರಿ ಎನ್ನುವುದು ಆರ್. ಶಾಮಶಾಸ್ತ್ರಿ ಎಂಬ ವಿದ್ವಾಂಸರ ಅಭಿಪ್ರಾಯ. ಆದರೆ ತಮ್ಮ ವಾದ ಸಮರ್ಥನೆಗೆ ಅವರು ಉಲ್ಲೇಖಿಸುವ ತಂತ್ರಶಾಸ್ತ್ರ ಗ್ರಂಥಗಳಲ್ಲಿನ ಸಾಕ್ಷ್ಯಾಧಾರಗಳೆಲ್ಲವೂ ತೀರ ಅನಂತರ ಕಾಲದವು.

(3) ಆರ್ಯರು ಭಾರತಕ್ಕೆ ಆಗಮಿಸುವ ಮೊದಲೇ ಈ ದೇಶದಲ್ಲಿದ್ದ ದ್ರಾವಿಡರು ಸಾಂಸ್ಕೃತಿಕವಾಗಿ ಮುಂದುವರಿದವರಾಗಿದ್ದು ಬ್ರಾಹ್ಮೀ ಲಿಪಿಯನ್ನು ಕಂಡು ಹಿಡಿದಿದ್ದರು ಮತ್ತು ಆರ್ಯರು ಈ ಲಿಪಿಯನ್ನೇ ಬಳಸಿಕೊಂಡರು ಎನ್ನುವ ಊಹೆಯನ್ನು ಎಡ್ವರ್ಡ್ ಥಾಮಸ್ ಮತ್ತಿತರ ಕೆಲವು ವಿದ್ವಾಂಸರು ಮುಂದಿಟ್ಟಿದ್ದಾರೆ. ಆದರೆ ಈ ಊಹೆಯನ್ನು ಹೀಗೆ ಖಂಡಿಸಲಾಗಿದೆ :

(ಅ) ದ್ರಾವಿಡರ ಮೂಲ ವಾಸಸ್ಥಾನ ದಕ್ಷಿಣ ಭಾರತ ; ಆದರೆ ಆರ್ಯರು ಬಂದು ನೆಲಸಿದುದು ಉತ್ತರಭಾರತದಲ್ಲಿ.

(ಆ) ಬರಹದ ಪ್ರಾಚೀನತಮ ಮಾದರಿಗಳೆಲ್ಲ ಲಭ್ಯವಾಗಿರುವುದು ಉತ್ತರ ಭಾರತದಲ್ಲಿ ; ದಕ್ಷಿಣದಲ್ಲಲ್ಲ.

(ಇ) ದ್ರಾವಿಡ ಭಾಷೆಗಳ ಅತ್ಯಂತ ಅಸ್ಪಟ ಪ್ರತಿನಿಧಿ ಎಂದು ಹೇಳಲಾದ ತಮಿಳು ಲಿಪಿಯ ವ್ಯಂಜನ ವರ್ಗಗಳಲ್ಲಿ ('ಕ' ದಿಂದ 'ಪ') ಇರುವುದು ತಲಾ ಎರಡೆರಡು ಅಕ್ಷರಗಳು ಮಾತ್ರವೇ. ಆದರೆ ಬ್ರಾಹ್ಮೀ ಪರಿಪೂರ್ಣ ವರ್ಣಮಾಲೆಯಾಗಿದ್ದು, ಈ ವರ್ಗಗಳಲ್ಲಿ ತಲಾ ಐದೈದು ಅಕ್ಷರಗಳನ್ನು ಹೊಂದಿದೆ.

ಇತ್ತೀಚೆಗೆ ಟಿ. ಎನ್. ಸುಬ್ರಹ್ಮಣ್ಯಂ ಎಂಬ ವಿದ್ವಾಂಸರು ಈ ದ್ರಾವಿಡ ಉಗಮದ ಸಿದ್ಧಾಂತವನ್ನು ಮತ್ತೆ ಪ್ರತಿಪಾದಿಸಿದ್ದಾರೆ. ಇವರ ಪ್ರಕಾರ ಬ್ರಾಹ್ಮೀ ಮೂಲತಃ ತಮಿಳು ಭಾಷೆಗಾಗಿ ರೂಪಿತವಾದ ಲಿಪಿ ; ಇದನ್ನು ಪ್ರಾಕೃತ ಭಾಷೆಗೆ ಬಳಸಿಕೊಳ್ಳ

ಲಾಯಿತು. ಏಕೆಂದರೆ ಇವೆರಡೂ ಭಾಷೆಗಳಲ್ಲಿ ಕೆಲವು ಸಾಮಾನ್ಯ ಲಕ್ಷಣಗಳು ಇವೆ : ಭಾಷೆ ಮತ್ತು ವ್ಯಾಕರಣಗಳ ಸರಳತೆ, ಎರಡೇ ವಚನಗಳ ಪ್ರಯೋಗ, 'ಋ' 'ೠ', 'ಐ' ಮತ್ತು 'ಔ'ಗಳ ಅನುಪಸ್ಥಿತಿ, 'ಶ' ಮತ್ತು 'ಷ'ಗಳಿಗೂ 'ಸ' ಬಳಕೆ ಇತ್ಯಾದಿ. ಪ್ರಾಕೃತ ಭಾಷೆಯೇ ಮೂಲತಃ ದಕ್ಷಿಣ ಭಾರತದ್ದಾಗಿದ್ದು, ದೇಶದೆಲ್ಲೆಡೆ ಅರ್ಥವಾಗಲೆಂಬ ಉದ್ದೇಶದಿಂದ ಅವನ್ನು ಸಂಯೋಜಿಸಿದ್ದಿರಬೇಕೆಂದು ಮತ್ತು ಅನಂತರ ಸಂಸ್ಕೃತದ ಅಂಶಗಳು ಬೆರೆತು ಹೊಸ ಹೊಸ ಅಕ್ಷರಗಳು ರೂಪುಗೊಂಡಿರಬೇಕೆಂದು ಈ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಸಿದ್ಧಾಂತ ಸಂಪೂರ್ಣವಾಗಿ ಒಂದು ಊಹಾಜಗತ್ತು.

(4) ಗ್ಯಾಡ್, ಹಂಟರ್, ಲಾಂಗ್‌ಡನ್ ಮುಂತಾದವರು ಸಿಂಧೂ ಲಿಪಿಗೂ ಬ್ರಾಹ್ಮೀ ಲಿಪಿಗೂ ಇರುವ ಕೆಲವು ರೂಪ ಸಾದೃಶ್ಯಗಳನ್ನು ಗುರುತಿಸಿ, ಬ್ರಾಹ್ಮೀ ಸಿಂಧೂಲಿಪಿಯಿಂದ ಹುಟ್ಟಿರಬಹುದು ಎಂದು ಭಾವಿಸಿದ್ದರು. ಇವರ ಅಭಿಪ್ರಾಯವನ್ನು ಆರ್.ಬಿ. ಪಾಂಡೆ, ಸರ್ಕಾರ್, ಎಸ್.ಕೆ. ಚಟರ್ಜಿ, ವಿ. ರಾಘವನ್ ಮುಂತಾದವರು ಒಪ್ಪುತ್ತಾರೆ. ಸಿಂಧೂಲಿಪಿಯನ್ನು ಓದಿರುವ, ಡಾ. ಎಸ್. ಆರ್. ರಾವ್ ಸಿಂಧೂ ಲಿಪಿಯ ಭಾಷೆ ವೈದಿಕ ಸಂಸ್ಕೃತವೆಂದು ಪರಿಗಣಿಸಿದ್ದಾರೆ. ಇವರ ಸಂಶೋಧನೆಯ ಬೆಳಕಿನಲ್ಲಿ ಬ್ರಾಹ್ಮೀ ಲಿಪಿಯ ಉಗಮದ ಸಮಸ್ಯೆಗೆ ಹೊಸ ಆಯಾಮ ದೊರೆತಂತಾಗಿದೆ. ಆದರೆ ಪ್ರಾಚೀನತಮ ಶಾಸನಗಳೆಲ್ಲ ಪ್ರಾಕೃತ ಭಾಷೆಯಲ್ಲಿ ರಚಿತವಾಗಿವೆ.

(5) ಈಚೆಗೆ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನ ಗಿಫ್ಟ್ ಶಿರೋಮಣಿ ಮತ್ತು ಲಾಕ್‌ವುಡ್ ಎನ್ನುವವರು ಬ್ರಾಹ್ಮೀ ಲಿಪಿಯು ಒಂದೇ ಕಾಲದಲ್ಲಿ, ಬಹುಶಃ ಒಬ್ಬನೇ ವ್ಯಕ್ತಿಯಿಂದ, ರೂಪುಗೊಂಡ ಲಿಪಿ ಎಂಬ ಊಹೆಯನ್ನು ಮುಂದಿಟ್ಟಿದ್ದಾರೆ. ಎರಡು ಮೂಲಭೂತ ಜ್ಯಾಮಿತೀಯ ವಿನ್ಯಾಸಗಳಿಂದ—ಚತುರಸ್ರಾಕೃತಿಯಲ್ಲಿ ಆವೃತವಾದ ಶಿಲುಬೆಯಾಕಾರ ಮತ್ತು ಒಂದು ಲಂಬಕ ರೇಖೆಯ ಮೇಲೆ ಚಾಚಿದ ವೃತ್ತ—ಎಲ್ಲ ಬ್ರಾಹ್ಮೀ ಅಕ್ಷರಗಳೂ ರೂಪಿತವಾಗಿವೆ ಎಂದು ಇವರು ವಾದಿಸುತ್ತಾರೆ. ಆದರೆ ಈ ಎರಡು ಮೂಲಭೂತ ಜ್ಯಾಮಿತೀಯ ಮಾದರಿಗಳಿಂದ ಬ್ರಾಹ್ಮೀ ವರ್ಣಮಾಲೆಯಲ್ಲೇ ಇಲ್ಲದ ಅನೇಕ ರೂಪಗಳನ್ನು ಹೊಂದಲೂ ಸಾಧ್ಯ. ಈ ಊಹೆ ಸಾರ್ವತ್ರಿಕ ಪರಿಶೀಲನೆ ಅಥವಾ ಮಾನ್ಯತೆಗೆ ಇನ್ನೂ ಒಳಗಾಗಿಲ್ಲ.

(6) ಇತ್ತೀಚೆಗೆ ಎಸ್. ಆರ್. ಗೋಯಲ್ ಬ್ರಾಹ್ಮೀ ಉಗಮವನ್ನು ಕುರಿತು ಹೊಸ ಸಿದ್ಧಾಂತವನ್ನು ಮಂಡಿಸಿದ್ದಾರೆ. ಬ್ರಾಹ್ಮೀ ಉಗಮದ ಬಗೆಗೆ ಸುದೀರ್ಘವಾಗಿ ಚರ್ಚಿಸಿ ಅದು ಪೂರ್ವಮೌರ್ಯ ಕಾಲದ ಒಂದು ಅನ್ವೇಷಣೆ ಎಂದು ಅಭಿಪ್ರಾಯ ಪಡುತ್ತಾರೆ. ಇವರ ಸಿದ್ಧಾಂತವನ್ನು ಸ್ಥೂಲವಾಗಿ ಹೀಗೆ ಪರಿಚಯಿಸಬಹುದು :

ಭಾರತೀಯರಿಗೆ ,ಅಶೋಕಪೂರ್ವಕಾಲದಲ್ಲಿ ಬರವಣಿಗೆಯು ತಿಳಿದಿತ್ತೆನ್ನಲು ಸಾಹಿತ್ಯಿಕ ಆಧಾರಗಳು ಇವೆಯಾದರೂ ಅವನ್ನು ಸಮರ್ಥಿಸಲು ಪುರಾತತ್ವ ಆಧಾರಗಳು ದೊರೆಯುವುದಿಲ್ಲ. ಅಶೋಕಪೂರ್ವಕಾಲದಲ್ಲಿನ ಜನರು ನಶಿಸಿಹೋಗುವ ಸಾಮಗ್ರಿಗಳ

ಮೇಲೆ ಬರೆಯುತ್ತಿದ್ದರೆಂದು ಹೇಳುವುದರಲ್ಲಿ ಹುರುಳಿಲ್ಲ. ; ಏಕೆಂದರೆ ಲಿಪಿ ಯಾವುದೇ ಒಂದು ಮಾಧ್ಯಮಕ್ಕೆ ಸೀಮಿತವಾಗಿರಲಿಲ್ಲ ; ಹೆಚ್ಚೆಂದರೆ ಒಂದೊಂದು ಕಾಲದಲ್ಲಿ ಒಂದೊಂದು ಮಾಧ್ಯಮಕ್ಕೆ ಆದ್ಯತೆ-ಪ್ರಾಶಸ್ತ್ಯ ಸಿಕ್ಕಿರಬಹುದು. ಬರಹಕ್ಕೆ ಮಣ್ಪಾತ್ರೆ, ಕಲ್ಲು, ಮೂಳೆ, ಲೋಹ, ಮುಂತಾದ್ದೆಲ್ಲವನ್ನೂ ಬಳಸಲಾಗುತ್ತಿತ್ತೆನ್ನುವುದು ತಿಳಿದ ವಿಷಯ. ಸಿಂಧೂಲಿಪಿ ಆದ್ಯೇತಿಹಾಸ ಕಾಲಕ್ಕೆ ಸೇರುವುದರಿಂದ ಐತಿಹಾಸಿಕ ಕಾಲಕ್ಕೆ ಸಂಬಂಧಿಸಿದಂತೆ ಬ್ರಾಹ್ಮೀ ಶಾಸನಗಳೇ ಅತಿಪ್ರಾಚೀನ. ಇವುಗಳ ಕಾಲ ಕ್ರಿ.ಪೂ. 300 $\pm$ ಭಾವಿಸಲಾಗಿದೆ.

ಮೂಲಭೂತವಾಗಿ ಲಿಪಿ ಸೃಷ್ಟಿ ಒಂದು ಸಾಮಾಜಿಕ ಘಟನೆ ; ವ್ಯಕ್ತಿ ಅಥವಾ ವ್ಯಕ್ತಿ ಸಮುದಾಯ ತನ್ನ—ತತ್ಕಾಲೀನ ಸಾಮಾಜಿಕ ಅಗತ್ಯಗಳಿಗೆ ತಕ್ಕಂತೆ—ಪರಿಕಲ್ಪನೆಗಳಿಗೆ ಕೊಡುವ ಚಾಕ್ಷುಷ ರೂಪ. ಪ್ರಾಚೀನ ಈಜಿಪ್ಶಿಯನ್ನರ ಸಾಮಾಜಿಕ ಅಗತ್ಯಗಳು ರಾಜಸಂಬಂಧವು ; ಪ್ರಾಚೀನ ಮೆಸೊಪೊಟೇಮಿಯನ್ನರದು ತೆರಿಗೆ ಸಂಗ್ರಹಣೆಗೆ ಸಂಬಂಧಿಸಿದವು ; ಚೀನೀಯರದು ತಾಂತ್ರಿಕ-ಧಾರ್ಮಿಕ ಸಂಬಂಧದವು. ಹೀಗೆಯೇ ಭಾರತದಲ್ಲಿ ಅಶೋಕನ ಕಾಲದ ಸಾಮಾಜಿಕ ಅಗತ್ಯಗಳು ಧರ್ಮನೀತಿ ನಿಯಮಗಳಿಗೆ ಸಂಬಂಧಿಸಿದವು. ಅಶೋಕ ಈ ಕಾಲದ ಒಬ್ಬ ಮಹಾನನ್ವೇಷಕ (ಉದಾ: ಪ್ರಸ್ತರ ಶಾಸನಗಳ ಮೂಲಕ ಧರ್ಮಪ್ರಸಾರ ; ಶಿಲೆಯ ಮೇಲೆ ಮತ್ತು ಶಿಲಾಸ್ತಂಭಗಳನ್ನು ನಿರ್ಮಿಸಿ ಅವುಗಳ ಮೇಲೆ ಶಾಸನಗಳ ಕಂಡರಣೆ ; ರಾಜಚಿಹ್ನೆಯಾಗಿ ಸಿಂಹದ ಬಳಕೆ ಇತ್ಯಾದಿ). ಆತನ ಸಾಮ್ರಾಜ್ಯದ ಪಶ್ಚಿಮಭಾಗಗಳಲ್ಲಿ ಅರಾಮೇಯಿಕ್, ಗ್ರೀಕ್ ಮತ್ತು ಬೆಣೆ ಲಿಪಿಗಳು ಬಳಕೆಯಲ್ಲಿದ್ದುವು. ಅಶೋಕ ಅರಾಮೇಯಿಕ್‌ನಿಂದ ಉಗಮಿಸಿದ ಖರೋಷ್ಠೀ ಲಿಪಿಯನ್ನು ತನ್ನ ಸಾಮ್ರಾಜ್ಯದ ವಾಯುವ್ಯ ಭಾಗಗಳಲ್ಲಿನ ಶಾಸನಗಳಿಗಷ್ಟೇ ಬಳಸಿಕೊಂಡ. ಬ್ರಾಹ್ಮೀಗೆ ಖರೋಷ್ಠೀ ಮಾದರಿಯಾಗಲಿಲ್ಲ. ಗ್ರೀಕ್ ಲಿಪಿಯನ್ನು ಅಫ್ಘಾನಿಸ್ತಾನದ ಭಾಗದಲ್ಲಿ ತನ್ನ ದ್ವಿಭಾಷಾ ಶಾಸನಗಳಿಗೆ ಅಶೋಕ ಬಳಸಿಕೊಂಡನಾದರೂ ಅದನ್ನೂ ಬ್ರಾಹ್ಮೀ ಲಿಪಿಗೆ ಮಾದರಿಯನ್ನಾಗಿ ಆರಿಸಿಕೊಳ್ಳಲಿಲ್ಲ. ಪಶ್ಚಿಮ ಏಷ್ಯ ಲಿಪಿಮಾದರಿಗಳೆಲ್ಲವನ್ನೂ ಪರಿಶೀಲಿಸಿ ಬಿಂದುಸಾರ ಅಥವಾ ಬಹುಮಟ್ಟಿಗೆ ಅಶೋಕನ ಆಳ್ವಿಕೆಯ ಆರಂಭದ ವರ್ಷಗಳಲ್ಲಿ ಹೊಸಲಿಪಿಯೊಂದನ್ನು ಆ ಕಾಲದ ವಿದ್ವಾಂಸರು ಮತ್ತು ವ್ಯಾಕರಣ ತಜ್ಞರ ನೆರವಿನಿಂದ ರೂಪಿಸಲಾಯಿತು. ಇದಕ್ಕೆ ಚಿತ್ರಬರಹಗಳೂ ಸಹಾಯಕವಾಗಿದ್ದಿರಬೇಕು. ಲಿಪಿಯ ಪರಿಕಲ್ಪನೆ ಮತ್ತು ಲೇಖನದ ವಿಧಾನ ಬಹುಮಟ್ಟಿಗೆ ಪಶ್ಚಿಮ ದೇಶಗಳಿಂದ ಬಂದಿತು ; ದೇಶೀಯ ಸ್ಥಿತಿಗತಿಗೆ ಅನ್ವಯವಾಗುವಂತೆ ಈ ಲಿಪಿಯನ್ನು ರೂಪಿಸಲಾಯಿತು. ಇದು ಈ ಇಬ್ಬರು ವಿದ್ವಾಂಸರ ಅಭಿಪ್ರಾಯ. ಅಶೋಕನ ಕಾಲದ ಬ್ರಾಹ್ಮೀ ಲಿಪಿಯಲ್ಲಿ ವೈವಿಧ್ಯವಿದೆ ಎನ್ನುವುದು ಒಂದು ಮಿಥ್ಯೆ ಎನ್ನುವುದು ಅವರ ನಿಲುವು. ಈ ಸಿದ್ಧಾಂತದ ಬಗೆಗೆ ಬರಬಹುದಾದ ಎಲ್ಲ ಟೀಕೆ ಟಿಪ್ಪಣಿಗಳಿಗೆ ಅವರು ಉತ್ತರಿಸಿದ್ದಾರೆ.

ಒಂದು ಲಿಪಿ ಹುಟ್ಟಿ, ಬೆಳೆದು ಪರಿಪೂರ್ಣ ವರ್ಣಮಾಲೆಯಾಗಲು ಕೆಲವು ವರ್ಷಗಳು ಅಥವಾ ದಶಕಗಳು ಸಾಲುವುದಿಲ್ಲ. ಒಬ್ಬ ಅರಸನ ಆಳ್ವಿಕೆಯಲ್ಲಿಯೇ ಲಿಪಿಯೊಂದು ಹೊಸದಾಗಿ ರೂಪಿತವಾಗಿ, ದೊಡ್ಡ ದೇಶವೊಂದರ ಹತ್ತಾರು ಸ್ಥಳಗಳಲ್ಲಿ ಜನಸಾಮಾನ್ಯರಿಗೆ ಪರಿಚಿತವಾಗಲು ಸಾಧ್ಯವಿಲ್ಲ. ಜನಸಾಮಾನ್ಯರಿಗೆ ಆ ಲಿಪಿ ತಿಳಿದಿರಲಿಲ್ಲ ಎಂದು ಹೇಳಿದರೆ ಶಾಸನ ಹಾಕಿಸಿದ ಉದ್ದೇಶವೇ ವಿಫಲವಾಗುತ್ತದೆ. ಅಶೋಕ ಪೂರ್ವ ಕಾಲದಲ್ಲಿ ಭಾರತೀಯರಿಗೆ ಲೇಖನ ಕಲೆ ತಿಳಿದಿತ್ತೆಂದು ಹೇಳಲು ಪುರಾತತ್ವ ಆಧಾರಗಳು ಅಲಭ್ಯವಾಗಿದ್ದರೂ, ಇತರ ಬಗೆಯ 'ಸುಳಿವು'ಗಳು ನಿಶ್ಚಿತವಾಗಿ ಸಿಕ್ಕುತ್ತವೆ. ಅಶೋಕ ಪೂರ್ವ ಕಾಲದಲ್ಲಿ ಬಳಕೆಯಲ್ಲಿದ್ದ ಲಿಪಿ ಯಾವುದು ? ಅದಕ್ಕೂ ಬ್ರಾಹ್ಮೀ ಲಿಪಿಗೂ ಇದ್ದಿರಬಹುದಾದ ಸಂಬಂಧವೇನು ? ಇಂಥ ಪ್ರಶ್ನೆಗಳು ಉದ್ಭವಿಸುತ್ತವೆ. ಒಟ್ಟಿನಲ್ಲಿ ಬ್ರಾಹ್ಮೀ ಉಗಮ ಇನ್ನೂ ಒಂದು ರಹಸ್ಯವಾಗಿಯೇ ಉಳಿದಿದೆ ಎಂದು ಹೇಳುವುದು ಸದ್ಯದ ಪರಿಸ್ಥಿತಿಯಲ್ಲಿ ಅನಿವಾರ್ಯವೂ ಸಮರ್ಪಕವೂ ಆಗುತ್ತದೆ. ತಕ್ಷಶಿಲಾ ಮತ್ತು ಏರಾಣ ನಾಣ್ಯ ಆಲೇಖಗಳು, ಮಹಾಸ್ಥಾನ ಶಿಲಾಫಲಕ ಶಾಸನ, ಪಿಪ್ರಾವಾ ಬೌದ್ಧ ಶಾಸನ, ಸೋಹ್‌ಗೌರಾ ತಾಮ್ರಫಲಕ ಶಾಸನ, ಬಾಢಿ ಶಾಸನ, ಭಟ್ಟಿಪ್ರೋಲು ಕರಂಡಕ ಶಾಸನ ಮುಂತಾದ ಶಾಸನಗಳನ್ನು ಅಶೋಕಪೂರ್ವ ಕಾಲದವು ಎಂದು ಕೆಲವು ವಿದ್ವಾಂಸರು ಭಾವಿಸಿದ್ದರು. ಆದರೆ ಇವುಗಳಲ್ಲಿ ಯಾವುದೂ ಅಶೋಕ ಪೂರ್ವ ಕಾಲದ್ದಲ್ಲ ಎನ್ನುವುದೀಗ ಸ್ಥಿರಪಟ್ಟಿದೆ. ಆದ್ದರಿಂದ ಅಶೋಕನ ಶಾಸನಗಳೇ ಲಭ್ಯವಿರುವ ಪ್ರಾಚೀನ ಬ್ರಾಹ್ಮೀ ಶಾಸನಗಳು.

ಇಂದಿನ ಭಾರತದ ಎಲ್ಲ ಲಿಪಿಗಳಿಗೆ ಮತ್ತು ಬೃಹದ್ಭಾರತದ — ಎಂದರೆ ಶ್ರೀಲಂಕಾ, ನೇಪಾಲ, ಪಾಕಿಸ್ತಾನ, ಅಫ್‌ಘಾನಿಸ್ತಾನ, ಬಾಂಗ್ಲಾದೇಶ, ಟಿಬೆಟ್, ಬರ್ಮಾ, ಥೈಲೆಂಡ್, ಕಾಂಬೋಡಿಯ, ದಕ್ಷಿಣ ವಿಯಟ್ನಾಂ, ಮಲಯಾ, ಇಂಡೋನೇಷ್ಯ, ಫಿಲಿಪ್ಪೈನ್ಸ್ ಮತ್ತು ಮಾಲ್ಡೀವ್ ದ್ವೀಪಗಳ — ಬಹುಪಾಲು ಲಿಪಿಗಳಿಗೆ ಬ್ರಾಹ್ಮೀ ಮಾತೃಲಿಪಿಯಾಗಿದೆ.

ಆಧಾರ ಗ್ರಂಥಗಳು

1. ಕನ್ನಡ ವಿಶ್ವಕೋಶ : ಸಂಪುಟ ೧೧
2. ಮಾಧವ ನಾ ಕಟ್ಟಿ : ಲಿಪಿಶಾಸ್ತ್ರ (1972)
3. R.B. Pandey : Indian Palaeography, part I (1952)
4. David Diringer : Writing (1962)
5. I. J Gelb : A Study of writing (1952)
6. A. H. Dani : Indian Palaeography (1963)

7. T. V. Mahalingam : Early South Indian Palaeography (1974)
8. C. S. Upasak : History and Palaeography of Mauryan Brahmi Script (1960)
9. T.P. Verma : The Palaeography of Brahmi Script in North India (1971)
10. S P. Gupta and K.S. Ramachandran (Ed) : The Origin of Brahmi Script (1979)

ಕೆ.ಎಸ್. ರಾಮಕೃಷ್ಣರಾವ್

ಜಾರ್ಜ್‌ಬಾರ್ಕ್ಲೆ (1685-1753)

ಕ್ರೈಸ್ತ್ಯಧರ್ಮ ಗುರುವಾದ ಐರ್ಲೆಂಡಿನ ಬಾರ್ಕ್ಲೆಯು ತನ್ನ ವೃತ್ತಿಯ ಉದ್ದೇಶಗಳನ್ನು ಪೂರೈಸಿಕೊಳ್ಳುವ ಸಲುವಾಗಿ ತತ್ವಶಾಸ್ತ್ರದ ಕ್ಷೇತ್ರವನ್ನು ಪ್ರವೇಶಿಸಿದನು. ಕ್ರೈಸ್ತಧರ್ಮದಲ್ಲಿ ಸಾಕಷ್ಟು ಜನರಿಗೆ ನಂಬಿಕೆಯನ್ನುಂಟು ಮಾಡುವುದೇ ಆತನ ವೃತ್ತಿಯ ಮೂಲ ಉದ್ದೇಶ. ಭೌತ ವಸ್ತುಗಳನ್ನು ಒಂದು ರೀತಿ ಶಾಶ್ವತ ಭೋಗ ವಸ್ತುಗಳೆಂದು ಪರಿಗಣಿಸುವ ಮಾನವರು ಧಾರ್ಮಿಕ ನಂಬಿಕೆಗಳನ್ನು ಕಳೆದುಕೊಳ್ಳುವುದು ಸಹಜ. ಇಂತಹ ಪರಿಸ್ಥಿತಿ ಉಂಟಾಗದಂತೆ ನೋಡಿಕೊಳ್ಳುವುದು ಧರ್ಮಗುರುಗಳ ಉದ್ದೇಶ ಹಾಗೂ ಕರ್ತವ್ಯ. ಆದರೆ ಬಾರ್ಕ್ಲೆಯ ಈ ಉದ್ದೇಶ ಸಾಧನೆಯಲ್ಲಿ ಲಾಕ್‌ನ ಭೌತವಾದವು ಒಂದು ಪ್ರಾಮುಖ್ಯ ತೊಡಕಾಗಿದ್ದಿತು. ಇದನ್ನು ಗಮನಿಸಿದ ಬಾರ್ಕ್ಲೆ ತನ್ನ ತತ್ವ ನಿರೂಪಣೆಯ ಮೂಲಕ ಭೌತವಾದವನ್ನು ನಿರಾಕರಿಸುವ ಮತ್ತು ಚೈತನ್ಯಯುತ ಚಿದ್ವಾದವನ್ನು ಪ್ರತಿಪಾದಿಸುವ ಪ್ರಯತ್ನವನ್ನು ಕೈಗೊಂಡನು. ನಿರ್ಜೀವ ವಸ್ತುಗಳ ಇರುವಿಕೆಯನ್ನು, ಅವುಗಳ ಪ್ರಯೋಜನವನ್ನು ಒಪ್ಪಿದ್ದೇ ಆದರೆ ಅಶಾಶ್ವತವಾದ ಈ ವಸ್ತುಗಳು ಆಧ್ಯಾತ್ಮಿಕ ದ್ರವ್ಯವಾದ ಪರಮಾತ್ಮನಿಗೆ ಪ್ರತಿಸ್ಪರ್ಧಿಯಾಗುತ್ತವೆ ಎಂದು ಬಾರ್ಕ್ಲೆ ಅಭಿಪ್ರಾಯಪಟ್ಟನು. ಭೌತವಾದವು ಏಕೇಶ್ವರವಾದಕ್ಕೆ ಧಕ್ಕೆಯನ್ನುಂಟುಮಾಡುವುದಲ್ಲದೆ ನಮ್ಮ ವಿಚಾರಶಕ್ತಿಯನ್ನು ನಾಸ್ತಿಕತೆಯ ಕಡೆಗೆ ಎಳೆಯಬಹುದೆಂದು ಆತನು ಅಂಜಿದನು. ಆದುದರಿಂದ ಮೊಟ್ಟ ಮೊದಲಿಗೆ ಅನುಭವ ವಾದದ ಸಿದ್ಧಾಂತಗಳನ್ನು ನಿರಾಕರಿಸಿ ವಸ್ತು ಸ್ವಾತಂತ್ರ್ಯವಾದವನ್ನು ಆದರ ಪರಿಣಾಮವಾದ ನಾಸ್ತಿಕ ವಾದವನ್ನು ತಡೆಯಲು ಪ್ರಯತ್ನಿಸಿದನು. ಇದಕ್ಕೆ ಮೊದಲು ಅನುಭವ ವಾದದ ಪ್ರತಿಪಾದಕನಾದ ಲಾಕ್ ಇಂದ್ರಿಯಾನುಭವಗಳಿಂದ ಆಧಾರಿತವಾದ ನಮ್ಮ ಜ್ಞಾನವು ವಸ್ತುವಿನ ನೇರ ಜ್ಞಾನವಾಗಿರದೇ ಆದರ ಪ್ರತಿಬಿಂಬ ಅಥವಾ ಪ್ರತಿರೂಪದ ಜ್ಞಾನ ಎಂದಿದ್ದನು. ಆದರೂ ಜನಸಾಮಾನ್ಯರನ್ನು ತೃಪ್ತಿಪಡಿಸಲು ಲಾಕ್ ಭೌತ ವಸ್ತುಗಳು ಅವುಗಳನ್ನರಿಯುವ ಮನಸ್ಸಿನಿಂದ ಬೇರೆಯಾಗಿದ್ದು ಹೊರಪ್ರಪಂಚದಲ್ಲಿ ತಮ್ಮದೇ ಆದ ಅಸ್ತಿತ್ವವನ್ನು ಹೊಂದಿದೆ ಎಂದು ಭಾವಿಸಿದ್ದನು. ಲಾಕ್‌ನ ಈ ವಾದವು ಆತನ ಅನುಭವ ಸಿದ್ಧಾಂತಕ್ಕೆ ವಿರುದ್ಧವಾದ ನಿರೂಪಣೆಯಾಗಿ ಆತನ ಇಡೀ ಪ್ರತಿ

ಪಾದನೆ ಗೊಂದಲಮಯವಾಯಿತು. ಈ ಅವಕಾಶವನ್ನು ಉಪಯೋಗಿಸಿಕೊಂಡ ಬಾರ್ಕ್ಲಿ ವಿಜ್ಞಾನವಾದದ (ಚಿದ್ವಾದದ) ಆಧಾರದಿಂದ ಲಾಕ್‌ನ ತತ್ವ ನಿರೂಪಣೆಯನ್ನು ಖಂಡಿಸಿದ್ದೇ ಅಲ್ಲದೆ ಅನುಭವವಾದದ ಸ್ಥಳದಲ್ಲಿ ತನ್ನ ಚಿದ್‌ವಾದವನ್ನು ಪ್ರತಿಸ್ಥಾಪಿಸಿದನು. ಭೌತ ದ್ರವ್ಯಗಳು ಸ್ವತಂತ್ರವಾಗಿರದೆ ಮನಸ್ಸಿಗೆ ಅಧೀನವಾಗಿರುವಂತೆಯೇ ಮತ್ತು ಅವುಗಳ ಸಂಪೂರ್ಣ ಅಸ್ತಿತ್ವವು ಮನಸ್ಸನ್ನೇ ಅವಲಂಬಿಸಿರುವಂತೆಯೂ ನಿರೂಪಿಸಿರುವುದು ಆತನ ಚಿದ್ವಾದದ ಮುಖ್ಯಾಂಶವಾಗಿದೆ.

ಭೌತವಸ್ತುಗಳ ನಿರಾಕರಣೆ : — ಭೌತ ವಸ್ತುಗಳ ನಿರಾಕರಣೆಯಲ್ಲಿ ಬಾರ್ಕ್ಲಿ ಮೂರು ವಾದಗಳನ್ನು ಮುಂದಿಡುತ್ತಾನೆ. ಇವೆಲ್ಲವೂ ಲಾಕ್ ವಿವರಣೆಯ ನಿರಾಕರಣೆ ಯಾಗಿರುತ್ತದೆ.

1. ಲಾಕ್ ಭೌತವಸ್ತುಗಳಲ್ಲಿ ಪ್ರಧಾನ ಮತ್ತು ಆನುಷಂಗಿಕ ಗುಣಗಳೆಂಬ ಎರಡು ವಿಧದ ಗುಣಗಳಿವೆ ಎಂದು ಅವುಗಳಲ್ಲಿ ಪ್ರಧಾನ ಗುಣಗಳು ವಸ್ತುಗಳಲ್ಲೇ ಇದ್ದು ಅವುಗಳ ಅಸ್ತಿತ್ವಕ್ಕೆ ಆಧಾರವಾಗಿವೆಯೆಂದು ಮತ್ತು ಆನುಷಂಗಿಕ ಗುಣಗಳು ನಮ್ಮ ಮಾನಸಿಕ ಕಲ್ಪನೆಗಳಾಗಿದ್ದು ವೈಯುಕ್ತಿಕವಾಗಿವೆ ಎಂದು ವಿವರಿಸಿದನು. ಈ ಗುಣಗಳಲ್ಲಿ ಆನುಷಂಗಿಕ ಗುಣಗಳನ್ನು ನಮ್ಮ ಮಾನಸಿಕ ಕಲ್ಪನೆಗಳೆಂದು ಪರಿಗಣಿಸಿ ವಸ್ತುಗಳಿಂದ ಅವುಗಳನ್ನು ಲಾಕ್ ನಿರಾಕರಿಸಿದಂತೆ ಬಾರ್ಕ್ಲಿಯು ಪ್ರಧಾನ ಗುಣಗಳೂ ಕೂಡ ಆನುಷಂಗಿಕ ಗುಣಗಳಂತೆ ಮಾನಸಿಕ ಕಲ್ಪನೆಗಳೇ ಆಗಿದ್ದು ವೈಯಕ್ತಿಕವಾಗಿವೆ ಎನ್ನುತ್ತಾನೆ. ಬಾರ್ಕ್ಲಿಯ ಪ್ರಕಾರ ಈ ಎರಡು ಗುಣಗಳ ನಡುವೆ ಯಾವ ವ್ಯತ್ಯಾಸವೂ ಇಲ್ಲ. ಉದಾಹರಣೆಗೆ ಲಾಕ್‌ನ ಪ್ರಕಾರ ಒಂದು ವಸ್ತುವಿನ ಆಕಾರ ಅಥವಾ ಸಂಖ್ಯೆಯು ಅವರ ಪ್ರಧಾನ ಗುಣಗಳಾಗಿವೆ. ಈ ಗುಣಗಳು ವೈಯುಕ್ತಿಕವಾಗಿಲ್ಲವಾದ್ದರಿಂದ ಅವು ವಸ್ತುಗಳಲ್ಲಿಯೇ ಇರಬೇಕು. ಆದರೆ ಈ ಮಾತನ್ನು ವಿರೋಧಿಸುವ ಬಾರ್ಕ್ಲಿ ಕುಡಿದು ಮತ್ತನಾದ ವ್ಯಕ್ತಿ ಒಂದೇ ಆಕಾರದ ವಸ್ತುವನ್ನು ಬೇರೆ ಬೇರೆ ಆಕಾರವನ್ನು ಪಡೆದಿರುವಂತೆಯೂ ಅಥವಾ ಒಂದೇ ವಸ್ತುವನ್ನು ಎರಡು ವಸ್ತುಗಳ ರೂಪದಲ್ಲಿಯೂ ಕಾಣಬಹುದಾದ್ದರಿಂದ ಲಾಕ್ ಪ್ರಧಾನ ಗುಣವೆಂದು ಭಾವಿಸಿದ ಆಕಾರವು ಆನುಷಂಗಿಕ ಗುಣದಂತೆ ವೈಯುಕ್ತಿಕವಾಗುತ್ತದೆ. ಆದುದರಿಂದ ಆನುಷಂಗಿಕ ಗುಣಗಳಂತೆ ಪ್ರಧಾನ ಗುಣಗಳೂ ಕೂಡ ವೀಕ್ಷಿಸುವವನ ಮನಃಸ್ಥಿತಿಯನ್ನವಲಂಬಿಸುವುದಲ್ಲದೆ ಬಾಹ್ಯ ವಸ್ತುಗಳನ್ನು ಅವಲಂಬಿಸಿಲ್ಲ ಎಂದು ಬಾರ್ಕ್ಲಿ ವಾದಿಸುತ್ತಾನೆ. ಈ ಎರಡು ಗುಣಗಳಿಲ್ಲದ ಮೇಲೆ ಭೌತ ವಸ್ತುಗಳೆನ್ನುವುದೇ ಇಲ್ಲ. ಒಂದು ವೇಳೆ ಇದೆ ಎಂದರೂ ಅದು ನಮ್ಮ ಮನಸ್ಸಿನ ಕಲ್ಪನೆಯೇ ಆಗಿದೆ.

2. ಲಾಕ್‌ನು ವಸ್ತುಗಳಲ್ಲಿ ದ್ರವ್ಯ ಮತ್ತು ಗುಣಗಳೆಂಬ ಎರಡು ಭಾಗಗಳಿವೆ ಎಂದು ಪ್ರತಿಪಾದಿಸಿ ಗುಣಗಳು ಸ್ವತಂತ್ರ ಅಸ್ತಿತ್ವವನ್ನು ಪಡೆದಿರದೆ ತಮ್ಮ ಇರುವಿಕೆಗೆ ಆಧಾರವಾಗಿ ದ್ರವ್ಯವನ್ನವಲಂಬಿಸಿದೆ ಎಂದು ಹೇಳಿದ್ದನು. ಲಾಕ್‌ನ ಅಭಿಪ್ರಾಯದಂತೆ ದ್ರವ್ಯವು ಗುಣರಹಿತವಾಗಿದ್ದು ಇತರ ಗುಣಗಳಿಗೆ ಆಶ್ರಯವನ್ನೀಯುವ

ಯಾವುದೋ ಒಂದು "ಅವರ್ಣನೀಯ" ಅಂಶವಾಗಿದೆ. ದ್ರವ್ಯವೆಂದರೆ ಏನೆಂದು ಸ್ಪಷ್ಟವಾಗಿ ನಿರೂಪಿಸಲು ಅಸಮರ್ಥನಾದ ಲಾಕ್‌ನ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡ ಬಾರ್ಕ್ಲಿ ಅಂತಹ ದ್ರವ್ಯ ಇರಲು ಸಾಧ್ಯವೇ ಇಲ್ಲ ಎಂದು ವಾದಿಸಿದನು. ಯಾವ ವಸ್ತುವನ್ನು ತಿಳಿಯಬೇಕಾದರೂ ನಾವು ಅದನ್ನು ಅವರ ಗುಣಗಳ ಮೂಲಕ ತಿಳಿಯುತ್ತೇವೆ. ಲಾಕ್ ನಿರೂಪಿಸಿದ ದ್ರವ್ಯವು ಗುಣರಹಿತವಾಗಿರುವುದರಿಂದ ಅದನ್ನು ಅರಿಯುವುದು ಸಾಧ್ಯವೇ ಇಲ್ಲ ಎನ್ನುವುದು ಸರಳವಾದ ತರ್ಕ. ಒಂದು ವೇಳೆ ಗುಣಗಳೆಲ್ಲಾ ಒಂದು ಕಡೆ ಕೇಂದ್ರೀಕೃತವಾಗಿದ್ದು ಆ ದ್ರವ್ಯವನ್ನು ಒಂದು ವಸ್ತು ಅಥವಾ ದ್ರವ್ಯ ಎಂದು ಭಾವಿಸುವುದಾದರೂ ಲಾಕ್‌ನು ವಿವರಿಸಿದ ಎರಡು ರೀತಿಯ ಗುಣಗಳು ನಮ್ಮ ಮನಸ್ಸಿನ ಕಲ್ಪನೆಗಳಾದುದರಿಂದ (ಬಾರ್ಕ್ಲಿ) ಹೇಳುವಂತೆ ಅವುಗಳಿಂದ ಸಂಯೋಜಿತವಾದ ವಸ್ತುವೂ ಕೂಡ ನಮ್ಮ ಮನಸ್ಸಿನ ಕಲ್ಪನೆಯೇ ಆಗಿರಬೇಕು.

3. ಬಾರ್ಕ್ಲಿಯ ಮೂರನೇ ವಾದವು ಆತನ ಪ್ರಸಿದ್ಧ ಹೇಳಿಕೆಯೊಂದನ್ನು ಆಧರಿಸಿದೆ. "ವಸ್ತುಗಳ ಇರುವಿಕೆ ಎಂದರೆ ಅವುಗಳನ್ನು ವೀಕ್ಷಿಸುವುದೇ ಆಗಿದೆ" ಎನ್ನುವುದೇ ಈ ಹೇಳಿಕೆ. ಒಂದು ಭೌತ ದ್ರವ್ಯದಲ್ಲಿ ಅನೇಕ ಗುಣಗಳಿರುತ್ತವೆ. ಈ ನಿರ್ದಿಷ್ಟ ಗುಣಗಳ ವ್ಯವಸ್ಥಿತ ಜೋಡಣೆಯನ್ನೇ ನಾವು "ವಸ್ತು" ಎನ್ನುತ್ತೇವೆ. ಈ ಗುಣಗಳ ಜೋಡಣೆಯಲ್ಲದೆ ವಸ್ತು ಅನ್ನುವುದು ಬೇರೇನೂ ಇಲ್ಲ. ಉದಾಹರಣೆಗೆ ಮೇಜು ಎಂದರೆ ಒಂದು ಆಕಾರ, ಬಣ್ಣ, ಉದ್ದೇಶ ಮುಂತಾದ ನಿರ್ದಿಷ್ಟ ಗುಣಗಳ ಸಂಯೋಜನೆಯಲ್ಲದೆ ಬೇರೇನೂ ಅಲ್ಲ. ಆದರೆ ಈ ಗುಣಗಳೆಲ್ಲವೂ ವೀಕ್ಷಿಸುವ ಮನಸ್ಸಿನ ಕಲ್ಪನೆಗಳು ಎಂದು ಬಾರ್ಕ್ಲಿ ಈಗಾಗಲೇ ತಿಳಿಸಿದ್ದಾನೆ. ಅಂದರೆ ವೀಕ್ಷಿಸಿದ ವಸ್ತುವು ಒಂದು ಬಣ್ಣವಾದರೆ ಅದು ಕಣ್ಣಿನಿಂದ ನೋಡಲ್ಪಟ್ಟಿರಬೇಕು, ಶಬ್ದವಾದರೆ ಕಿವಿಯಿಂದ ಕೇಳಲ್ಪಟ್ಟಿರಬೇಕು, ರುಚಿಯಾದರೆ ಅದು ನಾಲಗೆಯಿಂದ ಅನುಭವಿಸಲ್ಪಟ್ಟಿರಬೇಕು ಇತ್ಯಾದಿ. ಇಷ್ಟಲ್ಲದೆ ಬೇರೆಬೇರೆಯಾಗಿ "ವಸ್ತು" ಎನ್ನುವುದು ಯಾವ ರೀತಿಯಿಂದಲೂ ವೀಕ್ಷಿಸಲ್ಪಡುವುದಿಲ್ಲ. ಒಂದು ವೇಳೆ ವಸ್ತುವಿದೆ ಎಂದರೂ ಮೇಲೆ ಹೇಳಿದಂತೆ ವೀಕ್ಷಿಸಲ್ಪಡಬೇಕು. ಉದಾಹರಣೆಗೆ ಮೇಜು ಎಂಬ ವಸ್ತು ಇದೆ ಎನ್ನುವುದಾದರೆ ಅದರ ಗಾತ್ರ, ಆಕಾರ, ಬಣ್ಣ, ಭಾರ, ಉದ್ದೇಶ ಇತ್ಯಾದಿ ಗುಣಗಳು ನಮ್ಮ ಮನಸ್ಸಿನಿಂದ ವೀಕ್ಷಿಸಲ್ಪಟ್ಟಿರಬೇಕು. ಒಂದು ಕೊಠಡಿಯಲ್ಲಿ ಮೇಜು ಇದೆ ಎನ್ನುವುದರ ಅರ್ಥ ಅದನ್ನು ನಾನು ಆ ಕೊಠಡಿಯಲ್ಲಿದ್ದು ವೀಕ್ಷಿಸಿದ್ದೇನೆ ಅಥವಾ ನಾನಿಲ್ಲದಿದ್ದರೆ ಮತ್ತೊಂದು ಮನಸ್ಸು ಅಲ್ಲಿದ್ದು ಅದನ್ನು ವೀಕ್ಷಿಸಬೇಕು ಎಂದಾಗುತ್ತದೆ. ಆದರೆ ಮೇಜು ಇದೆ ಎಂದಾಗ ಅದರ ಗುಣಗಳನ್ನಷ್ಟೇ ನಾವು ಗ್ರಹಿಸುತ್ತೇವೆ. ಈ ಗುಣಗಳು ನಮ್ಮ ಮಾನಸಿಕ ಕಲ್ಪನೆಯಿಂದ ಸೃಷ್ಟಿಸಲ್ಪಟ್ಟವಾದುದರಿಂದ ಮನಸ್ಸಿನಿಂದ ಸ್ವತಂತ್ರವಾಗಿ ಭೌತದ್ರವ್ಯವಿರಲು ಸಾಧ್ಯವಿಲ್ಲ ಎಂದು ಸುಲಭವಾಗಿ ವಾದಿಸಬಹುದು. ಒಂದು ವೇಳೆ ವಸ್ತುವಿದೆ ಎಂದರೆ ಅದನ್ನು ಯಾವುದಾದರೊಂದು ಮನಸ್ಸು ವೀಕ್ಷಿಸಿರಲೇಬೇಕು.

ನಮ್ಮ ಭಾವನೆಗಳು, ಅನುಭವಗಳು ಮತ್ತು ಉದ್ವೇಗಗಳು ನಮ್ಮ ಮನಸ್ಸಿನಿಂದ

ಬೇರೆಯಾಗಿರದೆ ಅವು ಮನಸ್ಸನ್ನೇ ಅವಲಂಬಿಸಿವೆ, ಎನ್ನುವುದು ಸರ್ವವಿಧಿತ. ನಮ್ಮ ಭಾವನೆಗಳು ಮನಸ್ಸಿನಲ್ಲಿ ಆಂತರಿಕ ಪ್ರಜ್ಞೆಯ ರೂಪದಲ್ಲಿರುತ್ತವೆ. ಈ ಭಾವನೆಗಳೆಲ್ಲವೂ ನಮ್ಮ ಮನಸ್ಸಿನಲ್ಲೇ ಇದ್ದರೂ ಅವುಗಳ ಬಗ್ಗೆ ನಮ್ಮ ನಿರ್ಧಾರಿತವಾದ ಸ್ಪಷ್ಟ ಜ್ಞಾನವಿಲ್ಲ. ನಮ್ಮ ಭಾವನೆಗಳು ಮತ್ತು ಇಚ್ಛೆಗಳೆಲ್ಲವೂ ಗುಣಗಳ ರೂಪದಲ್ಲೇ ಇದ್ದು ನಮ್ಮ ಮನಸ್ಸನ್ನೇ ಅವಲಂಬಿಸಿರುವುದರಿಂದ ಅವುಗಳನ್ನು ಮನಸ್ಸಿನ ಅವಿಭಾಜ್ಯ ಅಂಶಗಳೆಂದು ಸುಲಭವಾಗಿ ತೀರ್ಮಾನಿಸುತ್ತೇವೆ. ಭಾವನೆ ಮತ್ತು ಕಲ್ಪನೆಗಳೇ ಅಲ್ಲದೆ ಬಣ್ಣ, ಶಬ್ದ, ರುಚಿ ಮುಂತಾದ ಗುಣಗಳು ನಮ್ಮ ಮನಸ್ಸಿನಿಂದ ಪ್ರತ್ಯೇಕವಾಗಿದ್ದು ಬಾಹ್ಯ ವಸ್ತುಗಳಲ್ಲಿ ಕೇಂದ್ರೀಕೃತವಾಗಿವೆ ಎಂದು ನಮ್ಮ ಸಾಮಾನ್ಯ ನಂಬಿಕೆಯಾಗಿದೆ. ಬಾಹ್ಯ ವಸ್ತುಗಳಲ್ಲಿರುವ ಗುಣಗಳ ಬಗ್ಗೆ ನಮ್ಮ ನಂಬಿಕೆಯನ್ನು ಬಾರ್ಕ್ಲೆ ನಿರಾಕರಿಸುತ್ತಾನೆ. ಅವನ ಅಭಿಪ್ರಾಯದಂತೆ ಎಲ್ಲಾ ರೀತಿಯ ಗುಣಗಳು ಮಾನಸಿಕವಾಗಿರುವುದರಿಂದ ಆ ಗುಣಗಳನ್ನು ವಸ್ತುಗಳಲ್ಲಿರುವಂತೆ ನಾವು ಕಾಣುತ್ತೇವೆ. ಆದುದರಿಂದ ಈ ಪ್ರಕೃತಿಯ ವಸ್ತುಗಳಿಂದ ಪ್ರಾರಂಭಿಸಿ ಇಡೀ ವಿಶ್ವಕ್ಕೆ ಅನ್ವಯಿಸುವ ಯಾವುದೇ ಅಂಶವು ನಮ್ಮ ಮನಸ್ಸನ್ನೇ ಅವಲಂಬಿಸಿದೆ.

ಬಾರ್ಕ್ಲೆಯ ಚಿದ್ವಾದ ಅಥವಾ ಭಾವವಾದ: — ಈ ವಾದದಂತೆ ಒಂದು ವಸ್ತುವಿನ ಇರುವಿಕೆ ಎಂದರೆ ನಮ್ಮ ಮನಸ್ಸಿನಲ್ಲಿ ಅದರ ಬಗ್ಗೆ ಇರುವ ಕಲ್ಪನೆಯೇ ಆಗಿದೆ. ಭೌತ ದ್ರವ್ಯಗಳ ಬಗ್ಗೆ ನಮ್ಮಲ್ಲಿರುವ ಕಲ್ಪನೆಗಳು ನಮ್ಮ ಆಂತರಿಕ ಭಾವನೆಗಳಂತೆಯೇ ಇರುವಂಥವಾಗಿವೆ. ಅಂದರೆ ಪ್ರಕೃತಿಯಲ್ಲಿ ಕಂಡು ಬರುವ ಮತ್ತು ನಮ್ಮ ಆಂತರಿಕ ಗುಣಗಳು ಎಲ್ಲವೂ ನಮ್ಮ ಮನಸ್ಸನ್ನೇ ಅವಲಂಬಿಸಿವೆ. ನಮ್ಮ ಮನಸ್ಸಿನಲ್ಲಿ ಭೌತ ದ್ರವ್ಯಗಳ ಬಗ್ಗೆ ಹೇಗೆ ಕಲ್ಪನೆಗಳಿವೆಯೋ ಅದೇ ರೀತಿಯಾಗಿ ಚೈತನ್ಯಯುಕ್ತ ಮತ್ತು ಆಧ್ಯಾತ್ಮಿಕ ದ್ರವ್ಯಗಳ ಬಗ್ಗೆಯೂ ನಮ್ಮ ಮನಸ್ಸಿನಲ್ಲಿ ಕಲ್ಪನೆಗಳಿವೆ. ಈ ಆಧ್ಯಾತ್ಮಿಕ ದ್ರವ್ಯವು ಇಚ್ಛೆ, ಕಲ್ಪನೆ, ಜ್ಞಾಪಕಶಕ್ತಿ ಮುಂತಾದ ಗುಣಗಳನ್ನು ಹೊಂದಿವೆ. ಇಂತಹ ಗುಣಗಳನ್ನು ಹೊಂದಿರುವ ದ್ರವ್ಯವನ್ನು 'ಆತ್ಮ' ಎಂದು ಕರೆಯುತ್ತೇವೆ. ಇದು ಮನಸ್ಸಿನ ಚೈತನ್ಯ ಶಕ್ತಿಯಾಗಿದೆ. ಭೌತ ದ್ರವ್ಯವು ಮನಸ್ಸಿನಿಂದ ಬೇರೆಯಾಗಿರುವುದು ಸಾಧ್ಯವಿಲ್ಲ. ಮನಸ್ಸು ಗುಣಗಳನ್ನು ಗ್ರಹಿಸುವುದರಿಂದಲೇ ದ್ರವ್ಯದ ಇರುವಿಕೆಯು ಕಲ್ಪಿತವಾಗುತ್ತದೆ. ಈ ಜ್ಞಾನಮೀಮಾಂಸೆಯು ವಾಸ್ತವವಾದಕ್ಕೆ ಸಂಪೂರ್ಣ ವಿರುದ್ಧವಾಗಿದೆ. ಭೌತ ವಸ್ತುಗಳ ಸ್ವತಂತ್ರ ಇರುವಿಕೆಯನ್ನು ಬಾರ್ಕ್ಲೆ ಸಂಪೂರ್ಣವಾಗಿ ನಿರಾಕರಿಸುತ್ತಾನೆ. ವಸ್ತುವಿನ ಗುಣಗಳು ನಮ್ಮ ಮನಸ್ಸಿನಿಂದಲೇ ಹುಟ್ಟುವುದರಿಂದ ಮತ್ತು ಅವುಗಳ ಬಗ್ಗೆ ಇರುವ ನಮ್ಮ ಕಲ್ಪನೆಗಳು ನಮ್ಮ ಮನಸ್ಸನ್ನೇ ಆಧರಿಸುವುದರಿಂದ ನಮ್ಮ ಅನುಕೂಲಕ್ಕೆ ತಕ್ಕಂತೆ ಅವುಗಳಿಗೆ ಬೇರೆ ಬೇರೆ ಹೆಸರನ್ನಿಟ್ಟಿದ್ದೇವೆ. ಎಲ್ಲ ಗುಣಗಳು ಮನಸ್ಸನ್ನೇ ಅವಲಂಬಿತವಾಗಿದ್ದು ಈ ಗುಣಗಳ ಸಹಾಯದಿಂದಲೇ ವಸ್ತುಗಳಿಗೆ ಹೆಸರನ್ನಿಡಲು ಸಾಧ್ಯವಾದುದರಿಂದ ಸಮಸ್ತ ಸೃಷ್ಟಿಯು ಮನಸ್ಸನ್ನೇ ಅವಲಂಬಿಸಿರುತ್ತದೆ. ಬಾರ್ಕ್ಲೆ ಈ ವಾದವನ್ನು ಮಾನಸಿಕ ವಿಜ್ಞಾನ

ವಾದ ಎಂದು ಕರೆಯುತ್ತಾನೆ. ಇವರ ಪ್ರಕಾರ ಮನಸ್ಸೊಂದು ಮಾತ್ರ ವಸ್ತುಗಳನ್ನು ಗ್ರಹಿಸಲು ಶಕ್ತವಾದುದರಿಂದ ಇತರ ಮನಸ್ಸುಗಳ ಇರುವಿಕೆಯನ್ನು ಕೂಡ ಇದೇ ಆಧಾರದಿಂದ ತಿಳಿಯಬೇಕಾಗಿದೆ. ವಸ್ತುಗಳ ಅಸ್ತಿತ್ವವು ಹೇಗೆ ವೀಕ್ಷಿಸುವ ಮನಸ್ಸನ್ನು ಅವಲಂಬಿಸಿದೆಯೋ ಅದೇ ರೀತಿ ಇತರ ಮನಸ್ಸುಗಳ ಅಸ್ತಿತ್ವವು ವೀಕ್ಷಿಸುವ ಮನಸ್ಸನ್ನು ಅವಲಂಬಿಸಿರುತ್ತದೆ. ಅಂದರೆ ಬಾರ್ಕ್ಲೆಯ ಪ್ರಕಾರ ನಾನು ಮತ್ತು ನನ್ನ ಮನಸ್ಸು ಎನ್ನುವುದು ಮಾತ್ರ ನಿರ್ದಿಷ್ಟ ಸತ್ಯವಾಗಿದ್ದು ಇತರ ಮನಸ್ಸುಗಳ ಇರುವಿಕೆಯು ನನ್ನ ಮನಸ್ಸು ವೀಕ್ಷಿಸುವುದನ್ನೇ ಅವಲಂಬಿಸಿದೆ. ಇಂತಹ ಒಂದು ವಾದವನ್ನು ಆತ್ಮ ಕೇಂದ್ರ ಸಿದ್ಧಾಂತವೆನ್ನುತ್ತಾರೆ. ಇದರಂತೆ ವೀಕ್ಷಿಸುವ ಆತ್ಮದ ಇರುವಿಕೆಯನ್ನುಳಿದು ಉಳಿದೆಲ್ಲಾ ದ್ರವ್ಯಗಳ ಇರುವಿಕೆಯು ಈ ವೀಕ್ಷಕ ಆತ್ಮವನ್ನೇ ಅವಲಂಬಿಸಿರುತ್ತದೆ.

ಬಾರ್ಕ್ಲೆಯ ಏಕೇಶ್ವರವಾದ (ಬಾಹ್ಯ ಚಿದ್ವಾದ) : — ಅನುಭವ ವಾದವನ್ನು ನಿರಾಕರಿಸುತ್ತಾ ನಡೆದ ಬಾರ್ಕ್ಲೆಯು ತನ್ನ ಆತ್ಮ ಕೇಂದ್ರ ಸಿದ್ಧಾಂತವನ್ನು ರೂಪಿಸಿಕೊಂಡು ಒಂದು ಸಂದಿಗ್ಧ ಪರಿಸ್ಥಿತಿಗೆ ಮುಟ್ಟುತ್ತಾನೆ. ಆತನಿಂದಲೇ ನಿರೂಪಿಸಲ್ಪಟ್ಟ ಆತ್ಮ ಕೇಂದ್ರ ಸಿದ್ಧಾಂತವು ಆತನ ಮೂಲ ಉದ್ದೇಶದ ಸಾಧನೆಯಲ್ಲಿ ಒಂದು ಅಡಚಣೆಯಾಗುತ್ತದೆ. ದ್ರವ್ಯ ಒಂದಿರುವುದಾದರೆ ಅದನ್ನು ನನ್ನ ಮನಸ್ಸು ವೀಕ್ಷಿಸಿರಬೇಕು ಎಂಬ ಬಾರ್ಕ್ಲೆಯವಾದವು ತಾನು ಬೋಧಿಸಬೇಕೆಂದಿದ್ದ ಧರ್ಮಶಾಸ್ತ್ರ ಮತ್ತು ಅದಕ್ಕೆ ಆಧಾರವಾದ ದೇವರ ಅಸ್ತಿತ್ವವನ್ನು ವಿವರಿಸುವಲ್ಲಿ ಅಸಮರ್ಥವಾಗುತ್ತದೆ. ಹೇಗೆ ಇತರ ದ್ರವ್ಯಗಳ ಅಸ್ತಿತ್ವವನ್ನು "ನನ್ನ ಮನಸ್ಸು" ನಿರ್ಧರಿಸುತ್ತದೋ ಅದೇ ರೀತಿ ದೇವರನ್ನು ನನ್ನ ಮನಸ್ಸು ವೀಕ್ಷಿಸಿದರೆ ಮಾತ್ರ ದೇವರಿದ್ದಾನೆ ಎಂದು ವಾದಿಸಿದಂತಾಗುತ್ತದೆ. ಆದರೆ ದೇವರಿಗೆ ಪರಿಪೂರ್ಣತೆಯನ್ನು ಆರೋಪಿಸಿದ ಬಾರ್ಕ್ಲೆ ತನ್ನ ಮೂಲ ವಾದದಿಂದ ಈಗ ವಿಮುಖನಾಗಬೇಕಾಗುತ್ತದೆ.

ಬಾರ್ಕ್ಲೆಯ ಏಕೇಶ್ವರವಾದದ ಪ್ರಕಾರ ಜಗತ್ತಿಗೆಲ್ಲಾ ಪರಮಾತ್ಮನೊಬ್ಬನೇ ಮೂಲಸತ್ಯ. ಈ ಸತ್ಯಕ್ಕೆ ಪ್ರತಿಸ್ಪರ್ಧಿಯಾದ ಮತ್ತೊಂದು ಸತ್ಯ ಇಲ್ಲ. ಈ ಭೌತ ಜಗತ್ತು ಮತ್ತು ನಮ್ಮ ಆತ್ಮಗಳು ಕೂಡ ಆ ಪರಮಾತ್ಮನಿಂದಲೇ ಉಂಟಾಗಿವೆ, ಎಂದು ಬಾರ್ಕ್ಲೆ ವಾದಿಸುತ್ತಾನೆ. ಧಾರ್ಮಿಕ ನಂಬಿಕೆಯ ರಕ್ಷಣೆ, ದೇವರ ಇರುವಿಕೆಯ ಬಗ್ಗೆ ಧರ್ಮ ಪ್ರಚಾರಗಳು ಆತನ ಮೂಲ ಕರ್ತವ್ಯವಾದುದರಿಂದ ತನ್ನ ತತ್ವ ನಿರೂಪಣೆಗೆ ವಿರುದ್ಧವಾದರೂ ದೇವರ ಇರುವಿಕೆಯ ಕಲ್ಪನೆಯನ್ನು ಆಗ ಪ್ರತಿಪಾದಿಸಲೇಬೇಕಾಯಿತು. ಧರ್ಮಕ್ಕೆ ಆತಂಕವಾದ ಭೌತ ವಸ್ತುವನ್ನು ಸುಲಭವಾಗಿ ತನ್ನ ಚಿದ್ವಾದದ ಮೂಲಕ ನಿರಾಕರಿಸಿ ಮೊದಲಿಗೆ ಮನಸ್ಸೇ ಸರ್ವಸ್ವ ಎಂದು ವಾದಿಸುತ್ತಾನೆ. ಆದರೆ ಈಗ ತನ್ನ ಏಕೇಶ್ವರ ವಾದವನ್ನು ಈ ರೀತಿ ಸಮರ್ಥಿಸುತ್ತಾನೆ. ನಮ್ಮ ಮನಸ್ಸಿನಲ್ಲಿ ಕಲ್ಪನೆಗಳು ಮಾತ್ರ ಹಾದು ಹೋಗುತ್ತವೆಯೇ ವಿನಃ ವಸ್ತುಗಳಲ್ಲ. ಅಂದರೆ ವಸ್ತುಗಳ ಗುಣಗಳು ಮಾತ್ರ ನಮ್ಮ ಮನಸ್ಸನ್ನು ಮುಟ್ಟುತ್ತಿದ್ದು ವಸ್ತುಗಳು ಏನೆಂಬುವುದರ ಅರಿವು ಮನಸ್ಸಿನಲ್ಲಿ ಉಂಟಾಗುವುದಿಲ್ಲ. ವಸ್ತುಗಳ ಗುಣಗಳು ನಮ್ಮ ಮನಸ್ಸಿನಲ್ಲಿ

ಹಾಮುಹೋಗಬೇಕಾದರೆ ಅದಕ್ಕೆ ಒಂದು ವಿಶಿಷ್ಟ ಕಾರಣವಿರಬೇಕು. ಆ ಕಾರಣವೇ ಒಬ್ಬನೇ ಅದ ದೇವರು. ಬಾರ್ಕ್ಲಿಯ ಈ ಅಭಿಪ್ರಾಯವು ಆತನ ಮೂಲ ಅಭಿಪ್ರಾಯಕ್ಕೆ ಸಂಪೂರ್ಣ ವಿರುದ್ಧವಾಗಿದೆ. ಹಿಂದೆ ಚಿದ್ವಾದವನ್ನು ಪ್ರತಿಪಾದಿಸಿದ ಬಾರ್ಕ್ಲಿ ನಮ್ಮ ಕಲ್ಪನೆಗಳೆಲ್ಲವೂ (ಗುಣಗಳು) ಮನಸ್ಸಿನಿಂದಲೇ ಉಂಟಾಗುತ್ತವೆ ಎಂದಿದ್ದ. ಆದರೆ ಈಗ ಮನಸ್ಸಿನಲ್ಲಿ ಹಾದುಹೋಗುವ ಆ ಕಲ್ಪನೆಗಳು ಮನಸ್ಸಿನಿಂದಲೇ ಸೃಷ್ಟಿಯಾಗಿರದೇ ದೇವರಿಂದ ತುಂಬಲ್ಪಟ್ಟವು ಎನ್ನುತ್ತಾನೆ. ಅಂದರೆ ಆತನ ಏಕೇಶ್ವರವಾದದ ಪ್ರಕಾರ ನಮ್ಮ ಕಲ್ಪನೆಗಳು ನಮ್ಮ ಮನಸ್ಸಿನ ತೀರ್ಮಾನವನ್ನು ಅವಲಂಬಿಸಿರುವುದಿಲ್ಲ. ಮೊದಲನೆಯದಾಗಿ ನಮ್ಮ ಕಲ್ಪನೆಗಳು ನಾವು ಇಚ್ಛಿಸಲಿ ಅಥವಾ ಪಡದೇ ಇರಲಿ ಒಂದು ರೀತಿಯ ಒತ್ತಾಯದಿಂದ ನಮ್ಮ ಮನಸ್ಸನ್ನು ಸೇರುತ್ತವೆ. ಉದಾಹರಣೆಗೆ ಹಗಲು ಆಕಾಶದತ್ತ ನೋಡಿದಾಗ ಬೆಳಕಿನ ಕಿರಣಗಳು ನಾವು ಇಷ್ಟಪಟ್ಟರೂ ಅಥವಾ ಇಷ್ಟಪಡದೆ ಹೋದರೂ ನಮ್ಮ ಮನಸ್ಸನ್ನು ಪ್ರವೇಶಿಸುತ್ತವೆ. ಇದೇ ರೀತಿ ಬಹಳಷ್ಟು ಕಲ್ಪನೆಗಳು ಒಂದು ರೀತಿಯ ಬಲಾತ್ಕಾರದಿಂದ ನಮ್ಮ ಮನಸ್ಸನ್ನು ಪ್ರವೇಶಿಸುತ್ತವೆ. ಆದರೆ ನಮ್ಮ ಮನಸ್ಸಿನಲ್ಲಿರುವ ಹಲವಾರು ಕಲ್ಪನೆಗಳು ನಮ್ಮ ಮನಸ್ಸಿನಿಂದಲೇ ಸೃಷ್ಟಿಸಲ್ಪಟ್ಟ ಕಲ್ಪನೆಗಳಲ್ಲವೆಂಬುದು ಸ್ಪಷ್ಟವಾಯಿತು.

ಎರಡನೆಯದಾಗಿ ನಮ್ಮ ಮನಸ್ಸಿನಲ್ಲಿರುವ ಕಲ್ಪನೆಗಳಲ್ಲಿ ಒಂದು ವಿಶಿಷ್ಟ ವ್ಯವಸ್ಥೆಯನ್ನು ಕಾಣುತ್ತೇವೆ. ಕಲ್ಪನೆಗಳ ನಡುವಿರುವ ಪರಸ್ಪರ ಸಂಬಂಧ, ಅನಿವಾರ್ಯತೆ, ಸೌಹಾರ್ದತೆ ಮತ್ತು ವ್ಯವಸ್ಥೆಗಳು ಮನಸ್ಸಿನಲ್ಲಿ ತನ್ನಷ್ಟಕ್ಕೆ ಉತ್ಪತ್ತಿಯಾಗಲು ಸಾಧ್ಯವಿಲ್ಲ. ಉದಾಹರಣೆಗೆ ನಾವು ಜಿಂಕೆಯನ್ನು ನೋಡಿದಾಗ ಜಿಂಕೆಯ ವೀಕ್ಷಣೆಯೊಂದಿಗೆ ಅದರ ಶಾಖವ ಕಲ್ಪನೆಯು ನಮ್ಮ ಮನಸ್ಸಿನಲ್ಲಿ ಉಂಟಾಗುತ್ತದೆ. ಅದೇ ರೀತಿ ಒಂದು ಆಹಾರವನ್ನು ವೀಕ್ಷಿಸಿದಾಗ ಅದು ಉಚಿತವೇ ಅಥವಾ ಅನುಚಿತವೇ ಎಂಬ ಕಲ್ಪನೆ ನಮ್ಮಲ್ಲುಂಟಾಗುತ್ತದೆ. ಪ್ರಕೃತಿಯಲ್ಲಿ ವ್ಯವಸ್ಥೆ ಮತ್ತು ನಿಯಮಗಳಿರುವಂತೆ ನಮ್ಮ ಮನಸ್ಸಿನಲ್ಲಿ ವ್ಯವಸ್ಥೆ ಮತ್ತು ನಿಯಮಗಳಿವೆ. ಇವುಗಳಲ್ಲಿ ಮನಸ್ಸೇ ಸ್ವಯಂಕಾರಣವಲ್ಲವುದರಿಂದ ಅವಕ್ಕೆ ಆಧಾರವಾಗಿ ಒಂದು ಶಾಶ್ವತ ದ್ರವ್ಯವಾದ ಪರಮಾತ್ಮನನ್ನು ಒಪ್ಪಲೇಬೇಕಾಗುತ್ತದೆ. ಈ ವ್ಯವಸ್ಥೆಗೆ ಕಾರಣವಾದ ದೇವರೇ ಈ ಜಗತ್ತು ಮತ್ತು ಆತ್ಮಗಳ ಸೃಷ್ಟಿಕರ್ತನಾಗಿರುತ್ತಾನೆ. ಜಗತ್ತಿನ ಮತ್ತು ಮನಸ್ಸಿನ ವ್ಯವಸ್ಥೆಗೆ ಅದ್ವಿತೀಯವಾದ ಪರಮಾತ್ಮನ ಮನಸ್ಸೇ ಕಾರಣ ಎಂದು ಬಾರ್ಕ್ಲಿ ವಾದಿಸುತ್ತಾನೆ.

ಲಾಕ್‌ನ ವಾದದಂತೆ ಬಾರ್ಕ್ಲಿಯ ನಿರೂಪಣೆ ಕೂಡ ವಿರೋಧಾಭಾಸಕ್ಕೆ ಒಳಗಾಗುತ್ತದೆ. ಅನುಭವವಾದವನ್ನೇ ಅನುಸರಿಸಿದ ಬಾರ್ಕ್ಲಿ ತನ್ನ ಮೊದಲ ಧ್ಯೇಯವಾದ ಭೌತವಸ್ತುಗಳ ನಿರಾಕರಣೆಯಲ್ಲಿ ಸಫಲನಾದರೂ ಆತನ ಸಿದ್ಧಾಂತವು ಆತ್ಮಕೇಂದ್ರದ ಸಂದಿಗ್ಧತೆಗೆ ಗುರಿಯಾಗುತ್ತದೆ. ಇದರಿಂದ ತಪ್ಪಿಸಿಕೊಳ್ಳಲು ತಾನು ಅನುಸರಿಸಿದ ಅನುಭವವಾದವನ್ನೇ ಬದಿಗೊತ್ತಿ ಏಕೇಶ್ವರವಾದವನ್ನು ಪ್ರತಿಪಾದಿಸುತ್ತಾನೆ. ಈ ಏಕೇಶ್ವರವಾದವು ತಾರ್ಕಿಕ ಹಾಗೂ ತಾತ್ವಿಕ ರೀತಿಗಿಂತಲೂ ಮಿಗಿಲಾಗಿ ಅಂಧ ವಿಶ್ವಾಸವನ್ನು ಒಳಗೊಂಡಂತೆ ಕಂಡುಬರುತ್ತದೆ.

ಸಿ. ಮಹಾದೇವ

ಚಾಮುಂಡಿಬೆಟ್ಟದ ದೇವಾಲಯಗಳು

ಮೈಸೂರು ಎಂದ ತಕ್ಷಣ ನಮ್ಮ ಜ್ಞಾಪಕಕ್ಕೆ ಬರುವುದು ಮೊದಲು ಚಾಮುಂಡಿ ಬೆಟ್ಟ. ಈ ಬೆಟ್ಟವು ಮೈಸೂರು ಮಹಾನಗರಕ್ಕೆ ಹೊಂದಿಕೊಂಡಂತಿರುವ ಒಂದು ಪುಣ್ಯ ಕ್ಷೇತ್ರ ಮತ್ತು ಉಪನಗರವಾಗಿದೆ. ಮೈಸೂರು ನಗರದ ಜನತೆಯ ಸಾಂಸ್ಕೃತಿಕ ಜೀವನದಲ್ಲಿ ಇದು ಮಹತ್ವದ ಪಾತ್ರವನ್ನು ವಹಿಸಿದೆ. ಮೈಸೂರಿಗೆ ಬರುವ ಪ್ರವಾಸಿಗರು ತಪ್ಪದೆ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡುತ್ತಾರೆ. ಇದು ಮೈಸೂರಿಗೆ ವಿಶೇಷವಾದ ಶೋಭೆಯನ್ನು ತಂದುಕೊಟ್ಟಿದೆ. ಇಲ್ಲಿಯ ಮುಖ್ಯ ದೇವತೆಯಾದ ಚಾಮುಂಡಾಂಬೆಯು ಮೈಸೂರರಸರ ಮನೆದೇವತೆಯಾಗಿದ್ದಾಳೆ. ಇವರು ನೀಡಿದ ಪ್ರೋತ್ಸಾಹವು ನಿಜಕ್ಕೂ ಅಮೋಘವಾದದ್ದು, ಚಾಮುಂಡಿಬೆಟ್ಟವು ಪುಣ್ಯಕ್ಷೇತ್ರವಾಗಿ ಪ್ರಸಿದ್ಧಿ ಹೊಂದಿರುವಂತೆ ಐತಿಹಾಸಿಕವಾಗಿಯೂ ತನ್ನ ಮಹತ್ವವನ್ನು ಪ್ರತಿಬಿಂಬಿಸುತ್ತದೆ.

ಭೌಗೋಳಿಕವಾಗಿ ಚಾಮುಂಡಿಬೆಟ್ಟವು ಮೈಸೂರು ನಗರದಿಂದ ಸುಮಾರು ಎರಡು ಮೈಲಿಗಳ ದೂರದಲ್ಲಿದೆ. ಮತ್ತು ಮೈಸೂರು ಅರಮನೆಯ ಆಗ್ನೇಯ ದಿಕ್ಕಿನಲ್ಲಿದೆ. ಇದು ಸಮುದ್ರಮಟ್ಟದಿಂದ ಸುಮಾರು 3489 ಅಡಿಗಳ ಎತ್ತರವನ್ನು ಹೊಂದಿದೆ. ಬೆಟ್ಟದ ಮೇಲಕ್ಕೆ ಹೋಗಲು ಉತ್ತಮವಾದ ಡಾಂಬರ್ ರಸ್ತೆಯ ಸೌಲಭ್ಯವಿದೆ. ಇಲ್ಲಿ ಚಾಮುಂಡಿ ಅಥವಾ ಮಹಿಷಾಸುರ ಮರ್ದಿನಿ ಎಂಬ ದೇವತೆಯ ದೇವಾಲಯವಿರುವುದರಿಂದಲೇ ಈ ಚಾಮುಂಡಿಬೆಟ್ಟ ಎಂಬ ಹೆಸರು ಬರಲು ಕಾರಣವಾಯ್ತು. ಈಗ ಚಾಮುಂಡಿಬೆಟ್ಟವು ಮೈಸೂರಿನ ಉಪನಗರವಾಗಿ ಪರಿಣಮಿಸಿದೆ. ಮೈಸೂರು ನಗರದಿಂದ ಪ್ರತಿ ಅರ್ಧ ಗಂಟೆಗೆ ನಗರ ಸಾರಿಗೆ ಬಸ್‌ಗಳು ಚಾಮುಂಡಿ ಬೆಟ್ಟಕ್ಕೆ ಹೊರಡುತ್ತವೆ. ಭಾನುವಾರ ಮತ್ತು ರಜಾ ದಿನಗಳಲ್ಲಿ ವಿಶೇಷ ಬಸ್‌ಗಳನ್ನು ಓಡಿಸಲಾಗುತ್ತದೆ. ಪ್ರತಿದಿನ ನೂರಾರು ಯಾತ್ರಾರ್ಥಿಗಳು ಚಾಮುಂಡಿಬೆಟ್ಟಕ್ಕೆ ಭೇಟಿ ನೀಡುತ್ತಾರೆ. ರಾತ್ರಿ ವೇಳೆಯಲ್ಲಿ ಮೈಸೂರು ಮಹಾನಗರದ ವಿದ್ಯುತ್ ದೀಪಗಳನ್ನು ಬೆಟ್ಟದ ಮೇಲಿನಿಂದ ನೋಡುವಾಗ ನೋಡುಗರ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ.

ಮೈಸೂರು ಮಹಾರಾಜರು ಈ ಬೆಟ್ಟದ ಅತ್ಯಂತ ಮೇಲ್ಭಾಗದಲ್ಲಿ ಬೇಸಿಗೆ ಅರಮನೆಯೊಂದನ್ನು ಕಟ್ಟಿಸಿದ್ದಾರೆ. ಇದರ ವಾಸ್ತುಶಿಲ್ಪ ಸೌಂದರ್ಯವು ತುಂಬಾ ವೈಭವ

ಯುತವಾಗಿದೆ. ಇಲ್ಲಿ ಬಗೆಬಗೆಯ ಗುಮ್ಮಟಗಳು ನಯಗಾರಿಕೆಯನ್ನು ಪ್ರತಿಬಿಂಬಿಸುತ್ತವೆ. ಈ ಅರಮನೆಯು ಇಡೀ ಬೆಟ್ಟಕ್ಕೆ ಕಿರೀಟಪ್ರಾಯವಾಗಿದೆ. ಇದು ಈಗ ವೈಭವಪೂರ್ಣ ವಸತಿ ಗೃಹ ಆಗಿದೆ. ಬೆಟ್ಟದ ಮೇಲೆ ಇತ್ತೀಚಿಗೆ ಮೈಕ್ರೊವೇವ್ ಕೇಂದ್ರವೊಂದನ್ನು ಸ್ಥಾಪಿಸಲಾಗಿದೆ. ಬೆಟ್ಟದ ಮೇಲೆ ಜನವಸತಿ ಇದ್ದು ಅವರ ಸೌಕರ್ಯಕ್ಕಾಗಿ ಅಲ್ಲಿ ಶಾಲೆ ಅಂಚೆ ಕಛೇರಿಯನ್ನು ಒದಗಿಸಲಾಗಿದೆ. ಇಲ್ಲಿರುವ ಅಂಗಡಿಗಳೆಂದರೆ ಸಾಮಾನ್ಯವಾಗಿ ದೇವರ ಪೂಜೆ ಸಾಮಾನುಗಳನ್ನು ಮಾರುವ, ಕರಕುಶಲವಸ್ತುಗಳನ್ನು ಮಾರುವ ಅಂಗಡಿಗಳಾಗಿವೆ. ಇಲ್ಲಿ ಉತ್ತಮವಾದ ಫಲಹಾರ ಗೃಹಗಳು ಇಲ್ಲ. ಬೆಟ್ಟದ ಮೇಲೆ ಸಾಮಾನ್ಯವಾಗಿ ಸಣ್ಣ ಪುಟ್ಟ ವ್ಯಾಪಾರಸ್ಥರು ಮತ್ತು ಅರ್ಚಕ ವರ್ಗದವರು ವಾಸಿಸುತ್ತಾರೆ. ಕುಡಿಯುವ ನೀರಿನ ಸರಬರಾಜು ಅಷ್ಟೇನೂ ಉತ್ತಮವಾಗಿಲ್ಲ. ಏನೇ ಸಮಸ್ಯೆಗಳಿದ್ದರು ಪ್ರತಿದಿನ ನೂರಾರು ಪ್ರವಾಸಿಗರು ಇಲ್ಲಿಗೆ ಆಗಮಿಸುತ್ತಾರೆ.

ಪುರಾಣಗಳಲ್ಲಿಯೂ ಸಹ ಈ ಬೆಟ್ಟದ ಪ್ರಸ್ತಾಪವನ್ನು ನಾವು ಕಾಣಬಹುದಾಗಿದೆ. ಸ್ಕಾಂದ ಪುರಾಣದಲ್ಲಿ ಇದನ್ನು ತ್ರಿಮುಕುಟ ಕ್ಷೇತ್ರವೆಂದು ಹೆಸರಿಸಲಾಗಿದೆ. ಜೊತೆಗೆ ಪವಿತ್ರ ಕ್ಷೇತ್ರವೆಂದು ಸಹ ಹೇಳಲಾಗಿದೆ. ಆದರೆ ಸ್ಥಳೀಯ ಕ್ಷೇತ್ರ ಮಹಾತ್ಮೆ ಇದನ್ನು ಮಹಾಬಲಕ್ಷೇತ್ರ ಅಥವಾ ಮಹಾಬಲಾದ್ರಿ ಎಂದು ಉಲ್ಲೇಖಿಸಲಾಗಿದೆ. ಅಂದರೆ ಇಲ್ಲಿ ಶಿವಾಲಯವೊಂದಿತ್ತು. ಅದನ್ನು ಮಹಾಬಲೇಶ್ವರ ಎಂಬ ಹೆಸರಿನಿಂದ ಕರೆಯುತ್ತಿದ್ದು ಆ ಹೆಸರೇ ಈ ಕ್ಷೇತ್ರಕ್ಕೆ ಬರಲು ಕಾರಣವಾಯ್ತು. ಮತ್ತೊಂದು ಪುರಾಣದ ಪ್ರಕಾರ ಇಲ್ಲಿ ಮಹಿಷಾಸುರನೆಂಬ ರಾಕ್ಷಸನಿದ್ದು, ಜನರಿಗೆ ವಿಪರೀತ ತೊಂದರೆಯನ್ನು ಕೊಡುತ್ತಿದ್ದನು. ಅಲ್ಲದೆ ದೇವತೆಗಳ ಶಾಂತಿಗೂ ಭಂಗವನ್ನುಂಟು ಮಾಡಿದನು. ಆ ಸಮಯದಲ್ಲಿ ದೇವಿಯು ಉಗ್ರರೂಪವನ್ನು ತಾಳಿ ಈ ರಾಕ್ಷಸನನ್ನು ಸಂಹರಿಸಿದಳು. ಆನಂತರ ಅವಳಿಗೆ ಮಹಿಷಾಸುರಮರ್ದಿನಿ ಎಂಬ ಹೆಸರು ಬಂದಿತು. ಅಲ್ಲದೆ ಅವಳನ್ನು ಚಾಮುಂಡಿ ಅಥವಾ ಚಾಮುಂಡೇಶ್ವರಿ ಎಂಬ ಹೆಸರಿನಿಂದಲೂ ಸಹ ಕರೆಯಲಾಗುತ್ತದೆ. ಚಾಮುಂಡಾಂಬೆಯು ಈ ರಾಕ್ಷಸನನ್ನು ಈ ಬೆಟ್ಟದ ಮೇಲೆ ಕೊಂದದ್ದರಿಂದ ಈ ಬೆಟ್ಟವನ್ನು ಚಾಮುಂಡಿಬೆಟ್ಟವೆಂದು ಕರೆಯಲಾಯ್ತು. ದೇವತೆಗಳು ಅವಳಿಗಾಗಿ ಒಂದು ದೇವಾಲಯವನ್ನು ಅಲ್ಲಿ ನಿರ್ಮಿಸಿದರು. ಅವಳ ಕ್ರೋಧ ಕಡಿಮೆ ಮಾಡಲು ದೇವತೆಗಳು, ಗಣಗಳು, ಕಿನ್ನರರು, ಕಿಂಪುರುಷರು ಅವಳನ್ನು ಪ್ರಾರ್ಥಿಸಿ ಪೂಜಿಸುತ್ತಾರೆ. ಇದರಿಂದ ಅವಳು ಸೌಮ್ಯಳಾಗುತ್ತಾಳೆ. ಅವಳು ಇಲ್ಲಿಯೇ ನೆಲಸುವಂತೆ ಪ್ರಾರ್ಥಿಸುತ್ತಾರೆ. ಅವರ ಇಚ್ಛೆಯನ್ನು ದೇವಿಯು ಅನುಗ್ರಹಿಸಿದಳು. ಆಗ ಅವಳ ಸೌಮ್ಯ ರೂಪವನ್ನು ಬೆಟ್ಟದ ಮೇಲೆ ಸ್ಥಾಪಿಸಲಾಯ್ತು.

ಪುರಾಣದ ಮಹಿಷಾಸುರ ಆ ಪ್ರದೇಶದಲ್ಲಿ ತುಂಬಾ ಬಲಿಷ್ಠನಾಗಿದ್ದು ಇಂದಿನ ಮೈಸೂರು ಎಂಬ ಹೆಸರು ಮಹಿಷಾಸುರನಿಂದಲೇ ಮೂಡಿ ಬಂದಿದೆ. ಮೈಸೂರು ಎಂಬ ಪದವು ಮಹಿಷೂರು ಎಂಬುದರಿಂದ ಬಂದಿದೆ. ಮಹಿಷೂರು ಎಂಬುದು ಮಹಿಷಾಸುರ ಊರು ಎಂಬ ಪದದಿಂದ ಉತ್ಪನ್ನವಾಗಿದೆ. ಮೈಸೂರನ್ನು ಮಹಿಷಮಂಡಲವೆಂದು

ಸಹ ಕರೆಯಲಾಗುತ್ತದೆ. ಅಂದರೆ ಮಹಿಷ ಪ್ರಾಂತ್ಯವೆಂದು ಹೇಳಲಾಗುತ್ತದೆ. ಇದು ಪೌರಾಣಿಕ ಹೇಳಿಕೆ. ಐತಿಹಾಸಿಕವಾಗಿ, ಮಹಿಷನಾಡು ಎಂಬ ಪ್ರಾಂತ್ಯ ತಲಕಾಡು ಗಂಗರ ಕಾಲದಲ್ಲಿ ಇದ್ದಂತೆ ನಮಗೆ ತಿಳಿದುಬರುತ್ತದೆ. ಇದನ್ನು ಶಾಸನಗಳಲ್ಲಿ ಮಹಿಷ ನಾಡು 70 ಎಂದು ಉಲ್ಲೇಖಿಸಲಾಗಿದೆ. ಈ ಮಹಿಷನಾಡು ಎಂಬುದು ಗಂಗರಿಗಿಂತ ಹಿಂದಿನ ಕಾಲದಲ್ಲಿ ರೂಢಿಯಲ್ಲಿದ್ದ ಮಹಿಷಾಸುರನ ನಾಡು ಎಂಬುದರಿಂದ ಉತ್ಪನ್ನ ವಾಗಿರಬಹುದು. ಇದರ ಬಗ್ಗೆ ಯಾವುದೇ ಐತಿಹಾಸಿಕ ಸುಳಿವು ಇಲ್ಲ.

ಒಟ್ಟಿನಲ್ಲಿ ಏನೇ ಇದ್ದರೂ ಮೈಸೂರು, ಮಹಿಷಾಸುರ ಮತ್ತು ಚಾಮುಂಡಿಬೆಟ್ಟ ಇವುಗಳು ಪಾರಂಪರಿಕವಾಗಿ ಸಂಬಂಧವನ್ನು ಹೊಂದಿವೆ.

ದೇವಾಲಯಗಳು : —

ಚಾಮುಂಡಿಬೆಟ್ಟದಲ್ಲಿ ನಾವು ಮೂರು ಮುಖ್ಯ ದೇವಾಲಯಗಳನ್ನು ಮತ್ತು ಅಧಿಕ ಸಂಖ್ಯೆಯಲ್ಲಿ ಮಠಗಳನ್ನು ಕಾಣಬಹುದಾಗಿದೆ. ಆ ಮುಖ್ಯ ದೇವಾಲಯಗಳೆಂದರೆ ಮಹಾಬಲೇಶ್ವರ, ಚಾಮುಂಡೇಶ್ವರಿ ಮತ್ತು ಲಕ್ಷ್ಮೀ ನಾರಾಯಣ ದೇವಾಲಯಗಳು. ಇಲ್ಲಿಯ ದೇವಾಲಯಗಳಲ್ಲಿ ಮಹಾಬಲೇಶ್ವರ ದೇವಾಲಯವು ತುಂಬಾ ಪ್ರಾಚೀನ ವಾದದ್ದು. ಇದರ ಕಾಲವನ್ನು ನಾವು ಪಶ್ಚಿಮ ಗಂಗರ ಮತ್ತು ಹೊಯ್ಸಳರ ಕಾಲಕ್ಕೆ ಕೊಂಡೊಯ್ಯಬಹುದು. ಇದಕ್ಕೆ ಶಾಸನಾಧಾರಗಳಿವೆ. ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮಂಟಪಗಳಿಂದ ಕೂಡಿದೆ. ಗರ್ಭಗೃಹ ಚೌಕಾಕಾರ ವನ್ನು ಹೊಂದಿದೆ. ಇದು ಒಟ್ಟು 45 ಅಡಿ ಉದ್ದವನ್ನುಹೊಂದಿದೆ. ಗರ್ಭಗೃಹದ ಮೇಲೆ ಶಿಖರವನ್ನು ರಚಿಸಲಾಗಿದೆ. ಇದು ಸುಮಾರು 10 ಅಡಿಗಳ ಎತ್ತರವಿದ್ದು, ಗಾರೆ, ಇಟ್ಟಿಗೆಗಳಿಂದ ರಚಿಸಲಾಗಿದೆ. ಇದನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ನಿರ್ಮಿಸಲಾಗಿದೆ. ಗರ್ಭಗೃಹದಲ್ಲಿರುವ ಲಿಂಗವನ್ನು ಕಪ್ಪು ಕಲ್ಲಿನಲ್ಲಿ ರಚಿಸ ಲಾಗಿದೆ. ಇಡೀ ದೇವಾಲಯವನ್ನು ಒಳಗೊಂಡಂತೆ ಗೋಡೆಯೊಂದನ್ನು ನಿರ್ಮಿಸ ಲಾಗಿದೆ. ಇದರ ನಿರ್ಮಾಣವನ್ನು ಹದಿನೇಳನೆಯ ಶತಮಾನಕ್ಕೆ ನಿರ್ದೇಶಿಸಬಹುದು. ಈ ಗೋಡೆಯನ್ನು ನಯವಲ್ಲದ ಕಲ್ಲು ಚಪ್ಪಡಿಗಳಿಂದ ರಚಿಸಲಾಗಿದೆ. ಗೋಡೆಯ ರಚನಾ ಕೌಶಲ್ಯವು ಕಾಲ ನಿರ್ಧಾರಕ್ಕೆ ಸಹಾಯವಾಗುತ್ತದೆ. ಪ್ರವೇಶ ಮಂಟಪವನ್ನು ಚೌಕಾ ಕಾರದ ನಾಲ್ಕು ಕಂಬಗಳಿಂದ ರಚಿಸಲಾಗಿದ್ದು, ಪ್ರವೇಶದ್ವಾರದ ಎರಡೂ ಪಾರ್ಶ್ವ ಗಳಲ್ಲಿಯೂ ಕಕ್ಷಾಸನಗಳನ್ನು ರಚಿಸಲಾಗಿದೆ. ನವರಂಗದ ಮಧ್ಯಭಾಗದಲ್ಲಿ ತಿರುಗಣೆ ಯಂತ್ರದಿಂದ ರಚಿತವಾದ ನಾಲ್ಕು ಕಂಬಗಳನ್ನು ನಿಲ್ಲಿಸಲಾಗಿದೆ. ಕಂಬದ ಸುತ್ತಲೂ ಸಣ್ಣದಾದ ಗೆರೆಗಳನ್ನು ರಚಿಸಲಾಗಿದೆ. ಇಲ್ಲಿ ನಾವು ಹೊಯ್ಸಳ ರಚನೆಯನ್ನು ಗುರುತಿಸ ಬಹುದಾಗಿದೆ. ಈ ಕಂಬಗಳನ್ನು ಸಾಬೂನು ಕಲ್ಲಿನಿಂದ ರಚಿಸಲಾಗಿದೆ. ನಂತರ ಮುಖ ಮಂಟಪದಲ್ಲೂ ಹೊಯ್ಸಳ ಶೈಲಿಯ ನಾಲ್ಕು ಕಂಬಗಳನ್ನು ಕಾಣಬಹುದು. ಇವು ವಿವಿಧ ಅಲಂಕಾರಗಳನ್ನು ಪ್ರತಿಬಿಂಬಿಸುತ್ತವೆ. ಮುಖಮಂಟಪವು ಮೂರು ಕಂಡಿಗಳನ್ನು

ಹೊಂದಿವೆ. ಅವು ಕ್ರಮವಾಗಿ ಉತ್ತರ, ಪೂರ್ವ, ದಕ್ಷಿಣ ದಿಕ್ಕಿನಲ್ಲಿ ಮಾಡಲ್ಪಟ್ಟಿವೆ. ಬಹುಶಃ ಇವುಗಳ ನಿರ್ಮಾಣ ಗಾಳಿ, ಬೆಳಕು ಸರಾಗವಾಗಿ ದೇವಾಲಯದೊಳಕ್ಕೆ ಬರಲೆಂಬುದು ಆಗಿದೆ. ಇಂತಹ ವ್ಯವಸ್ಥೆಯು ಪ್ರಶಂಸನೀಯವಾಗಿದೆ. ದೇವಾಲಯದ ಮೇಲ್ಛಾವಣಿಯು ಮಟ್ಟಸವಾಗಿದ್ದು ಗಾಳಿ ಬೆಳಕಿಗಾಗಿ ಗವಾಕ್ಷಿಯನ್ನು ಅಳವಡಿಸಲಾಗಿದೆ.

ಇಲ್ಲಿಯ ಸುಬ್ರಮಣ್ಯ, ನಟರಾಜ, ನಾಗಿಣಿ, ಸಪ್ತ ಮಾತೃಕೆಯರ ವಿಗ್ರಹಗಳು ತುಂಬಾ ಸೊಗಸಾಗಿವೆ. ನಟರಾಜ ವಿಗ್ರಹವನ್ನು ಕಲ್ಲಿನಲ್ಲಿ ಬಹಳ ಅಂದವಾಗಿ ಕಡೆಯಲಾಗಿದೆ. ಇದು ಹೊಯ್ಸಳ ಶೈಲಿಯನ್ನು ಪ್ರತಿಬಿಂಬಿಸುತ್ತದೆ. ಸಪ್ತ ಮಾತೃಕೆಯರ ವಿಗ್ರಹಗಳು ಅಂದವಾಗಿದ್ದು ಗಂಗರ ಶಿಲ್ಪಕಲೆಗೆ ಸಾಕ್ಷಿಯಾಗಿವೆ. ದಕ್ಷಿಣಾಮೂರ್ತಿಯ ವಿಗ್ರಹವು ಸೊಗಸಾಗಿದ್ದು ಬಹುಶಃ ಇದು ಹದಿನಾರನೇ ಅಥವಾ ಹದಿನೇಳನೆಯ ಶತಮಾನದ್ದಿರಬಹುದು. ಇಲ್ಲಿಯ ಮೂರು ನಂದಿ ವಿಗ್ರಹಗಳು ತುಂಬಾ ಆಕರ್ಷಕವಾಗಿವೆ. ಮಹಾಬಲೇಶ್ವರ ದೇವಾಲಯವು ಚಾಮುಂಡೇಶ್ವರಿ ದೇವಾಲಯದಷ್ಟು ಬೃಹತ್ ಪ್ರಮಾಣದಲ್ಲಿಲ್ಲವಿದ್ದರೂ, ಪ್ರಾಚೀನ ದೃಷ್ಟಿಯಿಂದ ಮತ್ತು ವೈವಿಧ್ಯಮಯವಾದ ವಾಸ್ತುಶಿಲ್ಪದಿಂದ ಇದು ಚಾಮುಂಡಿಬೆಟ್ಟದ ಮಹತ್ವದ ಸ್ಮಾರಕವಾಗಿದೆ.

ಈ ದೇವಾಲಯವು ತಲಕಾಡು ಗಂಗರ ಕಾಲದಲ್ಲಿ ನಿರ್ಮಿತವಾಗಿದ್ದು ಇದರ ಕಾಲವನ್ನು ಕ್ರಿ.ಶ. ಸುಮಾರು 950 ಎಂದು ನಿರ್ಧರಿಸಲಾಗಿದೆ. ದೇವಾಲಯದ ರಚನಾ ಶೈಲಿಯಿಂದ ಅದರ ಕಾಲವನ್ನು ನಿರ್ಧರಿಸಲಾಗಿದೆ. ನಂತರ ಇದರ ದುರಸ್ತಿ ಕಾರ್ಯವು ಹೊಯ್ಸಳರ ವಿಷ್ಣುವರ್ಧನ ಮತ್ತು ಇಮ್ಮಡಿ ವೀರಬಲ್ಲಾಳ ಇವರ ಕಾಲದಲ್ಲಿ ನಡೆದಿದೆ. ಇವರ ಕಾಲದಲ್ಲೇ ಚರಕ ಯಂತ್ರದಿಂದ ತಯಾರಿಸಿದ ಕಂಬಗಳನ್ನು ನವರಂಗ ಮತ್ತು ಮಂಟಪಗಳಲ್ಲಿ ಅಳವಡಿಸಲಾಗಿದೆಯೆಂದು ಶಾಸನಾಧಾರಗಳಿಂದ ತಿಳಿದುಬರುತ್ತದೆ. ಮಹಾಬಲೇಶ್ವರ ದೇವಾಲಯವು ಚಾಮುಂಡೇಶ್ವರಿ ದೇವಾಲಯದ ದಕ್ಷಿಣಕ್ಕಿದ್ದು, ಪ್ರವಾಸಿಗರ ಕಣ್ಣಿಗೆ ಅಷ್ಟಾಗಿ ಎದ್ದು ಕಾಣುವುದಿಲ್ಲ. ಆದ್ದರಿಂದ ಇಲ್ಲಿಗೆ ಬರುವವರ ಸಂಖ್ಯೆ ತುಂಬಾ ಕಡಿಮೆಯಾಗಿದೆ.

ಈ ದೇವಾಲಯಕ್ಕೆ ಮೈಸೂರರಸರು ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು ಮತ್ತು ಪಟ್ಟಮಹಿಷಿ ಕೃಷ್ಣವಿಲಾಸ ಸನ್ನಿಧಾನರವರು ಈ ದೇವಾಲಯಕ್ಕೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಅಂತೆಯೆ ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಈ ದೇವಾಲಯಕ್ಕೆ ಗ್ರಾಮವೊಂದನ್ನು ದತ್ತಿಯಾಗಿ ಬಿಟ್ಟು, ಅದಕ್ಕೆ ಎಲ್ಲಾ ತೆರಿಗೆಗಳ ವಿನಾಯ್ತಿಯನ್ನು ನೀಡಲಾಗಿತ್ತು ಎಂದು ಶಾಸನಗಳಿಂದ ತಿಳಿದುಬರುತ್ತದೆ. ಅಲ್ಲದೆ ಈ ದೇವಾಲಯಕ್ಕೆ ಸಾಮಾನ್ಯರು ಕೂಡ ತಮ್ಮ ಕೊಡುಗೆಗಳನ್ನು ನೀಡಿದ್ದಾರೆ.

ಈ ಚಾಮುಂಡೇಶ್ವರಿ ದೇವಾಲಯದತ್ತ ಗಮನ ಹರಿಸುವುದಾದರೆ ಬೆಟ್ಟದ ಮೇಲಿನ ದೇವಾಲಯಗಳಲ್ಲಿ ಹೆಚ್ಚಿನ ಭಕ್ತಾದಿಗಳನ್ನು ಆಕರ್ಷಿಸುವ ದೇವಾಲಯ

ಇದಾಗಿದೆ. ಜಾತಿ ಮತಗಳ ಭೇದವಿಲ್ಲದೆ ಎಲ್ಲಾ ಜನರು ಬಂದು ದೇವಿಯ ದರ್ಶನ ಮಾಡುತ್ತಾರೆ. ಕೇವಲ ಕರ್ನಾಟಕವೇ ಅಲ್ಲದೆ ಉತ್ತರ ಭಾರತ ಮತ್ತು ಇತರ ರಾಜ್ಯಗಳಿಂದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಬರುತ್ತಾರೆ. ಪ್ರತಿದಿನ ಸಾವಿರಾರು ಜನರು ದೇವಾಲಯಕ್ಕೆ ಬಂದು ಹೋಗುತ್ತಾರೆ. ಈ ದೇವಾಲಯದ ಪ್ರಾಚೀನತೆ ಮತ್ತು ಇತಿಹಾಸವು ಸ್ಪಷ್ಟವಾಗಿ ಗೋಚರವಾಗುವದಿಲ್ಲ. ಈ ದೇವಾಲಯವು ಗರ್ಭಗೃಹ, ಅಂತರಾಳ, ಮತ್ತು ಚಿಕ್ಕದ್ವಾರ ಮಂಟಪವನ್ನು ಹೊಂದಿದೆ. ಇವುಗಳು ದೊಡ್ಡ ದೇವರಾಜ ಒಡೆಯರ ಕಾಲಕ್ಕಿಂತ ಮುಂಚಿನವು. ಇವರ ಕಾಲ ಕ್ರಿ.ಶ. 1659. ಗರ್ಭಗೃಹವು ಚೌಕಾಕಾರವಾಗಿದೆ. ಗರ್ಭಗೃಹದ ಮಧ್ಯಭಾಗದಲ್ಲಿ ಚಾಮುಂಡೇಶ್ವರಿ ಅಥವಾ ಮಹಿಷಾಸುರ ಮರ್ದಿನಿಯ ವಿಗ್ರಹವಿದೆ. ದೇವಿಯು ಸಿಂಹದ ಮೇಲೆ ಕುಳಿತಿದ್ದಾಳೆ. ಇವಳು ಎಂಟು ಕೈಗಳನ್ನು ಹೊಂದಿದ್ದಾಳೆ. ರಾಕ್ಷಸ ಮತ್ತು ಅವನ ವಾಹನ ಮಹಿಷ ಸತ್ತು ಬಿದ್ದಿವೆ. ವಿಗ್ರಹವು ಸಹಜತೆಯನ್ನು ಪ್ರತಿಬಿಂಬಿಸುತ್ತದೆ. ಶಿಲ್ಪವು ಸೂಕ್ಷ್ಮವಾಗಿದ್ದರೂ, ಘಟನೆಯನ್ನು ಪೂರ್ಣವಾಗಿ ನಿರೂಪಿಸುತ್ತದೆ.

ಗರ್ಭಗೃಹದ ದ್ವಾರವನ್ನು ಈಗ ಬೆಳ್ಳಿಯ ದ್ವಾರ ಬಂಧಕ ಕಂಬಗಳಿಂದ ಅಲಂಕರಿಸಲಾಗಿದೆ. ಮೇಲ್ಭಾಗದ ದ್ವಾರಬಂಧಕದ ಮೇಲೆ ಬೆಳ್ಳಿಯಲ್ಲಿ ಚಾಮುಂಡೇಶ್ವರಿಯ ಸೂಕ್ಷ್ಮಾಕಾರದ ಆಕೃತಿಯನ್ನು ರಚಿಸಲಾಗಿದೆ. ಅನಂತರದ ಅಂತರಾಳವು ಸುಮಾರು 8 ಅಡಿ ಉದ್ದವನ್ನು ಹೊಂದಿದೆ. ಇದರ ಮೇಲಿನ ದ್ವಾರಬಂಧಕದ ಮೇಲೂ ಸಿಂಹದ ಮೇಲೆ ಕುಳಿತ ಚಾಮುಂಡಿಯ ಸೂಕ್ಷ್ಮಾಕೃತಿಯನ್ನು ರಚಿಸಲಾಗಿದೆ. ಅಂತರಾಳದ ಮುಂದಿನ ಭಾಗವೆಂದರೆ ಮತ್ತೊಂದು ಮುಚ್ಚಿದ ಮಂಟಪ. ಇದು ಕೂಡ ದ್ವಾರಬಂಧಕ ಕಂಬವನ್ನು ಹೊಂದಿದೆ. ಅದರ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯನ್ನು ಕಾಣಬಹುದಾಗಿದೆ. ಈ ಮೂರು ಭಾಗಗಳು ದೇವಾಲಯದ ಮೂಲ ರಚನೆಗಳಾಗಿವೆ.

ಮುಂದಿನ ಹಂತದ ಬೆಳವಣಿಗೆ ಎಂದರೆ ದೊಡ್ಡಮಂಟಪ ಮತ್ತು ತೆರೆದ ಮುಖಮಂಟಪ, ಮಂಟಪವು 20 ಅಡಿ ಉದ್ದವನ್ನು ಹೊಂದಿ ತೆರೆದ ದ್ವಾರಮಂಟಪದಿಂದ ಕೂಡಿದೆ. ಇದು ಕೂಡ 9 ಅಡಿ ಉದ್ದವಿದೆ. ಮಂಟಪವು ಎರಡು ಪ್ರವೇಶ ಮಾರ್ಗಗಳನ್ನು ಹೊಂದಿದ್ದು ಒಂದು ಪೂರ್ವಕ್ಕೆ, ಮತ್ತೊಂದು ದಕ್ಷಿಣಕ್ಕೆ ಇವೆ. ಮಂಟಪದ ದ್ವಾರಬಂಧಕದ ಲಲಾಟ ಬಿಂಬದ ಮೇಲೆ ಗಜಲಕ್ಷ್ಮಿಯನ್ನು ಕೆತ್ತಲಾಗಿದೆ. ತೆರೆದ ಮಂಟಪವನ್ನು ಪ್ರವೇಶ ಮಾಡುವಾಗ ಹುಂಡಿ ಅಥವಾ ಗೋಲಕ ಕಂಡುಬರುತ್ತದೆ. ಅದರ ಪಕ್ಕದಲ್ಲಿ ಬಲಿಪೀಠವಿದೆ. ಇವುಗಳ ಪಕ್ಕದಲ್ಲಿ ದೇವಿಯ ಪಾದವನ್ನು ಕಲ್ಲಿನಲ್ಲಿ ಕಡೆಯಲಾಗಿದೆ. ಪ್ರತಿಯೊಬ್ಬರು ಮಂಟಪಕ್ಕೆ ಹೋಗುವ ಮುನ್ನ ಈ ಪಾದಗಳಿಗೆ ನಮಸ್ಕರಿಸುತ್ತಾರೆ. ಗರ್ಭಗುಡಿಯ ಹಿಂಭಾಗದಲ್ಲಿ ಪ್ರಸಾದವನ್ನು ಮಾರಲಾಗುತ್ತದೆ. ಚಾಮುಂಡೇಶ್ವರಿ ದೇವಾಲಯದ ಮುಂದಿನ ಹಂತದ ಬೆಳವಣಿಗೆ ಎಂದರೆ ದೇವಾಲಯಕ್ಕೆ ಪ್ರಾಕಾರವನ್ನು ನಿರ್ಮಿಸಿರುವುದು. ಅದರ ಎತ್ತರ ಸುಮಾರು 15 ಅಡಿಗಳಿದ್ದು ಅದನ್ನು ಕಲ್ಲಿನ ತೊಲೆಗಳಿಂದ ರಚಿಸಲಾಗಿದೆ.

ಅನಂತರ ಹಂತದ ಬೆಳವಣಿಗೆ ಎಂದರೆ ಅದು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದೇವಾಲಯದ ಕೆಲವು ಭಾಗಗಳನ್ನು ದುರಸ್ತಿಗೊಳಿಸಿರುವುದು ಆಗಿದೆ. ಇವರ ಕಾಲದಲ್ಲಿನ ಪ್ರಮುಖ ನಿರ್ಮಾಣವೆಂದರೆ ಗೋಪುರವನ್ನು ನಿರ್ಮಿಸಿರುವುದು. ಈ ಗೋಪುರವು ದ್ರಾವಿಡಶೈಲಿಯಲ್ಲಿದ್ದು, ನೋಡುಗರ ಗಮನವನ್ನು ಸೆಳೆಯುತ್ತದೆ. ಗೋಪುರದ ಮೇಲ್ಭಾಗದಲ್ಲಿ ಏಳು ಚಿನ್ನದ ಮುಲಾಮಿನ ಕಲಶಗಳಿವೆ. ದೇವಾಲಯದ ಮಹಾದ್ವಾರದ ಬಾಗಿಲುಗಳಿಗೆ ಬೆಳ್ಳಿಯ ತಗಡಿನ ಹೊದಿಕೆಯನ್ನು ಹಾಕಲಾಗಿದೆ. ಒಂದೊಂದು ಬಾಗಿಲನ್ನು ಎರಡು ಪಂಕ್ತಿಗಳನ್ನಾಗಿ ಮಾಡಿ ಒಂದೊಂದು ಪಂಕ್ತಿಯಲ್ಲಿ ಏಳು ಆಕೃತಿಗಳನ್ನು ರಚಿಸಲಾಗಿದೆ. ಈ ಏಳು ಆಕೃತಿಗಳು ದೇವಿಯ ವಿವಿಧ ರೂಪಗಳಾಗಿವೆ. ಬೆಳ್ಳಿಯ ಈ ಆಕೃತಿಗಳು ತುಂಬಾ ಮನಮೋಹಕವಾಗಿವೆ. ಈ ಆಕೃತಿಗಳಲ್ಲಿ ದೈಹಿಕ ಭಾಗಗಳು ತುಂಬಾ ಅಂದವಾಗಿ ನಿರೂಪಿತವಾಗಿವೆ. ಇದು ಮೈಸೂರಿನ ಬೆಳ್ಳಿ ಕುಶಲ ಕರ್ಮಿಗಳ ಉತ್ತಮ ಕೈಚಳಕವನ್ನು ಪ್ರತಿಬಿಂಬಿಸುತ್ತದೆ. ಇಂತಹ ಅಮೋಘವಾದ ಕೊಡುಗೆಯನ್ನು ನೀಡಿದವರೆಂದರೆ ದಿವಂಗತ ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರವರು. ಬಾಗಿಲ ಒಳಯೇ ನಿಲ್ಲಿಸಿರುವ ಶಾಸನವೊಂದು ಮಹಾರಾಜರ ಈ ಕೊಡುಗೆಯನ್ನು ಸಾರಿ ಹೇಳುತ್ತದೆ. ಗೋಪುರ ಮತ್ತು ಬೆಳ್ಳಿಯ ಬಾಗಿಲುಗಳು ಚಾಮುಂಡೇಶ್ವರಿ ದೇವಾಲಯಕ್ಕೆ ವಿಶೇಷವಾದ ಶೋಭೆಯನ್ನು ನೀಡಿವೆ. ಗಾಡಿಯೊಂದರಲ್ಲಿ ನಾಲ್ಕು ಶಿಲಾವಿಗ್ರಹಗಳಿವೆ. ಅವುಗಳೆಂದರೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಮತ್ತು ಅವರ ರಾಣಿಯರಾದ ದೇವಾಜಮ್ಮಣ್ಣಿ, ಚೆಲುವಾಜಮ್ಮಣ್ಣಿ ಮತ್ತು ಲಿಂಗಾಜಮ್ಮಣ್ಣಿಯವರದ್ದು. ಇವುಗಳನ್ನು ಸಹಜ ರೀತಿ ರಚಿಸಲಾಗಿದೆ.

ಚಾಮುಂಡೇಶ್ವರಿ ದೇವಾಲಯದ ಹಿಂಭಾಗದಲ್ಲಿ ಕಲ್ಲಿನ ಚಪ್ಪಡಿಗಳಿಂದ ಹಂತಗಳನ್ನು ನಿರ್ಮಿಸಲಾಗಿದೆ. ಇಲ್ಲಿ ಜನರು ಕುಳಿತುಕೊಂಡು ದೇವಸ್ಥಾನದ ಸುತ್ತ ಬರುವ ಉತ್ಸವ, ಮತ್ತು ರಥೋತ್ಸವಗಳನ್ನು ವೀಕ್ಷಿಸುತ್ತಾರೆ. ದೇವಾಲಯದಿಂದ ಪೂರ್ವ ದಿಕ್ಕಿಗೆ ತುಸುದೂರದಲ್ಲಿ ದೇವಿಕೆರೆ ಎಂಬ ಕೊಳವಿದೆ. ಬೆಟ್ಟದ ಮೇಲಿನ ಮುಖ್ಯ ಸ್ಥಳಗಳಲ್ಲಿ ಇದು ಒಂದು. ವರ್ಷಕ್ಕೊಮ್ಮೆ ನಡೆಯುವ ತೆಪ್ಪೋತ್ಸವವು ಈ ಕೊಳ ಅಥವಾ ಕಲ್ಯಾಣಿಯಲ್ಲೇ ಜರುಗುತ್ತದೆ. ತೆಪ್ಪೋತ್ಸವವೆಂದರೆ ತೆಪ್ಪ ಅಥವಾ ದೋಣಿಯನ್ನು ಬಣ್ಣಬಣ್ಣದ ಹೂವುಗಳಿಂದ ಅಲಂಕರಿಸಿ ಅದರಲ್ಲಿ ಚಾಮುಂಡಾಂಬೆಯ ಉತ್ಸವಮೂರ್ತಿಯನ್ನು ಕೂರಿಸಿ ಕೊಳದಲ್ಲಿ ಸ್ವಲ್ಪ ಸಮಯ ಸುತ್ತಿಸಲಾಗುತ್ತದೆ. ಇದು ರಾತ್ರಿ ಸಮಯದಲ್ಲಿ ನಡೆಯುತ್ತದೆ. ಕೊಳದ ಸುತ್ತಮುತ್ತ ವಿದ್ಯುದ್ದೀಪಗಳನ್ನು ಹಾಕಿ, ಆ ಪ್ರದೇಶವು ಹೆಚ್ಚು ಕಂಗೊಳಿಸುವಂತೆ ಮಾಡುತ್ತಾರೆ. ಈ ಉತ್ಸವವನ್ನು ವೀಕ್ಷಿಸಲು ಮೈಸೂರು ನಗರವಲ್ಲದೆ ಹೊರಭಾಗಗಳಿಂದಲೂ ಜನರು ಅತ್ಯಧಿಕ ಸಂಖ್ಯೆಯಲ್ಲಿ ಬರುತ್ತಾರೆ.

ಪ್ರತಿವರ್ಷ ನಡೆಯುವ ಜಾತ್ರೆಯಲ್ಲಿ ರಾಜಮನೆತನದವರು ಭಾಗವಹಿಸಿ, ರಥ ಎಳೆಯುವುದಕ್ಕೆ ಪ್ರಥಮವಾಗಿ ತಮ್ಮ ಕೈಗೂಡಿಸುತ್ತಾರೆ. ರಥದಲ್ಲಿ ಚಾಮುಂಡಾಂಬೆಯು

ಉತ್ಸವ ಮೂರ್ತಿಯನ್ನು ಕೂರಿಸುತ್ತಾರೆ. ಈ ರಥವು ದೇವಾಲಯದ ಸುತ್ತಲೂ ಎಳೆಯಲಾಗುತ್ತದೆ.

ಚಾಮುಂಡೇಶ್ವರಿ ದೇವಾಲಯವು ಮೊದಲು ಮೈಸೂರು ಒಡೆಯರ ನೇರವಾದ ಆಡಳಿತಕ್ಕೆ ಒಳಪಟ್ಟಿತ್ತು. ಈಗ ಕರ್ನಾಟಕ ರಾಜ್ಯ ಸರ್ಕಾರದ ಮುಜರಾಯಿ ಇಲಾಖೆಯ ಹತೋಟಿಯಲ್ಲಿದೆ. ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ಈ ದೇವಾಲಯ ಸಮಿತಿಯ ಅಧ್ಯಕ್ಷರಾಗಿದ್ದಾರೆ. ದೇವಸ್ಥಾನವ ಆಡಳಿತವು ಅನೇಕ ಅಧಿಕಾರಿಗಳಿಂದ ನಿರ್ವಹಿಸಲ್ಪಡುತ್ತದೆ. ಇಂದಿಗೂ ಚಾಮುಂಡೇಶ್ವರಿ ದೇವಾಲಯವು ಮೈಸೂರು ನಗರದ ಜನತೆಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿದೆ.

ಚಾಮುಂಡಿಬೆಟ್ಟಕ್ಕೆ ಬರುವ ಬಹುತೇಕ ಜನರು ಚಾಮುಂಡೇಶ್ವರಿ ದೇವಾಲಯಕ್ಕೆ ಮಾತ್ರ ಭೇಟಿ ನೀಡುತ್ತಾರೆ. ಅವರು ಮಹಾಬಲೇಶ್ವರ ದೇವಸ್ಥಾನಕ್ಕಾಗಲೀ, ನಾರಾಯಣ ದೇವಸ್ಥಾನಕ್ಕಾಗಲೀ ಬಹುವಾಗಿ ಹೋಗುವುದಿಲ್ಲ. ಹಲವಾರು ಯಾತ್ರಾರ್ಥಿಗಳಿಗೆ ಈ ಎರಡು ದೇವಾಲಯಗಳು ಅಜ್ಞಾತವಾಗಿಯೇ ಇದೆ. ಅಂದರೆ ಈ ದೇವಾಲಯಗಳ ಬಗ್ಗೆ ಸಾಕಷ್ಟು ಪ್ರಚಾರ ಇಲ್ಲ. ಚಾಮುಂಡಾಂಬೆಯ ದೇವಾಲಯಕ್ಕೆ ಶೈವ ಮತ್ತು ವೈಷ್ಣವ ಎಂಬ ಭೇದವಿಲ್ಲದೆ ಪ್ರತಿಯೊಬ್ಬರು ಭೇಟಿ ನೀಡುತ್ತಾರೆ.

ನವರಾತ್ರಿ ಹಬ್ಬವಂತೂ ತುಂಬಾ ಪ್ರಮುಖವಾದುದು. ಈ ಹಬ್ಬದ ಸಮಯದಲ್ಲಿ ದೇವಿಗೆ ವಿಶೇಷ ಪೂಜೆ ನಡೆಯುತ್ತವೆ. ಇದನ್ನು ವೀಕ್ಷಿಸಲು ನಾನಾ ಕಡೆಗಳಿಂದ ಭಕ್ತರು ಆಗಮಿಸುತ್ತಾರೆ. ಈ ಸಮಯದಲ್ಲಿ ನಡೆಯುವ ದುರ್ಗಾಷ್ಟಮಿಯಲ್ಲಿ ಹೆಚ್ಚಿನ ಜನರು ಭಾಗವಹಿಸುತ್ತಾರೆ.

ಮೈಸೂರು ರಾಜಮನೆತನದಲ್ಲಿ ಸಂಭವಿಸುವ ಜನನ ಮತ್ತು ಮರಣದ ದಿನಗಳಲ್ಲಿ ಚಾಮುಂಡೇಶ್ವರಿಗೆ ಅವರು ವಿಶೇಷ ಪೂಜೆ ಪುರಸ್ಕಾರಗಳನ್ನು ನಡೆಸುತ್ತಾರೆ.

ಚಾಮುಂಡೇಶ್ವರಿ ದೇವಾಲಯದ ಇಷ್ಟೊಂದು ಅಭಿವೃದ್ಧಿಗೆ ಕಾರಣವೆಂದರೆ ಮೈಸೂರ ಅರಸರು ನಿರಂತರವಾಗಿ ನೀಡಿದ ಪ್ರೋತ್ಸಾಹವೇ ಆಗಿದೆ. ಚಾಮುಂಡಾಂಬೆಯು ಅವರ ಮನೆದೇವತೆಯಾಗಿದ್ದು, ಅಪಾರವಾದ ಚಿನ್ನ, ಬೆಳ್ಳಿಯ ಆಭರಣಗಳನ್ನು ಮತ್ತು ವಸ್ತ್ರಗಳನ್ನು ಈ ದೇವಾಲಯಕ್ಕೆ ನೀಡಿದ್ದಾರೆ. ಇದು ಅವರ ಆಸ್ತಿಕತೆಯನ್ನು ಎತ್ತಿ ತೋರುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರವರು ನಕ್ಷತ್ರಮಾಲಿಕಾ ಎಂಬ ಅಪೂರ್ವವಾದ ಕಂಠಹಾರವನ್ನು ಚಾಮುಂಡಾಂಬೆಗೆ ಉಡುಗೊರೆಯಾಗಿ ನೀಡಿದ್ದಾರೆ. ಇದರ ಮೇಲೆ ದೇವಿಗೆ ಸಂಬಂಧಿಸಿದ ಶ್ಲೋಕಗಳನ್ನು ಸಂಸ್ಕೃತದಲ್ಲಿ ಕೆತ್ತಲಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಂತೂ ಚಿನ್ನ ಮತ್ತು ಬೆಳ್ಳಿಯಿಂದ ತಯಾರಿಸಲಾದ ಅಮೂಲ್ಯ ಆಭರಣಗಳೇ ಅಲ್ಲದೆ ಪಾತ್ರೆ ಪದಾರ್ಥಗಳನ್ನು ಚಾಮುಂಡೇಶ್ವರಿ ದೇವಾಲಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ನೀಡಲಾಗಿತ್ತು. ಜಯಚಾಮರಾಜೇಂದ್ರ ಒಡೆಯರವರು ಚಾಮುಂಡೇಶ್ವರಿಗೆ ರತ್ನಖಚಿತ

ವಾದ ಒಂದು ಕಿರೀಟವನ್ನು ಮಾಡಿಸಿದ್ದಾರೆ. ಅಲ್ಲದೆ ಗಂಡಭೇರುಂಡವಿರುವ ಒಂದು ಕಂಠಹಾರವನ್ನು ಸಹ ಮಾಡಿಸಿದ್ದಾರೆ. ಮೈಸೂರರಸರು ಚಾಮುಂಡಾಂಬೆಯ ಹೆಸರಿನಲ್ಲಿ ನಾಣ್ಯಗಳನ್ನು ಅಚ್ಚು ಹಾಕಿಸಿದರು. ನಾಣ್ಯಗಳ ಮುಮ್ಮುಖದಲ್ಲಿ ಚಾಮುಂಡೇಶ್ವರಿಯ ವಾಹನವಾದ ಸಿಂಹವನ್ನು ಟಂಕಿಸಿದ್ದಾರೆ.

ಒಂದು ಮುಖ್ಯ ಸಮಸ್ಯೆ ಎಂದರೆ ದೇವಾಲಯದ ಪ್ರಾಚೀನತೆ ಬಗ್ಗೆ 16–17 ಶತಮಾನದ ಆಚೆಗಿನ ಯಾವ ಆಧಾರಗಳು ದೊರೆಯುವುದಿಲ್ಲ. ಸ್ಥಳಪುರಾಣವು ಮಹಾಬಲೇಶ್ವರ ದೇವಾಲಯವೇ ಪ್ರಾಚೀನವಾದುದು ಎಂದು ಉಲ್ಲೇಖಿಸುತ್ತದೆ. ಬಹುಶಃ ಅಲ್ಲಿ ಒಂದು ಸಣ್ಣ ಕಾಳಿ ದೇವಾಲಯವಿದ್ದು ಅದನ್ನು ಕ್ರಿ.ಶ. 1659ರಲ್ಲಿ ಒಡೆಯರ್ ಮನೆತನದ ದೊಡ್ಡ ದೇವರಾಜ ಒಡೆಯರವರು ದುರಸ್ತಿಗೊಳಿಸಿದ್ದಾರೆ. ಇದೇ ಮುಂದೆ ಚಾಮುಂಡೇಶ್ವರಿ ದೇವಾಲಯವಾಗಿರಬಹುದು. ಇವರು ಬೆಟ್ಟದ ಕೆಳಭಾಗದಿಂದ ಮೇಲ್ಭಾಗದವರೆಗೂ ಒಂದು ಸಾವಿರ ಮೆಟ್ಟಿಲುಗಳನ್ನು ಹಾಕಿಸಿದರು. ಇವರ ಕಾಲದಲ್ಲಿ ಪ್ರಸಿದ್ಧ ನಂದಿಯನ್ನು ನಿರ್ಮಿಸಲಾಯಿತ್ತು. ಇದು ಒಂದೇ ಕಲ್ಲಿನಲ್ಲಿ ಕಡೆದಿದ್ದು ದಕ್ಷಿಣ ಭಾರತದಲ್ಲೇ ಬೃಹತ್ತಾದ ಬಸವನ ಶಿಲ್ಪವಾಗಿದೆ. ಇದು ಉತ್ತಮ ಕಲಾ ನೈಪುಣ್ಯತೆಯನ್ನು ಪ್ರತಿಬಿಂಬಿಸುತ್ತದೆ. ಇದನ್ನು ಗ್ರಾನೈಟ್ ಶಿಲೆಯಲ್ಲಿ ಕಡೆಯಲಾಗಿದ್ದು ನೋಡಲು ಬಹು ಸುಂದರವಾಗಿದೆ. ಇದರ ಕಂಠಭಾಗವನ್ನು ಗಂಟೆಗಳ ಹಾರದಿಂದ ಅಲಂಕರಿಸಲಾಗಿದೆ. ಅಲ್ಲದೆ ಇನ್ನು ಅನೇಕ ಹಾರಗಳನ್ನು ಕಲಾತ್ಮಕವಾಗಿ ಕೆತ್ತಲಾಗಿದೆ. ಇದರಿಂದ ಕಂಠಭಾಗವು ಹೆಚ್ಚು ಅಂದವಾಗಿ ಕಾಣುತ್ತದೆ. ಇದು ಪ್ರವಾಸಿಗರ ಮನಸ್ಸನ್ನು ಹೆಚ್ಚಾಗಿ ಆಕರ್ಷಿಸುತ್ತದೆ. ಜಯಚಾಮರಾಜೇಂದ್ರ ಒಡೆಯರ ಕಾಲದಲ್ಲಿ ಚಾಮುಂಡಿಬೆಟ್ಟದಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳು ನಡೆದವು. ಸ್ವತಃ ಮಹಾರಾಜರೆ ಪ್ರತಿ ಮಂಗಳವಾರ ಮತ್ತು ಶುಕ್ರವಾರ ದೇವಿಯ ಮಂದಿರಕ್ಕೆ ಬಂದು ವಿಶೇಷ ಪೂಜೆಗಳನ್ನು ಸಲ್ಲಿಸುತ್ತಿದ್ದರು. ಇವರು ಉತ್ತಮ ಸಂಗೀತಗಾರರಾಗಿದ್ದು ಚಾಮುಂಡಿ ಮತ್ತು ಮಹಾಬಲೇಶ್ವರರ ಮೇಲೆ ಕನ್ನಡ ಮತ್ತು ಸಂಸ್ಕೃತದಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿದರು. ಇವರು ಚಾಮುಂಡಿ ದೇವಾಲಯಕ್ಕೆ ಬೆಳ್ಳಿಯ ಮಹಾದ್ವಾರವನ್ನು ಮಾಡಿಸಿದರು. ಇದರಲ್ಲಿ ದೇವಿಯ ವಿವಿಧ ಮುಖ-ಮುದ್ರೆಗಳನ್ನು ರಚಿಸಲಾಗಿದೆ.

ಇನ್ನು ನಾರಾಯಣಸ್ವಾಮಿ ದೇವಾಲಯವನ್ನು ಪ್ರವೇಶಿಸುವುದಾದರೆ ಇದು ಮಹಾಬಲೇಶ್ವರ ದೇವಾಲಯದ ಹಿಂಭಾಗದಲ್ಲಿದೆ. ಇದರ ವಾಸ್ತುಶೈಲಿಯು 19 ನೆಯ ಶತಮಾನಕ್ಕೆ ಸಂಬಂಧಿಸಿದೆ. ಇಲ್ಲಿ ಉನ್ನತವಾದ ಕಲಾವಂತಿಕೆ ಕಂಡು ಬರುವುದಿಲ್ಲ. ಈ ದೇವಾಲಯವು ಚೌಕಾಕಾರದ ಗರ್ಭಗೃಹ, ಅಂತರಾಳ, ನವರಂಗ ಮತ್ತು ತೆರೆದ ಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ನಾರಾಯಣನ ನಿಂತಿರುವ ವಿಗ್ರಹವಿದ್ದು ಅದರ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದಾ, ಪದ್ಮಗಳಿವೆ. ನೋಡಲು ತುಂಬಾ ಅಂದವಾಗಿದೆ. ಈ ವಿಗ್ರಹದ ಕಾಲವನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯ

ವಿಲ್ಲ. ಈ ದೇವಾಲಯದ ಮುಂಭಾಗದಲ್ಲಿ ಮೊದಲೆ ತಿಳಿಸಿದಂತೆ ಕಲ್ಲಿನ ಹಂತಗಳನ್ನು ರಚಿಸಲಾಗಿದೆ. ಇಲ್ಲಿ ಜಾತ್ರೆ ಸಮಯದಲ್ಲಿ ಜನರು ಕುಳಿತು ಉತ್ಸವ ಇತ್ಯಾದಿಗಳನ್ನು ನೋಡುತ್ತಾರೆ.

ಚಾಮುಂಡಿಬೆಟ್ಟದ ಮತ್ತೊಂದು ಪ್ರಮುಖ ಆಕರ್ಷಣೆ ಎಂದರೆ ಮಹಿಷಾಸುರನ ನಿಂತಿರುವ ವಿಗ್ರಹ. ಇದನ್ನು ನೋಡಲು ದೊಡ್ಡವರಿಗಿಂತ ಮಕ್ಕಳಿಗೆ ಹೆಚ್ಚಿನ ಸಂತೋಷ ವಾಗುತ್ತದೆ. ಇದು ಸುಮಾರು ಹದಿನೈದು ಅಡಿಗಳ ಎತ್ತರವಿದೆ. ಇವನಿಗೆ ಎರಡು ಕೈಗಳಿವೆ. ಒಂದು ಕೈಯಲ್ಲಿ ಖಡ್ಗ ಮತ್ತೊಂದು ಕೈಯಲ್ಲಿ ಸರ್ಪವಿದೆ. ಮಹಿಷಾ ಸುರನನ್ನೂ ವಸ್ತ್ರ, ಆಭರಣಗಳಿಂದ ಅಲಂಕರಿಸಲಾಗಿದೆ. ಹಣೆಯಲ್ಲಿ ವಿಭೂತಿ ಹೊಂದಿದ್ದು, ಅತ್ಯಂತ ದಪ್ಪನೆಯ ಮೀಸೆಗಳನ್ನು ಹೊಂದಿದ್ದಾನೆ. ಇದು ಅವನ ಭಯಂಕರ ರೂಪವನ್ನು ಪ್ರತಿಬಿಂಬಿಸುತ್ತದೆ. ವಿವಿಧ ಬಣ್ಣಗಳಿಂದ ಮಹಿಷಾಸುರನನ್ನು ಅಲಂಕರಿಸಲಾಗಿದೆ. ಮಹಾಬಲೇಶ್ವರ ದೇವಾಲಯದ ಮುಂದೆ ಒಂದು ವಿಶಾಲವಾದ ಚೌಕಾಕಾರದ ಹಜಾರವಿದೆ. ಅಲ್ಲಿ ಜಾತ್ರೆ, ಉತ್ಸವ, ಹಬ್ಬದ ಸಂದರ್ಭಗಳಲ್ಲಿ ಉಪ ಯೋಗಿಸುತ್ತಿದ್ದ ದೇವತೆಗಳ ವಾಹನಗಳನ್ನು ಇಟ್ಟಿರುತ್ತಾರೆ. ಅವುಗಳೆಂದರೆ ನವಿಲು, ಸಿಂಹ, ಹುಲಿ, ಕಾಮಧೇನು, ಅನಂತಶಾಯಿ ಮುಂತಾದುವುಗಳು. ಇವುಗಳ ಮೇಲೆ ಸಂಬಂಧಪಟ್ಟ ದೇವರುಗಳ ಉತ್ಸವ ಮೂರ್ತಿಗಳನ್ನು ಕೂರಿಸಿ ಮೆರವಣಿಗೆ ಮಾಡುತ್ತಿ ದ್ದರು. ಇದು ವಿಶೇಷ ದಿನಗಳಲ್ಲಿ ಮಾತ್ರ ಜರುಗುತ್ತಿತ್ತು. ಸಾಮಾನ್ಯವಾಗಿ ಈ ವಾಹನಗಳು ಸಂಬಂಧಪಟ್ಟ ದೇವರುಗಳ ಶೋಭೆಯನ್ನು ಹೆಚ್ಚಿಸುತ್ತವೆ.

ಒಟ್ಟನಲ್ಲಿ ಚಾಮುಂಡಿಬೆಟ್ಟವು ಭವ್ಯವಾದ ಪರಂಪರೆಯನ್ನು ಹೊಂದಿದೆ. ಇಂದಿಗೂ ಮೈಸೂರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಾಮುಂಡೇಶ್ವರಿಯ ಮಹಿಮೆ ಜನಜನಿತವಾಗಿದೆ. ಮೈಸೂರು ನಗರದ ಪ್ರತಿಯೊಂದು ಮನೆಯಲ್ಲೂ ಈಕೆಯ ಸ್ಮರಣೆ ಯನ್ನು ಮಾಡಲಾಗುತ್ತದೆ, ದೇವಿಯು ನಂಬಿದವರ ಕಷ್ಟಗಳನ್ನು ಪರಿಹರಿಸುತ್ತಾಳೆ ಎಂಬ ಭಾವನೆ ಜನರಲ್ಲಿ ಬೇರೂರಿದೆ. ಚಾಮುಂಡಿಬೆಟ್ಟದ ಮೇಲೆ ಇನ್ನೂ ಅನೇಕ ಅಭಿವೃದ್ಧಿ ಕಾರ್ಯಗಳು ನಡೆಯಬೇಕಾಗಿವೆ. ಇದರ ಬಗ್ಗೆ ಸರ್ಕಾರವು ಹೆಚ್ಚಿನ ಗಮನ ನೀಡಿದೆ. ಚಾಮುಂಡಿಬೆಟ್ಟಕ್ಕೆ 'ರೋಪ್‌ವೇ'ಯನ್ನು ರಚಿಸಬೇಕೆಂದು ಸರ್ಕಾರವು ಆಲೋಚಿಸುತ್ತಿದೆ.

ಚಾಮುಂಡಿಬೆಟ್ಟವು ಮೈಸೂರು ಮಹಾನಗರ ಜನತೆಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ಜೀವನದಲ್ಲಿ ಹಾಸುಹೊಕ್ಕಾಗಿದೆ. ಇಲ್ಲಿಯ ಹಲವಾರು ಶಾಸನಗಳು ಈ ಈ ಬೆಟ್ಟದ ಐತಿಹಾಸಿಕ ಮಹತ್ವವನ್ನು ಪ್ರತಿಬಿಂಬಿಸುತ್ತವೆ. ತಲಕಾಡು ಗಂಗರ ಕಾಲ ದಿಂದ ಇದರ ಇತಿಹಾಸ ಪ್ರಾರಂಭವಾಗಿ ಇಂದಿನವರೆಗೂ ಹರಿದು ಬಂದಿದೆ. ಚಾಮುಂಡಿ ಬೆಟ್ಟದ ಪರಿಚಯ ತುಂಬಾ ಅರ್ಥಪೂರ್ಣವಾಗಿದೆ.

ಶಿಕ್ಷಣ ಕ್ಷೇತ್ರದ ಸಮಸ್ಯೆ

ಭಾರತದಲ್ಲಿ ವಿದ್ಯಾಭ್ಯಾಸಕ್ಕೆ ಬಹಳ ಪ್ರಾಮುಖ್ಯ ನೀಡಲಾಗಿದೆ. ಕೇಂದ್ರ ಸರ್ಕಾರ ಮತ್ತು ವಿವಿಧ ರಾಜ್ಯ ಸರ್ಕಾರಗಳು ವಿದ್ಯಾಪ್ರಗತಿಗಾಗಿ ಮತ್ತು ದೇಶದ ಮೂಲೆ ಮೂಲೆಗಳಲ್ಲೂ, ಕನಿಷ್ಠ ಗಾತ್ರದ ಹಳ್ಳಿಗಳಲ್ಲೂ ಮತ್ತು ಬಡವರ್ಗದ ಗ್ರಾಮೀಣ ಜನತೆಗೂ ವಿದ್ಯೆ ಮುಟ್ಟುವಂತಾಗಬೇಕೆಂದು ಸರ್ಕಾರದ ಒಟ್ಟು ಆದಾಯದ 1/4 ರಿಂದ 1/3 ರಷ್ಟು ಹಣವನ್ನು ವಿನಿಯೋಗಿಸುತ್ತಿವೆ. ಪ್ರಾಥಮಿಕ, ಪ್ರೌಢ ಮತ್ತು ಉಚ್ಚ ಮಟ್ಟದ ಶಾಲಾ ಕಾಲೇಜುಗಳು, ತಾಂತ್ರಿಕ ವಿದ್ಯಾಶಾಲೆಗಳು, ಶಿಕ್ಷಣ ಸಂಸ್ಥೆಗಳು, ತರಬೇತಿ ಸಂಸ್ಥೆಗಳು, ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳು, ಸಂಶೋಧನಾ ಸಂಸ್ಥೆಗಳು, ವೃತ್ತಿನಿರತ ತರಬೇತಿ ಸಂಸ್ಥೆಗಳು–ಹೀಗೆ ಹಲಬಗೆಯ ವಿದ್ಯಾಸಂಸ್ಥೆಗಳ ಮೂಲಕ ಜ್ಞಾನದಾನದ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಇಂಥ ಘನ ಉದ್ದೇಶದಿಂದ ಕೂಡಿದ ಸರ್ಕಾರದ ಯತ್ನ ವಿಫಲವಾಗುತ್ತಿದೆಯೆಂಬ ದೂರು ಈಗ ಸರ್ವಸಾಮಾನ್ಯವಾಗಿದೆಯೆಂದು ಪ್ರತಿನಿತ್ಯ ಸಮಾಜನಾಯಕರು, ವಿದ್ಯಾವಂತರು, ಶಿಕ್ಷಣ ತಜ್ಞರು, ರಾಜಕೀಯ ತಜ್ಞರು, ವಾರ್ತಾಮಾಧ್ಯಮಗಳ ಮೂಲಕ, ಸಾರ್ವಜನಿಕ ಭಾಷಣಗಳ ಮೂಲಕ ಸಾರುತ್ತಿದ್ದಾರೆ. ಅಂತೆಯೇ, ಪುರಸ್ಕಾರ ಶಿಕ್ಷಣ ಯೋಜನೆಯು ಉದ್ದೇಶಿತ ಕಾರ್ಯಸಾಧನೆ ಮಾಡುತ್ತಿಲ್ಲವೆಂದು ತಿಳಿದುಬರುತ್ತಿದೆ.

ಇದಕ್ಕೆಲ್ಲ ಕಾರಣವೇನೆಂಬುದನ್ನು ಶಿಕ್ಷಣವೇತ್ತರು, ವಿದ್ಯಾಧಿಕಾರಿಗಳು ಆಲೋಚಿಸಬೇಕಾದ ಅವಶ್ಯಕತೆ ಹೀಗೆ ಎದ್ದು ಕಾಣುತ್ತಿದೆ. ವಿದೇಶೀಯರ ಆಳ್ವಿಕೆಯ ಆ ಸರ್ಕಾರದ ಧ್ಯೇಯ ಸಾಧನೆಗೆ ಸಾಧಕವಾದ ವಿದ್ಯಾಭ್ಯಾಸ ಪದ್ಧತಿಯನ್ನು ಅವರು ರೂಪಿಸಿ ಅದರಂತೇ ಶಿಕ್ಷಣ ನೀಡುತ್ತಿದ್ದರೆಂಬುದು ತಿಳಿದ ಸಂಗತಿ. ಭಾರತ ಸ್ವಾತಂತ್ರ್ಯಾನಂತರ ನಾಲ್ಕು ದಶಕಗಳಲ್ಲಿ ಈ ಪದ್ಧತಿಯಲ್ಲಿ ಮೂಲಭೂತವಾದ ಬದಲಾವಣೆಗಳನ್ನು ಮಾಡಿಲ್ಲ; ಮಾಡುವ ಪ್ರಯತ್ನ ನಡೆದಾಗಲೂ ಆರೆಮನಸ್ಸಿನ ಪ್ರಯತ್ನಗಳು ಕಾರ್ಯಗತಗೊಳ್ಳುವ ಹಂತದಲ್ಲಿ ಸಮರ್ಪಕವಾಗುತ್ತಿಲ್ಲ. ಹೀಗಾಗಿ ನಮ್ಮ ಬಡ ರಾಷ್ಟ್ರದ ಕೊರತೆಯ ಸಂಪತ್ತು ಪೋಲಾಗುತ್ತಿರುವುದೇ ಹೆಚ್ಚು.

ಈ ಪ್ರಮುಖ ಸಮಸ್ಯೆಯತ್ತ ಗಮನ ಹರಿಸಿ, ನಮ್ಮ ಶಿಕ್ಷಣ ತಜ್ಞರು, ಶಿಕ್ಷಣ ಕ್ಷೇತ್ರದ ಉನ್ನತಾಧಿಕಾರಿಗಳು ಒಂದು ಸಮಗ್ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪ್ರಚುರಗೊಳಿಸಬೇಕಾದುದು ಅತ್ಯವಶ್ಯಕವಾಗಿದೆ. ಎಲ್ಲರಿಗೂ ವಿದ್ಯೆ ನೀಡಬೇಕಾದುದು ಸರ್ಕಾರದ ಕರ್ತವ್ಯವೇನೋ ಹೌದು; ಆದರೆ ಉನ್ನತ ವಿದ್ಯಾಭ್ಯಾಸ, ತಾಂತ್ರಿಕ ಮತ್ತು ವೃತ್ತಿಪರ ಉನ್ನತ ವ್ಯಾಸಂಗಾವಕಾಶಗಳನ್ನು ಸೀಮಿತಗೊಳಿಸಿ, ನಿಜವಾಗಿಯೂ ಅರ್ಹತೆ ಹೊಂದಿದ ಕೆಲವರಿಗೆ ಮಾತ್ರ ಅವನ್ನು ಸೀಮಿತಗೊಳಿಸಬೇಕು. ಸಂಶೋಧನಾ ರಂಗದಲ್ಲಿ ಜಾತಿ, ವರ್ಗ, ಆರ್ಥಿಕ ಹಿಂದುಳಿದಿರುವಿಕೆ ಮುಂತಾದ ಕಾರಣಗಳಿಂದ “ಸಾಮಾಜಿಕ ನ್ಯಾಯ ನೀಡುವಿಕೆ”ಯ ಪ್ರಯತ್ನ ಮಾಡಿದ್ದೇ ಆದರೆ ಉತ್ತಮ ಫಲ ಸಾಧನೆ ಸಾಧ್ಯವಾಗಲಾರದು ಎಂಬುದು ನಿಶ್ಚಿತ.

ಕೆ.ಎಸ್. ಶಿವಣ್ಣ

ಭಾರತದಲ್ಲಿ ಬ್ರಿಟಿಷರ 19 ನೇ ಶತಮಾನದ ಕೃಷಿ ಭೂಮಿ ನೀತಿ

ಭಾರತದಲ್ಲಿ ಬ್ರಿಟಿಷರ ವಸಾಹತು ಆಡಳಿತ ಎದುರಿಸಿದ ಮೊದಲ ಕಠಿಣ ಸಮಸ್ಯೆ ಎಂದರೆ ಒಂದು ಲಾಭದಾಯಕವಾದ ಕೃಷಿ ಭೂಮಿ ನೀತಿಯ ಪ್ರತಿಪಾದನೆಯಾಗಿದ್ದಿತು. ಏಕೆಂದರೆ ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಉದಯಿಸಿ ನಾಶವಾದಂತಹ ಸಾಮ್ರಾಜ್ಯಗಳ ಅಸ್ತಿತ್ವಕ್ಕೆ ಆಧಾರಸ್ತಂಭವಾಗಿದ್ದುದು ರೈತಾಪಿ ವರ್ಗದವರು ನೀಡುತ್ತಿದ್ದ ಕಂದಾಯವಾಗಿದ್ದಿತು; ಮತ್ತು ಅದೇ ಬಹುಮುಖ್ಯವಾದ ಆದಾಯವಾಗಿದ್ದಿತು. ಈಸ್ಟ್ ಇಂಡಿಯಾ ಕಂಪನಿ ಸರ್ಕಾರದ ಅಸ್ತಿತ್ವಕ್ಕೂ ಇದೇ ಬುನಾದಿಯಾಗಿದ್ದರಿಂದ ಇವರ ಬಗೆಗೆ ಬ್ರಿಟಿಷ್ ಆಳರಸರು ಹೆಚ್ಚು ಗಮನ ಕೊಡಬೇಕಾದ್ದು ಅನಿವಾರ್ಯವೂ, ಅವಶ್ಯಕವೂ ಆಗಿದ್ದಿತು. ಮತ್ತೊಂದು ವಿಶೇಷವೆಂದರೆ ಈಸ್ಟ್ ಇಂಡಿಯಾ ಕಂಪೆನಿ ಪ್ರಧಾನವಾಗಿ ವ್ಯಾಪಾರಿ ಸಂಸ್ಥೆಯಾಗಿದ್ದು, ಐತಿಹಾಸಿಕ ಸಂದರ್ಭಗಳಿಗನುಸಾರವಾಗಿ ಭಾರತದಲ್ಲಿ ರಾಜ್ಯವನ್ನು ಕಟ್ಟಿ ಆಡಳಿತ ನಡೆಸಬೇಕಾಗಿ ಬಂದದ್ದಾಗಿದೆ. ಕಂಪೆನಿಯು ಮಾರುತ್ತಿದ್ದ ಅನೇಕ ಸಿದ್ಧ ವಸ್ತುಗಳನ್ನು ತಯಾರಿಸಲು ಬೇಕಾದ ಕಚ್ಚಾ ಮಾಲುಗಳು ಕೃಷಿಯ ಮೂಲದಿಂದ ಬಂದುದಾಗಿತ್ತು. ಆದುದರಿಂದ ಬ್ರಿಟಿಷರು ಈ ಸಮಸ್ಯೆಗೆ ಹೆಚ್ಚಿನ ಗಮನವನ್ನು ನೀಡಿದ್ದರಲ್ಲಿ ಆಶ್ಚರ್ಯವಿಲ್ಲ. ಬ್ರಿಟಿಷರ ವಸಾಹತು ನೀತಿಯನ್ನು ಅರಿತು ಕೊಳ್ಳಬೇಕಾದರೆ ಕೃಷಿ ಕ್ಷೇತ್ರದಲ್ಲಿ ಅವರು ಆಚರಣೆಗೆ ತಂದ ಭೂ–ಕಂದಾಯ ಧೋರಣೆಯನ್ನು ಪರಿಶೀಲಿಸಬೇಕು. ಭಾರತದಲ್ಲಿ ಕೈಗಾರಿಕೆಗಳನ್ನು ಹತ್ತಿಕ್ಕಿ, ಕೈಗಾರಿಕಾ ಕ್ರಾಂತಿ ಆಗದೆ ಇರುವಂತೆ ಎಚ್ಚರವಹಿಸಿದ್ದ ಅವರಿಗೆ ಕೃಷಿ ವ್ಯವಸ್ಥೆಯ ಮೇಲೆ ಹೆಚ್ಚು ಅವಲಂಬಿತವಾಗಬೇಕಾದ್ದು ಅನಿವಾರ್ಯವಾಯಿತು. ಹದಿನೆಂಟನೇ ಶತಮಾನದ ಉತ್ತರಾರ್ಧದಲ್ಲಿ ಅವರಿಗೆ ಇದರ ಮಹತ್ವ ಗೋಚರಿಸಿತು. ತಮ್ಮ ಆಡಳಿತಕ್ಕೆ ನೇರವಾಗಿ ಒಳಗಾಗಿದ್ದ ಪ್ರದೇಶಗಳಲ್ಲಿ ವಿವಿಧ ರೀತಿಯ ಕೃಷಿ ಭೂಮಿ ಧೋರಣೆಗಳನ್ನು ಅನುಸರಿಸಿದರು. ಅವುಗಳ ಹಿಂದೆ ಅನೇಕ ಉದ್ದೇಶಗಳು, ಪ್ರಯೋಜನೆಗಳು, ಆದರ್ಶಗಳು ಮತ್ತು ಸ್ವಾರ್ಥಗಳು ಅಡಗಿದ್ದವು.

1757ರಲ್ಲಿ ಬಂಗಾಳ ಬ್ರಿಟಿಷರ ವಶವಾಯಿತು. ಕಾರ್ನ್‌ವಾಲೀಸ್ 1793ರಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದ ತರುವಾಯ, ಖಾಯಂಗುತ್ತಾ ಪದ್ಧತಿ (The Permanent Settlement) ಅಥವಾ ಜಮೀನುದಾರಿ ಪದ್ಧತಿಯನ್ನು ಬಂಗಾಳ ಪ್ರಾಂತದಲ್ಲಿ ಜಾರಿಗೆ ತಂದನು. ಬ್ರಿಟಿಷರ ಆಡಳಿತದ ಆರಂಭ ಕಾಲದಲ್ಲಿ ಎದುರಾದ ಕಠಿಣತರವಾದ ರಾಜಕೀಯ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವ ಉದ್ದೇಶದಿಂದ ಈ ರೀತಿಯ ಭೂ ಕಂದಾಯ ಪದ್ಧತಿಯನ್ನು ಜಾರಿಗೆ ತರಲಾಯಿತು. ಇದರ ಹಿಂದೆ ಎರಡು ಉದ್ದೇಶಗಳಿದ್ದುವು; (1) ಪ್ರತಿವರ್ಷ ಒಂದು ಗೊತ್ತಾದ, ನಿರ್ದಿಷ್ಟವಾದ ಹಣ ಸರ್ಕಾರದ ಖಜಾನೆಗೆ ಭೂಕಂದಾಯದ ರೂಪದಲ್ಲಿ ಸಲ್ಲುವಂತೆ ನೋಡಿಕೊಳ್ಳುವುದು; (2) ಕಷ್ಟಕಾಲಗಳಲ್ಲಿ, ಘರ್ಷಣೆಗಳಲ್ಲಿ ನಿಷ್ಠೆಯಿಂದ ಬ್ರಿಟಿಷರಿಗೆ ಬೆಂಬಲವಾಗಿ ನಿಂತುಕೊಳ್ಳುವ ಒಂದು ಜಮೀನುದಾರ ವರ್ಗವನ್ನು ಸೃಷ್ಟಿಮಾಡುವುದು. ಭಾರತದ ನಿಸರ್ಗ ಸಂಪತ್ತಿನ ಜೀವಣಿಗೆಯನ್ನುಂಟುಮಾಡಿ, ಬ್ರಿಟಿಷರ ಸ್ವಾರ್ಥ ಹಿತಾಸಕ್ತಿಗಳಿಗೆ ಬೆಂಬಲ ನೀಡುವಂತಹ ವರ್ಗವು ಇಂತಹ ಧೋರಣೆಯಿಂದ ಹುಟ್ಟುತ್ತದೆ ಎಂಬುದು ಅವರ ನಿರೀಕ್ಷೆಯಾಗಿತ್ತು. ಆದರೆ 1857ರ ಸಿಪಾಯಿದಂಗೆಯ ತರುವಾಯ ಈ ನಿರೀಕ್ಷೆ ಸುಳ್ಳು ಎನ್ನುವಂತಾಯಿತು. ಏಕೆಂದರೆ ಈ ಬ್ರಿಟಿಷ್-ವಿರೋಧಿ ದಂಗೆಯಲ್ಲಿ ಮಹತ್ತರವಾದ ಪಾತ್ರ ವಹಿಸಿದವರು ಈ ಊಳಿಗಮಾನ್ಯ ವ್ಯವಸ್ಥೆಯ ಶ್ರೀಮಂತ ವರ್ಗವೇ ಆಗಿತ್ತು. ಆದುದರಿಂದ ವಸಾಹತು ಸರ್ಕಾರಕ್ಕೆ ಇಂತಹ ವರ್ಗದ ಮೇಲೆ ಯಾವತ್ತೂ ಅವಲಂಬಿತವಾಗಿರುವುದರ ಅಪಾಯ ಗೊತ್ತಾಯಿತು. ಕೃಷಿ ವ್ಯವಸ್ಥೆಯಲ್ಲಿನ ಕೆಳ ಹಂತದ ವರ್ಗಗಳನ್ನು ಉದಾಸೀನ ಭಾವದಿಂದ ಇನ್ನು ಮೇಲೆ ನೋಡುವಂತಿರಲಿಲ್ಲ.[1] ಅಂತಹ ಹಿನ್ನೆಲೆಯಲ್ಲಿ ಬೇರೆಯ ಮಾರ್ಗ ಅವಶ್ಯಕವಾಯಿತು.

ಖಾಯಂಗುತ್ತಾ ವ್ಯವಸ್ಥೆಗೆ ಭಿನ್ನವಾದಂಥ ಒಂದು ನೀತಿಯನ್ನು ಬ್ರಿಟಿಷರು ದಕ್ಷಿಣಭಾರತದಲ್ಲಿ ಜಾರಿಗೆ ತರಲು ಪ್ರಯತ್ನಿಸಿದರು. 1800 ರ ವೇಳೆಗೆ ದಕ್ಷಿಣ ಭಾರತ ಬ್ರಿಟಿಷರ ವಶಕ್ಕೆ ಬಂದಿತು. ದಕ್ಷಿಣ ಭಾರತದಲ್ಲಿ ಅವರು ಜಾರಿಗೆ ತಂದ ಕೃಷಿ ಭೂಮಿಗೆ ಸಂಬಂಧಪಟ್ಟ ನೀತಿಯನ್ನು ರೈತವಾರಿ ಪದ್ಧತಿ ಎಂದು ಕರೆಯುತ್ತಾರೆ (Ryotwari System). ಥಾಮಸ್ ಮನ್ರೋ ಎಂಬ ಬ್ರಿಟಿಷ್ ಆಡಳಿತಾಧಿಕಾರಿ ಈ ನೀತಿಯ ನಿರ್ದೇಶಕನಾಗಿದ್ದನು. ಆದರೆ ಈ ನೀತಿಯ ಬೇರುಗಳು ಸಮಕಾಲೀನ ಇಂಗ್ಲೆಂಡಿನ ಬೌದ್ಧಿಕ ಪ್ರಪಂಚದಲ್ಲಿ ಅಡಗಿದ್ದುವು.

ಹತ್ತೊಂಭತ್ತನೇ ಶತಮಾನದಲ್ಲಿ ಬ್ರಿಟಿಷರು ದಕ್ಷಿಣ ಭಾರತದಲ್ಲಿ ರೂಪಿಸಿ ಜಾರಿಗೆ ತಂದ ಕಂದಾಯ ಪದ್ಧತಿಯು ಹೆಚ್ಚಿನ ಮಟ್ಟಿಗೆ ಆ ಕಾಲದಲ್ಲಿ ಚಲಾವಣೆಯಲ್ಲಿದ್ದ ಡೇವಿಡ್ ರಿಕಾರ್ಡೋ ಮತ್ತು ಜೇಮ್ಸ್ ಮಿಲ್ ಎಂಬ ಅರ್ಥಶಾಸ್ತ್ರಜ್ಞರ ವಿಚಾರಗಳಿಂದ ಪ್ರಭಾವಗೊಂಡಿತ್ತೆಂದು ಹೇಳಬಹುದು. ಆಡಳಿತ, ಹಣಕಾಸು ಮತ್ತು ರಾಜಕೀಯ ಉದ್ದೇಶಗಳ ಜೊತೆಗೆ, ಇಂಥ ಹೊಸದಾದ ಕೃಷಿ ಭೂಮಿಯ ನೀತಿ ರೂಪಗೊಳ್ಳುವುದರಲ್ಲಿ ಈ ವಿಚಾರವಾದಿಗಳ ಭಾವನೆಗಳೂ ಪ್ರಮುಖ ಪಾತ್ರವಹಿಸಿದವು.

ಈಸ್ಟ್ ಇಂಡಿಯಾ ಕಂಪೆನಿಯ ಆರ್ಥಿಕ ಹಿತಾಸಕ್ತಿಗಳ ಅಭಿವೃದ್ಧಿಗೂ ಇಂತಹವರ ವಿಚಾರಧಾರೆ ಪೂರಕವಾಯಿತು. ಅವನ್ನೀಗ ಸಂಕ್ಷಿಪ್ತವಾಗಿ ಪರಿಶೀಲಿಸೋಣ.

ಬಂಗಾಳ ಪ್ರಾಂತದಲ್ಲಿ ಬ್ರಿಟಿಷರು ಖಾಯಂ ಗುತ್ತಾ ಪದ್ಧತಿಯನ್ನು ರೂಪಿಸುವಾಗ ಆದಂ ಸ್ಮಿತ್ (Adam Smith) ಎಂಬ ಅರ್ಥಶಾಸ್ತ್ರಜ್ಞನ ವಿಚಾರಗಳ ಪ್ರಭಾವಕ್ಕೆ ಒಳಗಾದದ್ದನ್ನು ನೋಡಬಹುದು. ಆದಂ ಸ್ಮಿತ್‌ನ ಪ್ರಖ್ಯಾತ ಗ್ರಂಥ "ವೆಲ್ತ್ ಆಫ್ ನೇಷನ್ಸ್". ಮಾನವರ ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರ ಕೈಹಾಕಬಾರದೆಂಬುದು ಅವನ ಮುಖ್ಯವಾದ ಸಿದ್ಧಾಂತವಾಗಿತ್ತು (Laissez Faire). ಸರ್ಕಾರದ ನಿಯಂತ್ರಣ ಮತ್ತು ಮಧ್ಯ ಪ್ರವೇಶವನ್ನು ಅವನು ವಿರೋಧಿಸಿದ.[2] ಜಮೀನುದಾರರ ಮತ್ತು ರೈತರ ಪರಸ್ಪರ ಆರ್ಥಿಕ ಸಂಬಂಧಗಳಲ್ಲಿ ಬಂಗಾಳ ಪ್ರಾಂತದ ಸರ್ಕಾರವು ಜಮೀನುದಾರ ವರ್ಗದ ಹಕ್ಕುಗಳನ್ನು ಯಾವ ರೀತಿಯಲ್ಲೂ ಹತ್ತಿಕ್ಕದ ಧೋರಣೆಯ ಹಿಂದೆ ನಾವು ಆದಂಸ್ಮಿತ್‌ನ ವಿಚಾರಧಾರೆಯನ್ನು ಕಾಣಬಹುದು.[3] ಹೀಗೆ ಪ್ರಚಲಿತ ಆರ್ಥಿಕ ಸಿದ್ಧಾಂತಗಳ ಮತ್ತು ಬ್ರಿಟಿಷ್ ವಸಾಹತು ನಡುವಣ ಧೋರಣೆಗಳ ಮಧ್ಯೆ ಪರಸ್ಪರ ಪ್ರಭಾವ ಮತ್ತು ಸಂಬಂಧಗಳನ್ನು ಗುರುತಿಸಬಹುದು. ಹದಿನೆಂಟನೇ ಶತಮಾನದಲ್ಲಿ ಈ ಪರಿಸ್ಥಿತಿಯಿದ್ದಂತೆ, 19 ನೇ ಶತಮಾನದಲ್ಲೂ ಅದೇ ರೀತಿಯ ಪರಸ್ಪರ ಸಂಬಂಧಗಳನ್ನು ಗುರುತಿಸಬಹುದು.

19 ನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ನವೀನ ರೀತಿಯ ಕೃಷಿ-ಭೂಮಿ ನೀತಿಯನ್ನು ರೂಪಿಸುವಾಗ ಬ್ರಿಟಿಷ್ ವಸಾಹತು ಸರ್ಕಾರ ಇಂಗ್ಲೆಂಡಿನ ಖ್ಯಾತ ಸಮಕಾಲೀನ ಅರ್ಥಶಾಸ್ತ್ರಜ್ಞರಾದ ಡೇವಿಡ್ ರಿಕಾರ್ಡೋ ಮತ್ತು ಜೇಮ್ಸ್‌ಮಿಲ್ ಅವರ ವಿಚಾರಧಾರೆಯ ಪ್ರಭಾವಕ್ಕೆ ಒಳಗಾಯಿತು. ರಿಕಾರ್ಡೋ (Ricardo) ಜೇಮ್ಸ್ ಮಿಲ್ಲನ ಮಿತ್ರನಾಗಿದ್ದ. ಅವನು ಗುತ್ತಿಗೆ ಸಿದ್ಧಾಂತವನ್ನು ಮಂಡಿಸಿದ. ಅವನ ಪ್ರಕಾರ ಗುತ್ತಿಗೆ ಎಂಬುದು ಏಕಸ್ವಾಮ್ಯ ಮೌಲ್ಯ ಉಳ್ಳದ್ದು. ಗಾಳಿಯಂತೆ ಭೂಮಿ (ಉತ್ಪಾದನೆಗೆ ಉಪಯೋಗಿಸಬಹುದಾದ) ಅಮಿತವಾದುದಲ್ಲ. ಕೃಷಿ ಭೂಮಿ ಉತ್ಪಾದನಾ ವ್ಯಾಪ್ಯವಾಗಿ ಸೀಮಿತವಾಗಿದೆ. ಅದನ್ನು ಶಾಸನ ಒಡೆತನಕ್ಕೆ ಅಳವಡಿಸಬಹುದು. ಆದರೆ ಗಾಳಿಯನ್ನು ಹಾಗೆ ಮಾಡಲು ಬರುವುದಿಲ್ಲ.[4]

ಕೃಷಿ ವ್ಯವಸ್ಥೆಯಲ್ಲಿ ಜಮೀನುದಾರ ವರ್ಗ ಯಾವ ರೀತಿಯ ನಿರ್ದಿಷ್ಟವಾದ ಆರ್ಥಿಕ ಸೇವೆಯನ್ನು ಸಲ್ಲಿಸುವುದಿಲ್ಲ. ಮತ್ತು ಆ ವರ್ಗ ಸಮಾಜದಲ್ಲಿ ಪರಾವಲಂಬಿಗಳಂತೆ ಜೀವಿಸುತ್ತಿದ್ದ ಸಮಾಜದ ಇತರ ವರ್ಗಗಳ ಹಿತಾಸಕ್ತಿಗಳಿಗೆ ವಿರುದ್ಧವಾದ ನಿಲುವನ್ನು ಹೊಂದಿರುತ್ತಾರೆ ಎಂದು ರಿಕಾರ್ಡೋ ನಂಬಿದ್ದನು. ಆದುದರಿಂದ ಗುತ್ತಿಗೆಯನ್ನು ತೆರಿಗೆಯ ರೂಪದಲ್ಲಿ ಸರ್ಕಾರ ತನ್ನ ಬೊಕ್ಕಸಕ್ಕೆ ತೆಗೆದುಕೊಳ್ಳಬಹುದು ಮತ್ತು ಇದರಿಂದ ಕಿಂಚಿತ್ ಲಾಭ (profit), ಕೂಲಿ (wage) ಅಥವ ವಸ್ತುಗಳ ಬೆಲೆಗಳ ಮೇಲೆ ಪರಿಣಾಮವಾಗುವುದಿಲ್ಲ ಎಂದು ರಿಕಾರ್ಡೋ ವಾದಿಸಿದ.[5]

ಭಾರತದ ಅಂದಿನ ವಿಶಿಷ್ಟವಾದ ಪರಿಸ್ಥಿತಿಗಳಿಗೆ ರಿಕಾರ್ಡೋವಿನ ಗುತ್ತಿಗೆ

ಸಿದ್ಧಾಂತ ಹೆಚ್ಚು ಅರ್ಥಪೂರ್ಣವಾಗಿ ಕಂಡುಬಂದಿತು. ಭೂಮಿಯ ಒಟ್ಟು ಉತ್ಪತ್ತಿ (gross produce)ಯಲ್ಲಿ ಅತಿ ಹೆಚ್ಚಿನ ಭಾಗ ಸರ್ಕಾರಕ್ಕೆ ಸಲ್ಲುತ್ತಿದ್ದಂಥ ಕಂದಾಯ ಆಡಳಿತ ವ್ಯವಸ್ಥೆಗೆ ಬ್ರಿಟಿಷರು ಭಾರತದಲ್ಲಿ ಉತ್ತರಾಧಿಕಾರಿಗಳಾಗಿದ್ದರು. ಹದಿನೆಂಟನೇ ಶತಮಾನದಲ್ಲಿ ಜಮೀನುದಾರರು ರೈತರಿಂದ ತೆಗೆದುಕೊಳ್ಳುತ್ತಿದ್ದ ಗುತ್ತಿಗೆಯು ಹೆಚ್ಚು ಸಮರ್ಪಕ ರೀತಿಯಲ್ಲಿ ಆರ್ಥಿಕ ಬೆಳವಣಿಗೆಗೆ ಬೇಕಾದ ಬಂಡವಾಳದ ಸಂಗ್ರಹಣೆಗೆ ಎಡೆಮಾಡಿ ಕೊಡುತ್ತವೆ ಎಂಬುದಾಗಿ ಈಸ್ಟ್ ಇಂಡಿಯಾ ಕಂಪೆನಿ ಭಾವಿಸಿದ್ದಿತು. ಆದುದರಿಂದ ಕಂಪೆನಿ ಸರ್ಕಾರ ಬಂಗಾಳದಲ್ಲಿ ಜಮೀನುದಾರರಿಂದ ಬರ ಬೇಕಾದ ತನ್ನ ಕಂದಾಯದ ದರವನ್ನು ಖಾಯಂ ಆಗಿ ನಿರ್ಧರಿಸಿತಲ್ಲದೆ, ಅದನ್ನು ಒಂದು ಸೀಮಿತಕ್ಕೆ ಒಳಪಡಿಸಿತ್ತು. ಹೀಗೆ ಕಡಿಮೆ ದರದಲ್ಲಿ ವಸೂಲಿಮಾಡುವ ಕಂದಾಯದಿಂದ ಒಂದು ಅಂಶ ಜಮೀನುದಾರರಿಗೆ ಲಭಿಸುತ್ತವೆ ಮತ್ತು ಆದರಿಂದ ಅವರು ಆರ್ಥಿಕ ಪ್ರಗತಿಗೆ ಸಹಾಯಕರಾಗುತ್ತಾರೆ ಎಂಬುದು ಕಂಪೆನಿ ಸರ್ಕಾರದ ನಂಬಿಕೆಯಾಗಿತ್ತು. ಆದರೆ ಗುತ್ತಿಗೆಯ ಹೊಸಸಿದ್ಧಾಂತ ಇವನ್ನು ತಪ್ಪಾದ ತೀರ್ಮಾನ ವೆಂದು ಪರಿಗಣಿಸಿತ್ತು. ಇಂಗ್ಲೆಂಡಿನಲ್ಲಿ ಕಂದಾಯಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ತಯಾರಿಸುವ ಶಾಖೆಯಲ್ಲಿ ಸಹಾಯಕ ಪರೀಕ್ಷಾಧಿಕಾರಿ(Assistant Examiner) ಯಾಗಿ ಕೆಲಸಮಾಡುತ್ತಿದ್ದ ಮಿಲ್ಲನ ಮೂಲಕ ರಿಕಾರ್ಡೋವಿನ ಗುತ್ತಿಗೆ ಸಿದ್ಧಾಂತ, 19 ನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಥಾಮಸ್ ಮನ್ರೋ ಆಲೋಚಿಸಿ ರೂಪಿಸುತ್ತಿದ್ದ ರೈತವಾರಿ ಕಂದಾಯ ನಿಗದಿ ವ್ಯವಸ್ಥೆಗೆ ತಳಹದಿಯಾಯಿತು.

ಈ ರೀತಿಯಾಗಿ ಜಮೀನುದಾರರ ವರ್ಗವನ್ನು ಬಿಟ್ಟು ನೇರವಾಗಿ ರೈತರೊಡನೆ ಕಂದಾಯವನ್ನು ನಿಗದಿಪಡಿಸಿಕೊಳ್ಳುವ ರೈತವಾರಿ ಪದ್ಧತಿಯನ್ನು ಜಾರಿಗೆ ತರುವಲ್ಲಿ ಬ್ರಿಟಿಷರು ಅನೇಕ ಉದ್ದೇಶಗಳನ್ನು ಇಟ್ಟುಕೊಂಡಿದ್ದರು : (1) ಹಣಕಾಸಿನ ಉದ್ದೇಶ, ಅಂದರೆ ಸಾಧ್ಯವಾದಷ್ಟು ಭೂ ಕಂದಾಯವನ್ನು ವಸೂಲಿ ಮಾಡುವುದು. ಬ್ರಿಟಿಷರು ನಡೆಸುತ್ತಿದ್ದ ಯುದ್ಧಗಳಿಗೂ, ಬೆಳೆಯುತ್ತಿದ್ದ ಆಡಳಿತ ಯಂತ್ರವನ್ನು ನಡೆಸಲೂ ಹಣದ ಅವಶ್ಯಕತೆ ಹೆಚ್ಚುತ್ತಿತ್ತು. (2) ಮಿಲ್ ಮತ್ತು ಮನ್ರೋಗಳ ಪ್ರಭಾವ (3) ಇಂಗ್ಲೆಂಡಿನಲ್ಲಿದ್ದ ಉದಾರ ಮನೋಭಾವದ ಅಥವ ಲಿಬರಲ್ ಸರ್ಕಾರದ ಒತ್ತಡ (4) ಅಂದಿನ ಆರ್ಥಿಕ ಸಿದ್ಧಾಂತದಲ್ಲಿ ಆಪಕವಾಗಿದ್ದ ಹೊಸ ಗುತ್ತಿಗೆ ಸಿದ್ಧಾಂತವನ್ನು ಪ್ರಯೋಗಿಸಿ ನೋಡುವುದು. (5) ಇಂಗ್ಲೆಂಡಿನಲ್ಲಿ ಬೆಳೆಯುತ್ತಿದ್ದ ಕೈಗಾರಿಕೆಗಳಿಗೆ ಭಾರತದಿಂದ ಕೃಷಿ ಕ್ಷೇತ್ರದ ಸಾಮಗ್ರಿಗಳನ್ನು ಒದಗಿಸುವುದು. (6) ಇಂಥ ಕಚ್ಚಾ ಪದಾರ್ಥಗಳನ್ನು ಅಗ್ಗವಾಗಿ ಬೆಳೆಯಲು ಜಮೀನುದಾರ ವರ್ಗದ ಹಿತಾಸಕ್ತಿ ಒಂದು ಅಡ್ಡಿಯಾಗಿದೆ ಎಂಬ ಭಾವನೆ. ಆದುದರಿಂದ ದಕ್ಷಿಣ ಭಾರತದಲ್ಲಿ ರೈತರೊಡನೆ ನೇರ ವಾಗಿ ಕಂದಾಯ ನಿಗದಿ ಮತ್ತು ವಸೂಲಿ ಕ್ರಮವನ್ನು ಜಾರಿಗೆ ತರಲು ಪ್ರಯತ್ನಿಸ ಲಾಯಿತು. ಇದರ ಜೊತೆಗೆ ಕಂದಾಯ ರೈತರ ಮೇಲೆ ಹೆಚ್ಚು ಭಾರವಾಗಬಾರದೆಂದೂ ನಿರ್ಧರಿಸಲಾಗಿತ್ತು.

ಅಂತಿಮವಾಗಿ ಬ್ರಿಟಿಷ್ ವಸಾಹತು ಸರ್ಕಾರ ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ರೈತವಾರಿ ಪದ್ಧತಿಯನ್ನು ಮತ್ತು ಕೆಲವು ಕಡೆ ಬೇರೆ ಬೇರೆ ಕಾರಣಗಳಿಗೋಸ್ಕರ ಕಾಯಂ ಗುತ್ತಿಗೆ ಪದ್ಧತಿಯನ್ನು ಜಾರಿಗೆ ತಂದಿತು. 1802–1805ರಲ್ಲಿ ಉತ್ತರ ಸರ್ಕಾರ್ ಪ್ರಾಂತ (Northern circars) ಗಳೆಂದು ಕರೆಯುತ್ತಿದ್ದ ಭಾಗಗಳಲ್ಲಿ ಕಾಯಂಗುತ್ತಾ ಪದ್ಧತಿಯನ್ನು ಜಾರಿಗೆ ತರಲಾಯಿತು.[6] 1792ರಲ್ಲಿ ಮಲಬಾರ್ ಪ್ರಾಂತ ಬ್ರಿಟಿಷರ ವಶಕ್ಕೆ ಬಂದಿತು.[7] ಮೊದಲು ಈ ಪ್ರಾಂತ ಬೊಂಬಾಯಿ ಪ್ರೆಸಿಡೆನ್ಸಿಯಲ್ಲಿ ಸೇರ್ಪಡೆಯಾಗಿದ್ದಿತು. ಮಲಬಾರಿನ ರಾಜರು ಮತ್ತು ನಾಯರ್ ಜಾತಿಯ ಮುಖಂಡರೊಡನೆ ಬ್ರಿಟಿಷರು ಮೊದಲು ದ್ವೈವಾರ್ಷಿಕ ಅವಧಿಯ ಕಂದಾಯವನ್ನು ಅನಂತರ ಪಂಚವಾರ್ಷಿಕ–ಅವಧಿಯ ಕಂದಾಯವನ್ನು ನಿಗದಿ ಮಾಡಿಕೊಂಡರು. ಅಂದರೆ ದ್ವೈವಾರ್ಷಿಕ ಕಂದಾಯ ನಿಗದಿ ವ್ಯವಸ್ಥೆಯಲ್ಲಿ ಎರಡು ವರ್ಷಗಳವರೆಗೆ ನಿರ್ಧರಿಸಿದ ಕಂದಾಯದ ದರವನ್ನು ಹೆಚ್ಚಿಸುವಂತಿರಲಿಲ್ಲ. ಅದೇ ರೀತಿಯಲ್ಲಿ ಪಂಚವಾರ್ಷಿಕ ಕಂದಾಯದ ನಿಗದಿ ವ್ಯವಸ್ಥೆಯಲ್ಲಿ, ನಿರ್ಧರಿಸಿದ ಕಂದಾಯದ ದರವನ್ನು ಐದು ವರ್ಷಗಳವರೆಗೆ ಹೆಚ್ಚಿಸುವಂತಿರಲಿಲ್ಲ. ಮಲಬಾರಿನ ರಾಜರು ಮತ್ತು ನಾಯರ ಜಾತಿಯ ಮುಖಂಡರು ನಿಗದಿಯಾದ ಕಂದಾಯವನ್ನು ನಿಗದಿಯಾದ ಕಾಲಕ್ಕೆ ಸರಿಯಾಗಿ ಕಟ್ಟಲು ವಿಫಲರಾದ್ದರಿಂದ, ಬ್ರಿಟಿಷರು ಅವರಿಂದ ಭೂಮಿಯನ್ನು ಕಿತ್ತುಕೊಂಡರು. ಇದರಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆಗಳು ನಡೆದವು. ಬೊಂಬಾಯಿ ಸರ್ಕಾರದ ಆಡಳಿತದ ವೈಫಲ್ಯತೆ ಇದರಿಂದ ಪ್ರಕಟವಾದ್ದರಿಂದ, ಮಲಬಾರ್ ಪ್ರಾಂತವನ್ನು 1800ರಲ್ಲಿ ಮದರಾಸ್ ಪ್ರೆಸಿಡೆನ್ಸಿಗೆ ವರ್ಗಾಯಿಸಲಾಯಿತು.[8] ಆಗ ಲಾರ್ಡ್ ಕ್ಲೈವ್ ಮದರಾಸಿನ ಗೌರ್ನರ್ ಆಗಿದ್ದ. ಅವನು ರೆವಿನ್ಯೂ ಆಡಳಿತವನ್ನು ನೋಡಿಕೊಳ್ಳಲು ಪ್ರಧಾನ ಕಲೆಕ್ಟರ್ ಮತ್ತು ಅಧೀನ ಕಲೆಕ್ಟರ್‌ಗಳನ್ನು ನೇಮಿಸಿದನು. ಕಂದಾಯವನ್ನು ಭಾಗಶಃ ಜಮೀನುದಾರರೊಡನೆಯೂ, ಭಾಗಶಃ ಗುತ್ತಿಗೆದಾರರೊಡನೆಯೂ ಸರ್ಕಾರ ನಿಗದಿ ಮಾಡಿಕೊಂಡಿತು. ಒಟ್ಟಾರೆ ರೈತವಾರಿ ಪದ್ಧತಿ ಮಲಬಾರಿನಲ್ಲಿ ಜಾರಿಗೆ ಬಂದಿತು.

1799ರಲ್ಲಿ ತಂಜಾವೂರನ್ನು ವೆಲ್ಲೆಸ್ಲಿ ವಶಪಡಿಸಿಕೊಂಡನು. ವಸಾಹತು ಆಡಳಿತವು ಪಟ್ಟಕದಾರರೆಂದು ಕರೆಯಲ್ಪಡುತ್ತಿದ್ದ ಕಂದಾಯದ ಅಧಿಕಾರಿಗಳನ್ನು ಕೆಲಸದಿಂದ ತೆಗೆದುಹಾಕಿ, 1804ರಲ್ಲಿ ರೈತವಾರಿ ಪದ್ಧತಿಯನ್ನು ಜಾರಿಗೆ ತಂದಿತು. ಹಲವು ವರ್ಷಗಳ ಸರಾಸರಿ ಉತ್ಪನ್ನದ ಆಧಾರದ ಮೇಲೆ ಸರ್ಕಾರ ಕಂದಾಯವನ್ನು ನಿಗದಿ ಮಾಡಿತು. ಭೂಮಿಯ ಮೋಜಣಿ ಮತ್ತು ಮೌಲ್ಯ ಇದಕ್ಕೆ ಆಧಾರವಾಗಿರಲಿಲ್ಲ.[9]

ಹೊಸದಾದ ರೈತವಾರಿ ಕಂದಾಯ ಪದ್ಧತಿಯ ಪ್ರಕಾರ ಕಂದಾಯ ಒಂದು ತೆರಿಗೆ (tax) ಆಗಿರಲಿಲ್ಲ. ಅತಿ ಹೆಚ್ಚಿನ ಕಂದಾಯ ದರವನ್ನು ನಿಗದಿ ಮಾಡಲು ರಿಕಾರ್ಡೋನ ಗುತ್ತಿಗೆ ಸಿದ್ಧಾಂತವನ್ನು ಬಳಸಿಕೊಂಡು ಅದು ನ್ಯಾಯಸಮ್ಮತವೆಂದು ಅಭಿಪ್ರಾಯಪಡಲಾಯಿತು. ಮದರಾಸು ಮತ್ತು ಬೊಂಬಾಯಿ ಪ್ರೆಸಿಡೆನ್ಸಿಗಳಲ್ಲಿ ಇಂತಹ ರೈತರನ್ನು ನಾಶಗೊಳಿಸುವ ದರಗಳು ಜಾರಿಗೆ ಬಂದವು. ಒಳ್ಳೆಯ ಉದ್ದೇಶಗಳನ್ನು ಹೊಂದಿದ್ದ

ವನು, ರೈತವಾರಿ ಪದ್ಧತಿಯ ನಿಷ್ಠ ಪ್ರತಿಪಾದಕನೂ ಆದ ಮನ್ರೋ ಕೂಡ 1824ರಲ್ಲಿ ರೈತರಿಗೆ ಆಸ್ತಿ ಹಕ್ಕನ್ನು ನೀಡಿದಾಗ್ಯೂ, ಮದರಾಸ್ ಪ್ರೆಸಿಡೆನ್ಸಿಯಲ್ಲಿ ಕಂದಾಯ ದರಗಳು ರೈತರಿಗೆ ಭಾರವಾಗಿದ್ದವೆಂದು ಅಭಿಪ್ರಾಯಪಟ್ಟನು.[10] ಮೊದಲು ಕಂದಾಯ ದರವನ್ನು ಒಟ್ಟು ಉತ್ಪನ್ನದ ಅರ್ಧದಷ್ಟೆಂದು ಗೊತ್ತುಪಡಿಸಲಾಯಿತು. ನಂತರ ಮನ್ರೋ ಇದು ಭಾರವೆಂದು ಕಂಡುಬಂದದ್ದರಿಂದ ದರವನ್ನು $\frac{1}{3}$ ಭಾಗಕ್ಕೆ ಇಳಿಸಿದರೂ, ಅದು ಸಹಾ ರೈತರಿಗೆ ಭಾರವಾಗಿಯೇ ಇದ್ದಿತು.[11]

ಈಸ್ಟ್ ಇಂಡಿಯಾ ಕಂಪೆನಿಯ ಕೃಷಿ–ಭೂಮಿ–ನೀತಿ ಕೇವಲ ವಸಾಹತು ಮತ್ತು ಸಾಮ್ರಾಜ್ಯಶಾಹಿ ಹಿತಾಸಕ್ತಿಗಳನ್ನು ಕಾಪಾಡಿತೇ ವಿನಃ ರೈತರ ಉದ್ಧಾರ ಆದರಿಂದ ಆಗಲಿಲ್ಲ, ಸರ್ಕಾರದ ಸುಭದ್ರತೆ ಮತ್ತು ಸಾಕಷ್ಟು ಆದಾಯ–ಇವು ಆ ನೀತಿಯ ಉದ್ದೇಶಗಳಾಗಿದ್ದವು.

ಈ ವ್ಯವಸ್ಥೆಯಲ್ಲಿ ರೈತನಿಗೆ ಆಸ್ತಿ ಹಕ್ಕು ಬಂದದ್ದು ನಿಜ. ಆದರೆ ನಿಗದಿ ಮಾಡಿದ ಕಂದಾಯ ಭಾರವಾಗಿದ್ದರಿಂದಲೂ ಮತ್ತು ಅದನ್ನು ಯಾವ ಮುಲಾಜಿಲ್ಲದೆ ಕಠಿಣವಾಗಿ ವಸೂಲಿ ಮಾಡುವ ಕ್ರಮದಿಂದಾಗಿಯೂ, ರೈತನು ಲೇವಾದೇವಿ ಮಾಡುವವರ (money lenders) ಬಲಿಗೆ ಬೀಳುವಂತಾಯಿತು. ಇದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಋಣಬಾಧೆ ಹೆಚ್ಚಿತು. ಬೇಸತ್ತ ರೈತಾಪಿ ವರ್ಗದವರು ಅಲ್ಲಲ್ಲಿ ದಂಗೆ ಎದ್ದರು. ಇಂತಹ ದಖ್ಖನ್ನಿನ ರೈತರ ದಂಗೆಗಳ ಬಗೆಗೆ ವಿಚಾರಣಾ ಆಯೋಗವನ್ನು ನೇಮಿಸಿ ಅದರ ವರದಿ ಬಂದಾಗ, ದಕ್ಷಿಣ ಭಾರತದ ರೈತರು ಕಂದಾಯ ಭಾರದಿಂದ ಎಷ್ಟು ಹತಾಶ ಸ್ಥಿತಿಗೆ ಇಳಿದಿದ್ದರೆಂಬುದು ಗೊತ್ತಾಯಿತು.

ರಿಕಾರ್ಡೋವಿನ ಗುತ್ತಿಗೆ ಸಿದ್ಧಾಂತವನ್ನು ಭಾರತದ ಸ್ಥಿತಿಗತಿಗೆ ಹೊಂದಿಸಿದ್ದು ಸರಿಯೆ ? ಎಂಬುದು ಮುಖ್ಯವಾದ ಪ್ರಶ್ನೆ. ಅಂಥ ಸಿದ್ಧಾಂತ ಬಂಡವಾಳ ವ್ಯವಸ್ಥೆಯ ಮೇಲೆ ರೂಪಿಸಲ್ಪಟ್ಟ ಕೃಷಿ ಉತ್ಪಾದನೆಯ ವಿಧಾನ (capitalist mode of production) ಕ್ಕೆ ಅನ್ವಯವಾಗಬಹುದೇನೋ. ಆದರೆ 19 ನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಅಂಥ ವ್ಯವಸ್ಥೆ ಕೃಷಿ ಕ್ಷೇತ್ರದಲ್ಲಿ ಹುಟ್ಟಲೇ ಇಲ್ಲ. ಜೀವನ ನಿರ್ವಹಣೆಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಉತ್ಪಾದಿಸುವಂತಹ ರೈತರೇ ಹೆಚ್ಚಾಗಿ ದಕ್ಷಿಣ ಭಾರತದಲ್ಲಿದ್ದುದು ಅಂತಹುದರಲ್ಲಿ ಉತ್ಪಾದನೆಯ ಹೆಚ್ಚಳ (surplus)ವನ್ನು ತಾನೇ ಭೋಗಿಸುವ ಪ್ರಶ್ನೆ ದಕ್ಷಿಣ ಭಾರತದ ಬಡರೈತನ ವಿಷಯದಲ್ಲಿ ಏಳುವಂತಿರಲಿಲ್ಲ. ತನ್ನ ತುಂಡು ಹೊಲಗದ್ದೆಯಲ್ಲಿ ತಾನು ಹಾಕಿದ ಉತ್ಪಾದನೆಯ ಹಣಬಂದರೆ ದೊಡ್ಡ ಪವಾಡ ಅನ್ನುವ ಸ್ಥಿತಿ ಅವನದಾಗಿತ್ತು. 1880 ಮತ್ತು 1888 ರಲ್ಲಿ ಹೊರಬಂದ ಕ್ಷಾಮ ಆಯೋಗಗಳ (famine commission) ವರದಿಗಳನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ.[12] ಆದುದರಿಂದ ಭೂ–ಕಂದಾಯವೆಂಬ ಹೆಸರಿನಲ್ಲಿ ವಸೂಲಿಮಾಡುತ್ತಿದ್ದ ಹಣ ಅವನ ಜೀವನದ ನಿರ್ವಹಣೆಯ ಮೇಲೆ ಹಾಕುತ್ತಿದ್ದ ತೆರಿಗೆಯಾಗಿತ್ತು. ಲಾರ್ಡ್ ಸ್ಯಾಲಿಸ್‌ಬರಿ ಮತ್ತು ಸರ್ ಆಕ್ಲೆಂಡ್ ಕೋಲ್‌ವಿನ್ ಮೊದಲಾದ ಬ್ರಿಟಿಷ್

ರಾಜಕಾರಣಿಗಳೂ ಮತ್ತು ಆಡಳಿತಗಾರರು ಇಂಥ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಿದ್ದರು. ಆದರೆ ಅಂದಿನ ವಸಾಹತು ಆಡಳಿತದ ದೃಷ್ಟಿಯಲ್ಲಿ ಸಾಧ್ಯವಾದಷ್ಟನ್ನೂ ಒಡ ರೈತರಿಂದ ದೋಚುವುದೇ ಸರಿಯಾದ ಮಾರ್ಗವಾಗಿತ್ತು. ಆದುದರಿಂದ ಅರ್ಥಶಾಸ್ತ್ರದ ಸಿದ್ಧಾಂತಕ್ಕಿಂತ, ಪರಿಸ್ಥಿತಿಯ ಒತ್ತಡ (expediency)ದ ಪ್ರಭಾವದಿಂದ ವಸಾಹತು ಆಡಳಿತ ತನ್ನೆಲ್ಲಾ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು 19 ನೇ ಶತಮಾನದಲ್ಲಿ ಹೆಚ್ಚಾಗಿ ಭೂ–ಕಂದಾಯಕ್ಕೆ ಮೊರೆ ಹೋಗಬೇಕಾಯಿತು. ಈ ರೀತಿಯಾಗಿ 19 ನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಬ್ರಿಟಿಷರು ಅನುಸರಿಸಿದ ಭೂ–ಕಂದಾಯ ನೀತಿಯು ಹಿಂದೆ ಶೋಷಣೆ ಮತ್ತು ಪರಿಸ್ಥಿತಿಗಳ ಒತ್ತಡಗಳ ಪ್ರಭಾವಗಳನ್ನೇ ಹೆಚ್ಚಾಗಿ ಕಾಣುತ್ತೇವೆ.

ಮಿಲ್ ಮತ್ತು ಮನ್ರೋ ದಕ್ಷಿಣ ಭಾರತದಲ್ಲಿ ಬ್ರಿಟಿಷರು ಗೆದ್ದುಕೊಂಡಂಥ ಪ್ರದೇಶಗಳಲ್ಲಿ ರೈತ ಒಡೆತನ ವ್ಯವಸ್ಥೆಯನ್ನು ಜಾರಿಗೆ ತರಲು ಪ್ರಯತ್ನಿಸಿದರು. ರೈತರೇ ಭೂಮಿಯನ್ನು ಉತ್ತಮಪಡಿಸಿ ಉತ್ಪಾದನೆಯನ್ನು ಹೆಚ್ಚಿಸಬಲ್ಲ ನಿಜವಾದ ಆಸಕ್ತವರ್ಗವೆಂದು ಪರಿಗಣಿಸಿದ್ದ ಅವರು, ರೈತವಾರಿ ಪದ್ಧತಿಯನ್ನು ಎತ್ತಿಹಿಡಿದರು. ಸರ್ಕಾರ ಭೂಮಿಯ ಉತ್ಪನ್ನದಲ್ಲಿ ತೆಗೆದುಕೊಳ್ಳುವ ಪಾಲಿನಲ್ಲಿ ಒಂದು ಅಂಶವನ್ನು ಬಿಟ್ಟುಕೊಡುವ ಪಕ್ಷದಲ್ಲಿ, ಅಂತಹ ಪಾಲಿನ ಒಂದು ಅಂಶ ಸೇರಬೇಕಾದದ್ದು ರೈತವರ್ಗಕ್ಕೆ ವಿನಃ ಜಮೀನುದಾರರಿಗಲ್ಲ ಎಂಬುದು ಅವರ ಅಭಿಮತವಾಗಿತ್ತು. ಈ ರೀತಿ ಬಿಟ್ಟುಕೊಡಬಹುದಾದ ಅಂಶ ರೈತರು ಕೃಷಿಯನ್ನು ಉತ್ತಮಪಡಿಸಲು ಒಂದು ರೀತಿಯಲ್ಲಿ ಪ್ರೋತ್ಸಾಹಕವಾಗುತ್ತದೆ ಎಂದು ಅವರು ಭಾವಿಸಿದ್ದರು. ಆದರೆ ಕಂದಾಯವನ್ನು ಪೂರ್ಣವಾದ ಆರ್ಥಿಕ ಗುತ್ತಿಗೆ (Economic rent) ಎಂದು ಭಾವಿಸಿ ತನ್ನ ಪಾಲನ್ನು ತೆಗೆದುಕೊಳ್ಳುವ ಸರ್ಕಾರ, ಹಾಗೆ ತೆಗೆದುಕೊಂಡ ಒಟ್ಟು ಹಣವನ್ನು ಉದಾರ ಮತ್ತು ಪ್ರಜಾಯೋಗ ಕ್ಷೇಮ ದೃಷ್ಟಿಯುಳ್ಳಂಥ ಆಡಳಿತವನ್ನು ಜಾರಿಗೆ ತರಲು ಮತ್ತು ಸೂಕ್ತವಾದ ಎಲ್ಲ ಕಾರ್ಯಗಳನ್ನು ನಿರ್ವಹಿಸಲು ಬಳಸಬೇಕಾಗುತ್ತದೆ. ಇದು ಹೊಸ ಭೂ-ಧೋರಣೆಯ ಹಿಂದಿನ ಉದ್ದೇಶವಾಗಿದ್ದಿತು.

1830ರಲ್ಲಿ ಭಾರತದ ಒಟ್ಟು ಆದಾಯದಲ್ಲಿ 9/10 ಭಾಗ ಭೂ–ಕಂದಾಯದ ಮೂಲದಿಂದ ಬಂದದ್ದು ಜೇಮ್ಸ್‌ಮಿಲ್‌ಗೆ ಸಂತೋಷದ ವಿಷಯವಾಗಿತ್ತು. ಗುತ್ತಿಗೆ ಎಂಬುದು (rent) ಸರ್ಕಾರಕ್ಕೆ ಸಂಪೂರ್ಣವಾಗಿ ಸಲ್ಲಬೇಕಾದ ಪಾಲು ಮತ್ತು ಅದು ಜನರಿಗೆ ಭಾರವಾದ ಉತ್ಪಾದನಾ ಅಂಶವಾದ್ದರಿಂದ ಯಾವ ವ್ಯಕ್ತಿಗಳಿಗೂ ಅದನ್ನು ಬಿಟ್ಟುಕೊಡುವಂತಿಲ್ಲ. ಏಕೆಂದರೆ ಅದು ಸರ್ಕಾರದ ಆಸ್ತಿ; ಇದು ಮಿಲ್‌ನ ನಂಬಿಕೆಯಾಗಿತ್ತು.[13]

ಇಂತಹ ಒಳ್ಳೆಯ ಉದ್ದೇಶಗಳನ್ನು ಹೊಂದಿದ್ದ ಕೃಷಿ–ಭೂಮಿಯ ನೀತಿ ಜಾರಿಗೆ ಬಂದಾಗ ರೈತರಿಗೆ ಅನುಕೂಲಕ್ಕಿಂತ ತೊಂದರೆಯೇ ಹೆಚ್ಚಾಯಿತು. ಇದು ವಿರೋಧಾಭಾಸವಾಗಿ ಕಂಡರೂ ನಿಜವಾಗಿತ್ತು. ಇದರಿಂದ ದಕ್ಷಿಣ ಭಾರತದಲ್ಲಿ ಪ್ರಾಚೀನ ಕಾಲ

ದಿಂದಲೂ ಅಸ್ತಿತ್ವದಲ್ಲಿದ್ದಂಥ ಸಂಸ್ಥೆಗಳು ನಾಶವಾದವು. ತಹಸೀಲ್ದಾರರು, ಶಿರಸ್ತೇದಾರರು ಮತ್ತು ಪೋಲೀಸರು ಗ್ರಾಮಗಳ ಆಡಳಿತದಲ್ಲಿ ಪ್ರಭಾವಶಾಲಿಗಳಾದರು. ಅವರು ವಸಾಹತು ವ್ಯವಸ್ಥೆ ಸೃಷ್ಟಿಸಿದ ಏಜೆಂಟರಾಗಿದ್ದರು. ಆ ವ್ಯವಸ್ಥೆಯು ಸ್ವಾರ್ಥ ಹಿತಾಸಕ್ತಿಗಳನ್ನು ಕಾಪಾಡಿಕೊಂಡು ಬಂದರು. ಗ್ರಾಮದ ಮುಖಂಡರ ಭೂಮಿಗೆ ಸಂಬಂಧಪಟ್ಟ ಎಲ್ಲಾ ವ್ಯವಹಾರಗಳು ನಡೆಯುತ್ತಿದ್ದ ಕ್ರಮ ಕೊನೆಗೊಂಡಿತು. ಮನ್ರೋ ತನ್ನ ಕೈಲಾದಷ್ಟು ಗ್ರಾಮ ವ್ಯವಸ್ಥೆಯ ಮುಖ್ಯಾಂಶಗಳನ್ನು ಉಳಿಸಲು ಹೆಣಗಾಡಿದರೂ ಸಹ, ಕಡೆಯಲ್ಲಿ ಏನೂ ಪ್ರಯೋಜನವಾಗಲಿಲ್ಲ. ಪ್ರತಿಯೊಬ್ಬ ಸಣ್ಣಪುಟ್ಟ ರೆವಿನ್ಯೂ ಅಧಿಕಾರಿಯೂ ರೈತರನ್ನು ಹೆದರಿಸುವಂತಾಯಿತು. ಪೋಲೀಸರ ಭ್ರಷ್ಟಾಚಾರ ಮಿತಿ ಮೀರಿತು.[14]

ಮನ್ರೋ ಆಲೋಚಿಸಿದ್ದ ರೈತವಾರಿ ಪದ್ಧತಿಯ ಎಲ್ಲಾ ಅಂಶಗಳನ್ನು ಜಾರಿಗೆ ತರಲಿಲ್ಲ. ರೈತರೊಡನೆ ಕಂದಾಯ ನಿಗದಿ ಮಾಡುವಾಗ ಅವರೊಡನೆ ಪರ್ಯಾಲೋಚಿಸಿ ಕಂದಾಯದ ದರವನ್ನು ಒಂದು ಸಾರಿ ನಿರ್ಧರಿಸಿದ ಮೇಲೆ ಅದು ಶಾಶ್ವತವಾಗಿರುವಂತೆ ನೋಡಿಕೊಳ್ಳಬೇಕೆಂದು ಮನ್ರೋ ಸಲಹೆ ಮಾಡಿದ್ದ. ಅಂದರೆ ಖಾಯಂಗುತ್ತಾ ಪ್ರದೇಶದಲ್ಲಿ ಜಮೀನುದಾರರು ಶಾಶ್ವತವಾದ ಕಂದಾಯ ದರವನ್ನು ಹೇಗೆ ಸರ್ಕಾರಕ್ಕೆ ಕೊಡುತ್ತಾರೋ, ಅದೇ ರೀತಿಯಲ್ಲಿ ರೈತವಾರಿ ಪದ್ಧತಿಗೆ ಒಳಪಟ್ಟ ರೈತರಿಗೂ ಅವಕಾಶವಿರಬೇಕು ಮತ್ತು ಅದನ್ನು ಬದಲಾಯಿಸಬಾರದು ಎಂದು ಮನ್ರೋ ವಾದಿಸಿದ್ದ. ಆದರೆ ಕೃಷಿಗೆ ಒಳಪಡದ ಭೂಮಿಯ ಮೇಲೆ (waste lands) ರೈತರಿಗೆ ಹಕ್ಕು ಇರಲಿಲ್ಲ. ಇದಕ್ಕೆ ವಿರುದ್ಧವಾಗಿ ಖಾಯಂಗುತ್ತಾ ಪ್ರದೇಶದ ಜಮೀನುದಾರರ ವರ್ಗಕ್ಕೆ ಇಂಥ ಭೂಮಿಯ ಮೇಲೆ ಹಕ್ಕು ಲಭಿಸಿತ್ತು. ಹೀಗೆ ಬಹುಮುಖ್ಯವಾದ ಅಂಶಗಳನ್ನುಳಿದು 1820 ರ ವೇಳೆಗೆ ಮದರಾಸ್ ಪ್ರೆಸಿಡೆನ್ಸಿಯಲ್ಲೂ, ನಂತರ ಬೊಂಬಾಯಿ ಪ್ರೆಸಿಡೆನ್ಸಿಯಲ್ಲೂ ರೈತವಾರಿ ಪದ್ಧತಿ ವ್ಯಾಪಕವಾಗಿ ಜಾರಿಗೆ ಬಂದಿತು. ಸರ್ಕಾರಕ್ಕೆ ಕೊಡಬೇಕಾದ ಕಂದಾಯದ ಮೊತ್ತ ವರ್ಷದಿಂದ ವರ್ಷಕ್ಕೆ ವ್ಯತ್ಯಾಸವಾಗುತ್ತಿದ್ದುದರಿಂದ ರೈತರಿಗೆ ಯಾವ ಲಾಭವೂ ಆಗುತ್ತಿರಲಿಲ್ಲ. ಅವರು ಶಾಶ್ವತವಾಗಿ ಬಡತನದಲ್ಲೇ ಮುಳುಗಿರುವಂತಾಯಿತು. ಕಂಪನಿ ಆಡಳಿತ ಕೊನೆಗೊಂಡ ಮೇಲೂ ಇದೇ ಪರಿಸ್ಥಿತಿ ಮುಂದುವರೆಯಿತು. ರಿಪ್ಪನ್‌ನಂತಹ ಉದಾರ ಮನೋಭಾವದ, ರೈತರ ಬಗೆಗೆ ಅನುಕಂಪವಿದ್ದ ವೈಸ್‌ರಾಯ್‌ಗಳ ವಾದವನ್ನು ಇಂಗ್ಲೆಂಡಿನ ಸರ್ಕಾರ ಒಪ್ಪಲಿಲ್ಲ.[15] ಆದಷ್ಟು ಹೆಚ್ಚು ಕಂದಾಯ ವಸೂಲಿ ಮಾಡುವುದೇ ವಸಾಹತು ಸರ್ಕಾರದ ಗುರಿಯಾಯಿತು.

ರೈತವಾರಿ ಪದ್ಧತಿಯನ್ನು ಜಾರಿಗೆ ತರುವುದಲ್ಲದೆ ಬ್ರಿಟಿಷ್ ವಸಾಹತು ಆಡಳಿತ ದಕ್ಷಿಣ ಭಾರತವನ್ನು ಮತ್ತೊಂದು ರೀತಿಯಲ್ಲಿ ಬ್ರಿಟಿಷರು ಕೃಷಿ ಕ್ಷೇತ್ರದಲ್ಲಿ ಬಂಡವಾಳ ಹೂಡುವಿಕೆಗೆ ಅವಕಾಶ ಮಾಡಿಕೊಟ್ಟಿತು. ವಾಣಿಜ್ಯ ಬೆಳೆಗಳಾದ ಹತ್ತಿ, ಕಾಫಿ, ಟೀ, ನೀಲಿಗಳನ್ನು ಬೆಳೆಯುವುದು ಲಾಭದಾಯಕವಾಗಿತ್ತು. ಆದುದರಿಂದ ಬ್ರಿಟಿಷ್ ಪಾರ್ಲಿ

ಮೆಂಟಿನಲ್ಲಿದ್ದ ಹಿತಾಸಕ್ತ ವಲಯಗಳ ಪ್ರತಿನಿಧಿಗಳಲ್ಲಿ[16] ಕಂಪೆನಿಯ ಕೋರ್ಟ್ ಆಫ್ ಡೈರೆಕ್ಟರುಗಳ ಮಂಡಲಿ[17] ಅನೇಕ ಖಾಸಗಿ ಕಂಪೆನಿಗಳೂ[18] ಮತ್ತು ಹತ್ತಿ ಹಿತಾಸಕ್ತ ಗುಂಪುಗಳು,[19] ಸರ್ಕಾರವು ಭಾರತದಲ್ಲಿ ಬಂಡವಾಳವನ್ನು ಲಾಭದಾಯಕವಾಗಿ ಹೂಡಲು ಅನುಕೂಲವಾಗುವಂಥ ಕೃಷಿ-ಭೂಮಿ ನೀತಿಯನ್ನು ರೂಪಿಸಬೇಕೆಂದು ಒತ್ತಡ ಹೇರಿದವು. ನೆಡುತೋಟ(ಪ್ಲಾಂಟೇಷನ್) ಮಾದರಿಯ ವ್ಯವಸಾಯಕ್ಕೆ, ವಾಣಿಜ್ಯ ಬೆಳೆಗಳನ್ನು ಬೆಳೆಯಲು ದಕ್ಷಿಣ ಭಾರತ ಸಮರ್ಪಕವಾಗಿತ್ತು. ಮೇಲೆ ತಿಳಿಸಿದ ಹಿತಾಸಕ್ತ ವ್ಯಕ್ತಿಗಳೂ, ಸಂಸ್ಥೆಗಳು ಎರಡು ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟವು: (1) ಮುಫತ್ತಾಗಿ ಭೂಮಿಯನ್ನು ಸರ್ಕಾರ ಕೊಡಬೇಕು (2) ಅಂಥ ಭೂಮಿಗೆ ಕಂದಾಯವನ್ನು ಖಾಯಂ ಆಗಿ ನಿರ್ಧರಿಸಬೇಕು. ಈ ಸೌಲಭ್ಯ ಯಾರು ಹತ್ತಿ, ಕಾಫಿ ಮೊದಲಾದ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಬಂಡವಾಳ ಹೂಡುತ್ತಾರೋ ಅಂಥ ವರಿಗೆ ಕೊಡತಕ್ಕದ್ದು.

ಅಮೇರಿಕಾದಲ್ಲಿ 1860–65 ರ ನಡುವೆ ಅಂತರ್ಯುದ್ಧ ನಡೆದಾಗ ಬ್ರಿಟನ್ನಿಗೆ ಅಲ್ಲಿಂದ ಆಗುವ ಹತ್ತಿ ಪೂರೈಕೆಯಲ್ಲಿ ಏರುಪೇರು ಉಂಟಾಯಿತು. ಆಗ ಹತ್ತಿ ಹಿತಾಸಕ್ತ ವರ್ಗಗಳು (cotton interests)ಮತ್ತಷ್ಟು ಚುರುಕಾದವು. ಭಾರತದಲ್ಲಿ ಸೌಲಭ್ಯಗಳನ್ನು ಗಿಟ್ಟಿಸಿಕೊಳ್ಳಲು ಎಲ್ಲಾ ರೀತಿಯ ಒತ್ತಡಗಳನ್ನು ತಂದರು. ಇದಕ್ಕೆ ತಲೆಬಾಗಿ, 1861ರಲ್ಲಿ ಭಾರತದ ವಸಾಹತು ಸರ್ಕಾರ ಮೇಲಿನ ಬೇಡಿಕೆಗಳನ್ನು ಅನುಮೋದಿಸಿತು. ಕಂದಾಯವನ್ನು ಅಂಥ ಭೂಮಿಗೆ ಕೆಲವು ವರ್ಷಗಳ ಕಾಲ ರದ್ದುಪಡಿಸಿತು. ಕೊಡಗು ಜಿಲ್ಲೆಯಲ್ಲಿದ್ದ (Coorg) ಕಾಫಿ ನೆಡುತೋಟ ವ್ಯವಸಾಯಗಾರರು ಇದಕ್ಕೆ ಬೆಂಬಲ ಸೂಚಿಸಿದರು.[20] ಈ ರೀತಿಯಾಗಿ ವಸಾಹತು ಸರ್ಕಾರ, ಭಾರತಕ್ಕೆ ಅತಿ ಲಾಭವಿಲ್ಲದೆ ಸುಮ್ಮನೆ ಕೊಳೆಯುತ್ತಿದ್ದ ಇಂಗ್ಲೆಂಡಿನ ಬಂಡವಾಳ ಬರುವಂತೆ ಭೂ-ನೀತಿಯನ್ನು ರೂಪಿಸಿತು. ಕೆಲವು ಐರೋಪ್ಯ ಮತ್ತು ಬ್ರಿಟಿಷ್ ನೆಡುತೋಟ ಕೈಗಾರಿಕಾ ಸಂಸ್ಥೆಗಳೂ, ವ್ಯಕ್ತಿಗಳೂ ಇದನ್ನು ಉಪಯೋಗಿಸಿಕೊಂಡು ಲಾಭ ಪಡೆದುಕೊಂಡವು. 19 ನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಇದರಿಂದ ಕಾಫಿ ಮತ್ತು ಟೀ ನೆಡುತೋಟಗಳು, ಮೈಸೂರು ರಾಜ್ಯ, ಕೊಡಗು, ಮಲಬಾರು, ಊಟಿ ಮೊದಲಾದ ಕಡೆ ಸ್ಥಾಪಿಸಲ್ಪಟ್ಟವು.

ಹೀಗೆ 19 ನೇ ಶತಮಾನದಲ್ಲಿ ಬ್ರಿಟಿಷ್ ವಸಾಹತು ಸರ್ಕಾರ ದಕ್ಷಿಣ ಭಾರತದಲ್ಲಿ ರೂಪಿಸಿದ ಕೃಷಿ-ಭೂಮಿ ನೀತಿಯಲ್ಲಿ ಎರಡು ಮುಖ್ಯವಾದ ಅಂಶಗಳನ್ನು ಗುರುತಿಸಬಹುದು : (1) ಪ್ರತಿಯೊಬ್ಬ ರೈತನೊಡನೆ ಪ್ರತ್ಯೇಕವಾಗಿ ಕಂದಾಯವನ್ನು ನಿಗದಿ ಮಾಡಿಕೊಳ್ಳುವುದು. ಇದು ಜಮೀನುದಾರರೊಡನೆ ಮಾಡಿಕೊಂಡ ಖಾಯಂಗುತ್ತಾ ಪದ್ಧತಿಗಿಂತಲೂ ಅಥವ ಮಹಲ್ ವಾರಿ ಅಥವಾ ಪ್ರತಿ ಗ್ರಾಮ ಮುಖಂಡರೊಡನೆ ಮಾಡಿಕೊಳ್ಳುವ ಕಂದಾಯ ನಿಗದಿಗಿಂತ ಭಿನ್ನವಾಗಿತ್ತು. (2) ವಾಣಿಜ್ಯ, ಕೃಷಿ ಅಭಿವೃದ್ಧಿ ಹೊಂದಲು ಮತ್ತು ಬ್ರಿಟಿಷ್ ಬಂಡವಾಳ ಭಾರತಕ್ಕೆ ಬರಲು ಅನುವಾಗುವಂತೆ ಭೂ ನೀತಿಯನ್ನು ರೂಪಿಸಿದ್ದು. ಇವೆಲ್ಲವರ ಹಿಂದೆ ಶೋಷಣೆಯ ಉದ್ದೇಶ ಇದ್ದಿತು.

ರೈತರ ಹಿತಾಸಕ್ತಿಗೆ ಧಕ್ಕೆ ಉಂಟಾಯಿತು. ಆದಷ್ಟು ಹೆಚ್ಚು ಹಣವನ್ನು ಭೂಮಿಯಿಂದ ತೆಗೆದುಕೊಳ್ಳುವುದೇ ಈ ನೀತಿಯ ಉದ್ದೇಶವಾಗಿದ್ದಿತು. ಆ ಬಂಡವಾಳವನ್ನು ನೆಡುತೋಟಗಳಲ್ಲಿ ಹೂಡಿದ್ದರಿಂದ ಅವರ ಸುತ್ತಮುತ್ತ ಸ್ವಲ್ಪ ಜನರಿಗೆ ಅನುಕೂಲವಾಯಿತೇನೋ ನಿಜ. ಆದರೆ ಅಲ್ಲೂ ಶೋಷಣೆಯ ಮನೋಭಾವ ಎದ್ದು ಕಾಣುತ್ತದೆ.

ಅಡಿ ಟಿಪ್ಪಣಿಗಳು

1. B B Mishra : The Indian Middle Classes, (1961), p 257
2. Adam Smith : Wealth of Nations, p. 384.
3. Eric Stokes : The English Utilitarians and India, p. 61.
4. Ibid , Chaps : I and II Also see Foster, East India House and A K. Ghoshal, Civil Service in India.
5 Ibid.,
6 Fifth Report, 1812, pp. 124–127.
7. Ibid ,
8. Ibid.,
9. Ibid , p. 127.
10. Minute dated 31st Dec. 1824.
11 R.C. Dutt : Economic History of British India, p 368.
12. Minute dated 26th April 1875 quoted in Bhatia : Famines in India, p. 83 : Colvin's note in the Report of Deccan Riot Commission vol. I.
13. Evidence Before Select Committee, 2nd Aug, 1831, vol v. p. 292.
14. R.C. Dutt : op cit, pp. 151–152.
15. Despatch of 17th October 1862
16. These were so called Cotton Mps Bazley, Watson, Smith Craford, Lowe etc.,
17. Court of Directors to Government of India. No. 6. 6 May 1867 etc.
18. Secretary of State to Government of India, Revenue Despatch No. 2, 31st Dec. 1852.
19. Annual Report of Cotton Supply Association, No. 2 1859.
20. 25th June 1862. P.P H.L. 1863, vol. 22, pp. 60–61 Memorials of Landholders and Commercial Association to Government of India.

ಸೀತಾರಾಮ ಜಾಗೀರ್‌ದಾರ್

ಹೊಯ್ಸಳದೊರೆ ವಿನಯಾದಿತ್ಯನ ಎರಡು ಪ್ರಾಚೀನ ಶಾಸನಗಳು : ಕಾಲವಿವೇಚನೆ

ಕರ್ನಾಟಕದ ಇತಿಹಾಸಕ್ಕೆ ಮತ್ತು ದಕ್ಷಿಣ ಭಾರತದ ಇತಿಹಾಸಕ್ಕೆ ಸಂಬಂಧಿಸಿದ ಎಲ್ಲ ಚರಿತ್ರೆಯ ಪುಸ್ತಕಗಳಲ್ಲೂ ಹೊಯ್ಸಳದೊರೆ ವಿನಯಾದಿತ್ಯನ ಆಳ್ವಿಕೆ ಕ್ರಿ.ಶ. 1048 ರಿಂದ ಆರಂಭಿಸಿರುವುದು ಕಂಡುಬರುತ್ತದೆ. ಈ ತೇದಿಯನ್ನು ಸ್ವೀಕರಿಸಲು ಮುಖ್ಯ ಕಾರಣ ಮಂಡ್ಯ ಜಿಲ್ಲೆಯ ಕೆ. ಆರ್. ಪೇಟೆ ತಾಲ್ಲೂಕಿನ ತೊಣಚಿ ಗ್ರಾಮದಲ್ಲಿ ದೊರಕಿದ ಶಾಸನ. ತೊಣಚಿಯ ಅಂಕಕಾರ ದೇವರಿಗೆ ಮತ್ತು ನಗರೇಶ್ವರ ದೇವರಿಗೆ ವಿನಯಾದಿತ್ಯನು ಹದಿನೆಂಟು (ನಾನಾ) ದೇಶಿಗಳ ಜೊತೆಗೆ ದತ್ತಿಯನ್ನು ಬಿಟ್ಟ ಸಂಗತಿ ಶಾಸನದ ವಿಷಯ. ಆಗ ವಿನಯಾದಿತ್ಯ ತಲಕಾಡುಪಟ್ಟಣ, ಎಡದಱೆ-1000, ಕಿರುನಗರ ಮತ್ತು ಕೆಳ್ಳಪ್ಪು-1000 ಎಂಬ ಭೂಭಾಗಗಳನ್ನು ಆಳುತ್ತಿದ್ದನು. ಅರ್ಥಾತ್ ಆಷ್ಟೊತ್ತಿಗಾಗಲೇ ಆತ ರಾಜ್ಯವನ್ನು ಆಳಲು ಆರಂಭಿಸಿ ಸ್ವಲ್ಪ ಕಾಲವಾದರೂ ಸಂದಿರಬೇಕು. ಈ ಭೂಭಾಗಗಳು ವಾಸ್ತವವಾಗಿ ಹೊಯ್ಸಳ ಮಂಡಲದ ಹೊರಗಿನವು. ಈ ಸಂಗತಿಯನ್ನು ಮನಗಂಡರೆ ಕ್ರಿ.ಶ. 1048ಕ್ಕೂ ಮುಂಚೆಯೆ ಗಂಗಾವಾಡಿಯ ಮೇಲೆ ನಿರ್ದೇಶಿಸಿದ ಪ್ರದೇಶಗಳು ಹೊಯ್ಸಳರ ಅಧೀನಕ್ಕೊಳಪಟ್ಟಿದ್ದವು. ಇಲ್ಲಿ ಶಾಸನದ ಪಾಠವನ್ನು ಉಲ್ಲೇಖಿಸಿ ತೇದಿಯ ಸಂಗತಿಗಳನ್ನು ವಿಮರ್ಶಿಸುವುದು ವಿಹಿತ.

1 ಶ್ರೀಸ್ವಸ್ತಿ ಶ್ರೀಮತು ಸಖವ
2 ರ್ಷ ತೊಂಭಯಿಸೂಱ ೯೪ ಸ
3 ರ್ವಜಿತು ಸಂವತ್ಸರದ
4 ಆದಿವಾರಂ
5 ಶ್ರೀಮನು ಮಹಾಮಣ್ಡಳೇ
6 ಶ್ವರ ತ್ರಿಭುವನಮಲ್ಲ [ಪೊ]
7 ಯ್ಸಳದೇವರಾಜ್ಯಂ ತಳಕಾಡಪಟ್ಟ

8 ಣನೆ ಎ[ಡ]ದ [ಬಿಕೆ] ಸಾಯಿರಮುಂ
9 [ಕಿ] ಱುನಗರ [ಮುಂ] ಕಳ್ಬಪ್ಪ ಸಾಯಿರಮುಂ
10 ಹದಿನೆ [ಣ್ಟು] ವಿಷಯದ ವೇಸಿ[ಯುಂ] ನೆರೆ
ದು ತೊಳಂಚಿಯ ಅಂಕಕಾಱಿದೇ
12 ವರುಂ ನಗರೇಸ್ವರದೇವರ್ಗ್ಗೆ ಕೊಟ್ಟ
13 ಧರ್ಮ್ಮಂ . . . . . ಇತ್ಯಾದಿ[1]

ಇಲ್ಲಿಯ ತೇದಿಯ ವಿವರಗಳನ್ನು ವಿಮರ್ಶಿಸುವುದಕ್ಕಿಂತ ಮುಂಚೆ ಹೊಯ್ಸಳ ದೊರೆ ಎರೆಯಂಗನ ಉಲ್ಲೇಖವಿರುವ ಮಂಡ್ಯ ಜಿಲ್ಲೆಯ ಮಂಡ್ಯ ತಾಲ್ಲೂಕಿನ ಹಳೇಬೂದನೂರು ಶಾಸನದ ತೇದಿ ವಿವರಗಳನ್ನು ಗಮನಿಸಬೇಕಾದುದು ಬಹುಮುಖ್ಯವಾದ ಸಂಗತಿ; ಆ ಶಾಸನ ಹೀಗಿದೆ :

ಪಂಕ್ತಿಗಳು : 5 ಮಂಡಳೇಶ್ವರ ಶ್ರೀ ಹೊಯ್ಸಳ
6 ಯೆರಗಂಗದೇವ ನಂದನ ಸಂ
7 ವತ್ಸರದ ಕನ್ಯೆಮಸಕ್ತಿಲ್ಲಾ . . . ಇತ್ಯಾದಿ

ಇಲ್ಲಿನ ತೇದಿ ವಿವರಗಳು ಕ್ರಿ.ಶ. 1052ಕ್ಕೆ ಸರಿಹೊಂದುತ್ತವೆ.[2] ಇನ್ನು ಎರೆಯಂಗನು ಕ್ರಿ.ಶ. 1052ರಲ್ಲಿ ಮಂಡಳೇಶ್ವರನಾಗಿ ರಾಜ್ಯದಲ್ಲಿ ಆಡಳಿತವನ್ನು ನಡೆಸಬಲ್ಲ ತಾಖತ್ತನ್ನು ಹೊಂದಿರಬೇಕಾದರೆ ಅವನಿಗೆ ಸು. 15-16ರಷ್ಟಾದರೂ ವಯಸ್ಸಾಗಿರಬೇಕು. ಎರೆಯಂಗನ ತಂದೆಗೆ ಆಗ ಕನಿಷ್ಟ 35ವರ್ಷ ವಯಸ್ಸು ಇರಬಹುದು. ಅರ್ಥಾತ್ ತೊಣಚಿಯ ಶಾಸನದಲ್ಲಿಯ ಉಕ್ತ ತೇದಿಯ ವಿವರಗಳಲ್ಲಿನ ಶಾ.ಶ. 954ನ್ನು ಯಥಾವತ್ತಾಗಿ ಸ್ವೀಕರಿಸಿದರೆ ಕ್ರಿ.ಶ. 1032 ರಲ್ಲಿ ವಿನಯಾದಿತ್ಯನು ರಾಜನಾಗಿದ್ದನೆಂದು ಹೇಳಬಹುದು. ಸರ್ವಜಿತ್ ಸಂವತ್ಸರವನ್ನು ಸ್ವೀಕರಿಸಿದರೂ ಇತರ ಸಂಗತಿಗಳು ಸ್ವಾಮಿ ಕಣ್ಣುಪಿಳ್ಳೆಯವರ ಇಫಿಮರೀಸ್ ಗಣಿತದ ಲೆಕ್ಕಕ್ಕೆ ಹೊಂದುವುದಿಲ್ಲ. ಕೆಲವೊಮ್ಮೆ ಪ್ರಾದೇಶಿಕ ಪಂಚಾಂಗದ ಲೆಕ್ಕಾಚಾರಗಳು ಸ್ವಾಮಿಕಣ್ಣುಪಿಳ್ಳೆಯವರ ಗಣಿತದ ಲೆಕ್ಕಕ್ಕೆ ಹೊಂದುವುದಿಲ್ಲ. ಹೀಗೆಯೇ ಈ ಲೆಕ್ಕಾಚಾರದ ಗಣಿತಕ್ಕೆ ಒಗ್ಗದ ಇನ್ನೊಂದು ಶಾಸನ ಮಂಡ್ಯ ತಾಲೂಕಿನ ಬೇಲೂರಿನದು. ಈ ಶಾಸನದ ಪ್ರಕಾರ ತ್ರಿಭುವನಮಲ್ಲನ ಮಂತ್ರಿ ಬಾಪಣಯ್ಯ (ಶಾಸನ ಪಂಕ್ತಿಗಳು)

12 . . . . ಶಕನೃಪಕಾಲಾತೀತ ಸಂ
13 ವತ್ಸರ ಸತಂಗಳ್ ೯೬೪ ನೆಯ ದುರ್ಮುಖಿ ಸಂವತ್ಸರದ ಫಾಲ್ಗುಣ ಮಾ
14 ಸ ಸುದ್ಧ ಪಞ್ಚಮಿ ಸೋಮವಾರ ಪುನರ್ವ್ವಸು ನಕ್ಷತ್ರದನ್ದು —

ದತ್ತಿಯನ್ನು ಹಾಕಿಕೊಟ್ಟಿದ್ದಾನೆ.[3] ತೊಣಚಿ ಹಾಗೂ ಬೇಲೂರು ಎರಡೂ ಶಾಸನಗಳಲ್ಲಿಯ ತೇದಿಯ ವಿವರಗಳು ಸ್ವಾಮಿ ಕಣ್ಣುಪಿಳ್ಳೆಯವರ ಇಫಿಮರೀಸ್ ಗಣಿತದ ಲೆಕ್ಕಾಚಾರಕ್ಕೆ ಹೊಂದುವುದಿಲ್ಲ. ಈ ಎರಡರಲ್ಲೂ ರಾಜನ ಹೆಸರು "ತ್ರಿಭುವನಮಲ್ಲ" ಎಂದಿರುವುದೂ ಮತ್ತು ಶಾ.ಶ.ದ ಅಂತರ ಕೇವಲ ಹತ್ತು ವರ್ಷವಿರುವುದೂ ಎರಡರ ಲಿಪಿಯೂ

ಸುಮಾರು ಒಂದೇ ಬಗೆಯಾಗಿರುವುದೂ ಇಲ್ಲಿನ ರಾಜ 'ತ್ರಿಭುವನಮಲ್ಲ' ಒಬ್ಬನೇ ವ್ಯಕ್ತಿಯೆಂದು ಬೆರಳಚ್ಚು ತೋರುತ್ತವೆ. ಕ್ರಿ.ಶ. 1048 ನ್ನೇ ಸ್ವೀಕರಿಸಿದರೂ ಆಗ ತ್ರಿಭುವನಮಲ್ಲ ಎಂಬ ಚಾಳುಕ್ಯ ಚಕ್ರವರ್ತಿಗಳ ಒಂದು ಬಿರುದು ವಿನಯಾದಿತ್ಯನಿಗೆ ಬರಲು ಸಾಧ್ಯವಿಲ್ಲ. ಏಕೆಂದರೆ ಆಗ ಆಹವಮಲ್ಲ ಸೋಮೇಶ್ವರ ಚಕ್ರವರ್ತಿಯಾಗಿದ್ದನು.

ಇನ್ನು ಬೇಲೂರ ಶಾಸನದ ಶಾಲಿವಾಹನ ಶಕವರ್ಷ 944 ನ್ನು ಯಥಾವತ್ತಾಗಿ ಸ್ವೀಕರಿಸಿದರೆ (944+78=1022 A.D.) ಆಗ ಚಾಳುಕ್ಯ ಚಕ್ರವರ್ತಿ 'ತ್ರಿಭುವನಮಲ್ಲ' ಎಂಬ ಬಿರುದಿನ ಐದನೆಯ ವಿಕ್ರಮಾದಿತ್ಯನ ಬಿರುದನ್ನೇ[4] ವಿನಯಾದಿತ್ಯನು ಧರಿಸಿದ್ದನೆಂದು ಸ್ಪಷ್ಟವಾಗುತ್ತದೆ. ಅರ್ಥಾತ್ ವಿನಯಾದಿತ್ಯನ ಆಳ್ವಿಕೆಯ ಕಾಲವನ್ನು ಈಗಿನ ಕ್ರಿ.ಶ. 1048 ರಿಂದ ಕ್ರಿ.ಶ. 1022 ಕ್ಕೆ—ಹಿಂದಕ್ಕೆ ತಳ್ಳಬೇಕು. ಈ ಕಾಲಕ್ಕೆ ಚಾಳುಕ್ಯ ಚಕ್ರವರ್ತಿ ಐದನೆಯ ವಿಕ್ರಮಾದಿತ್ಯನು ಇನ್ನೂ ಬದುಕಿದ್ದನೆಂಬುವನ್ನು ತಿ.ತಾ. ಶರ್ಮರು 'ಕೇತಿದಂಡನಾಯಕ' ಎಂಬ ಕವಿಯನ್ನು ಕುರಿತು ಬರೆಯುತ್ತ ತೋರಿಸಿಕೊಟ್ಟಿದ್ದಾರೆ.[5] ಈ ಹಿನ್ನೆಲೆಯಲ್ಲಿ ನಾವು ಇತಿಹಾಸವನ್ನು ಅಧ್ಯಯನ ಮಾಡಿದರೆ ಚಾರಿತ್ರಿಕ ಸಂಗತಿಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಕ್ರಿ.ಶ. 1022ನ್ನು ಸ್ವೀಕರಿಸಿದರೆ ವಿನಯಾದಿತ್ಯ ಕ್ರಿ.ಶ. 1032ರ ಮಧ್ಯದಲ್ಲಿ ಹೊಯ್ಸಳಮಂಡಲದ ಹೊರಗಿನ ಪ್ರದೇಶಗಳನ್ನು ತನ್ನ ರಾಜ್ಯಕ್ಕೆ ಸೇರಿಸಲು ಆರಂಭಿಸಿದನೆಂದು ಹೇಳಬಹುದು. ಕ್ರಿ.ಶ. 1052ರಲ್ಲಿ ರಾಜ್ಯ ಸೂತ್ರವನ್ನು ಹಿಡಿಯಲು ಮಗನು ಹುಟ್ಟಿದ್ದರೆ ವಿನಯಾದಿತ್ಯನಿಗೆ ಮಗನು ಹುಟ್ಟುವಷ್ಟು ವಯಸ್ಸಾದರೂ ಇರಬೇಬೇಕಲ್ಲವೆ ? ಹೊಸ ದಾಖಲೆಗಳನ್ನು ಪರಿಶೀಲಿಸುವುದು ಹಳೆಯ ದಾಖಲೆಗಳನ್ನು ಸರಿಯಾಗಿ ಅರ್ಥೈಸುವುದು ಅಭ್ಯಾಸಿಗಳು ಮಾಡಬೇಕಾದ ಕಾರ್ಯವಾದುದರಿಂದ ಈಗ ಪುನರಾಲೋಕಿಸಿರುವುದು ತಪ್ಪೇನಲ್ಲ. ಆದುದರಿಂದ ತೊಣಚಿ ಹಾಗೂ ಬೇಲೂರ ಶಾಸನಗಳಲ್ಲಿ ಉಕ್ತವಾದ ತೇದಿಗಳನ್ನು — ವಿಶೇಷತಃ ಶಕವರ್ಷಗಳನ್ನು ಮನದಂವರೆ ಕ್ರಿ.ಶ. 1022ರಷ್ಟೊತ್ತಿಗೇನೆ ರಾಜ್ಯವನ್ನು ಆಳಲು ಆರಂಭಿಸಿದ ಹೊಯ್ಸಳದೊರೆ ವಿನಯಾದಿತ್ಯ ಕ್ರಿ.ಶ. 1098 ರವರೆಗೆ ರಾಜ್ಯವನ್ನು ಆಳಿ ದೀರ್ಘಕಾಲ ಬದುಕಿ ಆ ಮನೆತನಕ್ಕೊಂದು ವಿಶಿಷ್ಟಸ್ಥಾನವನ್ನು ಕಲ್ಪಿಸಿಕೊಟ್ಟ ಧೀರ ಧೀಮಂತವ್ಯಕ್ತಿ; ಆತ ಸುಮಾರು ಎಪ್ಪತ್ತಾರು ವರ್ಷಕ್ಕೂ ಹೆಚ್ಚಿನ ಕಾಲ ರಾಜ್ಯವಾಳಿ ಇತಿಹಾಸದಲ್ಲಿ ಒಂದು ದಾಖಲೆಯನ್ನೇ ಸ್ಥಾಪಿಸಿದ್ದಾನೆ. ಮತ್ತೆ ಆತ ಶತಾಯುಷಿಯೂ ಆಗಿರಬಹುದು. ವಿನಯಾದಿತ್ಯ ಹೆಸರಿಗೆ ತಕ್ಕಂತೆ ಹೆಚ್ಚು ಬೆಳಗಿದ್ದಾನೆ. ವಸ್ತುವನ್ನು ಸರಿಯಾಗಿ ವಿವೇಚಿಸಿ ಇತಿಹಾಸದ ಪುಟಗಳಲ್ಲಿ ತಪ್ಪಾಗಿರುವುದನ್ನು ಸರಿಪಡಿಸಿಕೊಳ್ಳುವುದು ಸೂಕ್ತಮಾರ್ಗ. ಕಾರಣ ವಿನಯಾದಿತ್ಯನ ರಾಜ್ಯಾಡಳಿತದ ಕಾಲಮಾನವನ್ನು ಇನ್ನು ಮುಂದೆ ಸು.ಕ್ರಿ.ಶ. 1022 ರಿಂದ 1098 ಎಂದು ವಿವರಿಸಬೇಕು.

ಟಿಪ್ಪಣಿಗಳು

1 ಎಪಿ. ಕ. ಸಂ. VI (೧೯೭೭), ಕೃಪೇ–೫೦, ಪುಟ. ೩೭

2 ಎಪಿ. ಕ. ಸಂ. VII (೧೯೭೯), ಮಂಡ್ಯ–೫೨, ಪು. ೨೩೪

3 ಅದೇ, ಮಂಡ್ಯ–೬೭, ಪು. ೨೪೪

4 S.I.I. Vol xx, Insp.No. 19, p. 18

5 (a) ಪ್ರ. ಕ. ಸಂಪುಟ-೧೧ ಸಂಚಿಕೆ-೪

(b) ಅದೇ. ಸಂಪುಟ-೪೦, ಸಂಚಿಕೆ-೨ ಮತ್ತು

(c) ಕ.ಸಾ.ಪ.ಕ. ಸಂಪುಟ–೪೩, ಸಂ-೨, ಪು-೯

ಎನ್. ನಿಂಗಯ್ಯ

ಕೊರಗ ಆದಿವಾಸಿ ಸಮಾಜದ ಜೀವನ ಕ್ರಮ

ಪೀಠಿಕೆ

ಆದಿವಾಸಿ ಸಮಾಜಗಳು ವಿಶ್ವದಾದ್ಯಂತ ಕಂಡುಬರುವಂತೆ ಭಾರತದಲ್ಲಿಯೂ ಕಂಡುಬರುತ್ತವೆ. ಅನೇಕ ಜಾತಿ, ಧರ್ಮ ಮತ್ತು ಮತಗಳಿಗೆ ಆಶ್ರಯ ಕೊಟ್ಟ ಭಾರತವು ಅನೇಕ ಬುಡಕಟ್ಟು ಸಮಾಜಗಳಿಗೂ ಆಶ್ರಯ ನೀಡಿದೆ. ಭಾರತದಲ್ಲಿ ಸುಮಾರು ಐನೂರಕ್ಕೂ ಹೆಚ್ಚು ಆದಿವಾಸಿ ಸಮಾಜಗಳನ್ನು ಗುರುತಿಸಲಾಗಿದ್ದು ಅವರ ಜನಸಂಖ್ಯೆ ಶೇಕಡ 5.7ರಷ್ಟಿದೆ. ಭಾರತದ ಕೆಲವು ರಾಜ್ಯಗಳಲ್ಲಿ ಆದಿವಾಸಿ ಸಮಾಜಗಳು ಮತ್ತು ಅವುಗಳ ಜನಸಂಖ್ಯೆ ಬಹಳವಿದ್ದು ಇನ್ನೂ ಕೆಲವು ರಾಜ್ಯಗಳಲ್ಲಿ ಆದಿವಾಸಿ ಸಮಾಜಗಳು ಮತ್ತು ಅವರ ಜನಸಂಖ್ಯೆ ತೀರ ಕಡಿಮೆ ಇರುವುದನ್ನು ಕಾಣಬಹುದು. ಉದಾ : ನಾಗಲ್ಯಾಂಡ್, ಒರಿಸ್ಸ, ಮಧ್ಯಪ್ರದೇಶ, ಬಿಹಾರ್ ಮುಂತಾದ ರಾಜ್ಯಗಳಲ್ಲಿ ಇವರ ಜನಸಂಖ್ಯೆ ಹೆಚ್ಚಿದ್ದು, ದಕ್ಷಿಣ ಭಾರತದ ರಾಜ್ಯಗಳಲ್ಲಿ ಅವರ ಜನಸಂಖ್ಯೆ ಕಡಿಮೆ ಇರುವುದು ಅನೇಕ ಅಧ್ಯಯನಗಳಿಂದ ತಿಳಿದು ಬಂದಿದೆ. ಭಾರತದ ಆದಿವಾಸಿ ಸಮಾಜಗಳಲ್ಲಿ ಧರ್ಮ, ಸಂಸ್ಕೃತಿ, ಭಾಷೆ, ದೈಹಿಕ ಲಕ್ಷಣ, ವೃತ್ತಿ, ಆರ್ಥಿಕ, ಮಟ್ಟ ಸಾಮಾಜಿಕ ಮಟ್ಟ, ಆಚರಣೆ, ವಿಚಾರ, ಮೂಢನಂಬಿಕೆ, ಸಂಪ್ರದಾಯ ಮುಂತಾದವುಗಳಲ್ಲಿ ಒಂದು ಸಮಾಜದಿಂದ ಮತ್ತೊಂದು ಸಮಾಜಕ್ಕೆ ಬದಲಾವಣೆ ಮತ್ತು ವ್ಯತ್ಯಾಸಗಳನ್ನು ಕಾಣಬಹುದು. ಹೆಚ್ಚಾಗಿ ಆದಿವಾಸಿಗಳು ಬೆಟ್ಟ ಪ್ರದೇಶಗಳಲ್ಲಿ ವಾಸವಾಗಿರುತ್ತಾರೆ. ಅನೇಕ ಆದಿವಾಸಿ ಸಮಾಜಗಳು ಬೆಳವಣಿಗೆಯನ್ನು ಹೊಂದುತ್ತ ಪ್ರಗತಿ ಪಥದಲ್ಲಿರುವುದನ್ನು ಕಂಡರೆ ಇನ್ನೂ ಕೆಲವು ಆದಿವಾಸಿ ಸಮಾಜಗಳು ನಾಗರಿಕತೆಯ ಸಂಪರ್ಕವನ್ನೇ ಕಾಣದೆ ಹಳೆಯ ಸಂಪ್ರದಾಯ, ಮೂಢನಂಬಿಕೆ ಮತ್ತು ಕಂದಾಚಾರಗಳನ್ನು ಮುಂದುವರಿಸಿಕೊಂಡು ಅನಾಗರಿಕ ಜೀವನವನ್ನು ನಡೆಸುತ್ತಿರುವುದನ್ನು ನಾವು ನೋಡಬಹುದು. ಕೊರಗ ಆದಿವಾಸಿ ಸಮಾಜವು ಹಿಂದುಳಿದಿದ್ದು ಅನಾಗರಿಕ ಜೀವನವನ್ನೇ ಮುಂದುವರಿಸಿಕೊಂಡು ಹೋಗುತ್ತಿದೆ. ಇದರ ಜೀವನ ಕ್ರಮದ ಬಗ್ಗೆ ಸಾಮಾನ್ಯ ಮಾಹಿತಿಗಳನ್ನು ಸಂಗ್ರಹಿಸಿ ಅವುಗಳ ಆಧಾರದ ಮೇಲೆ ಈ ಲೇಖನವನ್ನು ಸಿದ್ಧಪಡಿಸಲಾಗಿದೆ.

ಕೊರಗ ಆದಿವಾಸಿ ಸಮಾಜದ ಪರಿಚಯ

ಕೊರಗ ಆದಿವಾಸಿ ಸಮಾಜವು ದಕ್ಷಿಣ ಭಾರತದಲ್ಲಿ ಕಂಡುಬಂದು ಇವರನ್ನು ದಕ್ಷಿಣ ಭಾರತದ ಆದಿವಾಸಿಗಳು ಎಂದು ಹೆಸರಿಸಲಾಗಿದೆ. ಈ ಸಮಾಜವು ದಕ್ಷಿಣ ರಾಜ್ಯಗಳಾದ ಕೇರಳ, ಕರ್ನಾಟಕ ತಮಿಳುನಾಡುಗಳಲ್ಲಿ ಕಂಡುಬರುತ್ತವೆ. 1971ರ ಜನಗಣತಿಯ ಪ್ರಕಾರ ಇವರು ಕೇರಳ ರಾಜ್ಯದಲ್ಲಿ 724, ತಮಿಳುನಾಡಿನಲ್ಲಿ 173 ಮತ್ತು ಕರ್ನಾಟಕದಲ್ಲಿ 7260 ಜನರು ವಾಸವಾಗಿದ್ದಾರೆಂದು ಗೊತ್ತಾಗಿದೆ. ಕರ್ನಾಟಕದಲ್ಲಿ ಸುಮಾರು 52 ಆದಿವಾಸಿ ಸಮಾಜಗಳಿದ್ದು ಆಚಾರ, ವಿಚಾರ, ಧರ್ಮ, ಸಂಸ್ಕೃತಿ, ಆರ್ಥಿಕಮಟ್ಟ ಮತ್ತು ಸಾಮಾಜಿಕ ಮಟ್ಟ ಮುಂತಾದವುಗಳಲ್ಲಿ ವ್ಯತ್ಯಾಸಗಳನ್ನು ಹೊಂದಿರುತ್ತಾರೆ. ಕರ್ನಾಟಕದ ಮುಖ್ಯ ಆದಿವಾಸಿ ಸಮಾಜಗಳು ಸೋಲಿಗ, ಬೆಟ್ಟ ಕುರುಬ, ಜೇನು ಕುರುಬ, ಕಾಡುಕುರುಬ ತಿಗಳ, ಮಲೆಕುಡಿಯರು, ಮರಾಠಿಗಳು ಮುಸುಗಾಡಸಿದ್ದ, ಹಕ್ಕಿಪಿಕ್ಕಿ, ಬಗ್ಗರು, ಲಂಬಾಣಿಗಳು, ಕೊರಗ ಇನ್ನೂ ಮುಂತಾದವನ್ನು ಒಳಗೊಂಡಿವೆ. ಈ ಎಲ್ಲ 52 ಸಮಾಜಗಳನ್ನು ಅನುಸೂಚಿತ ಪಟ್ಟಿಯಲ್ಲಿ ಸೇರಿಸಲಾಗಿದೆ. ಈ ಜನರು ಬೆಟ್ಟಗುಡ್ಡ, ಕಾಡು ಮತ್ತು ಬಯಲು ಪ್ರದೇಶಗಳಲ್ಲಿ ವಾಸವಾಗಿದ್ದು ಹಳೆ ಸಂಪ್ರದಾಯ, ಮೂಢನಂಬಿಕೆಗಳನ್ನು ಮುಂದುವರಿಸಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಕರ್ನಾಟಕದ ಯಾವುದೇ ಆದಿವಾಸಿ ಸಮಾಜವು ಆರ್ಥಿಕವಾಗಿ ಮುಂದುವರಿದಿಲ್ಲ.

ಕೊರಗ ಆದಿವಾಸಿಗಳು ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮಾತ್ರ ಕಂಡು ಬರುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ಇವರ ಜನಸಂಖ್ಯೆ ವಿರಳವಿದ್ದು ಕೆಲವೇ ಹಳ್ಳಿಗಳಲ್ಲಿ ಮಾತ್ರ ಕಂಡುಬರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ಎಲ್ಲಾ ತಾಲ್ಲೂಕಿನಲ್ಲಿಯೂ ಕಂಡುಬರುತ್ತಾರೆ. ಉಡುಪಿ ತಾಲ್ಲೂಕಿಗೆ ಸೇರಿದ ಹಲವು ಹಳ್ಳಿಗಳಿಂದ ಪುತ್ತೂರು, ಮಲ್ಪೆ ತಿವಳ್ಳಿ, ಮಣಿಪಾಲ, ಮಂಚಿ, ಮೂಡನಿರಂ, ಮತ್ತು ಕಾರ್ಕಳ ತಾಲ್ಲೂಕಿಗೆ ಸೇರಿದ ಹಳ್ಳಿಗಳಿಂದ ಮುಂಡ್ಕೂರು, ಸಚ್ಚೆರ್‌ಪೇಟ್ ಪಡು ಇನ್ನೂ ಮುಂತಾದ ಹಳ್ಳಿಗಳಿಗೆ ಭೇಟಿ ನೀಡಿ, ಸಂದರ್ಶನ ಅವಲೋಕನ ಮತ್ತು ಕ್ಷೇತ್ರ ಕಾರ್ಯ ವಿಧಾನಗಳನ್ನು ಅಳವಡಿಸಿಕೊಂಡು ಅವರ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಜೀವನದ ಬಗ್ಗೆ ಸಾಮಾನ್ಯ ಮಾಹಿತಿಗಳನ್ನು ಸಂಗ್ರಹಿಸಲಾಯಿತು. ಇವರುಗಳು ಬೆಟ್ಟಗುಡ್ಡ ಮತ್ತು ಬಯಲು ಪ್ರದೇಶಗಳಲ್ಲಿ ವಾಸವಾಗಿದ್ದು ಎರಡು ಹಳ್ಳಿಗಳನ್ನು ಬಿಟ್ಟರೆ ಯಾವ ಹಳ್ಳಿಯಲ್ಲಿಯೂ ಇವರ ಜನಸಂಖ್ಯೆ ಹೆಚ್ಚಾಗಿರುವುದು ಕಂಡುಬರುವುದಿಲ್ಲ. ಮಣಿಪಾಲ್ ಕಣಿವೆಯಲ್ಲಿ ಮತ್ತು ಪುತ್ತೂರಿನಲ್ಲಿ ಮಾತ್ರ ಐದುನೂರಕ್ಕೂ ಹೆಚ್ಚು ಜನರು ವಾಸವಾಗಿದ್ದಾರೆ. ಇಲ್ಲಿನ ಕಸ್ತೂರಿ ಬಾ ವೈದ್ಯಕೀಯ ವಿದ್ಯಾಸಂಸ್ಥೆ ಈ ಜನಾಂಗದವರಿಗೆ ನಾಲ್ಕನೇ ದರ್ಜೆ ನೌಕರಿಯನ್ನು ಒದಗಿಸಿ ಕೊಟ್ಟಿರುವುದರಿಂದ ಮತ್ತು ಉಡುಪಿಯ ಪುರಸಭೆಯಲ್ಲಿ ಅನೇಕ ಕೊರಗರು ಪೌರಕಾರ್ಮಿಕರಾಗಿ ಸೇರಿ

ಸಲ್ಲಿಸುತ್ತಿರುವ ಕಾರಣ ಈ ಪ್ರದೇಶಗಳಲ್ಲಿ ಹೆಚ್ಚು ಜನರು ವಾಸವಾಗಿದ್ದಾರೆ. ಮಣಿ ಪಾಲ್ ಕಣಿವೆಯಲ್ಲಿ ಯಾರಿಗೂ ಸ್ವಂತ ನಿವೇಶನಗಳಿಲ್ಲ. ಕಣಿವೆಯ ಎಡದಂಡೆಯಲ್ಲಿ ಗುಡಿಸಲುಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ಇತರೇ ಹಳ್ಳಿಗಳಲ್ಲಿ ಈ ಜನಾಂಗದವರ ಎರಡರಿಂದ ಹತ್ತು ಕುಟುಂಬಗಳು ಇರುತ್ತವೆ. ಹತ್ತು ಕುಟುಂಬಗಳಿಗಿಂತ ಹೆಚ್ಚು ಕುಟುಂಬಗಳಿರುವ ಹಳ್ಳಿಗಳು ಬಹಳ ಕಡಿಮೆ ಇವೆ. ಕೊರಗರು ಜೀತ ಪದ್ಧತಿಯನ್ನೂ ಆಚರಣೆಯಲ್ಲಿ ಇಟ್ಟುಕೊಂಡಿದ್ದಾರೆ. ಇವರಿಗೆ ಸ್ವಂತ ನಿವೇಶನ ಅಥವ ಜಮೀನುಗಳಿಲ್ಲ. ಜಮಿನ್ದಾರನ ಮನೆಯಲ್ಲಿ ಜೀತಮಾಡಿ ಅವನ ಜಾಗದಲ್ಲಿ ಗುಡಿಸಲು ಕಟ್ಟಿಕೊಂಡು ಜೀವಿಸುತ್ತಾರೆ.

ಅವರು ಸೂರ್ಯನನ್ನು ಆರಾಧ್ಯ ದೇವರೆಂದು ಪೂಜಿಸುತ್ತಿದ್ದರಿಂದ ಇವರಿಗೆ ಕೊರಗರು ಎಂಬ ಹೆಸರು ಬಂದಿದೆ ಎಂದು ನಂಬಲಾಗಿದೆ. ಕೊರಗರ ಅರ್ಥದಲ್ಲಿ 'ಕೊರ' ಎಂದರೆ ಸೂರ್ಯನೆಂದು ಹೇಳುತ್ತಾರೆ. ತುಳು ಭಾಷೆಯಲ್ಲಿ 'ಕೊರಗ' ಎಂದರೆ ಕಾಡು ಪ್ರದೇಶದಲ್ಲಿ ವಾಸಿಸುವವರು ಎಂದರ್ಥವಿದೆ. ಕೆಲವು ಮಾನವ ಶಾಸ್ತ್ರಜ್ಞರು ಈ ಹೆಸರು ಕೊರವರಿಂದ ಬಂದಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಕೊರಗರು ಕಪ್ಪು ಒಣ್ಣದವರಾಗಿದ್ದು ದಪ್ಪತುಟಿ ಇಳಿಜಾರಾದ ಕೂದಲು ಹೊಂದಿದ್ದು ಸಾಧಾರಣ ಎತ್ತರದವರಾಗಿರುತ್ತಾರೆ. ತಲೆಯ ಹಿಂಬದಿಯಲ್ಲಿ ಗಂಟು ಹಾಕುತ್ತಾರೆ. ಗಂಡಸರು ಮೀಸೆ ಬಿಡುತ್ತಾರೆ. ತಲೆಗೆ ಅಡಿಕೆ ಗರಿಯಿಂದ ಮಾಡಿದ ಟೋಪಿಯನ್ನು ಧರಿಸುತ್ತಾರೆ. ಗಂಡಸರು ಶರಟು, ಪಂಚೆ, ವಲ್ಲಿ ಮತ್ತು ಒಳ ಉಡುಪುಗಳನ್ನು ತೊಡುತ್ತಾರೆ. ಹೆಂಗಸರು ಸೀರೆ, ಮತ್ತು ಕುಪ್ಪಸ ತೊಡುತ್ತಾರೆ ಬಳೆಯನ್ನು ಸಹ ತೊಡುತ್ತಾರೆ, ಹಣೆಗೆ ಕುಂಕುಮ ಹಚ್ಚುತ್ತಾರೆ ಮತ್ತು ಮಣಿ ಮತ್ತು ಮೂಳೆಯಿಂದ ಮಾಡಿದ ಕತ್ತಿನ ಹಾರವನ್ನು ಅಭರಣವಾಗಿ ಉಪಯೋಗಿಸುತ್ತಾರೆ. ನಾಗರಿಕರ ಸಂಪರ್ಕದಿಂದಾಗಿ ಚಿನ್ನ ಮತ್ತು ಬೆಳ್ಳಿ, ಆಭರಣಗಳನ್ನು ಮತ್ತು ಮುಖಕ್ಕೆ ಪೌಡರು ಹಚ್ಚುವುದನ್ನು ಪ್ರಾರಂಭಿಸಿದ್ದಾರೆ. ಅಡಿಕೆ ಮತ್ತು ವೀಳ್ಯದೆಲೆಯನ್ನು ಹೆಚ್ಚಾಗಿ ತಿನ್ನುತ್ತಾರೆ. ಇವರು ಸಸ್ಯಾಹಾರ ಮತ್ತು ಮಾಂಸಾಹಾರ ಎರಡನ್ನೂ ಸೇವಿಸುತ್ತಾರೆ.

ಕೊರಗರ ಉಗಮ

ಇವರ ಉಗಮಕ್ಕೆ ಮತ್ತು ಇವರ ಈಗಿನ ಸಾಮಾಜಿಕ ಸ್ಥಾನಮಾನಗಳ ಬಗ್ಗೆ ಹಲವು ದಂತ ಕಥೆಗಳು ದೊರೆತಿವೆ. ಈ ದಂತ ಕಥೆಗಳಲ್ಲಿ ಇವರ ಅನಾಗರಿಕ ಜೀವನದ ಬಗ್ಗೆಯೂ ಉಲ್ಲೇಖಗಳನ್ನು ಮಾಡಲಾಗಿದೆ. ಒಂದು ದಂತ ಕಥೆಯು ಹೀಗೆ ಹೇಳುತ್ತದೆ. "ಕೊರಗ ಜನಾಂಗದ ಮೊದಲನೆಯವನು ಬ್ರಾಹ್ಮಣ ತಾಯಿ ಮತ್ತು ಶೂದ್ರ ತಂದೆಗೆ ಜನಿಸಿದವನೆಂದು ಹೇಳಲಾಗಿದೆ. ಮತ್ತು ಅಂದಿನ ಸಮಾಜವು ಆ ರೀತಿಯ ಸಂಬಂಧವನ್ನು ಬಹಿಷ್ಕರಿಸಿತ್ತು. ಅಂಥ ಸಂಬಂಧದಿಂದ ಜನಿಸಿದವರಿಗೆ ಸಮಾಜದಲ್ಲಿ ಕೆಳದರ್ಜೆಯ ಸ್ಥಾನಮಾನಗಳನ್ನು ಕೊಡಲಾಗುತ್ತಿತ್ತು. ಈ ಕಾರಣದಿಂದ ಕೊರಗರಿಗೆ

ಗುಲಾಮಗಿರಿ ಪ್ರಾಪ್ತವಾಯಿತು ಎಂದು ನಂಬಲಾಗಿದೆ. ಎರಡನೆಯ ದಂತಕಥೆಯು ಕೊರಗ ಜನಾಂಗದವರು ಪಾಳೇಗಾರ ವಂಶಕ್ಕೆ ಸೇರಿದವರು ಮತ್ತು ಯುದ್ಧದ ಕಾರಣ ದಿಂದಾಗಿ ಈ ಜನರಿಗೆ ಕೆಳದರ್ಜೆ ದೊರೆಯಿತು ಎಂದು ಹೇಳುತ್ತದೆ. ಅದರ ಉಲ್ಲೇಖ ಈ ರೀತಿ ಇದೆ. ಅಭಿಷೇಕನೆಂಬುವನು ಕೊರಗರ ನಾಯಕನಾಗಿದ್ದನು. ಇವನು ಅನಂತಪುರದಿಂದ ತುಳುನಾಡಿಗೆ ತನ್ನ ಸೈನ್ಯದೊಂದಿಗೆ ಬಂದು ಅಲ್ಲಿ ತುಳುನಾಡನ್ನು ಆಳು ತ್ತಿದ್ದ. ಕದಂಬ ರಾಜವಂಶಕ್ಕೆ ಸೇರಿದ ರಾಜ ಮಯೂರವರ್ಮನನ್ನು ಮಂಜೇಶ್ವರ ವನ್ನು ಆಳುತ್ತಿದ್ದ ವೀರವರ್ಮನ ಮಗನಾದ ಅಂಗಾರವರ್ಮನನ್ನು ಸೋಲಿಸಿ ತುಳು ನಾಡನ್ನು ವಶಪಡಿಸಿಕೊಂಡು ಕೆಲವು ವರ್ಷಗಳ ಕಾಲ ರಾಜ್ಯವಾಳಿದನು. ಅನಂತರ ಮಯೂರವರ್ಮನ ಮಗನಾದ ಲೋಕಾದಿತ್ಯರಾಯನು ಅಭಿಷೇಕನನ್ನು ಮತ್ತು ಆತನ ಸೈನ್ಯವನ್ನು ಸೋಲಿಸಿ ತುಳುನಾಡನ್ನು ವಶಪಡಿಸಿಕೊಂಡನು. ಅಭಿಷೇಕನ ಸೈನ್ಯವನ್ನು ಸೆರೆಹಿಡಿದಟ್ಟ ಅವರ ಮೇಲೆ ಗುಲಾಮಗಿರಿಯನ್ನು ಹೊರಿಸಲಾಯಿತು ಎಂದು ಹೇಳುತ್ತಾರೆ.

ಅಂದಿನಿಂದ ಇಂದಿನವರೆವಿಗೂ ಈ ಜನರು ಗುಲಾಮ ವೃತ್ತಿಯಲ್ಲಿಯೇ ಮುಂದು ವರಿಯುತ್ತಿದ್ದಾರೆ. ಮೂರನೆಯ ದಂತಕಥೆಯು ಈ ರೀತಿ ಹೇಳುತ್ತದೆ. ಕೊರಗರು ಚ ಂಡಾಲವಂಶಕ್ಕೆ ಸೇರಿದವರು. ಇವರ ರಾಜ ಅಭಿಷೇಕ. ಇವನು ಮಯೂರವರ್ಮನ ಮಗನಾದ ಲೋಕಾದಿತ್ಯ ರಾಜನ ಮಗಳಾದ ರಾಜಕುಮಾರಿ ಕನಕವತಿಯನ್ನು ಬಲ ತ್ಕಾರದಿಂದ ಮದುವೆಯಾಗಲು ಒಪ್ಪಿಸಿದನು. ಮದುವೆಯ ಸಂದರ್ಭದಲ್ಲಿ ಅಭಿಷೇಕ ನಿಗೂ ಮತ್ತು ಲೋಕಾದಿತ್ಯರಾಜನಿಗೂ ಯುದ್ಧವಾಗಿ ಯುದ್ಧದಲ್ಲಿ ಅಭಿಷೇಕನು ಮತ್ತು ಆತನ ಸೈನ್ಯದ ಕೆಲವರು ಮರಣ ಹೊಂದಿದರು, ಉಳಿದ ಕೆಲವರನ್ನು ಕಾಡುಪಾಲು ಮಾಡಲಾಯಿತು ಮತ್ತು ಇನ್ನು ಕೆಲವರನ್ನು ಗುಲಾಮರನ್ನಾಗಿ ಮಾಡಲಾಯಿತು.

ಈ ದಂತಕಥೆಗಳು ಏನೇ ಹೇಳಿದರೂ ಈಗಿನ ಕೊರಗರ ಜೀವನ ಕ್ರಮ ಮತ್ತು ಅವರಿಗಿರುವ ಸಾಮಾಜಿಕ ಸ್ಥಾನಮಾನಗಳನ್ನು ಅಧ್ಯಯನ ಮಾಡಿದರೆ ಈ ದಂತಕಥೆ ಗಳೆಲ್ಲವು ನಿಜವಿರಬಹುದೇ ಎಂಬ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಇಂದಿನ ಯಾವ ಕೊರಗನಿಗೂ ಇವರ ಹಿನ್ನೆಲೆ ತಿಳಿದಿಲ್ಲ. ಕೇಳಿದರೆ ನಾವು ಒಂದು ಜಾತಿಯ ಕಾಡುಜನ ರೆಂದು ಹೇಳುತ್ತಾರೆ.

ಕೊರಗರ ಪಂಗಡಗಳು

ಈ ಕೊರಗ ಆದಿವಾಸಿ ಸಮಾಜದಲ್ಲಿ ಅನೇಕ ಪಂಗಡಗಳಿವೆ. ಇವರಲ್ಲಿ ಒಂದು ಪಂಗಡದವರನ್ನು ಹಂಡೆ ಕೊರಗರೆಂದು ಕರೆಯುತ್ತಾರೆ. ಇವರ ಹೆಸರೇ ಸೂಚಿಸುವಂತೆ ಈ ಕೊರಗರು ಕೊರಳಿಗೆ ಒಂದು ಹಂಡೆಯನ್ನು ನೇತುಹಾಕಿಕೊಂಡು ಸಾರ್ವಜನಿಕ ರಸ್ತೆ ಯಲ್ಲಿ ಸಂಚರಿಸುವಾಗ ಎಂಜಲನ್ನು ಉಗಳ ಬೇಕೆನಿಸಿದಾಗ ಹಂಡೆಯಲ್ಲಿ ಉಗಳಬೇಕಾ ಗಿತ್ತು. ಅಂದಿನ ಕಾಲದಲ್ಲಿ ಇವರು ರಸ್ತೆಯ ಮೇಲೆ ಉಗಳಿದರೆ ರಸ್ತೆ ಅಪವಿತ್ರ

ವಾಗುತ್ತಿತ್ತು ಎಂದು ನಂಬಲಾಗಿತ್ತು. ಇತ್ತೀಚಿನ ಬದಲಾವಣೆಯಿಂದ ಮತ್ತು ನಾಗರೀಕರ ಸಂಪರ್ಕದಿಂದ ಈ ಪದ್ಧತಿ ಮಾಯವಾಗಿದೆ. ಅವರನ್ನು ಯಾವ ಪಂಗಡಕ್ಕೆ ಸೇರಿವವರೆಂದು ಕೇಳಿದರೇ ನಾವು ಹಂಡೆ ಕೊರವರೆಂದು ಹೆಸರಿಸಿಕೊಳ್ಳುತ್ತಾರೆ. ಇವರಲ್ಲಿ ಇತರ ಎರಡು ಮುಖ್ಯ ಪಂಗಡಗಳಿವೆ. ಅವುಗಳು ವಸ್ತ್ರ ಕೊರಗರು ಮತ್ತು ಸೊಪ್ಪು ಕೊರಗರು ಅವರುಗಳ ಹೆಸರೇ ಸೂಚಿಸುವಂತೆ ವಸ್ತ್ರ ಧರಿಸುವವರು ವಸ್ತ್ರ ಕೊರಗರು ಮತ್ತು ಸೊಪ್ಪು ಉಡುಪು ಧರಿಸುವರು ಸೊಪ್ಪು ಕೊರಗರು. ಸೊಪ್ಪು ಕೊರಗರು ಸೊಪ್ಪು ಉಡುಪು ತೊಡುವುದನ್ನು ನಿಲ್ಲಿಸಿದ್ದಾರೆ. ಇವರು ಈ ಸೊಪ್ಪು ಉಡುಪನ್ನು ದೇವರನ್ನು ಪ್ರಾರ್ಥಿಸಿ ಪಡೆದುಕೊಂಡರು ಎಂಬ ಉಲ್ಲೇಖಗಳಿವೆ. ಗೋತ್ರದ ಆಧಾರ ಗಳ ಮೇಲೆ ಬಂಜಣ್ಣನ ಪಂಗಡ, ಕುಮಾರಣ್ಣನ ಪಂಗಡ ಮುನಾರಣ್ಣನ ಪಂಗಡ ಗಳೆಂತಲು ಅನೇಕ ಪಂಗಡಗಳಿವೆ ಈ ಎಲ್ಲಾ ಪಂಗಡದವರು ಕೆಲವು ವಿಶೇಷ ಸಂದರ್ಭ ಗಳಲ್ಲಿ ಜೊತೆಗೂಡಿ ಆರ್ಥಿಕ ವಿನಿಮಯ ಮತ್ತು ಸಹಕಾರ ಮುಂತಾದವುಗಳನ್ನು ಪಡೆದು ಕೊಳ್ಳುತ್ತಾರೆ. ಇವರು ಒಳ ಬಾಂಧವ್ಯ ಬೆಳಸಿಕೊಂಡು ಬರುವ ಕಾರಣದಿಂದ ಹೊರ ಬಾಂಧವ್ಯ ಕಂಡುಬರುತ್ತಿರಲಿಲ್ಲ. ಇವರಲ್ಲಿ ಪಿತೃ ಪ್ರಧಾನ ಕುಟುಂಬ ಪದ್ಧತಿ ಅಸ್ತಿತ್ವ ದಲ್ಲಿದ್ದು ಕೆಲವು ಲೇಖನಗಳಲ್ಲಿ ಮಾತೃ ಪ್ರಧಾನ ಕುಟುಂಬ ಪದ್ಧತಿಯು ಜಾರಿಯಲ್ಲಿತ್ತು ಎಂದು ಉಲ್ಲೇಖಿಸಲಾಗಿದೆ.

ಕೊರಗರ ಆರ್ಥಿಕ ಜೀವನ

ಆರ್ಥಿಕವಾಗಿ ಈ ಜನಾಂಗದವರು ಬಹಳ ಹಿಂದುಳಿದಿದ್ದು ಅನಾಗರಿಕ ಜೀವನ ವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಡಾ. ಅಯ್ಯಪ್ಪನವರು ಒಂದು ಲೇಖನದಲ್ಲಿ ಇವರ ಆರ್ಥಿಕ ಜೀವನ ಕುರಿತು ಈ ರೀತಿ ಮಾಹಿತಿ ನೀಡಿದ್ದಾರೆ; "ಕೊರ ಗರು ಕಾಡುವಾಸಿಗಳಲ್ಲಿ ಅಥವ ಪ್ರಾಚೀನ ಸ್ಥಿತಿಯಲ್ಲಿರುವ ಆದಿವಾಸಿಗಳಲ್ಲಿ ಬಹಳ ಹಿಂದುಳಿದವರಾಗಿದ್ದಾರೆ." ಈ ವ್ಯಾಖ್ಯೆಯನ್ನು ತುಲನಾತ್ಮಕವಾಗಿ ನೋಡಿದಾಗ ಕೊರಗರು ಅತ್ಯಂತ ಹಿಂದುಳಿದಿದ್ದಾರೆ ಎಂದು ನಂಬಬೇಕಾಗುತ್ತದೆ. ಇವರ ಕುಲ ಕಸಬು ಬುಟ್ಟಿ ಹೆಣೆಯುವುದು, ತಾಳೆಗರಿ, ಬಿದಿರು ಮತ್ತು ಮರದ ತೊಗಟೆಗಳನ್ನು ಉಪ ಯೋಗಿಸಿ ಬುಟ್ಟಿ ಮಾಡಿ ಬಂದ ಆದಾಯದಿಂದ ಜೀವನ ಸಾಗಿಸುವುದನ್ನು ಬಹಳ ಕಾಲ ದಿಂದಲೂ ಅನುಸರಿಸಿಕೊಂಡು ಬಂದಿದ್ದಾರೆ. ಇತ್ತೀಚೆಗೆ ಈ ವೃತ್ತಿಯನ್ನು ಕೈಬಿಡುತ್ತಿ ದ್ದಾರೆ. ಬುಟ್ಟಿ ಮಾಡಲು ಬೇಕಾದ ವಸ್ತುಗಳಾದ ತಾಳೆಗರಿ, ಬಿದಿರು ಮತ್ತು ಮರದ ತೊಗಟೆಗಳು ಸಿಗದಿದ್ದ ಕಾರಣ, ಆ ವೃತ್ತಿಯಿಂದ ಕಡಿಮೆ ಆದಾಯ ದೊರೆಯುವುದ ರಿಂದಲೂ ಮತ್ತು ಕಾರ್ಖಾನೆಗಳು ತಯಾರಿಸುವ ಪ್ಲಾಸ್ಟಿಕ್ ಬುಟ್ಟಿಗಳು ಕಡಿಮೆ ಬೆಲೆಗೆ ದೊರೆತು ಹೆಚ್ಚು ಬಾಳಿಕೆ ಬರುವ ಕಾರಣ ಅವರು ಈ ವೃತ್ತಿಯನ್ನು ಬಿಡಬೇಕಾಗಿದೆ. 50–60 ವರ್ಷ ತುಂಬಿದವರು ಮತ್ತು ಹೊರಗಡೆ ಹೋಗಿ ಕೂಲಿ ಮಾಡಿ ಜೀವಿಸಲು ಸಾಧ್ಯವಿಲ್ಲದವರು ಮತ್ತು ಕೆಲವು ಹೆಂಗಸರು ಮಾತ್ರ ಇನ್ನೂ ಈ ವೃತ್ತಿಯಲ್ಲಿ ತೊಡ

ಗಿದ್ದಾರೆ. ಹೆಚ್ಚಾಗಿ ಕೊರಗರು ಕೂಲಿ ಮಾಡಿ ಮತ್ತು ಭಿಕ್ಷೆ ಎತ್ತಿ ಜೀವಿಸುವುದನ್ನು ಅಭ್ಯಸಿಸಿಕೊಂಡಿದ್ದಾರೆ. ಈ ಎರಡು ರೀತಿಯ ಕಸಬುಗಳು ಇವರ ಮುಖ್ಯ ಕಸಬುಗಳಾಗಿವೆ. ಕೆಲವು ಲೇಖನಗಳಲ್ಲಿ ಇವರ ಜೀವನದ ಬಗ್ಗೆ ಈ ರೀತಿ ಹೇಳಲಾಗಿದೆ. "ಇವರನ್ನು ಕಾಯಂ ನೌಕರಿ ಅಥವ ವ್ಯವಸಾಯ ಮಾಡಿ ಜೀವಿಸಿ ಎಂದರೆ, ನಾವು ಭಿಕ್ಷೆ ಎತ್ತಿ ಜೀವಿಸುತ್ತೇವೆ ಎಂದು ಉತ್ತರಿಸುತ್ತಾರೆ." ಭಿಕ್ಷೆ ಎತ್ತಿ ತಿನ್ನುವ ಅಭ್ಯಾಸವನ್ನು ಇಂದಿಗೂ ಮುಂದುವರಿಸಿಕೊಂಡಿದ್ದಾರೆ. ಇದರ ಜೊತೆಗೆ ಎಂಜಲೆಲೆಯಲ್ಲಿ ಬಿಸಾಡಿದ ಅನ್ನವನ್ನು ಕೂಡಿಸಿ ಒಣಗಿಸಿ ಉಪಯೋಗಿಸುವುದು ಇವರ ಅಭ್ಯಾಸದಲ್ಲಿದೆ. ಇದನ್ನು ದೇವರ ಪ್ರಸಾದವೆಂದು ಸ್ವೀಕರಿಸುತ್ತಾರೆ. ಸ್ವಂತ ಜಮೀನು ಹೊಂದಿದ್ದು ವ್ಯವಸಾಯ ವೃತ್ತಿಯಲ್ಲಿ ನಿರತರಾಗಿರುವ ಕೊರಗರು ಅತಿ ವಿರಳ. ಜಮೀನ್ದಾರರ ಜಮೀನಿನಲ್ಲಿ ವ್ಯವಸಾಯ ಮಾಡಿ ಕೊಟ್ಟ ಕೂಲಿ ಮತ್ತು ಧಾನ್ಯಗಳಿಂದ ಜೀವನ ಸಾಗಿಸುತ್ತಿದ್ದಾರೆ. ಇತ್ತೀಚೆಗೆ ಕುರಿ, ಹಂದಿ, ಕೋಳಿ ಜೇನು ಮುಂತಾದವುಗಳನ್ನು ಸಾಕಲು ಪ್ರಾರಂಭಿಸಿದ್ದಾರೆ. ಬೇಟೆಯಾಡುವುದು ಇವರ ಒಂದು ವೃತ್ತಿ ; ಕಾಡುಗಳಲ್ಲಿ ಸಣ್ಣ ಪ್ರಾಣಿಗಳನ್ನು ಮತ್ತು ಪಕ್ಷಿಗಳನ್ನು ಬೇಟೆಯಾಡಿ ಅವುಗಳನ್ನು ಮಾರಿ ಬಂದ ಹಣದಿಂದ ದವಸ ಧಾನ್ಯಗಳನ್ನು ಕೊಂಡು ಜೀವಿಸುವುದನ್ನು ಕೆಲವು ಕೊರಗರು ಅಭ್ಯಸಿಸಿಕೊಂಡು ಬರುತ್ತಿದ್ದಾರೆ.

ಈ ಕೊರಗ ಆದಿವಾಸಿಗಳು ಊರ ಹೊರಗಡೆ ತಡಿಕೆ ಗುಡಿಸಲುಗಳನ್ನು ನಿರ್ಮಿಸಿಕೊಂಡು ಜೀವಿಸುತ್ತಿದ್ದಾರೆ. ಹಿಂದುಗಳು ಬ್ರಿಟಿಷರ ಆಳ್ವಿಕೆಯ ಕಾಲದಿಂದಲೂ ಇವರ ಮೇಲೆ ಕೆಲವು ನಿಯಮಗಳನ್ನು ವಿಧಿಸಿದ್ದರು ಇವರು ತಡಿಕೆ ಗುಡಿಸಲುಗಳಲ್ಲಿಯೇ ವಾಸವಾಗಿರಬೇಕು, ಮಣ್ಣು ಗೋಡೆಯ ಗುಡಿಸಲುಗಳಲ್ಲಿ ವಾಸಿಸುವುದನ್ನು ನಿಷೇಧಿಸಲಾಗಿತ್ತು. ಒಡೆದ ಮಣ್ಣಿನ ಪಾತ್ರೆಯಲ್ಲಿ ಅಡಿಗೆ ಮಾಡಿ ಊಟ ಮಾಡಬೇಕಾಗಿತ್ತು. ಹಿಂದುಗಳ ಪೂರ್ವಾನುಮತಿ ಇಲ್ಲದೆ ಊರು ಪ್ರವೇಶಿಸುವುದನ್ನು ಬಹಿಷ್ಕರಿಸಲಾಗಿತ್ತು. ಇವರು ಊರು ಪ್ರವೇಶಿಸುವುದನ್ನು ತಡೆಗಟ್ಟಲು ಪ್ರತಿ ಹಳ್ಳಿಯಲ್ಲಿಯು ಕಾವಲುಗಾರರನ್ನು ನೇಮಿಸುತ್ತಿದ್ದರು. ಇತ್ತೀಚಿನ ಆಧುನಿಕ ಬೆಳವಣಿಗೆಯಿಂದಲೂ ಮತ್ತು ಮಾನವೀಯ ದೃಷ್ಟಿಯಿಂದಲೂ ಈ ನಿಯಮಗಳನ್ನು ಇವರ ಮೇಲೆ ವಿಧಿಸುತ್ತಿಲ್ಲ. ಆದರೆ ಇಂದಿಗೂ ಕೊರಗರು ಊರ ಹೊರಗಡೆಯೇ ವಾಸಿಸಬೇಕಾಗಿವೆ. ಇವರ ಗುಡಿಸಲುಗಳು ಎಂಟು ಅಡಿ ಉದ್ದ ಹತ್ತು ಅಡಿ ಅಗಲವಿದ್ದು ಮೇಲ್ಛಾವಣಿ ಮರದ ಎಲೆಗಳಿಂದಲೂ ಮತ್ತು ಕಾಡು ಹುಲ್ಲುಗಳಿಂದಲೂ ಮುಚ್ಚಿರುತ್ತವೆ. ಒಂದೇ ಬಾಗಿಲು ಇರುತ್ತದೆ. ಈ ಜಾಗದಲ್ಲಿ ಅಡಿಗೆ, ಊಟ ಕೈಕಸಬು ಮಾಡುವುದು ಮತ್ತು ಮಲಗುವುದು ಎಲ್ಲವು ನಡೆಯಬೇಕಾಗುತ್ತದೆ. ಈ ಕಾರಣದಿಂದಾಗಿ ಕೇರಳದಲ್ಲಿ ಕೊರಗರು ಅಪರಾಧವೆಸಗುವುದು ಸಾಮಾನ್ಯವಾಗಿದೆ. ಇವರುಗಳ ಮನೆಯಲ್ಲಿ ಮಣ್ಣಿನ ಮಡಿಕೆಗಳು, ಹಿತ್ತಾಳೆ ಪಾತ್ರೆಗಳು ಮತ್ತು ಹಲವು ಕಂಚಿನ ಪಾತ್ರೆಗಳನ್ನು ಬಿಟ್ಟರೆ ಬೆಲೆಬಾಳುವ ವಸ್ತುಗಳು ಕಾಣಿಸಿಕೊಳ್ಳುವುದಿಲ್ಲ. ಇವರ ಆರ್ಥಿಕ ಜೀವನವು ಬಹಳ ಹೀನ ಸ್ಥಿತಿಯಲ್ಲಿವೆ.

ವಿವಾಹ

ಕೊರಗ ಆದಿವಾಸಿ ಜನಾಂಗದಲ್ಲಿ ಒಳ ಬಾಂಧವ್ಯ ಅಸ್ತಿತ್ವದಲ್ಲಿದ್ದು ಇಪ್ಪತ್ತು ವಯಸ್ಸು ತುಂಬಿದ ಹುಡುಗರಿಗೆ, ಹನ್ನೆರಡು ವಯಸ್ಸು ತುಂಬಿದ ಹುಡುಗಿಯರಿಗೆ ಮದುವೆ ಮಾಡುವ ಪದ್ಧತಿ ವಾಡಿಕೆಯಲ್ಲಿದೆ. ಮದುವೆಯ ಸಿದ್ಧತೆಯನ್ನು ವರನ ಕಡೆಯವರು ಒಂದು ವರ್ಷ ಮೊದಲಿನಿಂದಲೇ ಪ್ರಾರಂಭಿಸಿರುತ್ತಾರೆ. ಹೆಚ್ಚಾಗಿ ಹಣ ಕೂಡಿಸುವುದು, ಧಾನ್ಯ ಸಂಗ್ರಹಿಸುವುದು ಮತ್ತು ಸುಂದರವಾದ ಹುಡುಗಿಯನ್ನು ನೋಡುವುದು ಈ ಸಿದ್ಧತೆಗಳಲ್ಲಿ ಸೇರಿರುತ್ತವೆ. ಕೊರಗರು ಹೆಚ್ಚಾಗಿ ತಂದೆಯ ತಂಗಿ ಮಗಳನ್ನು ಮತ್ತು ತಾಯಿಯ ಅಣ್ಣ ಅಥವ ತಮ್ಮನ ಮಗಳನ್ನು ಮದುವೆಯಾಗುತ್ತಾರೆ. ಅಥವ ಬೇರೆ ಗೋತ್ರಕ್ಕೆ ಸೇರಿದವರನ್ನು ಮದುವೆಯಾಗುತ್ತಾರೆ. ಮದುವೆಗೆ ಮೊದಲೆ ಹೆಣ್ಣಿನ ಮನೆಯವರನ್ನು ಸಂದರ್ಶಿಸಿ ಅವರ ಒಪ್ಪಿಗೆ ಪಡೆದ ನಂತರ ಮದುವೆಯನ್ನು ವ್ಯವಸ್ಥೆ ಮಾಡುತ್ತಾರೆ. ಜ್ಯೋತಿಷ್ಯನಿಂದ ಮದುವೆಯ ಶುಭದಿನವನ್ನು ತಿಳಿದು ನಿಶ್ಚಯಿಸುತ್ತಾರೆ. ಹೆಚ್ಚಾಗಿ ರವಿವಾರದಂದು ಮದುವೆ ಮಾಡುತ್ತಾರೆ. ಮದುವೆಗೆ ಒಂದು ದಿನವಿದೆ ಎನ್ನುವಾಗ ನಂಟರು ಮತ್ತು ಸಂಬಂಧಿಕರನ್ನು ಬರಮಾಡಿಕೊಳ್ಳುತ್ತಾರೆ. ಮದುವೆಯು ವಧುವಿನ ಗೃಹದಲ್ಲಿ ನಡೆಯುತ್ತದೆ. ವರನ ಕಡೆಯವರು ಹನ್ನೆರಡು ರೂಪಾಯಿ ವಧು ಶುಲ್ಕ ಕೊಡಬೇಕು. ಹಿಂದಿನ ಕಾಲದಲ್ಲಿ ಎರಡು ರೂಪಾಯಿಗಳನ್ನು ಮಾತ್ರ ಕೊಡಬೇಕಾಗಿತ್ತು. ವಧು-ವರರಿಗೆ ಸ್ನಾನ ಮಾಡಿಸಿ ಹೊಸಬಟ್ಟೆ ಮತ್ತು ಚಿನ್ನ ಬೆಳ್ಳಿ ಆಭರಣಗಳನ್ನು ತೊಡಿಸಿ ಹೊಸ ಚಾಪೆಯ ಮೇಲೆ ಕೂರಿಸುತ್ತಾರೆ. ಇವರ ಮುಂದೆ ಮೂರು ಅನ್ನದ ಮುದ್ದೆಗಳನ್ನು ಇಡುತ್ತಾರೆ. ವರನು ವಧುವಿನ ಕೊರಳಿಗೆ ಮಾಂಗಲ್ಯ ಸರವನ್ನು ಕಟ್ಟುತ್ತಾನೆ. ಹಿಂದಿನ ಕಾಲದಲ್ಲಿ ಕಪ್ಪು ಮಣಿಗಳಿಂದ ಮಾಡಿದ ದಾರ ಮಣಿಯನ್ನು ಕಟ್ಟಬೇಕಾಗಿತ್ತು. ಆಗಮಿಸಿದ ಬಂಧುಗಳು ಮತ್ತು ನಂಟರು ವಧುವರರಿಗೆ ಅಕ್ಕಿ ಕಾಳುಗಳನ್ನು ಚೆಲ್ಲುವುದರಿಂದ ಅವರಿಗೆ ಶುಭ ಕೋರುವುದರ ಮೂಲಕ ಆಶೀರ್ವದಿಸುತ್ತಾರೆ. ಈ ಸಂದರ್ಭದಲ್ಲಿ ವಿಶೇಷ ಊಟದ ವ್ಯವಸ್ಥೆ ಇರುತ್ತದೆ.

ವಿವಾಹ ವಿಚ್ಛೇದನ

ಕೊರಗ ಆದಿವಾಸಿಗಳಲ್ಲಿ ಹೆಂಡತಿ ಬಿಡುವುದು ಸರ್ವ ಸಾಮಾನ್ಯ. ಹಿಂದಿನ ಕಾಲದಲ್ಲಿ ಹೆಂಡತಿಯನ್ನು ಬಿಡುವುದಕ್ಕೆ ಯಾವ ನಿಯಮವು ಇರಲಿಲ್ಲ. ಗಂಡನು ಹೆಂಡತಿಯ ತಂದೆ ತಾಯಿಗೆ ವಿಷಯ ತಿಳಿಸಿದರೆ ಅವನು ಹೆಂಡತಿಯನ್ನು ಬಿಟ್ಟನು ಎಂದು ನಂಬುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಮಾತ್ರ ವಿವಾಹ ವಿಚ್ಛೇದನಗಳು ನಡೆಯುತ್ತಿದ್ದವು. ಉದಾ : ಹೆಂಡತಿಯು ಬಂಜೆಯಾದಾಗ, ಅನಾರೋಗ್ಯದಲ್ಲಿದ್ದಾಗ, ಲೈಂಗಿಕ ಅಪರಾಧ ವೆಸಗಿದಾಗ ಹೆಂಡತಿ ಬಿಡುವ ವ್ಯವಸ್ಥೆ ಇತ್ತು. ಇಂದಿಗೂ ಇವರಲ್ಲಿ ಈ ಎಲ್ಲಾ ಕಾರಣಗಳ ಜೊತೆಗೆ ಅವಳು ಸರಿಯಾಗಿ ದುಡಿಮೆ ಮಾಡದಿದ್ದರೆ ತ್ಯಜಿಸುವುದು ಕಂಡುಬರುತ್ತದೆ.

ಕೊರಗ ಜನಾಂಗದವರು ಲೈಂಗಿಕ ಅಪರಾಧವನ್ನು ಸಹಿಸುವುದಿಲ್ಲ. ಹಿಂದಿನ ಕಾಲದ ಕೊರಗರು ಲೈಂಗಿಕ ಅಪರಾಧವೆಸಗಿದ ಹೆಂಗಸಿಗೆ ಘೋರ ಶಿಕ್ಷೆ ವಿಧಿಸುತ್ತಿದ್ದರು. ಲೈಂಗಿಕ ಅಪರಾಧ ಮಾಡಿಲ್ಲ ಎಂಬುದನ್ನು ಸಾಬೀತು ಪಡಿಸಲು ಅವಳು ಏಳು ಉರಿಯುತ್ತಿರುವ ಗುಡಿಸಲುಗಳನ್ನು ದಾಟಿ ಬರಬೇಕಾಗಿತ್ತು. ದಾಟುವಾಗ ಮರಣ ಹೊಂದಿದರೆ ಅವಳು ಅಪರಾಧವೆಸಗಿದ್ದಾಳೆಂದು ನಂಬುತ್ತಿದ್ದರು. ಲೈಂಗಿಕ ಅಪರಾಧ ಮಾಡುವಾಗ ಯಾರಾದರೂ ನೋಡಿದ್ದು ಅದು ನಿಜವೆಂದು ತಿಳಿದು ಬಂದಲ್ಲಿ ಅಂಥವಳನ್ನು ಒಂದು ಗುಡಿಸಲಿನಲ್ಲಿ ಕೂಡಿಟ್ಟು ಬೆಂಕಿ ಹಚ್ಚುವುದರ ಮೂಲಕ ಅವಳನ್ನು ಸಾಯಿಸುತ್ತಿದ್ದರು. ಇತ್ತೀಚಿನ ನಾಗರಿಕ ಬೆಳವಣಿಗೆಯಿಂದಾಗಿ ಈ ಪದ್ಧತಿಯಲ್ಲಿ ಬದಲಾವಣೆಯನ್ನು ತರಲಾಗಿದೆ. ಲೈಂಗಿಕ ಅಪರಾಧವೆಸಗಿದ ಗಂಡಸು ಮತ್ತು ಹೆಂಗಸರನ್ನು ಒಂದುಗೂಡಿಸಲು ಪ್ರಯತ್ನಿಸುತ್ತಾರೆ. ಮತ್ತು ದಂಡ ವಿಧಿಸುವುದರ ಮೂಲಕ ಶಿಕ್ಷಿಸುತ್ತಾರೆ. ವಿಧವಾ ವಿವಾಹವು ಇತ್ತೀಚೆಗೆ ಈ ಜನಾಂಗದಲ್ಲಿ ಕಂಡುಬರುತ್ತದೆ. ಈ ವಿವಾಹವು ಸಾಮಾನ್ಯ ಮದುವೆಯ ರೂಪದಲ್ಲಿದ್ದರೂ ಕೂಡಾವಳಿಯ ರೂಪದಲ್ಲಿರುತ್ತದೆ. ಗಂಡನನ್ನು ಕಳೆದುಕೊಂಡ ಹೆಂಗಸನ್ನು ಹೆಂಡತಿಯನ್ನು ಕಳೆದುಕೊಂಡ ಗಂಡಸಿನೊಂದಿಗೆ ವಿವಾಹ ಮಾಡುತ್ತಾರೆ. ಗಂಡಸು ಮದುವೆಯಾಗದ ಹುಡುಗಿಯನ್ನು ಮದುವೆಯಾಗಬಹುದು. ಆದರೆ ವಿಧವೆ ಮದುವೆ ಆಗದೆ ಇರುವ ಹುಡುಗನನ್ನು ಮದುವೆಯಾಗುವುದನ್ನು ನಿಷೇಧಿಸಲಾಗಿದೆ. ಇವರಲ್ಲಿ ಬಹುಪತ್ನಿತ್ವವು ಕೆಲವರಲ್ಲಿ ಕಂಡು ಬರುತ್ತದೆ. ಬಹುಪತಿತ್ವವು ಅಸ್ತಿತ್ವದಲ್ಲಿಲ್ಲ. ಏಕಪತ್ನಿತ್ವವು ಹೆಚ್ಚಾಗಿ ಕಂಡುಬರುತ್ತವೆ.

ಜನನ ಸಂಸ್ಕಾರ

ಮೊದಲನೆಯ ಹೆರಿಗೆಯು ಆಕೆಯ ತಾಯಿಯ ಮನೆಯಲ್ಲಿ ನಡೆಯುತ್ತದೆ ಅವಳ ಸಹಾಯಕ್ಕೆ ತಾಯಿ ಅಥವ ಹಿರಿಯ ಹೆಂಗಸರು ಇರುತ್ತಾರೆ. ಹೆರಿಗೆಯ ಸ್ಥಳಕ್ಕೆ ಗಂಡಸರ ಪ್ರವೇಶವನ್ನು ನಿಷೇಧಿಸಲಾಗಿದೆ. ಹೊಟ್ಟೆ ದೊಡ್ಡದಿದ್ದರೆ ಗಂಡು ಮಗು ಜನನವಾಗುತ್ತದೆಂದು ಸಣ್ಣಗಿದ್ದರೆ ಹೆಣ್ಣು ಮಗು ಜನನವಾಗುತ್ತದೆಂದು ನಂಬುತ್ತಾರೆ. ಮಗು ಜನಿಸಿದ ಎಂಟನೇ ದಿನಕ್ಕೆ ನಾಮಕರಣ ಮಾಡುತ್ತಾರೆ. ಈ ಜನಾಂಗದವರು ಕೊಡುವ ಹೆಸರುಗಳು ಗ್ರಹಗಳಿಗೆ ಸಂಬಂಧಿಸಿರುತ್ತವೆ. ಉದಾ : ಮಗು ಸೋಮವಾರ ಜನಿಸಿದರೆ ಅವನಿಗೆ 'ಟೋಮ' ಎಂದು ಹೆಸರಿಸುತ್ತಾರೆ. ತುಳು ಭಾಷೆಯಲ್ಲಿ ಟೋಮ ಎಂದರೆ ಸೋಮ ಎಂದರ್ಥವಿದೆ. ಮಂಗಳವಾರ ಜನಿಸಿದರೆ 'ಅಂಗಾರ'ನೆಂದು ಗುರುವಾರ ಜನಿಸಿದರೆ ಗೊರವನೆಂದು ಹೆಸರಿಸುತ್ತಾರೆ. ಅವರುಗಳ ಹೆಸರಿನ ಮುಂದೆ ನಾಯಕ ಎಂದು ಹೆಸರಿಸಿಕೊಳ್ಳುವುದು ಕಂಡುಬರುತ್ತದೆ. ಇತ್ತೀಚಿನ ಬದಲಾವಣೆಯಿಂದಾಗಿ ಆಧುನಿಕ ಹೆಸರುಗಳನ್ನು ಸಹ ಕೊಡುತ್ತಿದ್ದಾರೆ.

ಸೂತಕ ದಿನಗಳು

ಈ ಜನಾಂಗದವರು ಕೆಲವು ದಿನಗಳನ್ನು ಸೂತಕ ದಿನಗಳೆಂದು ಆಚರಿಸುತ್ತಾರೆ. ಜನನವಾದಾಗ, ಹುಡುಗಿಯರು ಮೈನೆರೆದಾಗ, ಹೆಂಗಸರು ಮುಟ್ಟಾದಾಗ ಮತ್ತು ಸಾವು ಸಂಭವಿಸಿದಾಗ ಸೂತಕ ದಿನಗಳನ್ನು ಆಚರಿಸುತ್ತಾರೆ. ಸಾವು ಸಂಭವಿಸಿದಾಗ ಈ ದಿನಗಳನ್ನು ಬಹಳ ನಿಯಮಗಳನ್ನು ಪಾಲಿಸುವುದರ ಮೂಲಕ ಆಚರಿಸುತ್ತಾರೆ. ಹೆಚ್ಚಾಗಿ ಐದು ದಿನಗಳು ಇರುತ್ತವೆ, ಸಾವು ಸಂಭವಿಸಿದಾಗ ಮಾತ್ರ 11 ದಿನಗಳಿರುತ್ತವೆ. ಈ ದಿನಗಳಲ್ಲಿ ಮುಟ್ಟಾದ ಹೆಂಗಸು, ಮೈ ನೆರೆದ ಹುಡುಗಿ ಮತ್ತು ಜನನ ನೀಡಿದ ತಾಯಿ ಊರ 'ಹೊರಗಡೆ ನಿರ್ಮಿಸಿರುವ ಗುಡಿಸಿಲಿನಲ್ಲಿ ವಾಸವಾಗಿರಬೇಕು. ಮನೆ ದೇವರಿಗೆ ವಿಶೇಷ ಪೂಜೆ ಸಲ್ಲಿಸುವುದರ ಮೂಲಕ ಸೂತಕ ನಿವಾರಣೆಯಾಯಿತು ಎಂದು ತಿಳಿಯುತ್ತಾರೆ.

ಧಾರ್ಮಿಕ ಜೀವನ

ಈ ಕೊರಗ ಆದಿವಾಸಿಗಳು ಹಿಂದೂ ಧರ್ಮಕ್ಕೆ ಸೇರಿದವರೆಂದು ಹೆಸರಿಸಿಕೊಳ್ಳುತ್ತಾರೆ. ಇವರ ಜೊತೆಗೆ ಅವರದೇ ಆದ ಒಂದು ಧರ್ಮವು ಇದೆ. ಇದಕ್ಕೆ ಸರಿಯಾದ ಹೆಸರನ್ನು ಕೇಳಿದರೆ 'ಕೊರಗ ಧರ್ಮ' ಎಂದು ಹೇಳುತ್ತಾರೆ. ಇವರ ಆರಾಧ್ಯದೇವರು ಸೂರ್ಯ. ಹಿಂದಿನ ಕಾಲದಲ್ಲಿ ದೇವಸ್ಥಾನಗಳಿಲ್ಲದಿದ್ದ ಕಾರಣ ಕಲ್ಲಿನ ವಿಗ್ರಹಗಳನ್ನು ಬಂಡೆಯ ಕೆಳಗೆ ಮತ್ತು ಮರಪಡಿಯಲ್ಲಿಟ್ಟು ಪೂಜಿಸುತ್ತಿದ್ದರು. ಆದರೆ ಈಗ ದೇವಸ್ಥಾನಗಳನ್ನು ನಿರ್ಮಿಸಿಕೊಂಡು ಪೂಜೆ ಸಲ್ಲಿಸುತ್ತಿದ್ದಾರೆ. ಇವರ ಇತರ ಮುಖ್ಯ ಆರಾಧ್ಯ ದೇವತೆಗಳು 'ಕಾಟ', 'ಮರಿಯಮ್ಮ' ಮತ್ತು ಹಿಂದುಗಳ ಕೃಷ್ಣ, ರಾಮ, ಮಹೇಶ್ವರ ಮುಂತಾದ ದೇವರುಗಳನ್ನು ಸಹ ಪೂಜಿಸುತ್ತಾರೆ. ಸತ್ತ ಹಿರಿಯರನ್ನು ಪೂಜಿಸುವುದು ಇವರಲ್ಲಿದೆ. ಭೂತಾರಾಧನೆಯುನ್ನು ಸಹ ಇವರು ಮಾಡುತ್ತಾರೆ. ಹಿಂದುಗಳು ಆಚರಿಸುವ ಎಲ್ಲಾ ಹಬ್ಬ ಹರಿದಿನಗಳನ್ನು ಇವರು ಆಚರಿಸುತ್ತಾರೆ ಮತ್ತು ಹಿಂದು ದೇವರುಗಳ ಉತ್ಸವಗಳಲ್ಲಿ ಇವರು ಭಾಗವಹಿಸುತ್ತಾರೆ. ಇದಲ್ಲದೆ ಇವರ ಕುಲದೇವತೆಗಳ ಹಬ್ಬಗಳಾದ ಕಾಟದೇವರ ಹಬ್ಬ, ಮಾರಿಯಮ್ಮನ ಹಬ್ಬ ಮತ್ತು ಭೂತದ ಹಬ್ಬಗಳನ್ನು ಆಚರಿಸುತ್ತಾರೆ. ಈ ಜನಾಂಗದವರು ಮನುಷ್ಯನ ಮೇಲೆ ದೇವರು, ಮಾರಿಯಮ್ಮ, ಭೂತ ಮತ್ತು ದೆವ್ವ ಬರುತ್ತದೆಂದು ನಂಬಿರುತ್ತಾರೆ. ಕೆಲವು ಸಂದರ್ಭದಲ್ಲಿ ದೇವರು ಮನುಷ್ಯನ ಮೇಲೆ ಬಂದು ಅವರ ಕಷ್ಟಗಳನ್ನು ಹೋಗಲಾಡಿಸುತ್ತಾನೆಂದು ನಂಬಿದ್ದಾರೆ. ದೆವ್ವ ಬಂದರೆ ಕೆಡಕು ಅಥವ ಅನಿಷ್ಟ ಕಾದಿದೆ ಎಂದು ಸಹ ನಂಬಿದ್ದಾರೆ.

ಕೊರಗರ ಮೂಢ ನಂಬಿಕೆಗಳು

ಈ ಜನಾಂಗದವರು ಮೂಢ ನಂಬಿಕೆಗೆ ಹೆಸರಾದವರು. ಇವರು ಅನೇಕ ಮೂಢ

ನಂಬಿಕೆಗಳನ್ನು ಆಚರಣೆಯಲ್ಲಿ ಇಟ್ಟುಕೊಂಡಿದ್ದಾರೆ. ಅವರ ಕೆಲವು ಮೂಢ ನಂಬಿಕೆಗಳು ಇಂತಿವೆ :

1) ಊಟ ಮಾಡುವಾಗ ಮತ್ತು ಕಾರಣಾಂತರದಿಂದ ಕೆಳಗೆ ಬಿದ್ದರೆ ಅಸಿಷ್ಟ ಕಾದಿದೆ ಎಂದು ನಂಬುತ್ತಾರೆ.

2) ಶುಭ ಕಾರ್ಯಕ್ಕೆಂದು ಹೋಗುವಾಗ ಬೆಕ್ಕು ಅಡ್ಡ ಬಂದರೆ ಆ ಕಾರ್ಯ ನೆರವೇರುವುದಿಲ್ಲ ಎಂದು ನಂಬುತ್ತಾರೆ.

3) ಕೆಲವು ಗೊತ್ತಿಲ್ಲದ ವಿಷಯಗಳನ್ನು ಚರ್ಚಿಸುವಾಗ ಹುಡುಗಿಯರು ಸೀನಿದರೆ ಸುಳ್ಳೆಂದು, ಹುಡುಗರು ಸೀನಿದರೆ ನಿಜವೆಂದು ನಂಬುತ್ತಾರೆ.

4) ಮಳೆ ಎಂಬುವ ಮನುಷ್ಯ ಮಳೆಯನ್ನು ನೀಡುತ್ತಿದ್ದಾನೆ, ಸೂರ್ಯನೆಂಬ ಮನುಷ್ಯನು ಬೆಳಕನ್ನು ನೀಡುತ್ತಿದ್ದಾನೆ ಮತ್ತು ಗಾಳಿ ಎಂಬ ಮನುಷ್ಯನು ಗಾಳಿಯನ್ನು ನೀಡುತ್ತಿದ್ದಾನೆ ಎಂದು ನಂಬುತ್ತಾರೆ. ಈ ರೀತಿಯಾಗಿ ಇವರುಗಳಲ್ಲಿ ಅನೇಕ ಮೂಢನಂಬಿಕೆಗಳನ್ನು ನೋಡಬಹುದು.

ಮರಣ, ಸಂಸ್ಕಾರ

ಈ ಕೊರಗ ಆದಿವಾಸಿಗಳಲ್ಲಿ ಸತ್ತವನನ್ನು ಹೂಳುವುದು ಅಭ್ಯಾಸದಲ್ಲಿದೆ. ಇವರಲ್ಲಿ ಎರಡು ರೀತಿಯ ಸಾವುಗಳನ್ನು ಗುರುತಿಸುತ್ತಾರೆ. ಸಹಜವಾದ ಸಾವು ಮತ್ತು ಅಸಹಜವಾದ ಸಾವು ಇವರ ಅಭಿಪ್ರಾಯದಲ್ಲಿ ವಯಸ್ಸಾಗಿ, ಕಾಯಿಲೆಯಿಂದ, ಹೃದಯಘಾತದಿಂದ ಸತ್ತರೆ ಸಹಜ ಸಾವೆಂದು, ಮರದಿಂದ ಬಿದ್ದು, ನದಿಯಲ್ಲಿ ಮುಳುಗಿ, ಹಾವಿನಿಂದ ಕಚ್ಚಿಸಿಕೊಂಡು ಸತ್ತರೆ, ಅಸಹಜ ಸಾವುಗಳೆಂದು ನಂಬುತ್ತಾರೆ. ಅಸಹಜವಾಗಿ ಸತ್ತವರಿಗೆ ವಿಶೇಷ ಸಂಸ್ಕಾರಗಳನ್ನು ನೆರವೇರಿಸುತ್ತಾರೆ. ಸಹಜವಾಗಿ ಸತ್ತವರಿಗೆ ಯಾವ ವಿಶೇಷ ಸಂಸ್ಕಾರಗಳನ್ನು ಮಾಡುವುದಿಲ್ಲ.

ಅಸಹಜ ಸಾವಿಗೆ ಈಡಾದವರು ಅವರುಗಳ ಆಸೆಗಳನ್ನು ಪೂರ್ತಿ ಮಾಡಿಕೊಂಡಿಲ್ಲ ಎಂದು ಭಾವಿಸಿ ಅವರೊಂದಿಗೆ ಅವರು ಇಷ್ಟಪಡುತ್ತಿದ್ದ ವಸ್ತುಗಳನ್ನು ಹೂಳುವುದು ವಾಡಿಕೆಯಲ್ಲಿದೆ. ಇವುಗಳನ್ನು ಮಾಡದಿದ್ದರೆ ಅವನ ಅಥವ ಅವಳ ಆತ್ಮವು ದೆವ್ವವಾಗಿ ಬಂದು ಬದುಕಿರುವವರನ್ನು ಕಾಡಿಸುತ್ತದೆಂದು ನಂಬಿರುತ್ತಾರೆ. ತಲೆಯನ್ನು ದಕ್ಷಿಣ ದಿಕ್ಕಿಗೆ ಇಟ್ಟು ಹೂಳುತ್ತಾರೆ. ಹೆಂಗಸರು ಮತ್ತು ಮಕ್ಕಳು ಶವಸಂಸ್ಕಾರದಲ್ಲಿ ಭಾಗ ವಹಿಸಬಹುದು. ಸಮಾಧಿಯನ್ನು ಮುಚ್ಚಿದ ನಂತರ ಒಂದು ಕಲ್ಲನ್ನು ತಲೆಯ ದಿಕ್ಕಿನಲ್ಲಿ ನೆಡುತ್ತಾರೆ. ಇದರಿಂದ ಅದೇ ಸ್ಥಳದಲ್ಲಿ ಮತ್ತೊಂದು ಹೆಣ ಹೂಳುವುದನ್ನು ನಿಲ್ಲಿಸಲಾಗುವುದು. ಸಮಾಧಿಯನ್ನು ಮುಚ್ಚಿದ ನಂತರ ನಾಲ್ಕು ಮುಷ್ಟಿ ಅನ್ನವನ್ನು ಸಮಾಧಿಯಲ್ಲಿ ಇಟ್ಟು ಬರುತ್ತಾರೆ. ಕೊರಗರ ಅಭಿಪ್ರಾಯದಲ್ಲಿ ಸತ್ತ ಮನುಷ್ಯನು ಸಾಯುವಾಗ ಹಸಿದು ಸತ್ತಿದ್ದರೆ, ಮತ್ತೆ ಬಂದು ಅದನ್ನು ತಿಂದು ಹೋಗುತ್ತಾನೆಂದು ನಂಬಿದ್ದಾರೆ. ಮಂಗಳವಾರ ಸಾವು ಸಂಭವಿಸಿದರೆ ಅದೇ ಕುಟುಂಬದಲ್ಲಿ ಮತ್ತೊಂದು

ಸಾವು ಸಂಭವಿಸಬಹುದು ಎಂದು ನಂಬುತ್ತಾರೆ. ಆದಕ್ಕಾಗಿ ವಿಶೇಷ ಪೂಜೆಗಳನ್ನು ದೇವರಿಗೆ ಸಲ್ಲಿಸುತಾ ರೆ. ಈ ಸಂದರ್ಭದಲ್ಲಿ 11 ದಿನಗಳು ಸೂತಕವನ್ನು ಆಚರಿಸುತ್ತಾರೆ. ಈ ಅವಧಿಯಲ್ಲಿ ಸಾವು ಸಂಭವಿಸಿದವರ ಕುಟುಂಬದವರನ್ನು ಮನೆಯೊಳಗೆ ಸೇರಿಸುವುದಿಲ್ಲ ಮತ್ತು ಅವರು ಮಾಡಿದ ಅಡಿಗೆಯನ್ನು ಕುಟುಂಬದವರನ್ನು ಬಿಟ್ಟರೆ ಬೇರೆ ಯಾರು ತಿನ್ನುವುದಿಲ್ಲ. 11 ನೇ ದಿನ ಹಬ್ಬ ಮಾಡಿ ಮನೆ ಆರಾಧ್ಯದೇವರಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ನಂಟರು ಮತ್ತು ಬಂಧುಗಳು ಸಹಿತ ಮನುಷ್ಯನ ಆತ್ಮಕ್ಕೆ ಶಾಂತಿ ಸಿಗುವಂತೆ ಮತ್ತು ಅವನು ಸ್ವರ್ಗ ಸೇರುವಂತೆ ಮಾಡು ಎಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ.

ಉಪಸಂಹಾರ

ಕರ್ನಾಟಕದ ಕೊರಗ ಆದಿವಾಸಿ ಸಮಾಜವು ಬಹಳ ಹಿಂದುಳಿದಿದ್ದು ಹಳೆ ಸಂಪ್ರದಾಯ ಕಂದಾಚಾರ ಮೂಢನಂಬಿಕೆಯನ್ನು ಮುಂದುವರಿಸಿಕೊಂಡು ಅನಾಗರಿಕ ಜೀವನವನ್ನು ನಡೆಸುತ್ತಿದೆ ಎಂಬ ಹೇಳಲೇಬೇಕಾಗಿದೆ. ಇವರ ಅಭ್ಯುದಯಕ್ಕಾಗಿ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯವರು ಪ್ರಯತ್ನಪಟ್ಟು ಸೋತಿದ್ದಾರೆ ; ಇನ್ನು ಪ್ರಯತ್ನಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇವರ ಒಂದು ಲೇಖನದಲ್ಲಿ ಇವರಲ್ಲಿ ಬದಲಾವಣೆಯನ್ನು ತರುವುದು ಕಷ್ಟ ಎನ್ನುವುದನ್ನು ಈ ರೀತಿಯಾಗಿ ಉಲ್ಲೇಖಿಸಿದ್ದಾರೆ. "ಅವರು ಬಹಳ ಸಂಪ್ರದಾಯ ಬದ್ಧರಾಗಿದ್ದು ಅವರ ದೃಷ್ಟಿಕೋನವನ್ನು ಬದಲಿಸುವುದು ಬಹಳ ಕಷ್ಟ ಸಾಧ್ಯ ಮತ್ತು ಅವರ ಪುನರುತ್ಥಾನ ಕಾರ್ಯ ಬಹಳ ಕಷ್ಟ ಸಾಧ್ಯ" ("They are highly conservative and sentimental with the result it has become very difficult to change their view and or habilate them properly") ಬದಲಾವಣೆಯನ್ನು ಬಯಸುವ ಕೊರಗರು ಬಹಳ ವಿರಳ. ನಾಗರಿಕ ಮನುಷ್ಯರನ್ನು ಕಂಡರೆ ಹೆದರುತ್ತಾರೆ, ಇವರ ಅಭಿಪ್ರಾಯದಲ್ಲಿ ನಾಗರಿಕ ಮನುಷ್ಯರು ಸಹಾಯ ಮಾಡದಿದ್ದರೂ ನಮ್ಮ ಹತ್ತಿರ ಬರದಿದ್ದರೆ ಒಳ್ಳೆಯದೆಂಬ ಅಭಿಪ್ರಾಯವಿದೆ. ಇತ್ತೀಚಿನ ಬೆಳವಣಿಗೆಯಿಂದ ಕೆಲವು ಕೊರಗರು ಬದಲಾವಣೆಯನ್ನು ಬಯಸುತ್ತಾರೆ. ಆದರೆ ಸಹಾಯ ಮಾಡಲು ಬರುವವರು ಅವರನ್ನು ಆರ್ಥಿಕ, ಮಾನಸಿಕ ಮತ್ತು ಲೈಂಗಿಕವಾಗಿ ಶೋಷಣೆಗೆ ಗುರಿ ಮಾಡದೆ ಪೂರ್ಣ ಮನಸ್ಸಿನಿಂದ ಸಹಾಯ ಮಾಡಿದರೆ ಅದನ್ನು ಒಪ್ಪುತ್ತಾರೆ. ಈ ಕೊರಗ ಜನಾಂಗದವರು ಭಿಕ್ಷೆ ಎತ್ತಿ ಕೂಲಿ ಮಾಡಿ ಬೇಟೆಯಾಡಿ ಜೀವನ ಸಾಗಿಸುತ್ತಿದ್ದರೂ ಆದರಲ್ಲಿ ಅವರು ಶಾಂತಿ ಮತ್ತು ಸುಖವನ್ನು ಕಾಣುತ್ತಿದ್ದಾರೆ.

ಗ್ರಂಥ ಋಣ

1. Applied Anthropology in India, ed. by L P. vidyarthy
2. Adivasis, by Publications Division of India.
3 Tribes of Mysore, by A.A,D. Luzy.
4. Tribes of Kerala, by A A.D. Luzy.
5. Castes and Tribes of Southern India, by E. Thurston.
6. Mysore Tribes and Castes, by Anantha Krishna Iyer.
7. Tribal compendium on South Indian tribes, by Smt. Rajalaxími Misra and Dr. M P. Basu
8. Reports on Soevo eeonomic condi'ions of aboriginal tribes of the provinces of Madras, by Aiyappan
9. Tribal welfare in Mysore State. Published by Director of Social welfare 1967.
10. Census report 1971.

ಎಂ. ರಾಧಾಪಟೇಲ್*

ಹೊಯ್ಸಳ ಮೂರನೇ ನರಸಿಂಹನ ಕಾಲದ ಜನಜೀವನ — ಒಂದು ವಿವೇಚನೆ

ಕರ್ನಾಟಕದ ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸದಲ್ಲಿ ಹೊಯ್ಸಳರ ಪಾತ್ರವು ಅತ್ಯಂತ ಮಹತ್ವದ್ದಾಗಿದೆ. ಆಡಳಿತ ವ್ಯವಸ್ಥೆ, ರಾಜಕೀಯ ಚರಿತ್ರೆ ಧಾರ್ಮಿಕ, ಸಾಹಿತ್ಯ ಹಾಗೂ ಕಲಾ ಕ್ಷೇತ್ರಗಳಲ್ಲಿ ಅವರ ಕಾಣಿಕೆಗಳು ವೈವಿಧ್ಯ ಪೂರ್ಣವೂ ರೋಮಾಂಚಕವೂ ಆಗಿವೆ. ವಿಲಿಯಂ ಕೊಯೆಲ್ಹೊ ಮತ್ತು ಡಂಕನ್ ಡೆರೆಟ್ಟರ ಸಂಶೋಧನೆಯ ಲೇಖನಗಳನ್ನು ಬಿಟ್ಟರೆ, ಈ ವಂಶದ ಇತಿಹಾಸದ ಬಗ್ಗೆ ಹೆಚ್ಚಿನ ಕಾರ್ಯ ನಡೆಯದಿರುವುದು ಒಂದು ದುರದೃಷ್ಟಕರ ವಿಚಾರವಾಗಿದೆ. ಹೊಯ್ಸಳ ವಂಶವು ವಿಷ್ಣುವರ್ಧನ, ಎರಡನೇ ಬಲ್ಲಾಳ, ಸೋಮೇಶ್ವರ, ಮೂರನೆಯ ನರಸಿಂಹ ಹಾಗೂ ಮೂರನೆಯ ಬಲ್ಲಾಳ ಮೊದಲಾದ ಪ್ರಖ್ಯಾತ ರಾಜರುಗಳನ್ನೊಳಗೊಂಡಿದ್ದು ಅವರಿಂದಾಗಿ ಈ ವಂಶವು ಸಾಂಸ್ಕೃತಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಅದ್ಭುತ ಸಾಧನೆಯಿಂದಾಗಿ ಪ್ರಸಿದ್ಧಿ ಹೊಂದಿದೆ. ಕೊಯೆಲ್ಹೊ ಮತ್ತು ಡೆರೆಟ್ಟರ ಸಂಶೋಧನೆಗಳೂ ಪೂರ್ಣ ಹೊಯ್ಸಳ ವಂಶದ ಇತಿಹಾಸಕ್ಕೆ ಸಂಬಂಧ ಪಟ್ಟಿರುವುದರಿಂದ ಬೇರೆಬೇರೆ ರಾಜರ ಸಾಧನೆ, ವಿವಿಧ ಕ್ಷೇತ್ರಗಳಲ್ಲಿನ ಅವರ ಪಾತ್ರದ ಬಗ್ಗೆ ತುಲನಾತ್ಮಕ ಅಧ್ಯಯನದ ಅಗತ್ಯವಿದೆ. ಈ ವಂಶದ ಪ್ರಸಿದ್ಧ ಅರಸರಲ್ಲಿ ಒಬ್ಬನಾದ ಮೂರನೆಯ ನರಸಿಂಹನ ಆಳ್ವಿಕೆಯ ಕಾಲ, ಅವನ ಸಾಧನೆಗಳ ಬಗೆಗೆ ವಿವರವಾದ ಅಧ್ಯಯನ ನಡೆಸಿ ಹೊಯ್ಸಳ ಇತಿಹಾಸದಲ್ಲಿ ಆತನ ಸ್ಥಾನವನ್ನು ನಿರ್ಧರಿಸುವುದೇ ಈ ಮಹಾಪ್ರಬಂಧದ ಮೂಲ ಉದ್ದೇಶವಾಗಿದೆ.

ರಾಜಕೀಯವಾಗಿ ಹೊಯ್ಸಳರ ಕಾಲವು ಪ್ರಕ್ಷುಬ್ಧತೆಯಿಂದ ಕೂಡಿದ್ದುದಾಗಿತ್ತು. ದಕ್ಷಿಣದಲ್ಲಿ ಪಾಂಡ್ಯರು, ಉತ್ತರದಲ್ಲಿ ಕಾಕತೀಯರೂ, ಸೇವುಣರೂ ಹೊಯ್ಸಳರ ಪ್ರಬಲ ಪ್ರತಿಸ್ಪರ್ಧಿಗಳಾಗಿದ್ದರು. ಚೋಳರ ಸಾಮ್ರಾಜ್ಯವು ಹಲವಾರು ಭಾಗಗಳಾಗಿ

---

* ಮೈಸೂರು ವಿಶ್ವವಿದ್ಯಾನಿಲಯಕ್ಕೆ ಇತ್ತೀಚೆಗೆ ಪಿಎಚ್-ಡಿ. ಪದವಿಗೆ ಒಪ್ಪಿಸಿದ ಮಹಾಪ್ರಬಂಧದ ಸಂಕ್ಷಿಪ್ತ ರೂಪ.

ಒಡೆದು ಪತನದ ಹಾದಿಯನ್ನು ಹಿಡಿದಿತ್ತು. ಇದೇ ವೇಳೆಗೆ ಪ್ರಬಲರಾಗುತ್ತಿದ್ದ ಪಾಂಡ್ಯರು ಚೋಳರ ಅಧಿಕಾರವನ್ನು ತಮ್ಮದಾಗಿಸಿಕೊಳ್ಳಲು ಈ ಅವಕಾಶವನ್ನು ಬಳಸಿಕೊಂಡು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸತೊಡಗಿದರು. ಈ ಪ್ರಮುಖ ಶಕ್ತಿ ಬಣಗಳಲ್ಲದೆ ನೆಲ್ಲೂರಿನ ತೆಲುಗು ಚೋಳರು, ಕಾಡವರು, ಬನವಾಸಿಯ ಕದಂಬರು, ನಿಡುಗಲ್ಲಿನ ಚೋಳರು, ಚಂಗಾಳ್ವರು ಮೊದಲಾದ ಸಣ್ಣ ಪುಟ್ಟ ರಾಜರುಗಳ ಪಾತ್ರವೂ ಈ ರಾಜಕೀಯ ಚದುರಂಗದಾಟವಲ್ಲಿ ಪ್ರಮುಖವಾಗಿದ್ದಿತು. ಅವರುಗಳು ಸಂದರ್ಭಕ್ಕೆ ತಕ್ಕಂತೆ ಪಕ್ಷಗಳನ್ನು ಬದಲಾಯಿಸುತ್ತಿದ್ದರು. ಹೊಯ್ಸಳ ಸೋಮೇಶ್ವರನ ಆಳ್ವಿಕೆಯು ಹೊಯ್ಸಳರ ರಾಜಕೀಯ ಇತಿಹಾಸದಲ್ಲಿ ಒಂದು ಪ್ರಮುಖ ಬದಲಾವಣೆಯನ್ನುಂಟು ಮಾಡಿತು. ಕಣ್ಣಾನೂರಿನಲ್ಲಿ ತನ್ನ ಎರಡನೆಯ ರಾಜಧಾನಿಯನ್ನು ಸ್ಥಾಪಿಸುವುದರ ಮೂಲಕ ಸೋಮೇಶ್ವರನು ತನ್ನ ರಾಜಕೀಯ ನೀತಿಯನ್ನು ದೃಢಪಡಿಸಿದನು. ತಮಿಳುನಾಡಿನಲ್ಲಿ ದಿನದಿನವೂ ಬದಲಾಗುತ್ತಿದ್ದ ರಾಜಕೀಯ ಪರಿಸ್ಥಿತಿಯು ದಕ್ಷಿಣ ಭಾರತದ ಇತಿಹಾಸವನ್ನು ಪುನರ್ರೂಪಿಸುತ್ತಿತ್ತು. ಈ ಬದಲಾದ ಪರಿಸ್ಥಿತಿ ಹಾಗೂ ಈ ಶಕ್ತಿ ಬಣಗಳ ಕ್ಲಿಷ್ಟ ರಾಜಕೀಯ ನೀತಿಗಳನ್ನು ಅರಿತು ಅದಕ್ಕನುಗುಣವಾಗಿ ತನ್ನ ನೀತಿಯನ್ನು ರೂಪಿಸುವಲ್ಲಿ ಸೋಮೇಶ್ವರನು ಪೂರ್ಣ ಯಶಸ್ವಿಯಾಗುವುದು ಅಸಾಧ್ಯವಾಯಿತು. ಇದರಿಂದಾಗಿ ಅವನು ತನ್ನ ಹಲವಾರು ಪ್ರಯತ್ನಗಳಲ್ಲಿ ಸೋಲನ್ನನುಭವಿಸಬೇಕಾಯಿತು. ಮುಂದೆ ಉಂಟಾಗಬಹುದಾದ ಸಮಸ್ಯೆಗಳನ್ನು ಮನಗಂಡ ಸೋಮೇಶ್ವರನು ತನ್ನ ಸಾಮ್ರಾಜ್ಯವನ್ನು ತನ್ನ ಮಕ್ಕಳಾದ ಮೂರನೇ ನರಸಿಂಹ ಹಾಗೂ ರಾಮನಾಥರಲ್ಲಿ ಹಂಚಿಬಿಟ್ಟನು. ಇಂತಹ ರಾಜಕೀಯ ಸಂದಿಗ್ಧ ಪರಿಸ್ಥಿತಿಯಲ್ಲಿ ಕ್ರಿ.ಶ. 1254 ರಲ್ಲಿ ಹೊಯ್ಸಳ ಸಿಂಹಾಸನವನ್ನೇರಿದ ಮೂರನೇ ನರಸಿಂಹನು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾದ್ದಿತು. ಆದರೆ ಮೂರನೇ ನರಸಿಂಹನು ತಾನು ರಾಜಕುಮಾರನಾಗಿದ್ದಾಗಿನಿಂದಲೂ, ತನ್ನ ತಂದೆಯ ಕಾಲದಲ್ಲಿಯೇ ಈ ಸಮಸ್ಯೆಗಳನ್ನು ಎದುರಿಸುವಲ್ಲಿ ಅತ್ಯಂತ ಧೈರ್ಯ, ಚಾಣಾಕ್ಷತೆ, ಆಸಕ್ತಿಗಳನ್ನು ವ್ಯಕ್ತಗೊಳಿಸುತ್ತಿದ್ದನು. ಆತನು ರಾಜನಾಗುತ್ತಿದ್ದಂತೆಯೇ ಅನಿಶ್ಚಯತೆ, ಸಂದಿಗ್ಧತೆಗಳಿಂದ ಕೂಡಿದ ವಿಕ್ಷಿಪ್ತ ರಾಜಕೀಯ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಇದು ಉತ್ತೇಜನಕಾರಿಯಾಗಲಿ, ಉತ್ತಮ ರಾಜ್ಯವ್ಯವಸ್ಥೆಯನ್ನು ರೂಪಿಸುವಲ್ಲಿಯಾಗಲಿ ಕೂಡಿರಲಿಲ್ಲ. ಪ್ರತಿ ಹೆಜ್ಜೆಗೂ ಹೊಸ ಹೊಸ ಸಮಸ್ಯೆಗಳನ್ನು ಎದುರಿಸಬೇಕಾಗಿದ್ದಿತು.

ಜೀವನ ಮತ್ತು ಸಾಧನೆ

ನರಸಿಂಹನ ರಾಜಕೀಯ ಸಾಧನೆಗಳು ಸಮಕಾಲೀನ ಶಕ್ತಿ ಬಣಗಳೊಡನೆ ಅವನ ಯುಕ್ತಿ ಪೂರ್ಣ ಸಾಧನ, ಸಂಬಂಧಗಳು ಅತ್ಯಂತ ವೈಶಿಷ್ಟ್ಯಪೂರ್ಣವಾದುವಾಗಿದ್ದುವು. ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿಯೇ ಅಶಾಂತಿ ಅತೃಪ್ತಿಗಳಿಂದ ತುಂಬಿದ್ದ ಹೊಯ್ಸಳ ಸಾಮ್ರಾಜ್ಯದ ಆಡಳಿತ ಸೂತ್ರವನ್ನು ಹಿಡಿಯಬೇಕಾಗಿ ಬಂದಿತು. ಸುಗಮ ಆಡಳಿತದ ದೃಷ್ಟಿಯಿಂದ ಹೊಯ್ಸಳ ಸಾಮ್ರಾಜ್ಯವು ಸೋಮೇಶ್ವರನ ಕಾಲದಲ್ಲಿಯೇ ವಿಭಾಗಿ

ಸಲ್ಪಟ್ಟಿತ್ತು. ವಂಶ ಪಾರಂಪರ್ಯವಾಗಿ ಬಂದಿದ್ದ ಸಾಮ್ರಾಜ್ಯದ ಭಾಗವೂ ಮೂರನೆಯ ನರಸಿಂಹನ ಪಾಲಿಗೂ, ಹೊಸದಾಗಿ ಸೇರ್ಪಡೆಯಾಗಿದ್ದ ಮೊದಲು ಚೋಳರ ವಶದಲ್ಲಿದ್ದ ಕೋಲಾರ ಜಿಲ್ಲೆ ಹಾಗೂ ಈಗಿನ ತಮಿಳುನಾಡಿನ ಹಲವಾರು ಭಾಗಗಳನ್ನೊಳಗೊಂಡಿದ್ದ ಭಾಗವು ರಾಮನಾಥನ ಪಾಲಿಗೂ ಬಂದವು. ರಾಮನಾಥನು ನರಸಿಂಹನ ಪಾಲಿಗೆ ಒಂದು ಶಾಶ್ವತವಾದ ಪಕ್ಕೆಯ ಮುಳ್ಳಾಗಿದ್ದನು. ತನ್ನ ಪಾಲಿಗೆ ಬಂದಿದ್ದ ಭಾಗದಿಂದ ಅತೃಪ್ತನಾಗಿದ್ದ ರಾಮನಾಥನು ನರಸಿಂಹನ ವಶದಲ್ಲಿದ್ದ ಪ್ರದೇಶಗಳನ್ನು ಕೈವಶ ಪಡಿಸಿಕೊಳ್ಳಲು ಸದಾ ಪ್ರಯತ್ನಿಸುತ್ತಿದ್ದನು. ಇದೇ ಕಾಲದಲ್ಲಿ ಕ್ರಮೇಣ ಪ್ರಬಲರಾಗಿ ತಮ್ಮ ರಾಜಕೀಯ ಪ್ರಾಬಲ್ಯವನ್ನು ವಿಸ್ತರಿಸಲು ಪ್ರಯತ್ನಿಸುತ್ತಿದ್ದ ಸೇವುಣರಿಂದಲೂ ಅನೇಕ ರೀತಿಯ ಸಮಸ್ಯೆಗಳನ್ನು ನರಸಿಂಹನು ಎದುರಿಸಬೇಕಾಯಿತು. ಸೇವುಣ ಮಹದೇವನು ಕ್ರಿ.ಶ. 1271 ರಲ್ಲಿ ಅಪಾರ ಅಶ್ವಗಜ ದಳವನ್ನೊಳಗೊಂಡ ಸೈನ್ಯದೊಡನೆ ಹೊಯ್ಸಳ ಸಾಮ್ರಾಜ್ಯದ ಮೇಲೆ ಧಾಳಿ ಮಾಡಿದನು. ಹೊಯ್ಸಳ ಸೇನಾಧಿಪತಿಯಾಗಿದ್ದ ಪೆರುಮಲದೇವನು ಮಹದೇವನನ್ನು ಸೋಲಿಸಿ ಹೊಯ್ಸಳರಿಗೆ ವಿಜಯವನ್ನು ತಂದುಕೊಟ್ಟನು. ನಾಲ್ಕೇ ವರ್ಷಗಳ ನಂತರ ಹೊಯ್ಸಳ ಸೇವುಣರ ನಡುವೆ ಮತ್ತೊಂದು ಮಹಾಯುದ್ಧ ನಡೆಯಿತು. ರಾಮಚಂದ್ರನು ಸೇವುಣರ ರಾಜನಾಗಿದ್ದಾಗ ಸಾಳ್ವ ವಿಕ್ರಮ ಮತ್ತು ಹರಿಪಾಲರ ನೇತೃತ್ವದಲ್ಲಿ ಸೇವುಣರ ಮಹಾಸೇನೆಯು ಹೊಯ್ಸಳರ ರಾಜಧಾನಿಯನ್ನು ವಶಪಡಿಸಿಕೊಳ್ಳಬೇಕೆಂಬ ನಿರ್ಧಾರದೊಡನೆ ಹೊಯ್ಸಳ ಸಾಮ್ರಾಜ್ಯದ ಮೇಲೆ ಧಾಳಿಮಾಡಿತು. ಹೊಯ್ಸಳ ಸೇನಾಧಿಪತಿಗಳಾಗಿದ್ದ ಅಂಕನಾಯಕ ಮತ್ತು ಚಿಕ್ಕಕೇತಯ ನಾಯಕರು ಮಹಾಪರಾಕ್ರಮದಿಂದ ಹೋರಾಡಿ ಸೇವುಣರ ಸೈನ್ಯವನ್ನು ದುಮ್ಮೆಯವರೆಗೆ ಹಿಂದೊತ್ತಿದ್ದರು. ನರಸಿಂಹನ ಮತ್ತೊಂದು ಮಹಾ ವಿಜಯವೆಂದರೆ ಆತನು ನಿಡುಗಲ್ಲು ಚೋಳರ ಮೇಲೆ ಸಾಧಿಸಿದ ವಿಜಯ. ಹೊಯ್ಸಳರು ಚೋಳ ಸಾಮ್ರಾಜ್ಯದ ಪ್ರತಿಸ್ಪರ್ಧಿಗಳಾಗಿದ್ದುದರಿಂದ ಸಹಜವಾಗಿಯೇ ನಿಡುಗಲ್ಲಿನೊಡನೆ ವೈರತ್ವವಿದ್ದಿತು. ಕ್ರಿ.ಶ. 1285ರಲ್ಲಿ ನರಸಿಂಹನು ಸ್ವತಃ ದಂಡೆತ್ತಿ ಹೋಗಿ ನಿಡುಗಲ್ಲನ್ನು ವಶಪಡಿಸಿಕೊಂಡನು. ನರಸಿಂಹನ ಆಳ್ವಿಕೆಯ ಕೊನೆಯ ವರ್ಷಗಳು ರಾಮನಾಥನೊಡನೆ ಹೋರಾಡುವುದರಲ್ಲಿಯೇ ಕಳೆಯಿತು. ಆಗಾಗ ಒದಗುತ್ತಿದ್ದ ಯುದ್ಧಗಳಿಂದಾಗಿ ಹೊಯ್ಸಳರ ಪ್ರಾಬಲ್ಯವು ಎರಡೂ ಕಡೆಗಳಿಂದಲೂ ದುರ್ಬಲಗೊಂಡಿತ್ತು. ಇಷ್ಟಾದರೂ ನರಸಿಂಹನು ತನ್ನ ಜೀವಿತಾವಧಿಯಲ್ಲಿ ಹಲವಾರು ಪ್ರಬಲ ಶತ್ರುಗಳೊಡನೆ ಹೋರಾಡಿ ಸಮಕಾಲೀನ ರಾಜಕೀಯ ಇತಿಹಾಸದಲ್ಲಿ ಅಚ್ಚಳಿಯದ ಪ್ರಭಾವವನ್ನುಳಿಸಿ ಹೋಗಿದ್ದಾನೆ.

ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ನರಸಿಂಹನ ಸಾಧನೆಗಳಲ್ಲಿ ಆತನ ಮಾಂಡಲಿಕರ ಹಾಗೂ ಅಧಿಕಾರಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ನಿಡುಗಲ್ಲಿನ ಚೋಳರು, ಚೆಂಗಾಳ್ವರು, ಅಳುಪರು ಹಾಗೂ ಕುಮ್ಮಟದ ಇಮ್ಮಡಿ ಸಿಂಘಯ ಇವರುಗಳು ಹೊಯ್ಸಳರ ಪ್ರಮುಖ ಮಾಂಡಲಿಕರಾಗಿದ್ದರು. ನರಸಿಂಹನ ರಾಜ್ಯ ವಿಸ್ತರಣೆ ಹಾಗೂ ಯುದ್ಧಗಳಲ್ಲಿ ಇವರ ಪಾತ್ರ ಅತ್ಯಂತ ಗಣನೀಯವಾದುದಾಗಿದ್ದಿತು. ಆದರೆ

ಇವರುಗಳು ಎಲ್ಲಾ ಕಾಲದಲ್ಲೂ ಹೊಯ್ಸಳರಿಗೆ ನಿಷ್ಠೆಯಿಂದಿರುತ್ತಿರಲಿಲ್ಲ. ಸಂದರ್ಭಕ್ಕೆ ತಕ್ಕಂತೆ ಪಕ್ಷಗಳನ್ನು ಬದಲಾಯಿಸುತ್ತಿದ್ದರು. ವಿಷ್ಣುವರ್ಧನ, ಮೊದಲನೆಯ ನರಸಿಂಹ ಮತ್ತು ಎರಡನೆಯ ಬಲ್ಲಾಳರ ಕಾಲದಲ್ಲಿ ಹೊಯ್ಸಳರ ಅಧೀನದಲ್ಲಿದ್ದ ನಿಡುಗಲ್ಲಿನ ಚೋಳರು ಮೂರನೇ ನರಸಿಂಹನ ಕಾಲದಲ್ಲಿ ಅವನ ವಿರೋಧಿಗಳಾಗಿದ್ದ ಸೇವುಣರ ಜೊತೆ ಸೇರಿದಾಗ ನರಸಿಂಹನು ತಾನೇ ದಂಡೆತ್ತಿ ಹೋಗಿ ನಿಡುಗಲ್ಲಿನ ಕೋಟೆಯನ್ನು ವಶಪಡಿಸಿಕೊಂಡಿದ್ದನು. ರಾಜಕುಮಾರ ಬಲ್ಲಾಳನನ್ನು ಮೂಡಬಿದರೆಯಲ್ಲಿ ಮಾಂಡಲಿಕನನ್ನಾಗಿ ನೇಮಿಸಿ ಸೇವುಣರ, ಸಾಂತಾರರ, ಹಾಗೂ ತುಳುವರ ಪ್ರಾಬಲ್ಯವು ದಕ್ಷಿಣದತ್ತ ಹರಡದಂತೆ ಯಶಸ್ವಿಯಾಗಿ ತಡೆಗಟ್ಟಿದನು.

ರಾಜನಿಗೆ ರಾಜ್ಯಾಡಳಿತದಲ್ಲಿ ನೆರವಾಗಲು ಅನೇಕ ಮಂತ್ರಿಗಳು, ರಾಜ್ಯಾಧಿಕಾರಿಗಳು ನಿಯಮಿತರಾಗಿರುತ್ತಿದ್ದರು. ಐದು ಜನ ಮಂತ್ರಿಗಳ ಮಂತ್ರಿಮಂಡಲ (ಪಂಚಪ್ರಧಾನರು) ರಾಜ್ಯಾಡಳಿತದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಿತ್ತು. ಆ ಐವರು ಮಂತ್ರಿಗಳೆಂದರೆ ಮಹಾಪ್ರಧಾನ, ಸರ್ವಪ್ರಧಾನ, ಸಂಧಿವಿಗ್ರಹಿ, ಸೇನಾಧಿಪತಿ ಮತ್ತು ಮಹಾಪಾಸಾಯಿತ; ಮಹಾಪ್ರಧಾನನಾಗಿದ್ದ 'ಪೆರುಮಾಳೆದಣ್ಣಾಯಕ'ನು ಅತ್ಯಂತ ಪ್ರಮುಖ ಮಂತ್ರಿಯಾಗಿದ್ದನು. ಈತನು ಈಗಿನ ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿದ ತೆರಕಣಾಂಬಿಯಿಂದ ಪದಿನಾಲ್ಕು ನಾಡಿನ ಅಧಿಕಾರವನ್ನು ನೋಡಿಕೊಳ್ಳುತ್ತಿದ್ದನು. ಈತನು ಮಹಾವೀರನೂ, ಉತ್ತಮ ಸೇನಾನಿಯೂ, ಕವಿ ವಿದ್ವಾಂಸರುಗಳಿಗೆ ಆಶ್ರಯವಿತ್ತ ವಿದ್ಯಾಪಕ್ಷಪಾತಿಯೂ ಅಲ್ಲದೆ ಹಲವಾರು ಸಾಧನೆಗಳನ್ನು ಸಾಧಿಸಿದ ಮಹಾವ್ಯಕ್ತಿಯಾಗಿದ್ದನು. ಮತ್ತೊಬ್ಬ ಮಹಾ ಪ್ರಧಾನನಾಗಿದ್ದ ಸೋಮಯ್ಯದಣ್ಣಾಯಕನು ಸಾಮ್ರಾಜ್ಯದ ಆಡಳಿತ ವ್ಯವಸ್ಥೆ, ಧಾರ್ಮಿಕ ಕ್ಷೇತ್ರ, ವಿದ್ಯಾಕ್ಷೇತ್ರ ಹಾಗೂ ವಾಸ್ತುಶಿಲ್ಪಗಳಲ್ಲಿ ಸಲ್ಲಿಸಿರುವ ಸೇವೆ ಅತ್ಯಂತ ಮಹತ್ವದಾಗಿದೆ. ಕ್ರಿ.ಶ. 1258ರಲ್ಲಿ ಆತನು ನಿರ್ಮಿಸಿದ ಸೋಮನಾಥಪುರ ಅಗ್ರಹಾರವು ಆ ಕಾಲದ ವಿದ್ಯಾಕೇಂದ್ರವಾಗಿದ್ದಿತು. ಆ ಕಾಲದ ದಾಖಲೆಗಳಲ್ಲಿ ಈ ಅಗ್ರಹಾರವನ್ನು ಜ್ಞಾನದ, ಕಲಿಕೆಯ ಗಣಿ ಎಂದು ಹೇಳಲಾಗಿದೆ. ಈ ಅಗ್ರಹಾರದ ಗಿಣಿಗಳೂ ಸಹ ವೇದಮಂತ್ರಗಳನ್ನು ಉಚ್ಚರಿಸಬಲ್ಲವಾಗಿದ್ದವಂತೆ. ಅವನ ಹೆಸರಾದ 'ವಿದ್ಯಾನಿಧಿ ಪ್ರಸನ್ನ ಸೋಮನಾಥ' ಎಂಬುವೇ ಆತನ ಪಾಂಡಿತ್ಯ ಪ್ರತಿಭೆಗೆ ಸಾಕ್ಷಿಯಾಗಿವೆ. ಅಗ್ರಹಾರಕ್ಕೆ ಸೋಮನಾಥಪುರ ಎಂಬ ಹೆಸರು ಅವನಿಂದಲೇ ಬಂದಿದ್ದು. ಸೋಮಯ್ಯ ದಣ್ಣಾಯಕನು ಕ್ರಿ.ಶ. 1268ರಲ್ಲಿ ಸೋಮನಾಥಪುರದಲ್ಲಿ ಪ್ರಸಿದ್ಧ ದೇವಾಲಯವನ್ನು ನಿರ್ಮಾಣ ಮಾಡಿಸಿದನು. ಈ ದೇವಾಲಯವು ಮೂರು ಗರ್ಭಗುಡಿಗಳನ್ನೊಳಗೊಂಡ ಅತ್ಯಂತ ಸುಂದರ ಕೆತ್ತನೆಯ ಕೆಲಸದಿಂದ ಕೂಡಿದ ಅಪೂರ್ವ ವಾಸ್ತು ನಿರ್ಮಾಣವಾಗಿದೆ.

ಸರ್ವಾಧಿಕಾರಿಯು ನಾಗರಿಕ ಹಾಗೂ ಸೈನಿಕ ವ್ಯವಸ್ಥೆಗಳನ್ನೊಳಗೊಂಡ ಅಧಿಕಾರಿಯಾಗಿರುತ್ತಿದ್ದನು. ಮೂರನೇ ನರಸಿಂಹನ ಕಾಲದಲ್ಲಿ ಅಲಲದೇವನು ಸರ್ವಾಧಿಕಾರಿಯಾಗಿದ್ದನು. ಹರಿಹರದ ಸೋವಣ್ಣನು ಸಂಧಿವಿಗ್ರಹಿಯಾಗಿದ್ದನು.

ಕುಲ್ಲಣ ರಾಹುತ ಹೆಗ್ಗಡೆ ಹಾಗೂ ಸೋಮಣ್ಣ ಎಂಬುವರು ಮಹಾಪಸಾಯಿತರಾಗಿದ್ದರು. ಈ ಹುದ್ದೆಯು ಬಹಳ ಪ್ರಮುಖವಾದುದಾಗಿದ್ದಿತು. ಮಹಾಪಸಾಯಿತರು ರಾಜನ ವಿಶ್ವಾಸಗಳಿಸಿ ರಾಜ್ಯ ವ್ಯವಸ್ಥೆಯಲ್ಲಿ ಅತ್ಯಂತ ಪ್ರಭಾವಶಾಲಿಗಳಾಗಿರುತ್ತಿದ್ದರು. ನಾಡು ಮತ್ತು ಹಳ್ಳಿಗಳ ಮುಖ್ಯಾಧಿಕಾರಿಗಳು ರಾಜ್ಯಾಧಿಕಾರಿಗಳು ಹಾಗೂ ಮಂತ್ರಿಮಂಡಲದ ಸದಸ್ಯರುಗಳು ಸೇರಿ ರಾಜ್ಯದ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ಬಿರುದು ಬಾವಲಿಗಳ ಬಹುಮಾನಗಳ ಮೂಲಕ ರಾಜನು ಅವರನ್ನು ಸನ್ಮಾನಿಸುತ್ತಿದ್ದನು.

ಆ ಕಾಲದ ಆಡಳಿತ ವ್ಯವಸ್ಥೆ

ಆಡಳಿತ ವ್ಯವಸ್ಥೆಯು ಒಬ್ಬ ರಾಜನಿಂದ ಮತ್ತೊಬ್ಬ ರಾಜನ ಕಾಲಕ್ಕೆ ಹೆಚ್ಚೇನೂ ವ್ಯತ್ಯಾಸಗೊಳ್ಳದೆ ಸ್ಥೂಲವಾಗಿ ಒಂದೇ ರೂಪದ್ದಾಗಿರುತ್ತಿತ್ತು. ಆದರೂ ಮೂರನೇ ನರಸಿಂಹ ಹಾಗೂ ಆತನ ರಾಜ್ಯಾಧಿಕಾರಿಗಳ ರಾಜಕೀಯ ನೀತಿ, ಆಡಳಿತ ವ್ಯವಸ್ಥೆಗಳನ್ನು ಲಭ್ಯ ದಾಖಲೆಗಳ ಆಧಾರದಿಂದ ವಿವರವಾಗಿ ಅರಿಯುವ ಪ್ರಯತ್ನ ಮಾಡಬಹುದಾಗಿದೆ. ಹೊಯ್ಸಳರು ಗಂಗರ ಹಾಗೂ ಚಾಲುಕ್ಯರನಂತರ ಅಧಿಕಾರಾರೂಢರಾದುದರಿಂದ ಈ ಎರಡೂ ವಂಶಗಳ ಆಳ್ವಿಕೆ ಆಡಳಿತ ವ್ಯವಸ್ಥೆಯ ಪ್ರಭಾವಕ್ಕೆ ನೇರವಾಗಿ ಒಳಗಾಗಿರುವುದನ್ನು ಕಾಣುತ್ತೇವೆ. ಕಾಲಕಳೆದಂತೆ ಸಂಧರ್ಭಾನುಸಾರ ಸೂಕ್ತ ಬದಲಾವಣೆಗಳನ್ನು ಮಾಡಿದರೂ ಮೂಲ ಸ್ವರೂಪವು ಹಾಗೆಯೇ ಉಳಿದು ಬಂದಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಶಾಸನಗಳು ಮತ್ತು ಸಾಹಿತ್ಯಾಧಾರಗಳಾದ ಎರಡನೇ ಸೋಮೇಶ್ವರನ ಮಾನಸೋಲ್ಲಾಸ ಮತ್ತು ಮಲ್ಲಿಕಾರ್ಜುನನ 'ಸೂಕ್ತಿ ಸುಧಾರ್ಣವ' ಗ್ರಂಥಗಳು ಆ ಕಾಲದ ಆಡಳಿತ ಕ್ರಮದ ಮೇಲೆ ಬೆಳಕು ಚೆಲ್ಲುತ್ತವೆ. ಆಡಳಿತ ವ್ಯವಸ್ಥೆಯು ಕೇಂದ್ರ, ರಾಜ್ಯ (ವಿಭಾಗೀಯ), ಹಾಗೂ ಸ್ಥಳೀಯ ಎಂಬ ಮೂರುಸ್ತರಗಳಲ್ಲಿ ವಿಭಜನೆಗೊಂಡಿದ್ದಿತು. ಕೇಂದ್ರಾಡಳಿತವು ರಾಜ, ಯುವರಾಜ, ಮಂತ್ರಿಮಂಡಲ ಹಾಗೂ ವಿವಿಧ ಖಾತೆಗಳ ಅಧಿಕಾರಿಗಳನ್ನೊಳಗೊಂಡಿರುತ್ತಿತ್ತು. ಹಲವಾರು ಶಾಸನಗಳಲ್ಲಿ ಉತ್ತಮ ಸರ್ಕಾರ, ಉತ್ತಮ ಆಡಳಿತ ವ್ಯವಸ್ಥೆಯೇ ರಾಜನ ಪರಮೋಚ್ಚ ಕರ್ತವ್ಯ ಎಂಬುದಾಗಿ ಹೇಳಿರುವುದನ್ನು ಕಾಣುತ್ತೇವೆ. ರಾಜನಾದವನು ನಿರಂಕುಶಾಧಿಕಾರಿಯಾಗಿದ್ದು ದುಷ್ಟನಿಗ್ರಹ ಶಿಷ್ಟಪರಿಪಾಲಕನಾಗಿರಬೇಕೆಂಬುದು ಅಂದಿನ ವ್ಯವಸ್ಥೆಯಾಗಿದ್ದಿತು. ಮೂರನೇ ನರಸಿಂಹನು ಅತ್ಯುತ್ತಮವಾದ ಸುಶಿಕ್ಷಿತ ಸೇನಾವ್ಯವಸ್ಥೆಯನ್ನು ಹೊಂದಿದ್ದನು. ರಾಜನು ಸೈನ್ಯದ ಸರ್ವೋಚ್ಚ ಅಧಿಕಾರಿಯಾಗಿದ್ದು, ಯುದ್ಧಗಳಲ್ಲಿ ಸೇನೆಯ ನೇತೃತ್ವವನ್ನು ತಾನೇ ವಹಿಸುತ್ತಿದ್ದನು. ಸೇನೆಯಲ್ಲಿ ಪದಾತಿ, ಅಶ್ವದಳ, ಗಜದಳ ಹಾಗೂ ರಥದಳ ಎಂಬ ನಾಲ್ಕು ವಿಭಾಗಗಳಿರುತ್ತಿದ್ದವು. ಸೋಮನಾಥಪುರದ ಕೇಶವ ದೇವಾಲಯದಲ್ಲಿ ಅನೇಕ ಯುದ್ಧದ ದೃಶ್ಯಗಳನ್ನು ಕೆತ್ತಿರುವುದನ್ನು ಕಾಣಬಹುದಾಗಿದೆ. ಯುದ್ಧಕ್ಕೆ ಸಾಗುತ್ತಿರುವ ಸೈನ್ಯದ ವಿವಿಧ ಭಾಗಗಳು, ಕತ್ತಿ, ಶೂಲ

ಬಿಲ್ಲು ಬಾಣಗಳನ್ನು ಹೊಂದಿರುವ ಪದಾತಿಗಳು, ರಣಭೇರಿಗಳನ್ನು ಹೊತ್ತ ಒಂಟೆಗಳು, ಅಂಬಾರಿಯುಳ್ಳ ಯೋಧರನ್ನು ಹೊತ್ತ ಆನೆಗಳು, ಭರ್ಜಿ ಖಡ್ಗಧಾರಿಗಳಾದ ರಾಹುತರು ಮೊದಲಾದ ಅನೇಕ ಕೆತ್ತನೆಗಳನ್ನು ದೇವಾಲಯದ ಹೊರಗೋಡೆಗಳ ಮೇಲೆ ಕೆತ್ತಿರುವುದನ್ನು ಕಾಣಬಹುದು.

ಮೂರನೇ ನರಸಿಂಹನು ಉತ್ತಮವಾದ ಕಂದಾಯ ಇಲಾಖೆಯನ್ನು ಹೊಂದಿದ್ದನು. ಭೂಕಂದಾಯವು ರಾಜ್ಯದ ಪ್ರಮುಖ ಆದಾಯವಾಗಿದ್ದಿತು. ಇದಲ್ಲದೆ ಆಸ್ತಿಕರ, ಜಾನುವಾರುಗಳ ಮೇಲಿನಕರ, ಉತ್ಪಾದನಾಕರ, ವೃತ್ತಿಕರ, ಕೈಗಾರಿಕಾಕರ, ವಾಣಿಜ್ಯಕರ, ಸೇನಾವಂತಿಗೆ, ಸಾಮಾಜಿಕ ಹಾಗೂ ಸಮುದಾಯಕರಗಳೇ ಮೊದಲಾದ ಇತರ ಹಲವಾರು ತೆರಿಗೆಗಳನ್ನು ವಸೂಲಿ ಮಾಡಲಾಗುತ್ತಿತ್ತು.

ಸಾಮಾಜಿಕ ಜೀವನ

ಆ ಕಾಲದ ಸಾಮಾಜಿಕ ಜೀವನದ ರೀತಿನೀತಿಗಳನ್ನರಿಯಲು ಶಾಸನಗಳು ಹಾಗೂ ದೇವಾಲಯಗಳಲ್ಲಿನ ಕೆತ್ತನೆಗಳು ಅತ್ಯಂತ ಸಹಕಾರಿಯಾಗಿವೆ. ಅವಿಭಕ್ತ ಕುಟುಂಬ ವ್ಯವಸ್ಥೆಯು ಜನಪ್ರಿಯ ಪ್ರಧಾನ ವ್ಯವಸ್ಥೆಯಾಗಿದ್ದಿತು. ಪ್ರೀತಿ ವಿಶ್ವಾಸಗಳು ಕುಟುಂಬದ ಮೂಲಭೂತ ಅಂಶವಾಗಿದ್ದವು. ಕುಟುಂಬದ ಸದಸ್ಯರಿಂದ ಕೊಡಲ್ಪಟ್ಟ ಕಾಣಿಕೆ, ಅನುದಾನಗಳನ್ನು ಪ್ರೀತಿಧನ ಎಂದೇ ಕರೆಯುತ್ತಿದ್ದರು. ಅಕ್ಕಿ ಜನರ ಪ್ರಮುಖ ಆಹಾರವಾಗಿದ್ದಿತು. ಹಲವಾರು ವಿಭಿನ್ನ ತಳಿಯ ಭತ್ತವನ್ನು ಆ ಕಾಲದಲ್ಲಿ ಬೆಳೆಯುತ್ತಿದ್ದರು. ರಕ್ತಸಾಲೆ (ಕೆಂಪಕ್ಕಿ) ಮೋಘಸಾಲೆ (ದಪ್ಪಅಕ್ಕಿ), ಗಂಧಸಾಲೆ(ಸುವಾಸಿತ ಅಕ್ಕಿ) ಮೊದಲಾದವು ಈ ಕಾಲದಲ್ಲಿ ಬೆಳೆಯುತ್ತಿದ್ದ ಪ್ರಮುಖ ತಳಿಗಳಾಗಿದ್ದವು. ಗೋಧಿ, ಜೋಳ, ರಾಗಿ, ನವಣೆ ಮೊದಲಾದವು ಇತರ ಪ್ರಮುಖ ಧಾನ್ಯಗಳಾಗಿದ್ದವು. ಇದಲ್ಲದೆ ತೊಗರಿ, ಉದ್ದು ಅವರೆ ಮೊದಲಾದ ಬೆಳೆಯ ತಳಿಗಳು ಅಥವಾ ದ್ವಿದಳ ಧಾನ್ಯಗಳನ್ನು ಬೆಳೆಯುತ್ತಿದ್ದರು. ಜೀರಿಗೆ, ಕೊತ್ತಂಬರಿ, ಮೆಣಸು, ಏಲಕ್ಕಿ, ಅರಿಶಿಣ, ಶುಂಠಿ ಮೊದಲಾದ ಮಸಾಲೆ ಪದಾರ್ಥಗಳನ್ನು ಉಪಯೋಗಿಸುತ್ತಿದ್ದರು. ಹಣ್ಣುಗಳಲ್ಲಿ ಬಾಳೆ, ಮಾವು, ಹಲಸು, ನಿಂಬೆ, ಕಿತ್ತಳೆ ಪ್ರಮುಖವಾದವುಗಳಾಗಿದ್ದವು. ಬದನೆಕಾಯಿ, ಸೌತೆಕಾಯಿ, ಕುಂಬಳಕಾಯಿ, ಹಾಗಲಕಾಯಿ ಹೀರೆಕಾಯಿ ಮೊದಲಾದ ತರಕಾರಿಗಳ ಉಲ್ಲೇಖ ಶಾಸನಗಳಲ್ಲಿ ದೊರೆಯುತ್ತದೆ.

ತತ್ಕಾಲೀನ ಜನಜೀವನದ ವರ್ಣಮಯ ರೀತಿನೀತಿಗಳನ್ನು ಹೊಯ್ಸಳರ ಶಿಲ್ಪ ಕಲಾಕೃತಿಗಳು ಒಳಗೊಂಡಿವೆ. ವಿವಿಧ ರೀತಿಯ ಪಾತ್ರೆಗಳಾದ ತಪ್ಪಲೆ, ಬೋಗುಣಿ, ಮಡಕೆ, ಹೂಜಿ, ತಟ್ಟೆ ಬಟ್ಟಲುಗಳ ವಿವಿಧ ಮಾದರಿಗಳ ಕೆತ್ತನೆಗಳನ್ನು ಕಾಣಬಹುದು. ಸಿಂಹಾಸನಗಳು, ವಿವಿಧ ಆಕಾರದ ಪೀಠಗಳು, ಮಂಚಗಳು, ತೊಟ್ಟಿಲುಗಳು ವಿವಿಧ ರೀತಿಯ ಉಡುಪುಗಳು ಅವುಗಳನ್ನು ಧರಿಸುವ ಬೇರೆಬೇರೆ ಶೈಲಿಗಳು ಸುಂದರವಾಗಿ ಸ್ಪಷ್ಟವಾಗಿ ಕೆತ್ತಲ್ಪಟ್ಟಿವೆ. ಸಾಮಾನ್ಯ ಮನುಷ್ಯರು ಪಂಚೆಯನ್ನುಡುತ್ತಿದ್ದರು.

ಸೊಂಟದ ಮೇಲ್ಭಾಗವು ಅನಾಚ್ಛಾದಿತವಾಗಿರುತ್ತಿತ್ತು. ಕೆಲವು ಉಡುಪುಗಳು ದೇಹಕ್ಕೆ ಬಿಗಿಯಾಗಿ ಹೊಂದಿನಂತಿರುವುವನ್ನು, ಗುಂಡಿಗಳ ವ್ಯವಸ್ಥೆಯಿದ್ದ ಒಂದು ರೀತಿಯ ಉದ್ದನೆಯ ನಿಲುವಂಗಿ (ಲಾಂಗ್ ಕೋಟ್)ಗಳು ಬಳಕೆಯಲ್ಲಿದ್ದವು. ಶರೀರದ ಮೇಲ್ಭಾಗವನ್ನು ಮುಚ್ಚಲು ಅಂಗವಸ್ತ್ರಗಳನ್ನು ಬಳಸುತ್ತಿದ್ದರು. ರಾಜನ ಉಡುಪು ಪಂಚೆ ಅಂಗವಸ್ತ್ರ ಹಾಗೂ ರುಮಾಲು ಶಿರೋಭೂಷಣಗಳನ್ನು ಒಳಗೊಂಡಿರುತ್ತಿತ್ತು. ಸೀರೆ ಸ್ತ್ರೀಯರ ಸಾಮಾನ್ಯ ಉಡುಗೆಯಾಗಿತ್ತು. ಲಂಗಗಳು ನರ್ತಕಿಯರ ಜನಪ್ರಿಯ ಉಡುಗೆಯಾಗಿತ್ತು. ಹಲವಾರು ಸ್ತ್ರೀ ಪ್ರತಿಮೆಗಳು ಬಿಗಿಯಾದ ಲಂಗ ತೊಟ್ಟಿರುವಂತೆ ಕೆತ್ತಲ್ಪಟ್ಟಿವೆ. ದೇಹದ ಮೇಲ್ಭಾಗವು ನಗ್ನವಾಗಿದ್ದು ಆಭರಣಗಳಿಂದ ಅಲಂಕೃತಗೊಂಡಿರುತ್ತಿತ್ತು. ವಸ್ತ್ರಗಳನ್ನು ಸೊಂಟದ ಮೇಲ್ಭಾಗದಲ್ಲಿ ನಡುಪಟ್ಟಿ ಅಥವಾ ಮೇಖಲೆಗಳಿಂದ ಕಟ್ಟಿರುವುದನ್ನು ಕಾಣಬಹುದಾಗಿದೆ. ಈ ನಡುಪಟ್ಟಿಗಳು ವಿಶೇಷವಾಗಿ ಸೂಕ್ಷ್ಮ ಕುಸುರಿಗೆಲಸದ ಕೆತ್ತನೆಗಳನ್ನೊಳಗೊಂಡಿವೆ. ಹಲವಾರು ರೀತಿಯ ಕೇಶಾಲಂಕಾರ ಪದ್ಧತಿಗಳು ಆ ಕಾಲದಲ್ಲಿ ಬಳಕೆಯಲ್ಲಿದ್ದವು. ಆ ಕಾಲದಲ್ಲಿದ್ದ ವಿವಿಧ ರೀತಿಯ ಆಭರಣಗಳ ವೈವಿಧ್ಯಪೂರ್ಣ ವಿಭಿನ್ನ ಮಾದರಿಗಳನ್ನು ದೇವಾಲಯಗಳ ಕೆತ್ತನೆಗಳಲ್ಲಿ ಕಾಣಬಹುದು. ಆ ಕಾಲದ ಆಭರಣಗಳು ಸೂಕ್ಷ್ಮ ಕುಸುರಿ ಕೆಲಸಗಳಿಂದ ಕೂಡಿದ್ದು ಉತ್ತಮ ಕುಶಲತೆಗೆ ಸಾಕ್ಷಿಯಾಗಿದ್ದವು. ಹಿಂದಿನ ಕಾಲಗಳಿಗಿಂತಲೂ ಹೆಚ್ಚಿನ ಸೂಕ್ಷ್ಮತೆ, ನಿಖರತೆ, ಸೌಂದರ್ಯ ಹಾಗೂ ವಿಭಿನ್ನ ಮಾದರಿಗಳಲ್ಲಿ ಇವು ರೂಪುಗೊಂಡಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ತಲೆ, ಕೊರಳು, ಕಿವಿ, ಸೊಂಟ, ಕಾಲು, ಮುಂಗಾಲು ಮೂಗುಗಳಲ್ಲಿ ಧರಿಸುತ್ತಿದ್ದ ಹಲವಾರು ಬಗೆಯ ಆಭರಣಗಳೂ ಕೆತ್ತಲ್ಪಟ್ಟಿವೆ. ಪಗಡೆ, ಕೋಲಾಟ, ಆನೆಕಲ್ಲಾಟ, ಕುಸ್ತಿ, ಬೇಟೆ, ಪ್ರಾಣಿಗಳೊಡನೆ ಹೋರಾಟ ಇವೇ ಮೊದಲಾದವು ಈ ಕಾಲದ ಮನರಂಜನಾ ಕ್ರೀಡೆಗಳಾಗಿದ್ದವು.

ಆರ್ಥಿಕ ಪರಿಸ್ಥಿತಿ

ಮೂರನೇ ನರಸಿಂಹ ಹಾಗೂ ರಾಮನಾಥನ ನಡುವೆ ನಡೆದ ನಿರಂತರ ಯುದ್ಧಗಳಿಂದಾಗಿ ರಾಜ್ಯದಲ್ಲಿ ರಾಜಕೀಯ ಅಶಾಂತಿ ಇದ್ದರೂ ಈ ಕಾಲವು ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ್ದಿತು. ವ್ಯಾಪಾರ ವಾಣಿಜ್ಯಗಳು ಬಹಳವಾಗಿ ಅಭಿವೃದ್ಧಿ ಹೊಂದಿದ್ದವು. ವ್ಯಾಪಾರಿಗಳಲ್ಲಿ ಉತ್ತಮ ಮಟ್ಟದ ನೈತಿಕತೆ ಕಂಡು ಬರುತ್ತಿತ್ತು. ಜಮೀನಿನ ಮೇಲಿನ ಖಾಸಗೀ ಒಡೆತನವು ಈ ಕಾಲದ ಆರ್ಥಿಕ ವ್ಯವಸ್ಥೆಯ ಮುಖ್ಯ ಲಕ್ಷಣವಾಗಿತ್ತು. ರಾಜನು ಕೇವಲ ಜಮೀನಿನ ಮೇಲಿನ ತೆರಿಗೆಯನ್ನು ವಸೂಲಿ ಮಾಡಬಹುದಾಗಿದ್ದಿತು. ರಾಜನಿಗೇ ಪ್ರತ್ಯೇಕ ಜಮೀನಿರುತ್ತಿದ್ದಿತು. ಜಮೀನಿನ ಒಡೆತನ, ಪರಭಾರೆ, ಉಪಭಾಗಗಳಲ್ಲಿ ವಿವಿಧ ಪದ್ಧತಿಗಳು ಬಳಕೆಯಲ್ಲಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ಭೂರಹಿತ ವ್ಯವಸಾಯಗಾರರಿಗೆ ಭೂಮಾಲೀಕರು ಭೂಮಿಯನ್ನು ಗುತ್ತಿಗೆಗೆ ಕೊಡಲು

ಇದ್ದ ನಿಯಮ ನಿಬಂಧನೆಗಳ ಉಲ್ಲೇಖ ಹಲವಾರು ಶಾಸನಗಳಲ್ಲಿ ದೊರೆಯುತ್ತದೆ. ಗುತ್ತಿಗೆದಾರನ ಜಮೀನಿನ ಉತ್ಪಾದನೆಯ ಉಪಭೋಗವನ್ನಲ್ಲದೆ ಆ ಜಮೀನನ್ನು ಬೇರಾವುದೇ ಉದ್ದೇಶಕ್ಕಾಗಿ ಬಳಸುವಂತಿರಲಿಲ್ಲ. ಸಂಘ ಸಂಸ್ಥೆಗಳ ವ್ಯವಸ್ಥಿತ ಪದ್ಧತಿ ಪಟ್ಟಣ ಪ್ರದೇಶದ ಅರ್ಥ ವ್ಯವಸ್ಥೆಯ ಪ್ರಮುಖ ಲಕ್ಷಣವಾಗಿದ್ದಿತು. ಸೆಟ್ಟಿಗುಟ್ಟರು, ನಾನಾದೇಶಿಗಳು, ವೀರ ಬಣಜಿಗರು, ಉಭಯ ನಾನಾದೇಶಿಗಳು ಎಂಬ ವಿವಿಧ ವಣಿಕ ಸಂಘಗಳ ಉಲ್ಲೇಖಗಳು ಶಾಸನಗಳಲ್ಲಿ ದೊರೆಯುತ್ತವೆ. ಕೈಗಾರಿಕೆಗಳು ದೇಶದ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬಾಗಿದ್ದು ದೇಶದ ಹೆಚ್ಚಿನ ಆದಾಯದ ಮೂಲಗಳಾಗಿದ್ದವು. ಬಟ್ಟೆ ಗಿರಣಿಗಳು, ಬೆಲ್ಲದ ಗಾಣಗಳು ಎಣ್ಣೆ ಗಿರಣಿಗಳು, ಗಣಿ ಹಾಗೂ ಲೋಹ ಗಾರಿಕೆಗಳು ಪ್ರಮುಖವಾದ ಕೈಗಾರಿಕೆಗಳಾಗಿದ್ದವು.

ಆನೆ, ಕುದುರೆ, ಒಂಟೆ, ಕುದುರೆ ಸಾರೋಟು, ಎತ್ತಿನ ಗಾಡಿಗಳು ಸಾರಿಗೆ ಸಂಪರ್ಕ ವ್ಯವಸ್ಥೆಯ ಮೂಲಾಧಾರಗಳಾಗಿದ್ದವು. ಈ ವಿಧದ ಸಾರಿಗೆಗಳ ವಿವರವನ್ನು ಪೂರ್ಣವಾಗಿ ಸೋಮನಾಥಪುರದ ದೇವಾಲಯದ ಕೆತ್ತನೆಗಳಲ್ಲಿ ಕಾಣಬಹುದಾಗಿದೆ. ಇದರಿಂದಾಗಿ ಈ ಕಾಲದಲ್ಲಿ ಸುವ್ಯವಸ್ಥಿತವಾದ ಸಾರಿಗೆ ಸಂಪರ್ಕವು ಇದ್ದಿತೆಂಬುದು ತಿಳಿದುಬರುತ್ತದೆ.

ಧಾರ್ಮಿಕ ಪರಿಸ್ಥಿತಿ

ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ ಹೊಯ್ಸಳರ ಕಾಲವು ಅತ್ಯಂತ ಪ್ರಮುಖವಾದ ಪಾತ್ರ ವಹಿಸಿದೆ. ಜೈನಧರ್ಮವು ಹೊಯ್ಸಳ ಸಾಮ್ರಾಜ್ಯದ ಪ್ರಬಲವೂ, ಪ್ರಮುಖವೂ ರಾಜಾಶ್ರಯ ಪಡೆದ ಧರ್ಮವೂ ಆಗಿತ್ತು. ಮೂರನೆಯ ನರಸಿಂಹನೂ ಸಹ ಜೈನ ಧರ್ಮಾಭಿಮಾನಿಯಾಗಿದ್ದು ಜೈನ ಬಸದಿಗಳಿಗೆ ಅನೇಕ ದಾನ ದತ್ತಿಗಳನ್ನು ನೀಡಿದ್ದನು. ಕ್ರಿ.ಶ. 1254 ರಲ್ಲಿ ಸಿಂಹಾಸನಾರೋಹಣ ಮಾಡಿದಾಗ ದ್ವಾರಸಮುದ್ರದ ದಣ್ಣಾಯಕ ಬೊಪ್ಪದೇವನಿಂದ ನಿರ್ಮಿತವಾದ ವಿಜಯ ಪಾರ್ಶ್ವ ಬಸದಿಗೆ ಭೇಟಿಕೊಟ್ಟು ಕಾಣಿಕೆಗಳನ್ನು ಅರ್ಪಿಸಿದನು. ತನ್ನ ಉಪನಯನದ ಸಂದರ್ಭದಲ್ಲಿಯೂ ಇದೇ ಬಸದಿಗೆ ಹಲವಾರು ದಾನಗಳನ್ನು ನೀಡಿದ ಬಗ್ಗೆ ಶಾಸನಗಳಲ್ಲಿ ಉಲ್ಲೇಖಗಳಿವೆ. 'ನೇಮಿಚಂದ್ರ ಪಂಡಿತದೇವ'ನು ಮೂರನೆಯ ನರಸಿಂಹನ ರಾಜ ಗುರುವಾಗಿದ್ದನು. ಈ ಕಾಲದಲ್ಲಿ ಹಲವಾರು ನೂತನ ಬಸದಿಗಳ ನಿರ್ಮಾಣವಾಯಿತು. ಅನೇಕ ಬಸದಿಗಳನ್ನು ಜೀರ್ಣೋದ್ಧಾರಗೊಳಿಸಲಾಯಿತು. ಸಮಾಜದಲ್ಲಿ ಜೈನದರ್ಶನಕ್ಕೆ ಅತ್ಯಂತ ಪ್ರಮುಖವಾದ ಸ್ಥಾನವಿದ್ದಿತು.

ವೈಷ್ಣವ ಧರ್ಮವು ಸಹ ಹೊಯ್ಸಳರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿದ್ದಿತು. ಈ ಧರ್ಮದ ಜನಪ್ರಿಯತೆಯಿಂದಾಗಿ ಅನೇಕ ಅಗ್ರಹಾರಗಳೂ, ವಿಷ್ಣುವಿನ ಹಲವಾರು ದೇವಾಲಯಗಳು ನಿರ್ಮಾಣಗೊಂಡವು. ಅವುಗಳಲ್ಲಿ ಮುಖ್ಯವಾದುವೆಂದರೆ ತುರುವೇಕೆರೆಯ ಚೆನ್ನಕೇಶವ ದೇವಾಲಯ, ಶೆಟ್ಟಿಕೆರೆಯ ಯೋಗ ಮಾಧವ

ದೇವಾಲಯ, ಬೂದನೂರಿನ ಅನಂತಪದ್ಮನಾಭ ಸ್ವಾಮಿ ದೇವಾಲಯ, ವಿಷ್ಣುಸಂತೆಯ ಲಕ್ಷ್ಮೀನರಸಿಂಹ ದೇವಾಲಯ, ಬೆಳ್ಳೂರಿನ ಮಾಧವರಾಯ ಸ್ವಾಮಿ ದೇವಾಲಯ. ಮೂರನೆಯ ನರಸಿಂಹನು ಪ್ರಸಿದ್ಧ ತೀರ್ಥಕ್ಷೇತ್ರವಾದ ಗಯೆಯ ವಿಷ್ಣುಪಾದ ದೇವಾಲಯದ ಪೋಷಕನಾಗಿದ್ದನು. ಇದೇ ಕಾಲದಲ್ಲಿ ಹಲವಾರು ಶಿವಾಲಯಗಳೂ ನಿರ್ಮಾಣವಾದವು. ಹಲವಾರು ಶಿವಾಲಯಗಳಿಗೆ ಹೇರಳವಾಗಿ ದತ್ತಿಗಳನ್ನು ಬಿಡಲಾಗಿದೆ. ತುರುವೇಕೆರೆಯ ಮೂಲ ಶಂಕರ ದೇವಾಲಯ, ಅಘಲಯದ ಮಲ್ಲೇಶ್ವರ ದೇವಾಲಯ ಸೋಮನಾಥಪುರದ ಪಂಚಲಿಂಗೇಶ್ವರ ದೇವಾಲಯ, ಬೂದನೂರಿನ ಕಾಶೀ ವಿಶ್ವೇಶ್ವರ ದೇವಾಲಯ ವಿಷ್ಣುಸಂತೆಯ ಬಾಲಲಿಂಗೇಶ್ವರ (ಭೂತಲಿಂಗೇಶ್ವರ) ದೇವಾಲಯಗಳು ಪ್ರಮುಖವಾದವುಗಳಾಗಿವೆ. ಧರ್ಮಸಹಿಷ್ಣುತೆ ಈ ಕಾಲದ ಪ್ರಮುಖ ಲಕ್ಷಣವಾಗಿದ್ದಿತು. ರಾಜನೂ ಪ್ರಜೆಗಳೂ ಏಕ ರೀತಿಯಲ್ಲಿ ಧರ್ಮಸಹಿಷ್ಣುಗಳಾಗಿದ್ದರು.

ಸಾಹಿತ್ಯ

ಮೂರನೆಯ ನರಸಿಂಹನ ಕಾಲದಲ್ಲಿ ಅನೇಕ ಬಗೆಯ ವಿದ್ಯಾಸಂಸ್ಥೆಗಳು ಅಸ್ತಿತ್ವದಲ್ಲಿದ್ದವೆಂಬುದು ಶಾಸನಗಳಿಂದ ತಿಳಿದುಬರುತ್ತದೆ. ಅವುಗಳಲ್ಲಿ ಮುಖ್ಯವಾದವು ಅಗ್ರಹಾರಗಳು, ಬ್ರಹ್ಮಪುರಿಗಳು, ಘಟಿಕೆಗಳು, ಮಠಗಳು ಮತ್ತು ದೇವಾಲಯಗಳು; ಅಗ್ರಹಾರಗಳು ಒಂದು ಸಣ್ಣ ವಿಶ್ವವಿದ್ಯಾನಿಲಯದ ಕಾರ್ಯವನ್ನು ನಿರ್ವಹಿಸುತ್ತಿದ್ದವು. ಟಿ. ನರಸೀಪುರ ತಾಲ್ಲೂಕಿನ ಸೋಮನಾಥಪುರ ಅಗ್ರಹಾರವು ವಿದ್ಯಾನಿಧಿ ಪ್ರಸನ್ನ ಸೋಮನಾಥಪುರ ಎಂದೇ ಪ್ರಸಿದ್ಧವಾಗಿದ್ದಿತು. ಹಾಗೂ ವೇದವಿದರಾದ ಪಂಡಿತರುಗಳಿಂದ ತುಂಬಿತ್ತು. ಇಲ್ಲಿನ ಪಂಡಿತರು ಎಲ್ಲಾ ರೀತಿಯ ಶಾಸ್ತ್ರ, ಆಗಮ, ಮಂತ್ರ, ತಂತ್ರ ಮತ್ತು ತರ್ಕವನ್ನು ಬಲ್ಲವರಾಗಿದ್ದರು. ವೇದಗಳು ಆ ಕಾಲದ ಅತ್ಯಂತ ಜನಪ್ರಿಯ ಅಭ್ಯಾಸದ ವಿಷಯವಾಗಿತ್ತು. ಕ್ರಿ.ಶ. 1290 ರಲ್ಲಿ ಪೆರುಮಲೆ ದಂಡನಾಯಕನು ವೈಲಂಗಿ ಎಂಬ ಗ್ರಾಮವನ್ನು ಋಗ್ವೇದ, ನಾಗರೀ, ಕನ್ನಡ, ತಮಿಳು, ಮರಾಠಿಗಳನ್ನು ಕಲಿಸುವ ವಿದ್ಯಾಲಯಕ್ಕೆ ದಾನ ಕೊಡುವ ಉದ್ದೇಶದಿಂದಲೇ ಕೊಂಡಿರುವುದಕ್ಕೆ ದಾಖಲೆಗಳಿವೆ.

ಕನ್ನಡ ಸಾಹಿತ್ಯದ ದೃಷ್ಟಿಯಿಂದಲೂ ಮೂರನೆಯ ನರಸಿಂಹನ ಕಾಲವು ಅತ್ಯಂತ ಮಹತ್ವದ್ದಾಗಿದೆ. ಈ ಕಾಲದಲ್ಲಿದ್ದ ಮಹಾನಂದಿಯ ಕೃತಿಗಳಾದ 'ಶಾಸ್ತ್ರಸಾರ ಸಮುಚ್ಚಯ' ಪದಾರ್ಥಸಾರ, ಸಿದ್ಧಾಂತ ಸಾರಗಳು ಬಹಳ ಪ್ರಮುಖವಾದವುಗಳಾಗಿವೆ. ನೇಮಿನಾಥಪುರಾಣದ ಕರ್ತೃವಾದ ಮಹಾಬಲನು ಕೇತಯ ನಾಯಕನ ಆಶ್ರಯದಲ್ಲಿದ್ದನು. ಶಬ್ದಮಣಿ ದರ್ಪಣದ ಕರ್ತೃ ಕೇಶಿರಾಜನು ಈ ಕಾಲದ ಪ್ರಮುಖ ಕವಿ. ಶಬ್ದಮಣಿ ದರ್ಪಣ ಕನ್ನಡ ವ್ಯಾಕರಣಶಾಸ್ತ್ರದ ಅಪೂರ್ವ ಗ್ರಂಥವಾಗಿದೆ. ಇದು ಆತನನ್ನು ಉತ್ತಮ ಕವಿ ಹಾಗೂ ವ್ಯಾಕರಣಶಾಸ್ತ್ರ ಪರಿಣಿತ ಎಂಬುದನ್ನು ನಿರೂಪಿಸುತ್ತದೆ. ಪಂಚಪರಮೇಷ್ಠಿಗಳ ಗೋಷ್ಠಿ ಕೃತಿಯ ಲೇಖಕನಾದ ಬಾಲಚಂದ್ರಪಂಡಿತನು

ಈ ಕಾಲದ ಮತ್ತೊಬ್ಬ ಪ್ರಖ್ಯಾತ ಕವಿ. ರಾಜಗುರುವಾಗಿದ್ದ ಕುಮುದೇಂದು ಪ್ರಸಿದ್ಧ ಜೈನ ಪಂಡಿತನಾಗಿದ್ದನು. ಈತನು ಬರೆದಿರುವ ಜೈನರಾಮಾಯಣವು ಕುಮುದೇಂದು ರಾಮಾಯಣ ಎಂದೇ ಪ್ರಸಿದ್ಧಿಯಾಗಿದೆ.

ಹೊಯ್ಸಳ ಕಾಲ ವಾಸ್ತುಶಿಲ್ಪದ ಹಿರಿಮೆಯು ಕೊನೆಯ ಹಂತವಾಗಿದ್ದಿತು. ಮೂರನೆಯ ನರಸಿಂಹನು ನಾಲ್ಕು ಮಹಾದೇವಾಲಯಗಳನ್ನು ಇತರ ಹನ್ನೊಂದು ಸಣ್ಣ ದೇವಾಲಯಗಳನ್ನು ನಿರ್ಮಿಸಿದನು. ಈ ಕಾಲದ ವಾಸ್ತುಶಿಲ್ಪವನ್ನು ಮೂರು ಶ್ರೇಣಿಗಳಲ್ಲಿ ಅಭ್ಯಸಿಸಬಹುದು. ನರಸಿಂಹನ ಕಾಲದಲ್ಲಿದ್ದ ಕೆಲವು ಪ್ರಖ್ಯಾತ ಶಿಲ್ಪಿಗಳು ಈ ದೇವಾಲಯಗಳ ಅಲಂಕರಣ ಮಾಡಿದುದಾಗಿ ಶಾಸನಗಳಿಂದ ತಿಳಿದುಬರುತ್ತದೆ. ಅವರುಗಳಲ್ಲಿ ಮುಖ್ಯರಾದವರೆಂದರೆ ಮಲ್ಲಿತಮ್ಮ ಮತ್ತು ಮಸಣಿತಮ್ಮ, ಚಾಮಯ್ಯ, ಭರ್ಮಯ, ಚೌಡೋಜ, ಭರತ, ನಂಜಯ ಯಳಮಸಯ್ಯ ಮುಂತಾದವರು.

ಹೊಯ್ಸಳ ನರಸಿಂಹನ ಕಾಲದ ದೇವಾಲಯಗಳು

I ವೈಷ್ಣವ ದೇವಾಲಯಗಳು

1 ಚನ್ನಕೇಶವ ದೇವಾಲಯ — ತುರುವೇಕೆರೆ, ತುಮಕೂರು ಜಿಲ್ಲೆ
ಕ್ರಿ.ಶ. 1258

2 ಯೋಗ ಮಾಧವ ದೇವಾಲಯ — ಶೆಟ್ಟಿಕೆರೆ, ತುಮಕೂರು ಜಿಲ್ಲೆ
ಕ್ರಿ.ಶ. 1261

3 ಕೇಶವ ದೇವಾಲಯ — ಸೋಮನಾಥಪುರ, ಮೈಸೂರು ಜಿಲ್ಲೆ
ಕ್ರಿ.ಶ. 1268

4 ಮಾಧವರಾಯ ದೇವಾಲಯ — ಬೆಳ್ಳೂರು, ಮಂಡ್ಯ ಜಿಲ್ಲೆ
ಕ್ರಿ.ಶ. 1284

5 ಲಕ್ಷ್ಮೀನರಸಿಂಹ ದೇವಾಲಯ — ವಿಘ್ನಸಂತೆ, ತುಮಕೂರು ಜಿಲ್ಲೆ
ಕ್ರಿ.ಶ. 1286

II ಶೈವ ದೇವಾಲಯಗಳು

1 ಮೂಲ ಶಂಕರೇಶ್ವರ ದೇವಾಲಯ — ತುರುವೇಕೆರೆ ತುಮಕೂರು ಜಿಲ್ಲೆ
ಕ್ರಿ.ಶ. 1260

2 ಮಲ್ಲೇಶ್ವರ ದೇವಾಲಯ — ಅಘಲಯ, ಮಂಡ್ಯ ಜಿಲ್ಲೆ
ಕ್ರಿ.ಶ. 1262

3 ಪಂಚಲಿಂಗೇಶ್ವರ ದೇವಾಲಯ — ಸೋಮನಾಥಪುರ, ಮೈಸೂರು ಜಿಲ್ಲೆ
ಕ್ರಿ.ಶ. 1268

III ನರಸಿಂಹನ ಕಾಲಕ್ಕೆ ಸಂಬಂಧಿಸಿದನೆಂದು ಹೇಳಲಾದ ದೇವಾಲಯಗಳು

1 ಚನ್ನಕೇಶವ ದೇವಾಲಯ — ನಾಗಲಪುರ, ತುಮಕೂರು ಜಿಲ್ಲೆ
2 ಅನಂತಪದ್ಮನಾಭಸ್ವಾಮಿ ದೇವಾಲಯ — ಹೊಸಬಿದನೂರು, ಮಂಡ್ಯ ಜಿಲ್ಲೆ
3 ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ — ಹೊಳೆನರಸಿಪುರ, ಹಾಸನ ಜಿಲ್ಲೆ
4 ಲಕ್ಷ್ಮೀನರಸಿಂಹ ದೇವಾಲಯ — ಭದ್ರಾವತಿ, ಶಿವಮೊಗ್ಗ ಜಿಲ್ಲೆ
5 ಕೇದಾರೇಶ್ವರ ದೇವಾಲಯ — ನಾಗಲಪುರ, ತುಮಕೂರು ಜಿಲ್ಲೆ
6 ಕಾಶೀ ವಿಶ್ವೇಶ್ವರ ದೇವಾಲಯ — ಹೊಸಬೂದನೂರು, ಮಂಡ್ಯ ಜಿಲ್ಲೆ.
7 ಬಾಲಲಿಂಗೇಶ್ವರ ದೇವಾಲಯ — ವಿಘ್ನಸಂತೆ, ತುಮಕೂರು ಜಿಲ್ಲೆ

ಮೇಲೆ ತಿಳಿಸಿರುವ ಈ ದೇವಾಲಯಗಳು ಕಲೆ ಮತ್ತು ವಾಸ್ತುಶಿಲ್ಪದಲ್ಲಿ ನರಸಿಂಹನಿಗೆ ಗಣನೀಯವಾದ ಸ್ಥಾನ ಲಭಿಸುವಂತೆ ಮಾಡಿದೆ.

ಮಧ್ಯ ಕಾಲೀನ ಭಾರತೀಯ ವಾಸ್ತುಶಿಲ್ಪ ಕ್ಷೇತ್ರದಲ್ಲಿ 11 ರಿಂದ 13 ನೇ ಶತಮಾನದ ಕೊನೆಯವರೆಗೆ ಅಸ್ತಿತ್ವದಲ್ಲಿದ್ದ, ನೋಡುಗರ ಮನಸ್ಸನ್ನು ಸೆರೆಹಿಡಿದಿಡುತ್ತಿದ್ದ, ಮರೆಯಲಾಗದಂಥ ದೃಶ್ಯಗಳನ್ನು ನಿರ್ಮಿಸುವ ಗುಣಗಳನ್ನು ಹೊಂದಿದ್ದ, ಒಂದು ವಿಶಿಷ್ಟ ವಾಸ್ತುಶಿಲ್ಪ ಪದ್ಧತಿ ಹೊಯ್ಸಳ ಶೈಲಿ. ಅದಕ್ಕೂ ಹಿಂದಿನ ಕಾಲದ ಭುವನೇಶ್ವರದ ರಾಜರಾಣಿ ಮಂದಿರದ ಅದ್ಭುತ ರಮ್ಯತೆ, ಖಜುರಾಹೋದಲ್ಲಿರುವ ಕಂದಾರಿಯ ಮಹಾದೇವ ಮಂದಿರದಲ್ಲಿ ಕಾಣುವ ಅಂತಸ್ಸತ್ವ, ಎಲ್ಲೋರಾದ ಕೈಲಾಸ ದೇವಾಲಯದ ಭವ್ಯತೆ-ಇವೆಲ್ಲ ಗುಣಗಳನ್ನು ಸಮನ್ವಯಗೊಳಿಸಿಕೊಂಡಿರುವುದರೊಂದಿಗೆ ವಾಸ್ತು ಮತ್ತು ಶಿಲ್ಪ ವಿಧಾನಗಳ ಸುಗಮ ಸಮ್ಮಿಳನವನ್ನು ಇಲ್ಲಿ ಕಾಣಬಹುದು.

ಹೊಯ್ಸಳ ದೇವಾಲಯಗಳನ್ನು ಔತ್ತರೇಯ-ದಾಕ್ಷಿಣಾತ್ಯ ಶೈಲಿಗಳ ಮಧ್ಯವರ್ತಿ ಎಂದು ಹೇಳಲಾಗಿದ್ದರೂ, ಅವುಗಳಲ್ಲಿ ಔತ್ತರೇಯ ಶೈಲಿಯ ಲಕ್ಷಣಗಳು ವಿರಳವಾಗಿದ್ದು ವಾಸ್ತು ಅಲಂಕರಣ ವಿಧಾನ ಮತ್ತು ಶಿಖರದ ಕೆಲವಂಶಗಳಲ್ಲಿ ಔತ್ತರೇಯ ಲಕ್ಷಣಗಳನ್ನು ಕಾಣಬಹುದು. ಹೊಯ್ಸಳ ರಾಜ್ಯದ ಪರಿಸರದಲ್ಲಿ ರೂಢಿಯಲ್ಲಿದ್ದ ದಾಕ್ಷಿಣಾತ್ಯ ಶೈಲಿಯ ಪ್ರಭಾವ ಹೆಚ್ಚು ಸ್ಪಷ್ಟವಾಗಿದೆ. ಹೊಯ್ಸಳ ರೂವಾರಿಗಳು ಔತ್ತರೇಯ - ದಾಕ್ಷಿಣಾತ್ಯ ವಾಸ್ತು ಶೈಲಿಗಳ ಪ್ರಮುಖ ಲಕ್ಷಣಗಳನ್ನು ಅಳವಡಿಸಿಕೊಂಡಿದ್ದರೂ, ಅವಕ್ಕೆ ತಮ್ಮ ಪ್ರತಿಭಾಶಕ್ತಿಯ ದ್ಯೋತಕವಾಗಿ ಒಂದು ಹೊಸ ರೂಪವನ್ನು ಕೊಟ್ಟು ಶೈಲಿಯ ಸೊಬಗನ್ನು ದ್ವಿಗುಣಗೊಳಿಸಿದ್ದಾರೆ. ಹೊಯ್ಸಳ ಶೈಲಿ ಇತರ ಶೈಲಿಗಳ ಪ್ರಧಾನ ಲಕ್ಷಣಗಳ ಹೊರ ರೂಪದ ಒಗ್ಗೂಡಿಕೆಗೆ ಸೀಮಿತವಾಗಿ ನಿಲ್ಲದೆ, ಅವುಗಳ ಸಮಗ್ರ ಸಂಯೋಜನೆಯನ್ನು ಸಾಧಿಸುವುದರೊಂದಿಗೆ, ಕೆಲವು ಹೊಸ ವಿಶಿಷ್ಟ ಅಂಶಗಳನ್ನೂ ಸೃಷ್ಟಿಸಿತು. ಹೊಯ್ಸಳ ಶಿಲ್ಪಿಗಳು ಸರಳತೆಯನ್ನು ತಿರಸ್ಕರಿಸಿ, ಅನುಕರಣೆಯ ಮಾರ್ಗವನ್ನು ತ್ಯಜಿಸಿ, ಅಲಂಕರಣ ಶೀಲ ಸೂಕ್ಷ್ಮ ಕೆತ್ತನೆಗಳನ್ನು ಸೃಷ್ಟಿಸುವ ಮೂಲಕ ಇತರ ಶೈಲಿಗಳ ವಾಸ್ತುರೂಪಗಳನ್ನು ಭವ್ಯ ಕಲಾ ಭಾಂಡಾರಗಳಾಗಿ ಪರಿವರ್ತಿಸಿದರು.

ಅನ್ನಪೂರ್ಣಾ ಎಂ. ನಾಯಕ್

ಬೇಡರು

ಸಂಸ್ಕೃತದ 'ವ್ಯಾಧ' ತದ್ಭವವಾಗಿ ಕನ್ನಡದ ಬೇಡ ಆಗಿದೆ. ಬೇಡ ಎಂದರೆ ಬೇಟೆಗಾರ ಎಂದು ಅರ್ಥೈಸಬಹುದು. ಹಿಂದೆ ಬೇಡರು ಕಾಡಿನಲ್ಲಿ ವಾಸಿಸುತ್ತ, ಮೃಗಗಳನ್ನು ಬೇಟೆಯಾಡಿ, ಆ ವೃತ್ತಿಯನ್ನೇ ಅವಲಂಬಿಸಿ ಪ್ರಸಿದ್ಧರಾದರು. ಕಾಡಿನಲ್ಲಿ ದುಷ್ಟ ಮೃಗಗಳನ್ನು ಹಿಂಬಾಲಿಸಿ ಹಿಡಿದು ಹೊಡೆದು, ಕೊಲ್ಲುವುದರಲ್ಲಿ ಇವರು ತುಂಬಾ ನಿಪುಣರು. ಅಲ್ಲದೆ ಕಾಡಿನ ಸಂಪತ್ತನ್ನೇ ತಮ್ಮ ಜೀವನದ ಮುಖ್ಯ ಆಧಾರವಾಗಿಟ್ಟುಕೊಂಡು ಜೀವನ ಸಾಗಿಸುತ್ತಿದ್ದರು. ಒಂದು ಕಡೆ ನೆಲೆಯಾಗಿ ನಿಲ್ಲದೆ ಅಲೆಮಾರಿಗಳಾಗಿ ಜೀವಿಸುತ್ತಿದ್ದ ಇವರು ಈಗ ಹಳ್ಳಿ ಮತ್ತು ಪಟ್ಟಣಗಳಲ್ಲಿ ನೆಲಸಿ ನಾಗರಿಕ ಜೀವನಕ್ಕೆ ಹೊಂದಿಕೊಳ್ಳುತ್ತಿರುವುದನ್ನು ಕಾಣಬಹುದು. ಬೆಳಗಾಂ, ಬಳ್ಳಾರಿ ಮತ್ತು ಚಿತ್ರದುರ್ಗದ ಕಡೆ ಇವರ ಸ್ಥಿತಿ ತೀರಾ ಕೆಳಮಟ್ಟದಲ್ಲಿದೆ. ಬೆಳಗಾಂ ಕಡೆ ಮಲ ಹೊರುವ ಪದ್ಧತಿ ಈಗಲೂ ಇವರಲ್ಲಿ ಇರುವುದು ಶೋಚನೀಯ ಸಂಗತಿ.

ಬೇಡರು ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ ; ಆದರಲ್ಲೂ ಆಂಧ್ರ ಮತ್ತು ಕರ್ನಾಟಕನಲ್ಲಿ ಬೇಡರು ವಿಶೇಷವಾಗಿದ್ದಾರೆ. ಕರ್ನಾಟಕದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲೂ ಬೇಡರು ನೆಲೆಸಿರುವುದನ್ನು ಕಾಣಬಹುದು. ತೆಲುಗಿನಲ್ಲಿ ಇವರನ್ನು ಬೋಯಿಗಳೆಂದು ಕರೆಯುತ್ತಾರೆ. 1971 ನೇ ಜನಗಣತಿಯ ಪ್ರಕಾರ ಇವರ ಜನಸಂಖ್ಯೆ ಕರ್ನಾಟಕದಲ್ಲಿ 19,19,621 ಅಥವಾ ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡಾ 5.06 ಎಂದು ತಿಳಿದು ಬಂದಿದೆ. ಚಿತ್ರದುರ್ಗ, ರಾಯಚೂರು, ಬಳ್ಳಾರಿ ಜಿಲ್ಲೆಗಳಲ್ಲಿ ಇವರ ಸಂಖ್ಯೆ ಬಹಳ ಹೆಚ್ಚಾಗಿದೆ. ಬೆಳಗಾಂ, ಬಿಜಾಪುರ, ಧಾರವಾಡಗಳಲ್ಲೂ ಸಾಕಷ್ಟು ಜನಸಂಖ್ಯೆಯಿದೆ.

ಮರಾಠಿಯಲ್ಲಿ ಇವರನ್ನು ರಾಮೋಶಿ (ರಣವಾಸ) ಎಂದು ಕರೆಯುತ್ತಾರೆ. ಮರಾಠಿಯಲ್ಲಿ ರಣವಾಸಿ ಎಂದರೆ ಕ್ಯಾಂಪಬೆಲ್ ಅವರ ಪ್ರಕಾರ (Bombay Gazetteer, Vol. XIII, Part 1, p. 400) ವನವಾಸಿ ಅಥವಾ ಅರಣ್ಯವಾಸಿ ಎಂಬುದಾಗಿ ; ಅಲ್ಲದೆ ಇವರು ಹೆಚ್ಚಾಗಿ ಹಳ್ಳಿಯಿಂದ ಹೊರಗೆ ವಾಸಮಾಡುವವರು. ಈ ರಾಮೋಶಿಗಳು ತಮ್ಮ ಹೆಸರಿನ ಮುಂದೆ ನಾಯಕ ಅಥವಾ ನಾಯಕ್‌ಲಾಕ್

ಎಂಬ ಉಪನಾಮವನ್ನು ಇಟ್ಟುಕೊಳ್ಳುತ್ತಾರೆ. ತಮ್ಮ ಹೆಸರಿನ ಮುಂದೆ ನಾಯಕ್ ಎಂದಿಟ್ಟುಕೊಳ್ಳುವುದರಿಂದ ಮತ್ತು ಬೇಡರಂತೆಯೇ ದರೋಡೆ, ಸುಲಿಗೆ ಕೆಲಸಗಳಲ್ಲಿ ನಿರತರಾಗಿದ್ದುದರಿಂದ ಮತ್ತು ಬೆಳಗಾಂ ಕಡೆಯಿರುವ ರಾಮೋಶಿ ಗಂಡಸರ ಹೆಸರು ಬೇಡರ ಹೆಸರುಗಳನ್ನೇ ಹೋಲುವುದರಿಂದ ಬೇಡರು, ರಾಮೋಶಿಗಳು ಒಂದೇ ಎಂದು ಹೇಳಬಹುದು.[1] ಆದ್ದರಿಂದ ಬೇಡರನ್ನು ರಾಮೋಶಿಗಳೆಂತಲೂ ಕರೆಯುತ್ತಾರೆ.

ಪೌರಾಣಿಕವಾಗಿ ಪ್ರತಿಯುಗದಲ್ಲೂ ಈ ಜನಾಂಗದ ಕೆಲವು ವ್ಯಕ್ತಿಗಳು ಪ್ರಮುಖರಾಗಿದ್ದುದು ಕಾಣಬರುತ್ತದೆ. ಸತ್ಯಯುಗದ ಚಂದ್ರಹಾಸ, ತ್ರೇತಾಯುಗದ ಗುಹ ಮತ್ತು ಶಬರಿ, ದ್ವಾಪರಯುಗದ ಏಕಲವ್ಯ ಇವರೆಲ್ಲರೂ ಬೇಡರೆ. ಅಲ್ಲದೆ ರಾಮಾಯಣವನ್ನು ಬರೆದ ಮಹರ್ಷಿ ವಾಲ್ಮೀಕಿ ಸಹ ಬೇಡರವನೇ ಎಂಬ ಹೇಳಿಕೆ ಇದೆ. ಇವರು ವಾಲ್ಮೀಕಿಯೇ ತಮ್ಮ ಕುಲದ ಆದಿಪುರುಷನೆಂದು ಹೇಳುತ್ತಾರೆ. ಮಹರ್ಷಿ ವಾಲ್ಮೀಕಿ ಹಿಂದೆ ಒಬ್ಬ ದರೋಡೆಕಾರನಾಗಿದ್ದನು; ಪ್ರವಾಸಿಗಳನ್ನು ಅಡ್ಡಹಾಕಿ ಅವರ ಬಳಿ ಇದ್ದುದನ್ನು ದೋಚುವುದೇ ಇವನ ಕಸುಬಾಗಿತ್ತು. ಒಂದು ಸಾರಿ ಭಾರದ್ವಾಜ ಮಹರ್ಷಿಗಳು ಹೋಗುತ್ತಿದ್ದ ದಾರಿಗೆ ಅಡ್ಡಗಟ್ಟಿ ಅವರಲ್ಲಿದ್ದ ವಸ್ತುಗಳನ್ನು ಕೊಡಲು ಕೇಳಿದಾಗ, ಭಾರದ್ವಾಜರ ಬಳಿ ಕೊಡಲು ಏನೂ ಇರುವುದಿಲ್ಲ, ಆಗ ಭಾರದ್ವಾಜರು ಅವನಿಗೆ 'ರಾಮ ರಾಮ' ಎಂದು ಉಚ್ಚರಿಸಲು ಉಪದೇಶ ಮಾಡುತ್ತಾರೆ. ಆದರೆ ಅವನ ಬಾಯಿಂದ ರಾಮ ಎಂದು ಉಚ್ಚರಿಸಲು ಸಾಧ್ಯವಾಗದಿದ್ದಾಗ ಅವನನ್ನು ಎರಡು ಮರಗಳ ಪಕ್ಕದಲ್ಲಿ ಕೂರಿಸಿ ಆ ಮರ, ಈ ಮರ ಎಂದು ಉಚ್ಚರಿಸಲು ಹೇಳಿ ಹೊರಟು ಹೋಗುತ್ತಾರೆ. ನಂತರ ಇವನು ಹೇಳುತ್ತಿದ್ದ ಆ ಮರ, ಈ ಮರ ಎಂಬುದು ಕೊನೆಗೆ ರಾಮ ರಾಮ ಎಂದು ಕೇಳಿಸುವಂತಾಯಿತು. ಕೊನೆಗೆ ಎಷ್ಟೋ ವರ್ಷಗಳ ಕಾಲ ಅಲ್ಲೇ ಕುಳಿತು ರಾಮನನ್ನು ಧ್ಯಾನಿಸುತ್ತಿದ್ದುದರಿಂದ ಅವನ ಮೇಲೆ ಹುತ್ತ (ವಲ್ಮೀಕ) ಬೆಳೆದು ವಾಲ್ಮೀಕಿ ಎಂಬ ಹೆಸರಿನಿಂದ ಪ್ರಸಿದ್ಧಿಯಾಗುತ್ತಾನೆ. ಮುಂದೆ ಇವನಿಗೆ ಜ್ಞಾನೋದಯವಾಗಿ ರಾಮಾಯಣವನ್ನು ಬರೆದು ಒಬ್ಬ ಮಹರ್ಷಿಯೆನಿಸಿಕೊಳ್ಳುತ್ತಾನೆ. ಇದೇ ಕಾರಣದಿಂದ ಬೇಡರು ತಾವು ವಾಲ್ಮೀಕಿಗಳೆಂದು ಕರೆದುಕೊಳ್ಳುತ್ತಾರೆ.

ಸಾಮಾನ್ಯವಾಗಿ ಕಪ್ಪು ಮೈಬಣ್ಣ, ಕಸುವುಳ್ಳ ಮೈಕಟ್ಟು, ಗರಡಿ ಸಾಧನೆ; ಕುಸ್ತಿಯಲ್ಲಿ ಪ್ರೀತಿ, ಪೀಡಿಸುವಂತಹ ದೇವತೆಗಳ ಆರಾಧನೆ ಇವರ ಮುಖ್ಯ ಲಕ್ಷಣಗಳು; ಅಲ್ಲದೆ ಇವರು ಉಗ್ರಸ್ವಭಾವದವರು.[2] ಕಾಡಿನಲ್ಲಿ ದುಷ್ಟ ಮೃಗಗಳನ್ನು ಹಿಂಬಾಲಿಸಿ ಹಿಡಿದು, ಹೊಡೆದು, ಕೊಲ್ಲುವುದರಲ್ಲಿ ಇವರು ತುಂಬಾ ಗಟ್ಟಿಗರು. ಹುಲಿ, ಚಿರತೆ, ಕರಡಿ ಹಿಡಿಯುವುದರಲ್ಲಿ ವ್ಯಾಸಬೇಡರು ಎತ್ತಿದ ಕೈ. ಆದ್ದರಿಂದಲೇ ಇವರಿಗೆ ಗುರಿಕಾರರೆಂತಲೂ ಕರೆಯುವುದುಂಟು.

ಡಾ. ಪಿ.ಬಿ. ದೇಸಾಯಿಯವರು ತಮ್ಮ 'ಮದಗಜ ಮಲ್ಲ' ಎಂಬ ಪುಸ್ತಕದಲ್ಲಿ ಈ ರೀತಿ ಅಭಿಪ್ರಾಯಪಡುತ್ತಾರೆ. "ಬೇಡ ಜನಾಂಗದ ಪ್ರಾಚೀನ ಚರಿತ್ರೆ ಕನಿಷ್ಠ 12-13 ನೇ ಶತಮಾನದಷ್ಟಾದರೂ ಹಿಂದಿನ ಕಾಲದವರೆಗೆ ಹೋಗುವುದು.

ಬೇಡರು ಮೊದಲಿನಿಂದಲೂ ದಂಡಿನ ಊಳಿಗಕ್ಕಾಗಿ ಮೀಸಲಾಗಿ ನಿಂತಿದ್ದ ಕ್ಷಾತ್ರ ವೃತ್ತಿಯ ವೀರ ಜನಾಂಗ. ವಿಜಯನಗರದ ಸ್ಥಾಪನೆಯ ಪೂರ್ವದಲ್ಲಿ ಮಹಮ್ಮದೀಯರ ಧಾಳಿಯನ್ನು ಎದುರಿಸಿ, ಕೆಲಕಾಲ ತಡೆದು ನಿಲ್ಲಿಸಿ ಸ್ವರಾಜ್ಯ ಮತ್ತು ಸ್ವಧರ್ಮದ ರಕ್ಷಣೆಯ ಆದರ್ಶವನ್ನು ಎತ್ತಿಹಿಡಿದು ವಿಜಯನಗರದ ಸಂಸ್ಥಾಪಕರಿಗೆ ಮಾರ್ಗ ತೋರಿಸಿ ಕೊಟ್ಟವರು ಈ ಬೇಡರೇ. ವಿಜಯನಗರದ ಸೈನ್ಯದ ಬಹುಭಾಗವು ಈ ಬೇಡ ಕಾಲಾಳುಗಳ ಪಡೆಯಿಂದ ವ್ಯಾಪಿಸಿದ್ದಿತು. ತಾಳಿಕೋಟೆಯ ಯುದ್ಧದಲ್ಲಿ ವಿಜಯನಗರವು ಅನಾಥವಾದಾಗ ಪಕ್ಕದ ಗುಡ್ಡಗಾಡುಗಳಿಂದ ನಗರವನ್ನು ಕೊಳ್ಳೆ ಹೊಡೆದವರಲ್ಲಿ ಈ ಬೇಡರು ಸೇರಿದ್ದರು.[3]

ಮರಾಠರಿಗೂ ಔರಂಗಜೇಬನಿಗೂ ನಡೆದ ದೀರ್ಘಕಾಲದ ಹೋರಾಟದಲ್ಲಿ ಈ ಬೇಡರು ಪರ್ವತ ಶಿಖರಗಳಲ್ಲಿದ್ದ ತಮ್ಮ ದುರ್ಭೇದ್ಯ ವಸತಿಯಿಂದಲೇ ಮುಸಲ್ಮಾನರಿಗೆ ಸಹಿಸಲಸದಳವಾದ ಉಪಟಳ ಕೊಡುತ್ತಿದ್ದರು. ಆದರೆ ಹಿಂದೂ ಜನಾಂಗವಾದ ಮರಾಠರ ಮೇಲೆ ಹೆಚ್ಚಿನ ನಿಷ್ಠೆಯಿದ್ದಿತು.[4] ವಿಜಯನಗರದ ಅನಂತರ ಪ್ರಾಮುಖ್ಯತೆಗೆ ಬಂದ ಅನೇಕ ಪಾಳೆಯಗಾರ ರಾಜ್ಯಗಳಾದ ಚಿತ್ರದುರ್ಗ, ಮಧುಗಿರಿ, ತರೀಕೆರೆ, ಹರಪನ ಹಳ್ಳಿ, ಗುಮ್ಮನಾಯಕನ ಪಾಳ್ಯ, ಬಸವಾಪಟ್ಟಣ, ಹಾಗಲವಾಡಿ ಪಾಳೆಯಗಾರರು ಬೇಡ ಜಾತಿಗೆ ಸೇರಿದವರಾಗಿದ್ದರು. ಚಿತ್ರದುರ್ಗದ ಪಾಳೆಯಗಾರರು ಉಳಿದ ಇತರ ಪಾಳೆಯಗಾರರಿಗಿಂತ ಪ್ರಸಿದ್ಧರಾಗಿದ್ದರು. ಕ್ರಿ.ಶ. 1475ರಲ್ಲಿ ಬೋಯಿಗಳ ಮೂರು ಕುಟುಂಬಗಳು ತಿರುಪತಿ ದೇವಾಲಯದ ಸಮೀಪದಲ್ಲಿರುವ ಜಡಿಕಲ್‌ದುರ್ಗದಿಂದ ವಲಸೆ ಬಂದು ಭರಮಸಾಗರದ ಸಮೀಪದಲ್ಲಿ ನೆಲಸಿದರು. ವಿಜಯನಗರದ ಅರಸರು ಕ್ರಿ.ಶ. 1508ರಲ್ಲಿ ಆ ಕುಟುಂಬಗಳ ಯಜಮಾನನ ಮೊಮ್ಮಗನಾದ ತಿಮ್ಮಣ್ಣ ನಾಯಕನನ್ನು ಚಿತ್ರದುರ್ಗದ ನಾಯಕನನ್ನಾಗಿ ನಿಯೋಜಿಸಿದರು. ಈ ನಾಯಕನು ಚಿತ್ರದುರ್ಗದ ಬೆಟ್ಟದಲ್ಲಿ ಕೋಟೆ ಕಟ್ಟಿಕೊಂಡಿದ್ದನು.[5] ಈ ಮನೆತನದಲ್ಲಿ ಮುಖ್ಯರೆನಿಸಿದ ಹದಿನಾಲ್ಕು ಜನರು ಚಿತ್ರದುರ್ಗವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು.[6] ಇತಿಹಾಸದಲ್ಲಿ ಮದಕರಿನಾಯಕರು ಎಂಬ ಹೆಸರಿನಿಂದ ಇವರು ಪ್ರಸಿದ್ಧಿಯಾಗಿದ್ದಾರೆ.[6] 1881 ನೇ ಜನಗಣತಿಯಲ್ಲಿ ಈ ರೀತಿ ಇದೆ. ("Most of the Palayagars in Mysore were Bedars") "ಮೈಸೂರು ದೇಶದಲ್ಲಿ ಪಾಳೆಯಗಾರರಲ್ಲಿ ಬಹಳ ಮಂದಿ ಬೇಡರು." ಈ ಪಾಳೆಯಗಾರರು ತಮ್ಮದೇ ಆದ ಸೈನ್ಯವನ್ನು ಹೊಂದಿದ್ದರು. ವಿಜಯನಗರ ಸಾಮ್ರಾಜ್ಯವು ಬಹಳ ವಿಸ್ತಾರವಾದದ್ದರಿಂದ ಅದಕ್ಕೆ ಸೇರಿದ ನಾನಾ ಭಾಗಗಳ ಮೇಲೆ ತಾವೇ ನೇರವಾಗಿ ಆಳ್ವಿಕೆ ನಡೆಸುವುದು ಕಷ್ಟವೆಂದು, ಆಯಾ ಪ್ರದೇಶದ ಉಸ್ತುವಾರಿ ನೋಡಿಕೊಳ್ಳಲು, ಕಂದಾಯ ವಸೂಲಿ ಮಾಡಲು, ಶಾಂತಿ-ಸುವ್ಯವಸ್ಥೆ ಕಾಪಾಡಲು, ಯುದ್ಧ ಸಮಯದಲ್ಲಿ ಸೈನ್ಯ ಸಹಾಯ ಮಾಡಲು ನೇಮಿಸಲ್ಪಟ್ಟ ಅಧಿಕಾರಿಗಳೇ ಈ ಪಾಳೆಯಗಾರರು.[7]

ಬೇಡರಲ್ಲಿ ಎರಡು ವಿಧಗಳಿವೆ : ಕನ್ನಡದವರು ಮತ್ತು ತೆಲುಗಿನವರು. ಬೇಡರನ್ನು ಬೇಡ, ಬೇಡರ, ಬೆಂಡರ್, ಬೇರಡ್, ಬಿಕ್ರ, ಬೋಯ, ನಾಯಕ, ನಾಯ್ಕರ್, ನಾಯಕ ಮಕ್ಕಳು, ನಾಯಕ್ ವಾಡಿ, ಪಾಳೆಯಗಾರ್, ತಳವಾರ್, ವಾಲ್ಮೀಕಿ, ಪರಿವಾರ, ವಾಲ್ಮೀಕಿ ಮಕ್ಕಳು, ವೇಡನ್, ಎಂತಲೂ ಕರೆಯುತ್ತಾರೆ.

ಬೇಡರಲ್ಲಿ ಆರು ಪಂಗಡಗಳಿವೆ, ಅವು : 1) ಊರು ಬೇಡ ಅಥವಾ ಚಿನ್ನ ಬೋಯ 2) ಮ್ಯಾಸ ಬೇಡ ಅಥವಾ ಪೆದ್ದ ಬೋಯ 3) ಹಾಲು ಬೇಡ 4) ನೊಂದಬೇಡ 5) ಮಾರಮ್ಮನ ಬೇಡ ಅಥವಾ ಮುತ್ಯಾಲಮ್ಮನ ಬೇಡ 6) ಗುಡಿಸಿ ಅಥವಾ ಗುಡಲು ಬೇಡರು.

ಊರು ಬೇಡರು ಸಂಖ್ಯೆಯಲ್ಲಿ ಇತರ ಎಲ್ಲಾ ಪಂಗಡಗಳಿಗಿಂತಲೂ ಹೆಚ್ಚಾಗಿದ್ದಾರೆ. ಹಳ್ಳಿ ಪಟ್ಟಣಗಳಲ್ಲಿ ನೆಲೆಸಿರುವುದರಿಂದ ಇವರನ್ನು ಊರು ಬೇಡರೆಂತಲೂ, ಹಳ್ಳಿಗಳಲ್ಲಿ ಸಣ್ಣ ಸಣ್ಣ ಗುಡಿಸಲುಗಳನ್ನು ಕಟ್ಟಿಕೊಂಡು ವಾಸ ಮಾಡುವವರಿಗೆ ಗುಡಿಸಿ ಬೇಡರೆಂತಲೂ, ವೀರಶೈವ ಧರ್ಮವನ್ನು ಸ್ವೀಕರಿಸಿದವರು ಸವರ ಬೇಡರೆಂದು, ಭಿಕ್ಷೆ ಬೇಡುವುದೇ ಜೀವನದ ಕಸುಬನ್ನಾಗಿ ಅವಲಂಬಿಸಿ ಅಲೆಮಾರಿಗಳಾಗಿರುವ ಗುಂಪನ್ನು ನೊಂದ ಬೇಡರೆಂದು ಕರೆಯಲಾಗುತ್ತದೆ. ಮಾರಮ್ಮನ ಬೇಡರು ಅಥವಾ ಮುತ್ಯಾಲಮ್ಮನ ಬೇಡರು ಮಾರಿಪೆಟ್ಟಿಗೆಯನ್ನು ತಲೆಯ ಮೇಲೆ ಹೊತ್ತು ಬೀದಿ ಬೀದಿ ತಿರುಗಿ ಭಿಕ್ಷೆ ಬೇಡುತ್ತಾರೆ. ಮ್ಯಾಸ ಬೇಡರು ಊರ ಬೇಡರಿಗಿಂತ ಎಲ್ಲಾ ರೀತಿಯಿಂದಲೂ ವಿರುದ್ಧ ಸ್ಥಿತಿಯಲ್ಲಿರುವವರು. ಮ್ಯಾಸ ಪದ ಮ್ಲೇಚ್ಛ ಎಂಬ ಸಂಸ್ಕೃತ ಪದದ ತದ್ಭವ. ಮ್ಲೇಚ್ಛ ಎಂದರೆ ಕೊಳಕ, ಮೈಲಿಗೆಯ ಜನ ಎಂದು ಅರ್ಥ. ಬಹಮನೀ ಸುಲ್ತಾನರ ಅಧೀನರಾಗಿ ಸೈನ್ಯಗಳಲ್ಲಿ ದುಡಿದ ಮ್ಯಾಸ ನಾಯಕರು ಮುಸಲ್ಮಾನರ ಪ್ರಭಾವಕ್ಕೆ ಹೆಚ್ಚು ಒಳಗಾಗಿ ಕೆಲವೊಂದು ಮುಸ್ಲಿಂ ಆಚಾರಗಳನ್ನು ಕಲಿತುಬಿಟ್ಟರು ; ಉದಾಹರಣೆಗೆ ಮ್ಯಾಸನಾಯಕರು ಹಿಂದೆ ತಮ್ಮ ಗಂಡು ಮಕ್ಕಳಿಗೆ ಮುಸಲ್ಮಾನರಂತೆಯೇ ಸುನ್ನತ್ (ಖತ್ನಾ) ಮಾಡಿಸುತ್ತಿದ್ದರೆಂತಲೂ, ಹೆಂಗಸರು ಕಾಲುಂಗುರ ಧರಿಸುತ್ತಿರಲಿಲ್ಲವೆಂತಲೂ ತಿಳಿದುಬರುತ್ತದೆ. ಅಲ್ಲದೆ ಇವರು ಗೋಮಾಂಸಹಾರಿಗಳಾಗಿದ್ದರೆಂದು ತಿಳಿದುಬರುತ್ತದೆ. ಈಗಲೂ ಮ್ಯಾಸಬೇಡರು ಕೋಳಿ ಮಾಂಸ ತಿನ್ನುವುದಿಲ್ಲ ಮತ್ತು ಚಾಪೆಯ ಮೇಲೆ ಮಲಗುವುದಿಲ್ಲ. ಯಾವ ರೀತಿಯ ಮದ್ಯವನ್ನಾಗಲೀ ಇವರು ಸೇವಿಸುವುದಿಲ್ಲ. ಮುಸ್ಲಿಮರ ಹಬ್ಬವಾದ ಬಾಬಯ್ಯನ ಹಬ್ಬವನ್ನು ಇವರು ಆಚರಿಸುವುದಲ್ಲದೆ, ಮಾರಿಗೆ ಬಲಿಕೊಡುವ ಪದ್ಧತಿ ಇವರಲ್ಲಿದೆ. ಬಲಿ ಕೊಟ್ಟ ಪ್ರಾಣಿಯ ಮಾಂಸದ ಪಾಲನ್ನು ತಮ್ಮ ಮುಸ್ಲಿಂ ಸ್ನೇಹಿತರಿಗೆ ಹಂಚುತ್ತಾರೆ. ಮುಸ್ಲಿಮರು ಕೂಡ ಮಾರಿಹಬ್ಬದ ದಿನ ಮಾರಮ್ಮನ ದೇವಸ್ಥಾನಕ್ಕೆ ಪೂಜೆ ಕೊಡುತ್ತಾರೆ.

ಚಿತ್ರದುರ್ಗದ ಮೊಳಕಾಲ್ಮೂರು, ಚಳ್ಳಕೆರೆ ತಾಲ್ಲೂಕುಗಳಲ್ಲಿ ಮ್ಯಾಸ ಬೇಡರು ಹೆಚ್ಚಾಗಿದ್ದಾರೆ. ಹತ್ತು ಹದಿನೈದು ಕುಟುಂಬಗಳ ಒಂದೊಂದು ಗುಂಪು, ಕಾಡಿನ ಮಧ್ಯದಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ಹೊರಗಿನವರ ಸಂಪರ್ಕವನ್ನು ಹೊಂದದೆ

ತಮ್ಮದೇ ಆದ ರೀತಿಯ ಜೀವನವನ್ನು ಸಾಗಿಸುತ್ತಿರುವುದನ್ನು ಈಗಲೂ ನೋಡಬಹುದು.

ಮತ ನಂಬಿಕೆ

ಬೇಡರಲ್ಲಿ ವೈಷ್ಣವರು ಮತ್ತು ಶೈವರೆಂದು ಎರಡು ವಿಧಗಳಿವೆ. ಸಾಮಾನ್ಯವಾಗಿ ವೈಷ್ಣವರು ವೆಂಕಟರಮಣ, ರಂಗನಾಥ, ನರಸಿಂಹ, ಮೊದಲಾದ ದೇವರುಗಳನ್ನು ಪೂಜಿಸುತ್ತಾರೆ. ಅಲ್ಲದೆ ಅವರೆಲ್ಲ ತಾವು ವಾಲ್ಮೀಕಿ ಮತದವರೆಂದು ಕರೆದುಕೊಳ್ಳುತ್ತಾರೆ. ಶೈವರನ್ನು–ಕನ್ನಯ್ಯನ ಕುಲದವರೆಂದು ಕರೆಯುತ್ತಾರೆ. ಕನ್ನಯ್ಯನ ಕುಲಕ್ಕೆ ಸೇರಿದವರೆಲ್ಲರೂ ಶಿವಭಕ್ತರು. ಹಲವರಿಗೆ ನಂಜನಗೂಡಿನ ಶ್ರೀಕಂಠೇಶ್ವರ ಮನೆ ದೇವರು. ಮಾರಮ್ಮ, ಮರಿಗಮ್ಮ, ಪಾಯಮ್ಮ, ಒಡಿಸಿಲಮ್ಮ, ಲಕ್ಕಮ್ಮ, ದುರ್ಗಿ ಮುಂತಾದ ದೇವತೆಗಳನ್ನು ಇವರು ಪೂಜಿಸುತ್ತಾರೆ. ಮಾರಿಗೆ ಕೋಣನ ಬಲಿ ಕೊಡುವ ವಾಡಿಕೆ ಇವರಲ್ಲುಂಟು. 1675ರಲ್ಲಿ ಚಿತ್ರದುರ್ಗದ ಪಾಳೆಯಗಾರನಾಗಿದ್ದ ಚಿಕ್ಕಣ್ಣನಾಯಕನೂ ಮತ್ತು ಅವರ ಪರಿವಾರದವರೆಲ್ಲ ವೀರಶೈವ ಮತವನ್ನು ಸ್ವೀಕರಿಸಿ ವೀರಶೈವರಾದರು.[8]

ಒಂದೇ ಗೋತ್ರದವರಲ್ಲಿ ವಿವಾಹ ನಿಷಿದ್ಧ. ಬೇಡರಲ್ಲಿ ಎಮ್ಮೆಯವರು, ಮುಂದೆಯವರು, ಚೀಮರು (ಇರುವೆಯವರು), ಹೂವಿನವರು, ಮೀನಿನವರು, ಮುಂಡಲದವರು, ಬಂಗಾರದವರು, ಜೇನಿನವರು, ನವಣೆಯವರು, ಏಳು ಬೆಟ್ಟದವರು, ಸೂರ್ಯ, ಚಂದ್ರ ಇತ್ಯಾದಿ ಆಯಾ ಚಿಹ್ನೆಗಳನ್ನು ಹೊಂದಿದ ಒಟ್ಟು 105 ಗೋತ್ರಗಳಿವೆ. ಮದುವೆ ಸಂಪ್ರದಾಯಗಳು ಉಳಿದ ಇತರ ಜನಗಳಲ್ಲಿರುವಂತೆಯೇ ಇದೆ. ಕನ್ಯಾ ಶುಲ್ಕದ ಪದ್ಧತಿ ಇತ್ತೀಚೆಗೆ ಪ್ರಾರಂಭವಾಗಿದೆ. ಒಬ್ಬನೇ ಅಕ್ಕ, ತಂಗಿ ಇಬ್ಬರನ್ನು ಮದುವೆಯಾಗುವ ಅವಕಾಶವಿದೆ. ದೊಡ್ಡಕ್ಕನ ಮಗಳನ್ನು ಮದುವೆಯಾಗಲು ಮತ್ತು ಅಣ್ಣನ ಮಗನು ತಂಗಿಯ ಮಗಳನ್ನು ಮದುವೆಯಾಗಲು ಅನುಮತಿ ಇದೆ.

ಹೆಣ್ಣು ಮಕ್ಕಳು ಮೈನೆರೆದಾಗ ಅವರು ಎಲೆಯಲ್ಲಿ ಮಾತ್ರ ಊಟ ಮಾಡಬೇಕು. ಆ ದಿನಗಳಲ್ಲಿ ತಟ್ಟೆಯಲ್ಲಿ ಊಟ ಮಾಡುವುದು ನಿಷಿದ್ಧ. ಋತುಮತಿಯಾದ ಹೆಣ್ಣು ಮೂರು ರಾತ್ರಿ ಹಸಿರು ಹುಲ್ಲಿನಿಂದ ಕಟ್ಟಿದ ಗುಡಿಸಿಲಿನಲ್ಲಿ ವಾಸ ಮಾಡಬೇಕು. ರಾತ್ರಿ ಸಮಯದಲ್ಲಿ ಅವಳು ಮಲಗುವಂತಿಲ್ಲ, ಬೆಳಗ್ಗೆ ಮಾತ್ರ ನಿದ್ರೆ ಮಾಡಲು ಅವಕಾಶ. ಏಕೆಂದರೆ, ಕತ್ತಲೆಯಲ್ಲಿ ದೆವ್ವ ಭೂತಾದಿಗಳು ಬಂದು ಅವಳನ್ನು ಅವಳು ನಿದ್ರೆ ಮಾಡುತ್ತಿರುವಾಗ ಅಪಹರಿಸಬಹುದು ಎಂಬ ನಂಬಿಕೆ. ವಿಧವಾ ವಿವಾಹಕ್ಕೆ ಇವರಲ್ಲಿ ಅಡ್ಡಿ ಇಲ್ಲ. ಆದರೆ ವಿಧವೆಯ ಮದುವೆಯು ಕೂಡಿಕೆ ಅಷ್ಟೆ. ಮದುವೆ ಮತ್ತು ಕೂಡಿಕೆಗಳಲ್ಲಿ "ಕನ್ನಯ್ಯನ ಕಾಣಿಕೆ" ಕೊಡಬೇಕು. ಈ ಕಾಣಿಕೆಯನ್ನು ವಸೂಲು ಮಾಡುವ ಜವಾಬ್ದಾರಿ ಜಾತಿಯ ಯಜಮಾನನದು.

ಸತ್ತವರನ್ನು ಹೂಳುವುದು ಹೆಚ್ಚಾಗಿ ವಾಡಿಕೆಯಲ್ಲಿದೆ. ಶವ ಸಂಸ್ಕಾರ ಪದ್ಧ

ತಿಯು ಇತರ ಹಿಂದೂ ಜನಾಂಗಗಳಂತೆಯೇ ಇದೆ. ತೊನ್ನು ಮೊದಲಾದ ರೋಗ ಬಂದವರನ್ನು ಸತ್ತಮೇಲೆ ಸುಡುತ್ತಾರೆ. ವ ಸಂಸ್ಕಾರವು ಗುರುಬೋಧನೆ ತೆಗೆದುಕೊಂಡ ಗುರುವಿನ ನೇತೃತ್ವದಲ್ಲಿ ನಡೆಯುತ್ತದೆ.

ಬೇಡರಲ್ಲಿ ಈಗಲೂ ಸಹ ಇವರದೇ ಆದ ಗಡಿ ಮನೆ, ಕಟ್ಟೆಮನೆ ಎಂಬ ಘಟಕಗಳಿವೆ. ಆ ಘಟಕಗಳಿಗೆ ಒಬ್ಬೊಬ್ಬರು ಯಜಮಾನರು (ವಂಶಪಾರಂಪರ್ಯವಾಗಿ) ಇರುತ್ತಾರೆ. ಮದುವೆ ಮುಂತಾದ ಸಂದರ್ಭಗಳಲ್ಲಿ ಇವರಿಗೆ ಅಗ್ರತಾಂಬೂಲ ದೊರೆಯುತ್ತದೆ. ಜಾತಿಯ ಕಟ್ಟುಕಟ್ಟಳೆ, ಮದುವೆ, ಕೂಡಿಕೆ, ಬಸವಿ ಬಿಡುವುದು ಎಲ್ಲವೂ ಇವರ ಸಮ್ಮುಖದಲ್ಲೇ ನಡೆಯಬೇಕು. ಈ ಕೆಲಸಕ್ಕಾಗಿ ಜಾತಿಯವರು ಅವರಿಗೆ ಮರ್ಯಾದೆ ಹಣವನ್ನು ಸಲ್ಲಿಸುತ್ತಾರೆ.

ಗಂಡು ಸಂತಾನವಿಲ್ಲದವರು ಗಂಡು ಮಕ್ಕಳನ್ನು ದತ್ತು ತೆಗೆದುಕೊಳ್ಳುವ ಬದಲು ತಮ್ಮ ಹೆಣ್ಣು ಮಕ್ಕಳನ್ನೇ ದೇವರ ಹೆಸರಿನಲ್ಲಿ ಬಸವಿ ಬಿಡುತ್ತಾರೆ. ಒಂದು ಸರಳ ಸಮಾರಂಭವನ್ನು ದೇವಸ್ಥಾನದಲ್ಲಿ ಏರ್ಪಡಿಸುತ್ತಾರೆ. ಇದು ಎಲ್ಲಾ ರೀತಿಯಲ್ಲೂ ವಿವಾಹ ವಿಧಿಯನ್ನೇ ಹೋಲುತ್ತದಾದರೂ ಗಂಡಿನ ಬದಲು ಹೆಣ್ಣಿನ ಪಕ್ಕದಲ್ಲಿ ಒಂದು ಕತ್ತಿಯನ್ನು ನಿಲ್ಲಿಸುತ್ತಾರೆ. ಪುರೋಹಿತನು ಅವಳಿಗೆ ತಾಳಿಯನ್ನು ಕಟ್ಟುತ್ತಾನೆ. ಹೀಗೆ ಬಸವಿಯಾದ ಹೆಣ್ಣು ಮಗಳಿಗೆ ಆಸ್ತಿಯ ಹಕ್ಕುಂಟು. ಅಲ್ಲದೆ ಮಾತಾಪಿತೃಗಳ ಕರ್ಮಾಂತರ ಮಾಡುವ ಜವಾಬ್ದಾರಿ ಕೂಡ ಇವಳದೇ. ಮಗನಿಗಿರುವಂತಹ ಎಲ್ಲ ರೀತಿಯ ಹಕ್ಕುಗಳನ್ನು ಅನುಭವಿಸುವ ಅಧಿಕಾರವಿರುತ್ತದೆ. ಬಸವಿಯಾದ ಹೆಣ್ಣು ಮಗಳಿಗೆ ಒಬ್ಬನ ಜೊತೆ ಮಾತ್ರ ಲೈಂಗಿಕ ಸಂಬಂಧವನ್ನು ಹೊಂದಿರಬೇಕೆಂಬ ಕಟ್ಟಳೆಯಿಲ್ಲ. ಅವಳು ಇಷ್ಟಪಟ್ಟರೆ ಒಬ್ಬನ ಜೊತೆಯೇ ಇರಬಹುದು; ಇಲ್ಲದಿದ್ದರೆ ಅವಳಿಗಿಷ್ಟ ಬಂದಷ್ಟು ಜನರ ಜೊತೆ ಸಂಪರ್ಕವನ್ನು ಹೊಂದಬಹುದು. ಬಸವಿಯಾದ ಹೆಣ್ಣು ಮಗಳು ಈ ರೀತಿಯ ಸಂಬಂಧವನ್ನು ತನ್ನ ಅಥವಾ ತನ್ನ ಜಾತಿಗಿಂತ ಮೇಲಿನವರ ಜೊತೆ ಮಾತ್ರ ಇಟ್ಟುಕೊಳ್ಳಬೇಕು. ಯಾರು ಮೊದಲು ಅವಳೊಟ್ಟಿಗೆ ಈ ಸಂಬಂಧವನ್ನು ಪ್ರಾರಂಭಿಸುತ್ತಾನೋ ಅವನು ಅವಳಿಗೆ ಬಸವಿ ಬಿಡುವುದಕ್ಕೆ ತಗುಲುವ ಖರ್ಚನ್ನು ಕಟ್ಟಿಕೊಡಬೇಕು. ಅವನನ್ನಾಗಲಿ, ಅವಳಿಗೆ ಹುಟ್ಟುವ ಮಕ್ಕಳನ್ನಾಗಲಿ ಕೀಳಾಗಿ ಯಾರೂ ಕಾಣುವುದಿಲ್ಲ. ವಿಧವೆಯಾದ ಬಸವಿಯು ಮದುವೆ ಮುಂತಾದ ಸಮಾರಂಭಗಳಲ್ಲಿ ಭಾಗವಹಿಸಬಹುದು. ಯಾವ ಮಹತ್ವದ ಉದ್ದೇಶವನ್ನಿಟ್ಟುಕೊಂಡು ಈ ಪದ್ಧತಿ ಹುಟ್ಟಿತೋ ಆ ಉದ್ದೇಶಗಳೆಲ್ಲ ಈಗ ಮರೆಯಾಗಿ ಹೋಗಿವೆ. ಈಗ ಆ ಪದ್ಧತಿ ತನ್ನ ಗೌರವವನ್ನು ಕಳೆದುಕೊಂಡು ವೇಶ್ಯಾವೃತ್ತಿ ಎನ್ನುವಷ್ಟರ ಮಟ್ಟಿಗೆ ಹದಗೆಟ್ಟಿದೆ. ಧಾರವಾಡದ ಸವದತ್ತಿ ಮತ್ತು ಬಳ್ಳಾರಿಯ ಕೂಡ್ಲಿಗಿ ತಾಲ್ಲೂಕುಗಳಲ್ಲಿ, ನಾನು ಸಂದರ್ಶಿಸಿದ ಕೆಲವರ ಅಭಿಪ್ರಾಯದ ಪ್ರಕಾರ ಪ್ರತಿಯೊಂದು ಮನೆಯಲ್ಲಿಯೂ ಒಬ್ಬ ಹೆಣ್ಣು ಮಗಳನ್ನು ಬಸವಿ ಬಿಡುತ್ತಾರೆ. ಎರಡು ರೀತಿಯಲ್ಲಿ ಹೆಣ್ಣು ಈ ಪದ್ಧತಿಯಿಂದ ಶೋಷಿಸಲ್ಪಡುತ್ತಾಳೆ. ಹೇಗೆಂದರೆ ಮೇಲು ಜಾತಿಯ ಗಂಡಸರೇ ಅವಳಲ್ಲಿ

ಹೆಚ್ಚಾಗಿ ಬರುವುವರಿಂದ, ಒಂದು ರೀತಿಯಲ್ಲಿ ಮೇಲ್ವರ್ಗದವರಿಂದ ಶೋಷಣೆ ಮತ್ತು ತನ್ನ ಕುಟುಂಬದವರಿಂದಲೇ ಶೋಷಣೆ. ಇಂತಹ ಪದ್ಧತಿಯಿರುವ ಕುಟುಂಬಗಳಲ್ಲಿ ಗಂಡಸರು ಸಾಮಾನ್ಯವಾಗಿ ಸೋಮಾರಿಗಳು. ಹೇಗೂ ಅವಳಲ್ಲಿಗೆ ಬರುವ ಗಂಡಸರು ಹಣವನ್ನು ಕೊಡಬೇಕು, ಆದ್ದರಿಂದ ಸಂಪಾದಿಸುವ ಪೂರ್ಣ ಜವಾಬ್ದಾರಿ ಇವಳ ಮೇಲೆ ಬೀಳುತ್ತದೆ. ಯಾವ ಕಾನೂನು, ಕಾಯ್ದೆಗಳು, ಈ ಪದ್ಧತಿಯನ್ನು ತಡೆಗಟ್ಟಲು ಯಶಸ್ವಿಯಾಗಿಲ್ಲ.

ಹಿಂದುಳಿದ ಗಿರಿಜನರೆಂದು ಪರಿಗಣಿಸಲ್ಪಟ್ಟಿರುವ ಇವರು ಈಗ ತಮಗೆ ಗಿರಿಜನರಿಗೆ ದೊರೆಯುತ್ತಿರುವ ಸವಲತ್ತುಗಳು ಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. 1976 ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ಕಾಯಿದೆಯ ತಿದ್ದುಪಡಿ ಮೇರೆಗೆ ನಾಯಕ ಜನಾಂಗ ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಆ ಸವಲತ್ತುಗಳನ್ನು ಪಡೆಯಬಹುದೆಂದು ಆಜ್ಞೆ ಹೊರಡಿಸಿದ್ದುದರ ಪರಿಣಾಮವಾಗಿ ಇವರು ತಮಗೆ ಆ ಸವಲತ್ತುಗಳು ಸಲ್ಲಬೇಕು. ಏಕೆಂದರೆ ಕರ್ನಾಟಕದಲ್ಲಿ ನಾಯಕರೆಂದರೆ ತಮ್ಮನ್ನಲ್ಲದೆ ಬೇರಾರನ್ನೂ ಕರೆಯದಿರುವದರಿಂದ ಪರಿಶಿಷ್ಟ ಬುಡಕಟ್ಟು ಜನಾಂಗಕ್ಕಿರುವ ಸೌಲಭ್ಯವನ್ನು ಪಡೆಯಲು ತಾವು ಅರ್ಹರೆಂದು ತಮ್ಮನ್ನು ಆ ಗುಂಪಿಗೆ ಸೇರಿಸಬೇಕೆಂಬ ಚಳುವಳಿ ಇತ್ತೀಚಿನ ದಿನಗಳಲ್ಲಿ ಕಂಡು ಬರುತ್ತಿದೆ.

ಟಿಪ್ಪಣಿಗಳು

1. The tribes and castes of Bombay, Vol. III, Bombay. Printed at the Government Central Press–1922, by R.E. Enthoven. Page. 297.
2. ಗ್ಯಾಝೆಟೀಯರು ಕರ್ನಾಟಕ ಭಾಗದ್ದು. ಮೊದಲನೆಯ ಆವೃತ್ತಿ, ಗವರ್ನಮೆಂಟ್ ಸೆಂಟ್ರಲ್ ಬುಕ್ ಡಿಪೊ : ಬರೆದವರು ವೆಂಕಟರಂಗೋಕಟ್ಟಿ. ಪುಟ–199.
3. ಕರ್ನಾಟಕ ಇತಿಹಾಸ ದರ್ಶನ : ಎಂ.ವಿ. ಕೃಷ್ಣರಾವ್–1971. ಪುಟ–458.
4. ಕರ್ನಾಟಕ ಇತಿಹಾಸ ದರ್ಶನ . ಎಂ.ವಿ. ಕೃಷ್ಣರಾವ್–1971. ಪುಟ–458.
5. ಕರ್ನಾಟಕ ಇತಿಹಾಸ ದರ್ಶನ : ಎಂ.ವಿ. ಕೃಷ್ಣರಾವ್–1971. ಪುಟ–467.
6. ಚಂದ್ರವಳ್ಳಿ (ಚಿತ್ರದುರ್ಗ ಇತಿಹಾಸ ಕುರಿತ ಲೇಖನಗಳು) – ಡಾ. ಎಂ.ವಿ. ಶ್ರೀನಿವಾಸ್, ಲಕ್ಷಣ ತೆಲಗಾವಿ, ಪುಟ–78.
7. ಚಂದ್ರವಳ್ಳಿ (ಚಿತ್ರದುರ್ಗ ಇತಿಹಾಸ ಕುರಿತ ಲೇಖನಗಳು) – ಡಾ. ಎಂ.ವಿ. ಶ್ರೀನಿವಾಸ್- ಲಕ್ಷ್ಮಣ ತೆಲಗಾವಿ, ಪುಟ–63.
8. ಚಂದ್ರವಳ್ಳಿ (ಚಿತ್ರದುರ್ಗ ಇತಿಹಾಸ ಕುರಿತ ಲೇಖನಗಳು) – ಡಾ. ಎಂ. ವಿ. ಶ್ರೀನಿವಾಸ್, ಲಕ್ಷಣ ತೆಲಗಾವಿ. ಪುಟ–80

ಕರ್ನಾಟಕದಲ್ಲಿ ಪರಿಶಿಷ್ಟ ಬುಡಕಟ್ಟುಗಳ ಜನಸಂಖ್ಯೆ ಅದರ ಒಟ್ಟು ಜನಸಂಖ್ಯೆಯ 0.7 ರಷ್ಟಾಗುತ್ತದೆ. ಅವರು ಮುಖ್ಯವಾಗಿ ಮೈಸೂರು, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಬೆಂಗಳೂರು, ಬೆಳಗಾವಿ, ಚಿಕ್ಕಮಗಳೂರು, ತುಮಕೂರು, ಶಿವಮೊಗ್ಗ ಮತ್ತು ಹಾಸನಗಳಲ್ಲಿ ಕೂಡಿ ತಕ್ಕಮಟ್ಟಿಗೆ ಇದ್ದಾರೆ. ಸಂವಿಧಾನದ ಪ್ರಕಾರ ಇಂಥ ಬುಡಕಟ್ಟುಗಳು ಸಾಂದ್ರವಾಗಿರುವ ಪ್ರದೇಶಗಳನ್ನು ಅನುಸೂಚಿತ ಪ್ರದೇಶಗಳೆಂದು ಸಾರಿ ವಿಶೇಷ ಸೌಲಭ್ಯಗಳನ್ನು ಒದಗಿಸಬಹುದಾದರೂ ಕರ್ನಾಟಕದಲ್ಲಿ ಅಂಥ ಸಾಂದ್ರ ಪ್ರದೇಶಗಳು ಇಲ್ಲವಾದ್ದರಿಂದ ಯಾವ ಪ್ರದೇಶಗಳನ್ನು ಅನುಸೂಚಿತ ಎಂದು ಸಾರಿಲ್ಲ.

ಪರಿಶಿಷ್ಟ ಬುಡಕಟ್ಟುಗಳು ಬಹುಮಟ್ಟಿಗೆ ಆದಿವಾಸಿ ಜನಾಂಗಗಳು. ಆದರೆ ಸಂವಿಧಾನದ ಉದ್ದಿಶ್ಯದಿಂದ ತಯಾರಿಸಲಾದ ಪಟ್ಟಿ ಮತ್ತು ಮಾನವ ಶಾಸ್ತ್ರಜ್ಞರು ತಮ್ಮ ಮಾನದಂಡಗಳ ಮೇಲೆ ಅವಲಂಬಿತವಾಗಿ ಬುಡಕಟ್ಟುಗಳೆಂದು ನಿರೂಪಿಸುವ ವರ್ಗಗಳ ಯಾದಿಯಲ್ಲಿ ಏಕತೆಯಿಲ್ಲ. ಮಾನವಶಾಸ್ತ್ರಜ್ಞರ ಪ್ರಕಾರ ಪರಿಶಿಷ್ಟ ಪಟ್ಟಿಯ ಸುಮಾರು 27 ಜನಾಂಗಗಳನ್ನು ಮಾತ್ರ ಬುಡಕಟ್ಟುಗಳು ಎಂದು ಪರಿಗಣಿಸಬಹುದು. ಕರ್ನಾಟಕದ ಬುಡಕಟ್ಟುಗಳ ಬಗ್ಗೆ ಥರ್ಸ್ಟನ್, ಎಂಥೋವೆನ್, ನಂಜುಂಡಯ್ಯ, ಅನಂತಕೃಷ್ಣ ಅಯ್ಯರ್ ಮತ್ತು ಲೂಯಿಸ್ – ಇವರು ಕೆಲವು ವಿವರಗಳನ್ನು ನೀಡಿದ್ದಾರೆ. ಅವರ ಬರಹಗಳ ಆಧಾರದ ಮೇಲೆ ಕೆಲವು ಮುಖ್ಯ ಬುಡಕಟ್ಟುಗಳ ಸ್ಥೂಲ ಪರಿಚಯವನ್ನು ಪಡೆಯಬಹುದು.

ಕರ್ನಾಟಕ ವಿಷಯ ವಿಶ್ವಕೋಶ, ಪು. 889.

ಯಮುನಾಬಾಯಿ ಆರ್. ರಾವ್

ಪ್ರಪಂಚದ ಸಂಕ್ಷಿಪ್ತ ಇತಿಹಾಸ*

19ನೇ ಶತಮಾನದ ಉತ್ತರಾರ್ಧ ಹಾಗೂ 20 ನೇ ಶತಮಾನದ ಪೂರ್ವಾರ್ಧಗಳಲ್ಲಿ ಜೀವಿಸಿದ ಶ್ರೀ ಹರ್ಬರ್ಟ್ ಜಾರ್ಜ್ ವೆಲ್ಸರದು ಎಂಬತ್ತು ವರ್ಷಗಳ ವರ್ಣಮಯ ತುಂಬುಜೀವನ. ತೀರಾ ಬಡತನದಲ್ಲಿ ಹುಟ್ಟಿ ಕಷ್ಟ ಪಡುತ್ತಿದ್ದ ಇವರು ಶಾಲಾ ಮುಖ್ಯೋಪಾಧ್ಯಾಯರೊಬ್ಬರ ದೃಷ್ಟಿಗೆ ಬಿದ್ದು ಸಂಜೆ ಶಾಲೆಯಲ್ಲಿ ಓದುವಂತಾಯಿತು. ಬಳಿಕ ವಿಶ್ವವಿದ್ಯಾಲಯದ ಕಾಲೇಜೊಂದರಲ್ಲಿ ಓದಲು ವಿದ್ಯಾರ್ಥಿವೇತನ ದೊರಕಿತು. ಅಲ್ಲಿ ಚಾರ್ಲ್ಸ್ ಡಾರ್ವಿನ್ನನ ಒಡನಾಡಿ ಥಾಮಸ್ ಹಕ್ಸ್ಲಿಯಿಂದ ಜೀವಶಾಸ್ತ್ರ ಕಲಿಯುವ ಸೌಭಾಗ್ಯ ಇವರದ್ದಾಯಿತು. ಜೀವಶಾಸ್ತ್ರ ಕ್ಷೇತ್ರದಲ್ಲಿ ವಿಕಾಸವಾದ ಮುಂದೆ ಬರುತ್ತಿದ್ದ ಕಾಲ ಅದು. ವಿಜ್ಞಾನದ ಮೇಲಿನ ಆ ಕಾಲದ ಅಪಾರ ಶ್ರದ್ಧೆ ಉತ್ಸಾಹಗಳು ವೆಲ್ಸರಲ್ಲೂ ಬೇರೂರಿದುವು. ಆದರೂ ಅನಾರೋಗ್ಯ ಮುಂತಾದ ನಾನಾ ಕಾರಣಗಳಿಂದ ವಿಜ್ಞಾನವನ್ನೇ ತಮ್ಮ ವೃತ್ತಿಯನ್ನಾಗಿ ಮಾಡಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಬರವಣಿಗೆ ಇವರಿಗೆ ತುಂಬ ಸಹಜವಾಗಿ ಕೈಗೂಡಿತ್ತು. ಇವರು ಬರೆದದ್ದೆಲ್ಲ ಓದುಗರಿಗೆ ಪ್ರಿಯವಾಗುತ್ತಿತ್ತು. ಕಡೆಗೆ ಅದೇ ಅವರ ವೃತ್ತಿಯಾಯಿತು.

ವೆಲ್ಸ್‌ರವರು ಅನೇಕ ಲೇಖನಗಳು, ಸಣ್ಣ ಕತೆಗಳು, ಕಾದಂಬರಿಗಳು ಮತ್ತು ಆತ್ಮ ಚರಿತ್ರೆಗಳನ್ನು ಬರೆದಿದ್ದಾರೆ. ಇವರು ಬರೆದ ವೈಜ್ಞಾನಿಕ ಕಾದಂಬರಿಗಳಾದ ಗ್ರಹಗಳ ಯುದ್ಧಗಳು ಮತ್ತು ಕಾಲಯಂತ್ರ ಇಂದಿಗೂ ಆಕರ್ಷಕವಾದುವಾಗಿವೆ.

ಆದರೆ ವೆಲ್ಸ್‌ರವರ ವ್ಯಕ್ತಿತ್ವದಲ್ಲಿ ಸಾಹಿತಿಯೊಬ್ಬನೇ ಅಡಗಿರಲಿಲ್ಲ. ವಿಜ್ಞಾನ ಅವರ ಪ್ರೀತಿಯ ವಿಷಯ. ಅಲ್ಲದೆ ಸಮಾಜದ ಬಗೆಗೆ ಅವರು ತೀವ್ರವಾಗಿ ಚಿಂತಿಸುತ್ತಿದ್ದರು, ಹೀಗಾಗಿ ಅವರಲ್ಲಿ "ಉಪಾಧ್ಯಾಯ" ನೊಬ್ಬನು ವಾಸಿಸುತ್ತಿದ್ದನು. (ಸ್ವಲ್ಪ

---

* ಮುನ್ನುಡಿಯಲ್ಲಿ ತಿಳಿಸಿರುವಂತೆ ಸಾಧಾರಣ ಮಾನವನಿಗೆ ಜಗತ್ತಿನ ಇತಿಹಾಸವನ್ನು ಆದ್ಯಂತವಾಗಿ ಸರಳ ವಿಧಾನದಲ್ಲಿ ಹೇಳುವ ವೆಲ್ಸರ ಈ ಗ್ರಂಥನನ್ನು 'ಮಾನವಿಕ ಕರ್ನಾಟಕ' ಪತ್ರಿಕೆ ಸರಣಿಯಲ್ಲಿ ಪ್ರಕಟಿಸಲು ನಿರ್ಧರಿಸಿದೆ - ಇದು ಮೊದಲ ಕಂತು. ಸಂಪಾದಕ.

ಕಾಲ ಅವರು ಖಾಸಗಿ ಶಾಲೆಗಳಲ್ಲಿ ಉಪಾಧ್ಯಾಯರಾಗಿದ್ದು ದುಡಿದುದೂ ಉಂಟು. ಅಲ್ಲದೆ ಅವರಿಗೆ ಶಾಸ್ತ್ರ ವಿಜ್ಞಾನದಲ್ಲೇ ಮುಂದುವರಿದು ಪ್ರಾಧ್ಯಾಪಕನಾಗಬೇಕಾಗಿತ್ತು ಎಂಬ ಹಂಬಲ ಕಡೆತನಕ ಇದ್ದಿತೆಂದು ಲಾರ್ಡ್ ಸಿ. ಪಿ. ಸ್ನೋ ಹೇಳುತ್ತಾರೆ.) ಇದರ ಫಲವೇ ಅವರು ಬರೆದ "ಚರಿತ್ರೆಯ ರೂಪರೇಷೆಗಳು" (The Outline of History) ಎಂಬ ಪುಸ್ತಕ. ಇದರ ಶಿರೋನಾಮೆಯ ಕೆಳಗೆ ಅವರೇ ಅದು "ಜೀವ ವರ್ಗ ಮತ್ತು ಮಾನವ ವರ್ಗದವರ ಸರಳ ಚರಿತ್ರೆ" ಯೆಂದು ತಿಳಿಸಿದ್ದಾರೆ. ಜನ ಸಾಮಾನ್ಯರಿಗೆ ಚರಿತ್ರೆಯನ್ನು ಸುಲಭಮಾರ್ಗದಲ್ಲಿ ಆಕರ್ಷಕವಾಗಿ ವಿಚಾರಪೂರ್ಣವಾಗಿ ತಿಳಿಸುವ ಪ್ರಯತ್ನವಿದು. ಈ ಸರಳ ಚರಿತ್ರೆ ಸಹ ಸಾಮಾನ್ಯ ಓದುಗನಿಗೆ ದೊಡ್ಡ ದಾಯಿತು ಎಂದು ಅವರಿಗೆನಿಸಿರಬೇಕು. ಮುಂದೆ "ಪ್ರಪಂಚದ ಸಂಕ್ಷಿಪ್ತ ಇತಿಹಾಸ" (A Short History of the World) ವನ್ನು ಬರೆದರು. ಇದು ಪ್ರಪಂಚದ ಶ್ರೇಷ್ಠ ಗ್ರಂಥಗಳಲ್ಲಿ ಒಂದೆಂದೂ ಸುಸಂಸ್ಕೃತನಾದ ವ್ಯಕ್ತಿ ಓದಿರಬೇಕಾದ ಗ್ರಂಥ ವೆಂದೂ ಪರಿಗಣಿತವಾಗಿದೆ. ಆಗ ತಿಳಿದಿದ್ದಷ್ಟು ಚರಿತ್ರೆಯನ್ನು ಅತಿಯಾದ ವಿವರಗಳು ಮತ್ತು ಜಟಿಲತೆಗಳಿಲ್ಲದಂತೆ ಕಾದಂಬರಿಯ ಮಾದರಿ ನೇರವಾಗಿ ಓದಿಕೊಳ್ಳುವಂತೆ ಬರೆಯಬೇಕೆಂಬುದು ಅವರ ಉದ್ದೇಶವಾಗಿತ್ತು. ಮೂಲಕೃತಿ ಓದಿರುವವರಿಗೆ ಇದರಲ್ಲಿ ಅವರು ಸಫಲರಾಗಿರುವುದು ತಿಳಿಯುತ್ತದೆ. ಆಧುನಿಕ ಕಾಲದಲ್ಲಿ ಜನರಿಗೆ ಸಾಕಷ್ಟು ಸಮಯವಿರುವುದಿಲ್ಲ. ಮನುಕುಲ ನಡೆದು ಬಂದ ಸಾಹಸದ ದಾರಿಯ ವಿವಿಧ ಹಂತಗಳ ಸರಳ ಪರಿಚಯ ಮಾಡಿಕೊಳ್ಳಲು ಆಶಿಸುವ ಓದುಗನಿಗಾಗಿ ಈ ಪುಸ್ತಕವನ್ನು ಅವರು ಬರೆದರು. ಆದರೂ ಈ ಗ್ರಂಥ ಬರಿ ಘಟನೆಗಳ ಸರಣಿಯಲ್ಲ. ಗ್ರಂಥದುದ್ದಕ್ಕೂ ಪ್ರಚೋದಕ ವಿಚಾರಧಾರೆ ಹರಿಯುತ್ತಿರುವುದನ್ನು ಕಾಣಬಹುದು.

ಇಲ್ಲಿ ಅನುವಾದಿಸಿರುವ ಕೃತಿ ವೆಲ್ಸರವರು ತಮ್ಮ ಮರಣಕ್ಕೆ ಅತ್ಯಲ್ಪ ಕಾಲ ಮುಂಚೆ ಪರಿಷ್ಕರಿಸಿದ್ದು ಅವರ ಮರಣಾನಂತರ 1947ರಲ್ಲಿ ಮುದ್ರಿತವಾದುದು. ಇತಿಹಾಸ ಪೂರ್ವ ಘಟನೆಗಳ ವಿಷಯದ ಜ್ಞಾನ ಈಚೆಗೆ ಸಾಕಷ್ಟು ಬೆಳೆದಿದೆ. "ಇತಿಹಾಸದ ರೂಪರೇಷೆಗಳು" ಕೃತಿಯ 1939ನೆ ಮುದ್ರಣವ ಮುನ್ನುಡಿಯಲ್ಲಿ ವೆಲ್ಸ್‌ರವರೇ "ಈ ಲೇಖಕನಿಗೆ ಗುದ್ದಲಿಯ ಜೊತೆ ಸ್ಪರ್ಧಿಸುವುದು ಕಷ್ಟವಾಗಿದೆ" ಎಂದು ಬರೆದಿದ್ದಾರೆ. ಅಂದರೆ ಉತ್ಖನನಗಳ ಮೂಲಕ ಹೊಸ ಹೊಸ ಸಂಗತಿಗಳು ಬೆಳಕಿಗೆ ಬರುತ್ತಲೇ ಇವೆ. ಇವಲ್ಲದೆ ವಿಜ್ಞಾನವೂ ಮುನ್ನಡೆದು ಅವರಿಂದ ಹೊಸ ವಿಷಯಗಳು ತಿಳಿದು ಬಂದಿವೆ. ಈ ಅನುವಾದಿತ ಪ್ರತಿಯಲ್ಲಿ ಸಾಧ್ಯವಿದ್ದಷ್ಟೂ ಇಂಥ ಅಂಶಗಳನ್ನು ಟಿಪ್ಪಣಿಗಳ ಮೂಲಕ ತುಂಬಲು ಯತ್ನಿಸಲಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಆಧುನಿಕ ಕಾಲವ ಚಿಂತನಶೀಲ ಸಾಹಿತಿ ವೆಲ್ಸ್‌ರವರು ಕಂಡಂತೆ ಮನುಕುಲವ ಸಾಹಸದ ಚಿತ್ರ ಕನ್ನಡದ ಓದುಗರಿಗೆ ದೊರಕಿದರೆ ಈ ಪ್ರಯತ್ನ ಸಾರ್ಥಕವಾಗುವುದು.

ವಿಶ್ವದಲ್ಲಿ ಭೂಮಿ :

ಈ ನಮ್ಮ ಭೂಮಿಯ ಕಥೆ ಯಾರಿಗೂ ಸಂಪೂರ್ಣವಾಗಿ ತಿಳಿದಿಲ್ಲ. ಈಗ ಸುಮಾರು ಇನ್ನೂರು ವರ್ಷಗಳ ಹಿಂದೆ ಸಹ ಮಾನವರಿಗೆ ಕಳೆದ ಮೂರು ಸಾವಿರ ವರ್ಷಗಳ ಮೊದಲ ಕಾಲದ ವಿಷಯ ಬಹು ಸ್ವಲ್ಪ ಮಾತ್ರ ತಿಳಿದಿತ್ತು. ಆಗ ಏನೇನು ನಡೆದಿರಬಹುವೆಂಬುದನ್ನು ತಿಳಿಯಲು ಊಹೆ ಅಥವಾ ದಂತಕಥೆಗಳನ್ನು ಬಿಟ್ಟರೆ ಬೇರೆ ಆಧಾರಗಳಿರಲಿಲ್ಲ. ಕ್ರಿ. ಪೂ. 4004ನೆ ಇಸವಿಯಲ್ಲಿ ಭೂಮಿ ಇದ್ದಕ್ಕಿದ್ದಂತೆ ಸೃಷ್ಟಿಯಾಯಿತೆಂದು ನಾಗರಿಕ ಪ್ರಪಂಚದಲ್ಲಿನ ಅನೇಕ ಜನ ನಂಬಿದ್ದರಲ್ಲದೆ ಉಳಿದವರಿಗೂ ಅದೇ ಅಂಶವನ್ನೇ ಬೋಧಿಸುತ್ತಿದ್ದರು. ಆದರೆ ವಿದ್ವಾಂಸರಲ್ಲಿ ಮಾತ್ರ, ಭೂಮಿ ಆ ವರ್ಷದ ವಸಂತ ಋತುವಿನಲ್ಲಿ ಸೃಷ್ಟಿಯಾಯಿತೋ ಅಥವಾ ಶರದೃತುವಿನಲ್ಲಿ ಆಯಿತೋ ಎಂಬ ವಿವಾದ ಇತ್ತು! ಈ ವಿಚಿತ್ರವಾದ ಮೂಢನಂಬಿಕೆಗೆ ಜನ ಹೀಬ್ರೂ ಬೈಬಲ್ಲನ್ನು ಪದಶಃ ನಂಬುತ್ತಿದ್ದುದೂ ಮತ್ತು ಸರಿಯಾದ ಆಧಾರಗಳಿಲ್ಲದೆಯೇ ಮತೀಯ ಭಾವನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದುದೂ ಕಾರಣವಾಗಿತ್ತು. ಈಗ ಅನೇಕ ವರ್ಷಗಳಿಂದ ಇಂತಹ ಭಾವನೆಗಳನ್ನು ಮತ ಪ್ರಚಾರಕರು ಬಿಟ್ಟುಬಿಟ್ಟಿದ್ದಾರೆ. ಈ ನಮ್ಮ ವಿಶ್ವ ಯುಗ–ಯುಗಗಳಿಂದ ಇದೆ ಮತ್ತು ಅನಂತ ಕಾಲದವರೆಗೂ ಹೀಗೆಯೇ ಇರಬಹುದು ಎಂದು ಈಗ ಎಲ್ಲರೂ ಭಾವಿಸುತ್ತಾರೆ. ಆದರೆ ಈ ಭಾವನೆಯಲ್ಲೂ ಒಂದು ವೇಳೆ ತಪ್ಪಿರಬಹುದು. ಯಾವುದಾದರೊಂದು ಕೋಣೆಯ ಎದುರುಬದುರಿನ ಗೋಡೆಗಳು ಪೂರ್ತಿ ಕನ್ನಡಿಯಿಂದ ಆಗಿದ್ದರೆ ಆ ಕೋಣೆ ಕೊನೆ ಮೊದಲು ಏನೂ ಇಲ್ಲದಂತೆ ತೋರಬಹುದು. ಹೀಗೆಯೇ ಮನುಷ್ಯರಾದ ನಮಗೆ ವಿಶ್ವಕ್ಕೆ ಆದಿ ಅಂತ್ಯವನ್ನು ತಿಳಿಯಲು ಆಗದಿರಬಹುದು. ಆದರೆ ವಿಶ್ವ ಈಗ ಆರೇಳು ಸಾವಿರ ವರ್ಷಗಳಿಂದ ಮಾತ್ರ ಇದೆ ಎನ್ನುವ ಭಾವನೆ ಮಾತ್ರ ಪೂರ್ತಿ ಬಿದ್ದುಹೋಯಿತು ಎನ್ನಬಹುದು.

ಈಗ ಎಲ್ಲರಿಗೂ ಭೂಮಿ ಒಂದು ಸ್ಫಿರಾಯಿಡ್ (Spheroid) ಎಂದು ತಿಳಿದಿದೆ. ಹಾಗೆಂದರೆ ಸ್ವಲ್ಪಮಟ್ಟಿಗೆ ಚಪ್ಪಟೆಯಾಗಿ ಒತ್ತಲ್ಪಟ್ಟ ಕಿತ್ತಿಳೆ ಹಣ್ಣಿನಾಕಾರದ ಗೋಳ. ಇದರ ವ್ಯಾಸ ಸುಮಾರು 8000 ಮೈಲಿಗಳು. ಭೂಮಿ ಗುಂಡಾಗಿದೆ ಎಂದು ಸುಮಾರು 2500 ವರ್ಷಗಳಿಂದ ಬುದ್ಧಿವಂತರಾದ ಕೆಲವರಿಗಾದರೂ ಗೊತ್ತಿದೆ. ಅದಕ್ಕೆ ಮುಂಚೆ ಮಾತ್ರ ಪ್ರತಿಯೊಬ್ಬರೂ ಭೂಮಿ ಚಪ್ಪಟೆಯಾಗಿದೆ ಎಂತಲೇ ತಿಳಿದಿದ್ದರು. ಭೂಮಿ, ಆಕಾಶ, ನಕ್ಷತ್ರ ಮತ್ತು ಗ್ರಹಗಳು, ಇವುಗಳೆಲ್ಲವಕ್ಕೂ ಇರುವ ಸಂಬಂಧದ ಬಗೆಗೆ ಆಗ ಇದ್ದ ನಂಬಿಕೆಗಳು ಈಗ ನಮಗೆ ಅತಿವಿಚಿತ್ರವೆನಿಸುತ್ತವೆ. ಈಗ ಈ ಕೆಳಕಂಡ ವಿಷಯಗಳು ಖಚಿತವಾಗಿ ತಿಳಿದುಬಂದಿವೆ. ಭೂಮಿ ತನ್ನ ಅಕ್ಷದಮೇಲೆ 24 ಘಂಟೆಗಳಿಗೆ ಒಂದಾವೃತ್ತಿ ತಿರುಗುತ್ತದೆ. ವಿಷುವದ್ರೇಖೆ (ಸಮಭಾಜಕ ವೃತ್ತ) ಇರುವಲ್ಲಿ ಅದರ ವ್ಯಾಸ ಈ ಅಕ್ಷಕ್ಕಿಂತ 24 ಮೈಲಿ ಹೆಚ್ಚಾಗಿದೆ. ಈ ತಿರುಗುವಿಕೆಯಿಂದ ಹಗಲು ರಾತ್ರಿಗಳಾಗುತ್ತವೆ. ಸ್ವಲ್ಪ ವಕ್ರವಾದ ಮತ್ತು ನಿಧಾನವಾಗಿ ಬದಲಾಯಿಸುವ ಅಂಡಾಕಾರದ

ಪಥದಮೇಲೆ ಭೂಮಿ ಸೂರ್ಯನನ್ನು ಒಂದು ವರ್ಷದಲ್ಲಿ ಒಂದು ಸಲ ಸುತ್ತುತ್ತದೆ. ಈ ಪ್ರದಕ್ಷಿಣೆಯಲ್ಲಿ ಭೂಮಿ ಸೂರ್ಯನಿಗೆ ಅತ್ಯಂತ ಸಮೀಪಕ್ಕೆ ಬಂದಾಗ ಅದಕ್ಕೂ ಸೂರ್ಯನಿಗೂ ಇರುವ ದೂರ 91½ ಮಿಲಿಯ ಮೈಲಿಗಳು; ಅತ್ಯಂತ ದೂರದಲ್ಲಿದ್ದಾಗ 94½ ಮಿಲಿಯ ಮೈಲಿಗಳು.

ಭೂಮಿಯ ಸುತ್ತಲೂ ಚಂದ್ರ ಸುತ್ತುತ್ತದೆ. ಇದು ಒಂದು ಸಣ್ಣ ಗೋಳ. ಭೂಮಿಗೂ ಇದಕ್ಕೂ ಸರಾಸರಿ ದೂರ 239000 ಮೈಲಿಗಳು. ಭೂಮಿ, ಚಂದ್ರ ಇವುಗಳಲ್ಲದೆ ಸೂರ್ಯನ ಸುತ್ತಲೂ ಇತರ ಗ್ರಹಗಳೂ ಸುತ್ತುತ್ತವೆ. ಇವುಗಳಲ್ಲಿ ಬುಧ, ಮತ್ತು ಶುಕ್ರ ಸೂರ್ಯನಿಗೆ ಭೂಮಿಗಿಂತಲೂ ಹತ್ತಿರದಲ್ಲಿವೆ. ಸೂರ್ಯನಿಂದ ಇವು ಕ್ರಮವಾಗಿ 36 ಮಿಲಿಯ ಮತ್ತು 67 ಮಿಲಿಯ ಮೈಲಿ ದೂರದಲ್ಲಿರುತ್ತವೆ. ಭೂಮಿಯ ಪಥದಿಂದ ಆಚೆಗೆ ಅಂಗಾರಕ, ಗುರು, ಶನಿ, ಯೂರನಸ್ ಮತ್ತು ನೆಪ್ಚೂನ್ ಇವುಗಳು ಕ್ರಮವಾಗಿ 141, 483, 886, 1782 ಮತ್ತು 2793 ಮಿಲಿಯ ಮೈಲಿಗಳ ದೂರದಲ್ಲಿ ಸುತ್ತುತ್ತವೆ.[1] (ಇವುಗಳಲ್ಲದೆ ಅಂಗಾರಕ ಮತ್ತು ಗುರು ಗ್ರಹಗಳ ನಡುವೆ ಕ್ಷುದ್ರ ಗ್ರಹಗಳ--planetoids)- ಪಟ್ಟಿಕೆಯೊಂದಿದೆ.) ಈ ಸಂಖ್ಯೆಗಳು ಬಹು ದೊಡ್ಡವಾದುದರಿಂದ ಇವುಗಳನ್ನು ಊಹಿಸಿಕೊಳ್ಳುವುದು ಕಷ್ಟ. ಆದುದರಿಂದ ಸೂರ್ಯ ಮತ್ತಿತರ ಗ್ರಹಗಳನ್ನು ಸಣ್ಣ ಅಳತೆಯ ವಸ್ತುಗಳಿಗೆ ಹೋಲಿಸಿಕೊಳ್ಳುವುದು ಒಳ್ಳೆಯದು.

ಭೂಮಿ ಒಂದಂಗುಲ ವ್ಯಾಸದ ಪುಟ್ಟ ಚಂಡು ಎಂದಿಟ್ಟುಕೊಂಡರೆ ಸೂರ್ಯ ಒಂಬತ್ತು ಅಡಿ ವ್ಯಾಸದ ದೊಡ್ಡ ಗೋಳ ಆಗುತ್ತದೆ. ಇದು ಭೂಮಿಯಿಂದ 327 ಗಜಗಳ ದೂರದಲ್ಲಿರುತ್ತದೆ. ಇದು ಸುಮಾರು 1/5 ಮೈಲಿ. ಅಂದರೆ ಕಾಲ್ನಡಿಗೆಯಲ್ಲಿ ನಾಲ್ಕೈದು ನಿಮಿಷಗಳ ಹಾದಿ. ಚಂದ್ರ ಭೂಮಿಯಿಂದ 2½ ಅಡಿ ದೂರದಲ್ಲಿರುವ ಪುಟ್ಟ ಬಟಾಣಿ ಕಾಳು ಎನ್ನಬಹುದು. ಭೂಮಿಗೂ ಸೂರ್ಯನಿಗೂ ನಡುವೆ ಬುಧ ಶುಕ್ರ ಗ್ರಹಗಳು ಸೂರ್ಯನಿಂದ 125 ಗಜ ಮತ್ತು 233 ಗಜಗಳ ದೂರದಲ್ಲಿರುತ್ತವೆ. ಸೂರ್ಯನಿಂದ 490 ಗಜಗಳ ದೂರದಲ್ಲಿ ಮಂಗಳ, ಒಂದು ಮೈಲಿ ದೂರದಲ್ಲಿ ಒಂದು ಅಡಿ ವ್ಯಾಸದ ಗುರು, ಇದಕ್ಕಿಂತ ಸ್ವಲ್ಪ ಚಿಕ್ಕದಾದ ಶನಿ 2 ಮೈಲಿ ದೂರದಲ್ಲಿ, ಯೂರನಸ್ ಸುಮಾರು 3 ಮೈಲಿ ಆಚೆ, ನೆಪ್ಚೂನ್ 5½ ಮೈಲಿ ದೂರದಲ್ಲಿರುತ್ತವೆ.[2] ಇವುಗಳಾದ ಮೇಲೆ ಸಾವಿರಾರು ಮೈಲಿಗಳವರೆಗೂ ಕೆಲವು ಸಣ್ಣ ಕಣಗಳು ಮತ್ತು ವಿರಳವಾದ ಹಬೆಯ ತುಣುಕುಗಳನ್ನು (attenuated vapour scraps) ಬಿಟ್ಟರೆ ಬರಿ ಶೂನ್ಯ ಇರುತ್ತದೆ. ಇದೇ ಅಳತೆಯನ್ನು ಮುಂದುವರಿಸಿದರೆ ಭೂಮಿಗೆ ಅತ್ಯಂತ ಹತ್ತಿರವಾದ ನಕ್ಷತ್ರ 50000 ಮೈಲಿ ದೂರದಲ್ಲಿರುತ್ತದೆ.

ಈ ಅಂಕಿ ಅಂಶಗಳನ್ನು ಪರಿಶೀಲಿಸಿದರೆ ಜೀವನಾಟಕ ನಡೆಯುವ ಈ ವಿಶ್ವದಲ್ಲಿನ ಶೂನ್ಯ ಎಷ್ಟು ಅಗಾಧವೆಂದು ಗೋಚರವಾಗಬಹುದು. ನನಗೆ ಗೊತ್ತಿರುವ ಮಟ್ಟಿಗೆ ಈ ನಮ್ಮ ಭೂಮಿಯ ಮೇಲ್ಮೈ ಒಂದನ್ನು ಬಿಟ್ಟರೆ ವಿಶ್ವದಲ್ಲಿ ಉಳಿದೆಲ್ಲಿಯೂ ಜೀವ ಇರುವಂತೆ ತೋರುವುದಿಲ್ಲ. ಭೂಮಿಯ ತ್ರಿಜ್ಯ 4000 ಮೈಲಿಗಳು. ಇದರಲ್ಲಿ

ಮೇಲ್ಭಾಗದ ಮೂರು ಮೈಲಿ ಆಳದಲ್ಲಿ ಮಾತ್ರ ಜೀವ ಇದೆ. ಹಾಗೆಯೇ ಭೂಮಿಯ ಮೇಲ್ಭಾಗದಿಂದ ಐದು ಮೈಲಿ ಎತ್ತರಕ್ಕೆ ಹೋಗುವವರೆಗೂ ಇರುತ್ತದೆ. ವಿಶ್ವದಲ್ಲಿ ಇಷ್ಟು ಸ್ಥಳ ಬಿಟ್ಟರೆ ಉಳಿದೆಲ್ಲಿಯೂ ಜೀವ ಇಲ್ಲವೆಂದೇ ತೋರುತ್ತದೆ.[3]

ಸಮುದ್ರವನ್ನು ಹೊಕ್ಕೆಂದರೆ ಐದು ಮೈಲಿ ಆಳದವರೆಗೂ ಜಲಗಾಡಲು ಸಾಧ್ಯವಾಗಿದೆ. ಹಾಗೆಯೇ ಆಕಾಶದಲ್ಲಿ ಇಪ್ಪತ್ತು ಮೈಲಿಗಿಂತ ಎತ್ತರ ಹಾರಾಡಲು ಆಗುವುದಿಲ್ಲವೆನಿಸುತ್ತದೆ.[4] ಹಕ್ಕಿಗಳು ಯಾವುವೂ ಐದು ಮೈಲಿ ಎತ್ತರಕ್ಕೆ ಹಾರಲಾರವು. ಚಿಕ್ಕಹಕ್ಕಿಗಳನ್ನು ಮತ್ತು ಕೀಟಗಳನ್ನು ಏರೋಪ್ಲೇನ್‌ಗಳಲ್ಲಿ ತೆಗೆದುಕೊಂಡು ಹೋದರೆ ಐದು ಮೈಲಿಗಳಿಗೂ ಬಹಳ ಕೆಳಗೆ ಜ್ಞಾನ ತಪ್ಪಿ ಬಿದ್ದುಬಿಡುತ್ತವೆ.

2. ಭೂಮಿ, ಅನಂತ ಕಾಲಮಾನದಲ್ಲಿ

ಕಳೆದ ಐವತ್ತು ವರ್ಷಗಳಲ್ಲಿ ಭೂಮಿಯ ಮೂಲ ಮತ್ತು ವಯಸ್ಸಿನ ಬಗ್ಗೆ ಕುತೂಹಲಜನಕ ಊಹೆ ಉತ್ತಮ ರೀತಿಯಲ್ಲಿ ಸಾಕಷ್ಟು ನಡೆದಿದೆ. ಆದರೆ ಇನ್ನೂ ಭೌತಶಾಸ್ತ್ರ ಮತ್ತು ಖಗೋಳಶಾಸ್ತ್ರ ಅಷ್ಟು ಮುಂದುವರಿದಿಲ್ಲವಾದುದರಿಂದ ಇವೆಲ್ಲಾ ಇನ್ನೂ ಊಹೆ ಮಾತ್ರ ಆಗಿದೆ. ಒಟ್ಟಿನಲ್ಲಿ ಈ ನಮ್ಮ ಭೂಗೋಳದ ವಯಸ್ಸಿನ ಅಂದಾಜು ಮಾತ್ರ ಹೆಚ್ಚುತ್ತಿದೆ. ಈಗಿನ ಊಹೆಯ ಪ್ರಕಾರ ಭೂಮಿ ಸೂರ್ಯನ ಸುತ್ತಲೂ ಸ್ವತಂತ್ರವಾದ ಗೋಳದ ರೂಪದಲ್ಲಿ 2,000,000,000 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಸುತ್ತುತ್ತಿರಬೇಕು.[5] ಈ ಕಾಲ ಇದಕ್ಕಿಂತ ಬಹಳ ಹೆಚ್ಚೇ ಆಗಿದ್ದರೂ ಇರಬಹುದು. ಈ ಕಾಲ ಪರಿಮಿತಿ ಮಾತ್ರ ಸಾಮಾನ್ಯ ಊಹೆಗೆ ಮೀರಿದುದಾಗಿದೆ.

ಹೀಗೆ ಬೇರೆ ಬೇರೆಯಾಗುವುದಕ್ಕಿಂತ ಮುಂಚೆ ಸೌರವ್ಯೂಹದ ಎಲ್ಲ ಗ್ರಹಗಳೂ– ಅಂದರೆ ಸೂರ್ಯ, ಭೂಮಿ ಮತ್ತಿತರ ಗ್ರಹಗಳು– ಆಕಾಶದಲ್ಲಿ ವಿರಳವಾಗಿ ಪಸರಿಸಿಕೊಂಡ ಭೌತದ್ರವ್ಯದ ಒಂದು ದೊಡ್ಡ ಸುಳಿ ಆಗಿದ್ದಿರಬೇಕು. ಈಗಲೂ ದೂರದರ್ಶಕದಲ್ಲಿ (ಟೆಲಿಸ್ಕೋಪಿನಲ್ಲಿ) ನೋಡಿದರೆ ಆಕಾಶದಲ್ಲಿ ಬೇರೆ ಬೇರೆ ಕಡೆಗಳಲ್ಲಿ ಸ್ಪೈರಲ್ ನೆಬುಲೇ– ಅಂದರೆ ಒಂದು ಕೇಂದ್ರದ ಸುತ್ತಲೂ ಸುರುಳಿಯೋಪಾದಿಯಲ್ಲಿ ಸುತ್ತುತ್ತಿರುವ ಭೌತದ್ರವ್ಯದ ಮೋಡಗಳು ಕಂಡುಬರುತ್ತವೆ. ನಮ್ಮ ಸೌರವ್ಯೂಹವೂ ಮುಂಚೆ ಹೀಗೆಯೇ ಇದ್ದು ಆಮೇಲೆ ಅದರಲ್ಲಿದ್ದ ಭೌತದ್ರವ್ಯವೆಲ್ಲಾ ಈಗಿನ ರೂಪದಲ್ಲಿ ಅಲ್ಲಲ್ಲೇ ಒಟ್ಟುಗೂಡಿರಬೇಕು ಎಂದು ಅನೇಕ ಖಗೋಳ ಶಾಸ್ತ್ರಜ್ಞರು ಊಹಿಸುತ್ತಾರೆ. ಯುಗ ಯುಗಗಳು ಹೀಗೆಯೇ ಆಗುತ್ತಾ ಕಡೆಗೆ ಭೂತಕಾಲದ ಬೃಹದ್‌ವ್ಯಾಪ್ತಿಯಲ್ಲಿ ಒಮ್ಮೆ ಭೂಮಿ ಮತ್ತು ಚಂದ್ರ ಬೇರೆ ಬೇರೆಯಾಗಿ ಕಾಣಲಾರಂಭಿಸಿದುವು. ಇದು ಹಿಂದೆ ತಿಳಿಸಿದಂತೆ 2000 ಮಿಲಿಯ ವರ್ಷಗಳ ಹಿಂದೆ ನಡೆದಿರಬೇಕು.[6] ಆಗ ಇವೆರಡೂ ಈಗ ಸುತ್ತುವುದಕ್ಕಿಂತ ಬಹು ವೇಗವಾಗಿ ತಮ್ಮ ಅಕ್ಷದಮೇಲೆ ಬುಗುರಿಯಂತೆ ಸುತ್ತುತ್ತಿದ್ದುವು. ಸೂರ್ಯನಿಗೆ ಈಗ ಇರುವುದಕ್ಕಿಂತ ಹತ್ತಿರದಲ್ಲಿದ್ದು ಸೂರ್ಯನನ್ನು ಬೇಗ ಬೇಗ ಪ್ರದಕ್ಷಿಣೆ ಮಾಡುತ್ತಿದ್ದುವು. ಇವುಗಳ ಮೇಲ್ಮೈ ದ್ರವರೂಪದಲ್ಲಿದ್ದುದಲ್ಲದೆ ಪ್ರಾಯಶಃ ಶಾಖದಿಂದ

ಪ್ರಜ್ವಲಿಸುತ್ತಲೂ ಇತ್ತು. ಸೂರ್ಯ ಸಹ ಈಗಿರುವುದಕ್ಕಿಂತ ಪ್ರಕಾಶಮಾನವಾಗಿತ್ತು.

ಈಗೇನಾದರೂ ನಮಗೆ ಅಗಾಧ ಕಾಲಮಾನವನ್ನು ಹಿಂದುಮುಂದಾಗಿ ಪಯಣಿಸಿ ಅಂದಿನ ಭೂಮಿಯನ್ನು ನೋಡುವುದು ಸಾಧ್ಯವಾದರೆ ಆ ನೋಟ ನಮಗೆ ಕಬ್ಬಿಣದ ಕಾರ್ಖಾನೆಯ ಸಿಡಿಕುಲುಮೆಯ (ಬ್ಲಾಸ್ಟ್ ಫರ್ನೇಸಿನ) ಒಳಭಾಗವನ್ನೋ ಅಗ್ನಿ ಪರ್ವತದಿಂದ ಹರಿಯುವ ಲಾವಾ ಪ್ರವಾಹವನ್ನೋ ನೆನಪಿಗೆ ತರಬಹುದು. ನೀರು ನಮ್ಮ ಕಣ್ಣಿಗೆ ಬೀಳುವುದೇ ಇಲ್ಲ. ಏಕೆಂದರೆ ಆ ಶಾಖದಲ್ಲಿ ನೀರು ದ್ರವರೂಪದಲ್ಲಿರಲು ಸಾಧ್ಯವೇ ಇಲ್ಲವೆ ಗಂಧಕ ಮತ್ತು ಲೋಹಗಳ ಆವಿಯ ಮಧ್ಯೆ ಅತಿಯಾಗಿ ಕಾದ ಆವಿಯ ರೂಪದಲ್ಲಿ (in the form of super-heated steam) ಇರುತ್ತವೆ. ವಾತಾವರಣದಲ್ಲೆಲ್ಲಾ ಇಂತಹ ವಸ್ತುಗಳೇ ಇದ್ದು ಅದರ ಕೆಳಗೆ ಕರಗಿದ ಬಂಡೆಗಳ ಸಮುದ್ರವೇ ಮರಳುತ್ತಿರುತ್ತದೆ. ಬೆಂಕಿಯ ಮೋಡಗಳ ಮಧ್ಯೆ ಆಕಾಶದಲ್ಲಿ ಸೂರ್ಯ ಚಂದ್ರರು ಜ್ವಾಲೆಯ ಉಸಿರುಗಳಂತೆ ಸರ್ರನೆ ಹಾದುಹೋಗುತ್ತಾರೆ.

ಹೀಗೆಯೇ ಒಂದಾದ ಮೇಲೊಂದು ಮಿಲಿಯ ವರ್ಷಗಳು ಉರುಳುತ್ತಿದ್ದಂತೆ ಈ ದೃಶ್ಯದ ಹೊರಚಿನ್ನುವ ಪ್ರಜ್ವಲನ ಹೊರಟುಹೋಯಿತು. ಅಂತರಿಕ್ಷದಲ್ಲಿನ ಈ ಆವಿಗಳು ದ್ರವರೂಪ ಹೊಂದಿ ಮಳೆಯಾಗಿ ಬಿದ್ದು ಆಕಾಶ ಸ್ವಲ್ಪ ತಿಳಿಯಾಯಿತು, ಶಾಖ ಆರಿದ್ದರಿಂದ ಗಟ್ಟಿಯಾಗುತ್ತಿರುವ ಕಲ್ಲುಬಂಡೆಗಳು ಕರಗಿದ ಪದಾರ್ಥಗಳ ಸಮುದ್ರದ ಮೇಲೆ ಕಬ್ಬಿಣದ ಕುಲುಮೆಯಲ್ಲಿ ಕಿಟ್ಟ ತೇಗೋ ಹಾಗೆ ಕಾಣಿಸಿಕೊಂಡುವು. ಇವು ಮತ್ತೆ ಮುಳುಗಿ ಅಂತಹದ್ದೇ ಬೇರೆ ಬೇರೆ ಬಂಡೆಗಳು ಪುನಃ ತೇಲಲಾರಂಭಿಸುತ್ತಿದ್ದವು. ಸೂರ್ಯ ಚಂದ್ರ ಎರಡೂ ಭೂಮಿಯಿಂದ ದೂರ ದೂರವಾಗಿ ಅವುಗಳ ಗಾತ್ರವೂ ಕಡಿಮೆಯಾಗಿ ಕಾಣಿಸುತ್ತಾ ಹೋಯಿತಲ್ಲದೆ ಆಕಾಶದಲ್ಲಿ ಅವು ಹಾದುಹೋಗುವ ವೇಗವೂ ಕಡಿಮೆಯಾಗುತ್ತಾ ಬಂತು. ಸಣ್ಣ ಗಾತ್ರದ ಚಂದ್ರ ಅಷ್ಟು ಹೊತ್ತಿಗಾಗಲೇ ತಣ್ಣಗಾಗಿ ಹೋಗಿ ಅದರ ಸ್ವಯಂಪ್ರಕಾಶ ಹೊರಟುಹೋಯಿತು. ಅದು ಸೂರ್ಯನ ಬೆಳಕಿಗೆ ಅಡ್ಡ ಬರುವುದರಿಂದ ಗ್ರಹಣಗಳೂ ಸೂರ್ಯನ ಬೆಳಕನ್ನು ಪ್ರತಿಫಲಿಸುವುದರಿಂದ ಹುಣ್ಣಿಮೆಗಳೂ ಉಂಟಾಗುವಂತಾದುವು.

ಹೀಗೆ ಬಲು ನಿಧಾನವಾಗಿ ಭೂಮಿ ಆರುತ್ತಾ ಈಗಿನ ನಮ್ಮ ಭೂಮಿಯ ಆಕಾರ ಪಡೆಯಲಾರಂಭಿಸಿತು. ಭೂಮಿಯ ಮೇಲ್ಪದರವಾದ ವಾತಾವರಣ ಸಾಕಷ್ಟು ಆರುತ್ತಲೂ ಅದರಲ್ಲಿನ ಆವಿ ನೀರಿನ ರೂಪಕ್ಕೆ ಬಂದು ಮೋಡಗಳು ಉಂಟಾಗಿ ಮೊಟ್ಟ ಮೊದಲನೆ ನೀರಿನ ಮಳೆ ಕೆಳಗಿದ್ದ ಕಾದ ಬಂಡೆಗಳ ಮೇಲೆ ಸುರಿಯಿತು ; ಆದರೆ ಮೊದ ಮೊದಲು ಈ ನೀರಿನ ಬಹುಭಾಗ ಭುಸ್ಸೆಂದು ತಿರುಗಿ ಆವಿಯಾಗಿ ಹೋಗಿರಬೇಕು. ಅನೇಕ ಸಾವಿರ ವರ್ಷ ಹೀಗೆಯೇ ಆಗುತ್ತಿದ್ದಿರಬೇಕು. ಅಂತೂ ಕೊನೆಗೆ ಹೆಪ್ಪುಗಟ್ಟುತ್ತಿರುವ ಬಂಡೆಗಳ ಮೇಲೆ ಬಿಸಿನೀರಿನ ಹೊಳೆಗಳು ಹರಿಯಲಾರಂಭಿಸಿದುವು. ಇವು ಅಲ್ಲಲ್ಲಿದ್ದ ಹಳ್ಳ ಸರೋವರಗಳಿಗೆ ಕಲ್ಲುಗಳನ್ನು ಸವೆಸಿಬಂದ ಪುಡಿಮಣ್ಣು ಮೊದಲಾದುವನ್ನು ತಂದು ಹಾಕುತ್ತಿದ್ದವು.

ಕೊನೆಗೆ ಮನುಷ್ಯನೂ ಸೇರಿದಂತೆ ಜೀವ ಹಿಡಿದುಕೊಂಡಿರಬಹುದಾದಂತಹ ಸ್ಥಿತಿಗೆ ಭೂಮಿ ಬಂದಿತು. ನಾವೇನಾದರೂ ಆ ಕಾಲದ ಭೂಮಿಯನ್ನು ನೋಡಬಹುದಾಗಿದ್ದರೆ ಬಿರುಗಾಳಿಗಳಿಂದ ಛಿದ್ರವಾಗುತ್ತಿದೆಯೆನಿಸುತ್ತಿದ್ದ ಆಕಾಶದ ಕೆಳಗೆ ಮಣ್ಣು ಸಹ ಇಲ್ಲದ ಸಸ್ಯವರ್ಗದ ಸುಳಿವೇ ಇಲ್ಲದ ಲಾವಾ ಪ್ರವಾಹದಂತೆ ಕಾಣುವ ದೊಡ್ಡ ದೊಡ್ಡ ಕಲ್ಲುಗಳು ನಮಗೆ ಕಂಡುಬರುತ್ತಿದ್ದುವು. ಇಂದಿನ ನಿಧಾನ ಗತಿಯ ಸಮಾಧಾನ ಸ್ಥಿತಿಯ ಭೂಮಿಯಲ್ಲಿರುವ ನಮಗೆ ಗೊತ್ತಿರಲು ಸಾಧ್ಯವೇ ಇಲ್ಲದಂಥ ಈಗ ಅತ್ಯಂತ ಭಯಂಕರವೆನಿಸುವ ಟೊರ್ನಾಡೋಗಿಂತ ಬಿರುಸೂ ಬಿಸಿಯೂ ಆದ ಬಿರುಗಾಳಿಗಳೂ, ರಭಸದ ಮಳೆಯೂ ನಮ್ಮನ್ನು ಎದುರಿಸುತ್ತಿದ್ದುವು. ಈ ಮಳೆಯ ನೀರು ಅತಿ ರಭಸದಿಂದ ಬಂಡೆಗಳನ್ನು ಕೊರೆದುಕೊಂಡು ನುಗ್ಗಿ ಅಲ್ಲಲ್ಲೇ ಒಂದುಗೂಡಿ ದೊಡ್ಡ ಪ್ರವಾಹಗಳನ್ನುಂಟು ಮಾಡುತ್ತಿತ್ತು. ಈ ಪ್ರವಾಹಗಳು ಆಳವಾದ ಕೊರಕಲು ಕಮರಿಗಳನ್ನುಂಟು ಮಾಡಿ ವೇಗವಾಗಿ ಹರಿಯುತ್ತಾ, ಬಂಡೆಗಳನ್ನು ಕತ್ತರಿಸಿದಾಗ ಉಂಟಾದ ಮಣ್ಣು ಮುಂತಾದುವನ್ನು ಕಡೆಗೆ ಅಂದಿನ ಸಮುದ್ರಗಳಲ್ಲಿ ಹಾಕುತ್ತಿದ್ದುವು. ಮೋಡಗಳ ಮಧ್ಯೆ ದೊಡ್ಡ ಸೂರ್ಯ ನಾವು ನೋಡುತ್ತಿದ್ದಂತೆಯೇ ಚಲಿಸುತ್ತಿರುವುದು ಕಾಣುತ್ತಿತ್ತು. ಪ್ರತಿನಿತ್ಯ ಸೂರ್ಯಚಂದ್ರರು ಬಂದಂತೆ ಭೂಕಂಪ ಮತ್ತು ನೆಲದುಬ್ಬರ ಆಗುತ್ತಿದ್ದುವು. ಈಗ ತನ್ನ ಅಕ್ಷದ ಮೇಲೆ ತಿರುಗುವುದನ್ನು ನಿಲ್ಲಿಸಿರುವ ಚಂದ್ರ ಆಗ ಹಾಗೆ ತಿರುಗುತ್ತಿದ್ದುದರಿಂದ ಈಗ ನಮ್ಮಿಂದ ಕಣ್ಮರೆಯಾಗಿರುವ ಚಂದ್ರನ ಇನ್ನೊಂದು ಮುಖವೂ ನಮಗೆ ಕಾಣಬರುತ್ತಿತ್ತು.

ಭೂಮಿಗೆ ವಯಸ್ಸು ಹೆಚ್ಚುತ್ತಾ ಬಂತು ; ದಿನ ಉದ್ದವಾಯಿತು ; ಸೂರ್ಯ ದೂರ ಸರಿಯುತ್ತಾ ಮತ್ತು ಸೌಮ್ಯವಾಗುತ್ತಾ ಬಂತು. ಚಂದ್ರ ಆಕಾಶದಲ್ಲಿ ಸಂಚರಿಸುವ ವೇಗ ಕಡಿಮೆಯಾಯಿತು. ಮಳೆ ಗಾಳಿಗಳ ಅಬ್ಬರ ಕಡಿಮೆಯಾಯಿತು. ಆ ಮೊದಲ ಸಮುದ್ರಗಳಲ್ಲಿ ನೀರು ಹೆಚ್ಚಿ ಅವುಗಳು ಒಂದಕ್ಕೊಂದು ಸೇರಿ ಈಗಿರುವಂತಹ ಸಾಗರಗಳು ಆಗಿ ನಮ್ಮ ಭೂಮಿಗೆ ನೀರಿನ ಉಡಿಗೆಯನ್ನು ಉಡಿಸಿದುವು.

ಆದರೂ ಭೂಮಿಯ ಮೇಲೆ ಇನ್ನೂ ಜೀವ ಹುಟ್ಟಿರಲಿಲ್ಲ, ಸಮುದ್ರಗಳು ಜೀವ ರಹಿತವಾಗಿದ್ದುವು. ನೆಲ ಬರಡಾಗಿತ್ತು.

3. ಜೀವದ ಆರಂಭ

ಮನುಷ್ಯನಿಗೆ ನೆನಪಿನಲ್ಲಿರುವುದಕ್ಕೂ ಮುಂಚಿನ ಕಾಲದಲ್ಲಿದ್ದ ಜೀವಗಳ ಬಗ್ಗೆ ನಮಗೆ ಈಗ ತಿಳಿದಿರುವ ವಿಷಯವೆಲ್ಲಾ ಪದರವುಳ್ಳ ಬಂಡೆಗಳಲ್ಲಿ ಸಿಕ್ಕಿರುವ ಗುರುತುಗಳು ಮತ್ತು ಜೀವಾವಶೇಷಗಳಿಂದ ಗೊತ್ತಾಗಿದೆ. ಷೇಲ್ ಮತ್ತು ಸ್ಲೇಟ್‌ಕಲ್ಲು, ಸುಣ್ಣ ಕಲ್ಲು ಮತ್ತು ಮರಳು ಕಲ್ಲುಗಳಲ್ಲಿ ಮೂಳೆಗಳು, ಚಿಪ್ಪುಗಳು (shells) ನಾರು, ಗಿಡದ ಕಾಂಡ, ಹಣ್ಣುಗಳು, ಹೆಜ್ಜೆ ಗುರುತು, ಗೀಚು ಗುರುತು ಮುಂತಾದುವುಗಳೂ, ಇವುಗಳೊಡನೆ ಆ ಕಾಲದ ಸಮುದ್ರದ ಉಬ್ಬರವಿಳಿತಗಳ, ಅಲೆಗಳ ಗುರುತುಗಳೂ, ಮಳೆ

ಬಿದ್ದುದರಿಂದ ಆದ ಗುಂಡಿಗಳೂ, ಈಗಲೂ ಕಂಡುಬರುತ್ತವೆ. ಭೂಮಿಯ ಹಿಂದಿನ ಚರಿತ್ರೆಯೆಲ್ಲಾ ಇಂತಹ ಬಂಡೆಗಳ ಒಳಗಿನ ದಾಖಲೆಗಳನ್ನು ತೀವ್ರ ಆಸಕ್ತಿಯಿಂದ ಶ್ರಮಪೂರ್ವಕವಾಗಿ ಪರಿಶೀಲಿಸಿ ಜೋಡಿಸಿದುದರಿಂದ ಸ್ವಲ್ಪ ಸ್ವಲ್ಪವಾಗಿ ತಿಳಿಯುತ್ತಾ ಬಂದಿವೆಯೆಂದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರಬಹುದು. ಈ ಜಲಜ ಶಿಲೆಗಳು (Sedimentary Rocks) ಅಚ್ಚುಕಟ್ಟಾಗಿ ಪದರದ ಮೇಲೆ ಪದರದಂತೆ ಇರುವುದಿಲ್ಲ. ಯಾವುದಾದರೂ ಪುಸ್ತಕಾಲಯವನ್ನು ಮೇಲಿಂದಮೇಲೆ ಲೂಟಿ ಮಾಡುತ್ತಿದ್ದರೆ ಅದರ ಪುಸ್ತಕಗಳ ಹಾಳೆಗಳು ಯಾವ ಸ್ಥಿತಿಯಲ್ಲಿರಬಹುದೋ ಹಾಗೆಯೇ ಈ ಜಲಜ ಶಿಲೆಗಳೂ ಕೆಲವು ಕಡೆ ಪುಡಿಯಾಗಿ ಕೆಲವು ಕಡೆ ಒಗ್ಗಿ, ಎಸೆದಂತಾಗಿ ಬೆರಸಿ ಹೋಗಿವೆ. ಈ ದಾಖಲೆಗಳನ್ನು ಪರಿಶೀಲಿಸಲು ಎಷ್ಟೋಜನ ತಮ್ಮ ಜೀವಮಾನವನ್ನೇ ವಿನಿಯೋಗಿಸಿದ್ದರಿಂದ ಅವುಗಳನ್ನು ಕ್ರಮವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿದೆ ಅಷ್ಟೆ.

ಭೂಗರ್ಭದ ದಾಖಲೆಯಲ್ಲಿ ಮೊಟ್ಟಮೊದಲಿನ ಶಿಲೆಗಳನ್ನು ಭೂಗರ್ಭ ಶಾಸ್ತ್ರಜ್ಞರು ಜೀವಿರಹಿತ ಶಿಲೆಗಳು (azoic rocks) ಎನ್ನುತ್ತಾರೆ. ಏಕೆಂದರೆ ಇವುಗಳಲ್ಲಿ ಜೀವಕ್ಕೆ ಸಂಬಂಧಿಸಿದ ಯಾವುದರ ಕುರುಹೂ ಇಲ್ಲ. ಉತ್ತರ ಅಮೇರಿಕದಲ್ಲಿ ಇಂತಹ ಬಂಡೆಗಳು ಬೀರಾದ ಮಣ್ಣು ಹೊದಿಕೆಯೂ ಇಲ್ಲದ ಭೂಮಿಯ ಮೇಲ್ಭಾಗದಲ್ಲಿಯೇ ವಿಸ್ತಾರವಾಗಿ ಹರಡಿರುವುದು ಕಂಡುಬರುತ್ತದೆ; ಇವುಗಳು ಎಷ್ಟು ದಪ್ಪವಾಗಿವೆಯೆಂದರೆ ಭೂಗರ್ಭದ ದಾಖಲೆಗಳಲ್ಲಿ ಅರ್ಧಭಾಗದ ಚರಿತ್ರೆಯನ್ನು ಇವುಗಳಿಂದಲೇ ತಿಳಿಯಬಹುದೆಂದು ಭೂಗರ್ಭ ಶಾಸ್ತ್ರಜ್ಞರು ಹೇಳುತ್ತಾರೆ. ಇದು ಬಹು ಮುಖ್ಯವಾದ ವಿಷಯ. ಭೂಮಿಯ ಮೇಲೆ ನೆಲ ಮತ್ತು ನೀರು ಬೇರೆ ಬೇರೆಯಾಗಿ ಕಾಣತೊಡಗಿದಮೇಲೆ ಇದುವರೆಗೂ ಕಳೆದ ಕಾಲಾವಕಾಶದಲ್ಲಿ ಮೊದಲರ್ಧ ಕಾಲದ ಬಂಡೆಗಳಲ್ಲಿ ಜೀವದ ಗುರುತೇ ಇಲ್ಲ. ಆದರೆ ಇವುಗಳಲ್ಲಿ ಅಲೆಗಳ ಗುರುತು ಮತ್ತು ಮಳೆಯ ಗುರುತು ಕಾಣಿಸುತ್ತವೆ.

ಈ ಬಂಡೆಗಳಲ್ಲಿ ನಾವು ಮೇಲೆ ಮೇಲೆ ಬಂದಂತೆ ಪುರಾತನ ಜೀವಿಗಳ ಚಿಹ್ನೆಗಳು ತೋರಿಬಂದು ಹಾಗೆಯೇ ಹೆಚ್ಚುತ್ತಾ ಹೋಗುತ್ತವೆ. ಭೂ ಚರಿತ್ರೆಯಲ್ಲಿ ಈ ಹಳೆಯ ಗುರುತುಗಳು ಕಾಣಬರುವ ಈ ಕಾಲಕ್ಕೆ ಭೂಗರ್ಭ ಶಾಸ್ತ್ರಜ್ಞರು ಪ್ರಾಚೀನ ಜೀವಿಕಲ್ಪ (Lower palaeozoic age) ಎನ್ನುತ್ತಾರೆ. ಈ ಬಂಡೆಗಳಲ್ಲಿ ಮೊದಮೊದಲು ಚಿಕ್ಕ ಚಿಕ್ಕ ಚಿಪ್ಪುಮೀನುಗಳು (shell fish) ಜ್ಯೂ ಫೈಟ್ (zoo phyte) ಗಳ ಕಾಂಡಗಳು ಮತ್ತು ಹೂಗಳಂತಿರುವ ತಲೆಗಳು, ಸಮುದ್ರದ ಜೊಂಡುಗಳು — ಇಂತಹ ಸರಳ ಸುಂದರ ವಸ್ತುಗಳ ಅವಶೇಷಗಳೂ, ಸಮುದ್ರದ ಹುಳಗಳು ಮತ್ತು ಚಿಪ್ಪಿನ ಪ್ರಾಣಿಗಳ ಚಲನೆಯ ಜಾಡುಗಳೂ ಕಾಣುತ್ತವೆ. ಭೂಮಿಯಲ್ಲಿ ಜೀವ–ಚಟುವಟಿಕೆಯ ಪ್ರಥಮ ಸೂಚನೆಗಳಿವು. ತೆವಳುವ ಮತ್ತು ಚೆಂಡಿನಾಕಾರದಲ್ಲಿ ಸುತ್ತಿಕೊಳ್ಳುವ ಗಿಡ ಹೇನಿನಂತಹ ಟ್ರೈಲೋಬೈಟ್ಸ್ (Trilobites) ಗಳೆಂಬ ಪ್ರಾಣಿಗಳು ಈ ಬಂಡೆಗಳಲ್ಲಿ ಬಹುಮುಂಚೆಯೇ ಕಾಣಿಸಿಕೊಳ್ಳುತ್ತವೆ. ಕೆಲವು ಮಿಲಿಯ ವರ್ಷ

ಗಳ ನಂತರ ಸಮುದ್ರದ ಚೇಳುಗಳು ಕಂಡುಬರುತ್ತವೆ. ಇವುಗಳು ಆಗಿನವರೆಗಿದ್ದ ಎಲ್ಲ ಪ್ರಾಣಿಗಳಿಗಂತ ಹೆಚ್ಚು ಶಕ್ತಿಯುಳ್ಳವೂ, ಹೆಚ್ಚು ಚಟುವಟಿಕೆಯಿಂದ ಸಂಚರಿಸಬಲ್ಲವೂ ಆಗಿದ್ದುವು.

ಆದರೆ ಈ ಯಾವ ಪ್ರಾಣಿಗಳೂ ದೊಡ್ಡ ಗಾತ್ರವುಳ್ಳವಾಗಿರಲಿಲ್ಲ. ಒಂಬತ್ತು ಅಡಿಗಳಷ್ಟು ಉದ್ದವಿದ್ದ ಕೆಲವು ಬಗೆಯ ಸಮುದ್ರದ ಚೇಳುಗಳು ಆ ಕಾಲದ ದೊಡ್ಡ ಪ್ರಾಣಿಗಳಲ್ಲಿ ಒಂದಾಗಿದ್ದುವು. ನೆಲದಮೇಲೆ ಜೀವಿಸುವ ಪ್ರಾಣಿಗಳು ಸಸ್ಯಗಳು ಯಾವುವರ ಕುರುಹುಗಳೂ ಅಲ್ಲಿರಲಿಲ್ಲ. ಮೀನುಗಳ ಮತ್ತಿತರ ಬೆನ್ನುಮೂಳೆಯುಳ್ಳ ಪ್ರಾಣಿಗಳ ಸುಳಿವೂ ಆ ಕಾಲದ ಬಂಡೆಗಳಲ್ಲಿರಲಿಲ್ಲ. ಒಟ್ಟನಲ್ಲಿ ಹೇಳುವುದಾದರೆ ಅಂದಿನ ಬಂಡೆಗಳಲ್ಲಿ ತಮ್ಮ ಗುರುತನ್ನು ಉಳಿಸಿರುವ ಜೀವಿಗಳೆಲ್ಲ ಆಳವಿಲ್ಲದ ಜಲಭಾಗ ಗಳಲ್ಲಿ ಮತ್ತು ಸಮುದ್ರದ ಅಂಚಿನಲ್ಲಿ ಉಬ್ಬರವಿಳಿತಗಳು ನಡೆಯುವಲ್ಲಿ ಜೀವಿಸು ತ್ತಿದ್ದಂತಹವು. ಈ ಪ್ರಾಚೀನ ಜೀವಿಕಲ್ಪದ ಜೀವವರ್ಗಕ್ಕೆ ಇದ್ದಿದ್ದರಲ್ಲಿ ಸಮಾನ ವೆನಿಸುವ ಜೀವಿವರ್ಗ ಈಗಿನ ಕೊಳಕು ಚರಂಡಿ ಅಥವಾ ಹೊಂಡಗಳ ನೀರಿನಲ್ಲಿರುತ್ತವೆ. ಗಾತ್ರದಲ್ಲಿ ಮಾತ್ರ ಇವು ಅವುಗಳಿಗಿಂತ ಬಹುಸಣ್ಣವು ಅಷ್ಟೆ. ಕೊಳಚೆ ನೀರಿನ ಒಂದು ಹನಿಯನ್ನು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಿದರೆ ಅಲ್ಲಿ ಕಾಣುವ ಪುಟ್ಟ ಅಳತೆಯ ಚಿಪ್ಪಿನ ಪ್ರಾಣಿಗಳು, ಚಿಪ್ಪು ಮೀನುಗಳು, ಜ್ಯೂಫೈಟ್‌ಗಳು, ಶೈವಲಿಗಳು (algae) ಆ ದೊಡ್ಡ ಗಾತ್ರದ ಜೀವಿಗಳನ್ನು ಬಹುಮಟ್ಟಿಗೆ ಹೋಲುವುವೆಂದು ತಿಳಿದುಬರುತ್ತದೆ. ಒಂದಾನೊಂದು ಕಾಲದಲ್ಲಿ ಆ ಜೀವಿಗಳೇ ಭೂಮಿಯ ಅತ್ಯುತ್ತಮ ಜೀವವರ್ಗಕ್ಕೆ ಸೇರಿದವೆನಿಸಿದ್ದುವು.

ಆದರೆ ಪ್ರಾಚೀನ ಜೀವಕಲ್ಪದ ಕೆಳಗಣ ಬಂಡೆಗಳಲ್ಲಿ ಭೂಮಿಯ ಮೇಲೆ ಜೀವ ಆರಂಭವಾಗಿದ್ದು ಹೇಗೆಂದು ಸ್ವಲ್ಪವು ಸೂಚನೆ ಸಿಗುವುದಿಲ್ಲ. ಯಾವ ಪ್ರಾಣಿಯೇ ಆಗಲಿ ತನ್ನ ಜೀವಾವಶೇಷವನ್ನು ಉಳಿಸಬೇಕಾಗಿದ್ದಲ್ಲಿ ಅದಕ್ಕೆ ಗಟ್ಟಿ ಚಿಪ್ಪೋ ಮೂಳೆಗಳೋ ಇನ್ನೆಂಥವಾದರೂ ಗಟ್ಟಿ ಅಂಗಗಳೋ ಇದ್ದಿರಬೇಕು ; ಇಲ್ಲವೇ ತನ್ನದೇ ವಿಶಿಷ್ಟವಾದ ಹೆಜ್ಜೆ ಗುರುತನ್ನಾಗಲೀ, ನಡಿಗೆಯ ಜಾಡನ್ನಾಗಲೀ ಮಣ್ಣಿನಲ್ಲಿ ಇಳಿಸುವಷ್ಟೇ ಗಾತ್ರ ತೂಕ ಅವಕ್ಕಿರಬೇಕು. ಈಗ ನಮ್ಮ ಭೂಮಿಯಲ್ಲಿ ಲಕ್ಷಗಟ್ಟಳೆ ಸಣ್ಣ ಅಳತೆಯ ಮೃದ್ವಂಗಿ ಪ್ರಾಣಿಗಳಿವೆ. ಭವಿಷ್ಯತ್ತಿನ ಭೂಗರ್ಭ ಶಾಸ್ತ್ರಜ್ಞರಿಗೆ ಇವುಗಳ ಪಳೆಯುಳಿಕೆ ಗಳು ಸಿಗುವುದು ಖಂಡಿತ ಸಾಧ್ಯವಿಲ್ಲ. ಕೋಟ್ಯಾನುಕೋಟಿ ಅಂತಹ ಪ್ರಾಣಿಗಳು ಹಿಂದಿನ ಕಾಲದಲ್ಲಿ ಬಾಳಿ ಬದುಕಿ ಯಾವ ಗುರುತನ್ನು ಉಳಿಸದೆ ಅಳಿದು ಹೋಗಿರ ಬಹುದು. ಈಗ ನಾವು ಜೀವರಹಿತ(Azoic) ಎನ್ನುವ ಕಾಲದಲ್ಲೂ ಮೂಳೆ ಚಿಪ್ಪು ಏನೂ ಇಲ್ಲದ ಜೆಲ್ಲಿಯಂತಹ ಪ್ರಾಣಿಗಳು ಸೂರ್ಯನ ಬೆಳಕು ಬೀಳುತ್ತಿದ್ದ ಸಮುದ್ರ ತೀರ ಪ್ರದೇಶದ ನೀರಿನ ತಳದಲ್ಲೂ, ಹಸುರು ಬಣ್ಣದ ಕಸರಿನಂತಹ ಸಸ್ಯಗಳು ಸಮುದ್ರತೀರದ ಬಂಡೆಗಳ ಮೇಲೂ ಮರಳಿನ ಮೇಲೂ ಜೀವಿಸುತ್ತಿದ್ದಿರಬಹುದು. ಬ್ಯಾಂಕಿನ ಪುಸ್ತಕ ಗಳಿಂದ ಆ ಬ್ಯಾಂಕಿನ ಸುತ್ತ ಇರುವ ಜನರ ಹೆಸರುಗಳು ಹೇಗೆ ತಿಳಿಯುವುದಿಲ್ಲವೋ

ಹಾಗೆಯೇ ಈ ಬಂಡೆಗಳ ದಾಖಲೆಗಳು ಸಹ ಆ ಕಾಲದ ಜೀವಿಗಳೆಲ್ಲದರ ದಾಖಲೆಯನ್ನೂ ತೋರ್ಪಡಿಸುವುದಿಲ್ಲ. ಬ್ಯಾಂಕು ಪುಸ್ತಕಗಳಲ್ಲಿ ಬ್ಯಾಂಕಿನಲ್ಲಿ ವ್ಯವಹಾರ ಮಾಡುವವರ ಹೆಸರು ಮಾತ್ರ ಇರುತ್ತದೆ. ಯಾವುದೇ ಜಾತಿ ಪ್ರಭೇದದ ಪ್ರಾಣಿಗಳಲ್ಲಿ ಮೇಲ್ಚಿಪ್ಪು ಗಟ್ಟಿ ಮುಳ್ಳಿನಂತಹ ಅಂಗ (specule) ಅಥವಾ ಸುಣ್ಣಕಲ್ಲಿನಿಂದ ಕೂಡಿದ ಕಾಂಡ ಮೊದಲಾದುವು ಉತ್ಪತ್ತಿಯಾಗಿ ಅಭಿವೃದ್ಧಿಯಾದರೆ ಆಗ ಬಂಡೆಗಳಲ್ಲಿ ಅದರಷ್ಟೇನಾದರೂ ಗುರುತು ಉಳಿಯುತ್ತದೆ. ಆದರೆ ಜೀವಾವಶೇಷಗಳಿರುವ ಶಿಲೆಗಳಿಗಿಂತ ಹಳೆಯದಾದ ಶಿಲೆಗಳಲ್ಲೂ ಕೆಲವು ಸಲ ಗ್ರಾಫೈಟ್ (ಇದು ಬಿಡಿ ಇಂಗಾಲದ ಒಂದು ರೂಪ) ಕಂಡುಬರುತ್ತವೆ. ಈಗ ನಮಗೆ ಗೊತ್ತಿಲ್ಲದಿರುವ ಜೀವ ಜಾತಿಗಳು ತಮ್ಮ ಜೀವಕ್ರಿಯೆಗಳನ್ನು ನಡೆಸುವಾಗ ಇಂಗಾಲ ಸಂಯುಕ್ತಗಳಿಂದ ಇದನ್ನು ಬೇರ್ಪಡಿಸಿರಬಹುದೆಂದು ಕೆಲವರು ವಿಜ್ಞಾನಿಗಳು ಹೇಳುತ್ತಾರೆ.

4. ಮೀನುಗಳ ಕಾಲ

ಪ್ರಪಂಚ ಸೃಷ್ಟಿಯಾಗಿ ಕೆಲವೇ ಸಾವಿರ ವರ್ಷಗಳು ಮಾತ್ರ ಆಗಿವೆಯೆಂದು ನಂಬಿದ್ದಾಗ ಈಗ ಇರುವ ಪ್ರಾಣಿ ಸಸ್ಯ ಜಾತಿಗಳೆಲ್ಲಾ ಮೊದಲಿನಿಂದಲೂ ಹಾಗೆಯೇ ಇದ್ದುವು ಇನ್ನುಮುಂದೆಯೂ ಹಾಗೆಯೇ ಇರುತ್ತವೆ ಎಂದು ಎಲ್ಲರೂ ತಿಳಿದಿದ್ದರು. ಆದರೆ ಬಂಡೆಗಳ ದಾಖಲೆ ಮನುಷ್ಯರ ಕಣ್ಣಿಗೆ ಬಿದ್ದು ಅದರ ಅಧ್ಯಯನ ಮೊದಲಾದ ಮೇಲೆ ಈ ನಂಬಿಕೆ ಹೋಗಿ ಅನೇಕ ಜಾತಿಯ ಪ್ರಾಣಿಗಳು ಕಾಲಾನುಕಾಲದಲ್ಲಿ ನಿಧಾನವಾಗಿ ಬದಲಾಯಿಸುತ್ತಾ ಬಂದಿವೆ ಎಂದು ಸಂಶಯ ಬಂದಿತು. ಈ ಸಂಶಯದಿಂದಲೇ ವಿಕಾಸವಾದ ಹುಟ್ಟಿತು. ಬಹಳ ಹಿಂದೆ ಜೀವರಹಿತ ಸಮುದ್ರಗಳಲ್ಲಿ ಅತಿ ಸರಳವಾದ ಆಕಾರರಹಿತ ಜೀವ ಜಾತಿಯೊಂದು ಹುಟ್ಟಿತು; ಅದು ನಿಧಾನವಾಗಿ ಅಭಿವೃದ್ಧಿಯಾಗುತ್ತಾ ಬೇರೆ ಬೇರೆ ರೂಪ ಗುಣಗಳನ್ನುಳ್ಳ ಜೀವ ಜಾತಿಗಳಿಗೆ ಜನ್ಮವಿತ್ತಿತು; ಈಗ ಇರುವ ಪ್ರಾಣಿ ಸಸ್ಯಗಳೆಲ್ಲಾ ಅದರದ್ದೇ ಸಂತತಿ ಎಂದು ಈ ವಾದ ಹೇಳುತ್ತದೆ.

ಭೂಮಿಯ ವಯಸ್ಸೆಷ್ಟು ಎಂಬ ಪ್ರಶ್ನೆಯಂತೆ ಈ ವಾದವೂ ಅನೇಕ ಚರ್ಚೆ ವಿವಾದಗಳಿಗೆ ಮೂಲವಾಯಿತು. ಕ್ರೈಸ್ತ, ಯಹೂದಿ ಮತ್ತು ಮುಸ್ಲಿಮ್ ಮತ ಸಿದ್ಧಾಂತಗಳಿಗೆ ಇದು ಹೊಂದುವುದೇ ಇಲ್ಲ ಎಂದುಕೊಂಡಿದ್ದ ಕಾಲವೂ ಬಂದಿತ್ತು. ಈಗ ಶ್ರದ್ಧಾವಂತ ಕ್ಯಾಥೊಲಿಕ್, ಪ್ರಾಟೆಸ್ಟಂಟ್, ಯಹೂದಿ ಮತ್ತು ಮುಸ್ಲಿಮರೂ ಸಹ ಎಲ್ಲಾ ಜೀವಿಗಳಿಗೂ ಮೂಲ ಜೀವ ಒಂದೇ ಎಂಬ ಈ ಹೊಸ ವಿಶಾಲ ವ್ಯಾಪ್ತಿಯ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತಾರೆ.7 ಯಾವುದೇ ಪ್ರಾಣಿಯಾಗಲೀ ಸಸ್ಯವಾಗಲೀ ಇದ್ದಕ್ಕಿದ್ದಂತೆ ಭೂಮಿಯ ಮೇಲೆ ಹುಟ್ಟಿತು ಎನ್ನಿಸುವುದಿಲ್ಲ. ಜೀವ ಬೆಳೆದಿದೆ, ಇನ್ನೂ ಬೆಳೆಯುತ್ತಲೇ ಇದೆ, ಸಮುದ್ರ ತೀರದಲ್ಲಿ ಉಬ್ಬರವಿಳಿತಗಳಿಂದಾದ ಕೊಚ್ಚೆಯ ನೀರಿನಲ್ಲಿ ಮೊದಲಬಾರಿ ಮೇಲೆದ್ದ ಜೀವ ನಮ್ಮ ಊಹೆಗೆ ಎಟುಕದ ಅಗಾಧ ಕಾಲಾಂತರದಲ್ಲಿ ಅಭಿವೃದ್ಧಿಯಾಗುತ್ತಾ ಸ್ವಾತಂತ್ರ್ಯಶಕ್ತಿ ಜ್ಞಾನಗಳೆಡೆ ಸಾಗಿದೆ.

ಜೀವಜಗತ್ತು ವ್ಯಕ್ತಿಗಳಿಂದಾಗಿದೆ. ಇಂತಹ ವ್ಯಕ್ತಿ ಒಂದೊಂದಕ್ಕೂ ಬೇರೆ ಅಸ್ತಿತ್ವ ಇದೆ. ಇವು ನಿರ್ಜೀವ ಜಗತ್ತಿನ ಜಡದ್ರವ್ಯದ ಆಕಾರರಹಿತ ಮುದ್ದೆಗಳು, ರಾಶಿಗಳಂತಾಗಲೀ (lumps and masses) ಅಸಂಖ್ಯಾತ ಹರಳುಗಳಂತಾಗಲೀ ಅಲ್ಲ. ನಿರ್ಜೀವವಸ್ತು ಯಾವುದಕ್ಕೂ ಇಲ್ಲದ ಎರಡು ಗುಣಗಳು ಪ್ರತಿ ಜೀವಿಗೂ ಇವೆ. ಒಂದು, ಬೇರೆ ಪದಾರ್ಥಗಳನ್ನು ಜೀರ್ಣಿಸಿಕೊಂಡು ತಮ್ಮದೇ ಭಾಗವಾಗಿ ಮಾಡಿಕೊಳ್ಳುವುದು ; ಎರಡು, ಸಂತಾನೋತ್ಪತ್ತಿ. ಪ್ರತಿ ಜೀವಿಯೂ ಬಹುಮಟ್ಟಿಗೆ ತನ್ನಂತೆಯೇ ಇದ್ದರೂ ಕೆಲವು ಮಾತ್ರ ವಿಶಿಷ್ಟ ಗುಣಗಳನ್ನು ಪಡೆದಿರುವ ಮತ್ತೊಂದು ಜೀವಿಗೆ ಜನ್ಮ ಕೊಡಬಲ್ಲುದು. ಈ ಸಂತಾನಕ್ಕೂ ಅವರ ಮಾತಾಪಿತೃಗಳಿಗೂ ವಂಶಾನುಗತ ಹೋಲಿಕೆ ಇದ್ದರೂ ಜೊತೆಯಲ್ಲಿಯೇ ವ್ಯಕ್ತಿ ವ್ಯಕ್ತಿಗಳಿಗಿರುವ ವ್ಯತ್ಯಾಸವೂ ಇರುತ್ತದೆ. ಜೀವದ ಬೆಳವಣಿಗೆಯ ಪ್ರತಿ ಹಂತದಲ್ಲೂ ಪ್ರತಿಜೀವ ಜಾತಿಯಲ್ಲಿಯೂ ಆಗುತ್ತಾ ನಡೆದಿದೆ.

ಹೀಗೆ ತಂದೆ ತಾಯಿ ಮತ್ತು ಮಕ್ಕಳಲ್ಲಿ ಹೋಲಿಕೆ ಮತ್ತು ವ್ಯತ್ಯಾಸ ಏಕಿರುತ್ತವೆ ಎಂದು ವಿಜ್ಞಾನಿಗಳು ಇನ್ನೂ ವಿವರಿಸಲು ಶಕ್ತರಾಗಿಲ್ಲ ಆದರೆ ಸಾಮಾನ್ಯ ವ್ಯವಹಾರ ಜ್ಞಾನವನ್ನುಪಯೋಗಿಸಿದರೆ ಈ ಕೆಳಕಂಡ ಅಂಶ ವ್ಯಕ್ತವಾಗುತ್ತದೆ. ಯಾವುದಾದರೂ ಜಾತಿಯ ಪ್ರಾಣಿ ಮತ್ತು ಸಸ್ಯಗಳ ಸುತ್ತಣ ವಸ್ತು ಪರಿಸ್ಥಿತಿ ಬದಲಾಯಿಸಿದರೆ ಆಗ ಈ ಹೋಲಿಕೆ ವ್ಯತ್ಯಾಸಗಳ ಫಲವಾಗಿ ಆ ಜೀವ ಜಾತಿಯಲ್ಲೂ ಬದಲಾವಣೆಗಳಾಗುತ್ತವೆ. ಹೇಗೆಂದರೆ, ವಸ್ತು ಪರಿಸ್ಥಿತಿಯ ಬದಲಾವಣೆಯ ಪ್ರಭಾವ ಆ ಜೀವ ಜಾತಿಯ ಪ್ರಾಣಿಗಳೆಲ್ಲವರ ಮೇಲೂ ಒಂದೇ ರೀತಿಯಾಗಿರುವುದಿಲ್ಲ. ಕೆಲವು ಪ್ರಾಣಿಗಳಿಗೆ ಹೊಸ ಪರಿಸ್ಥಿತಿ ಚೆನ್ನಾಗಿ ಹೊಂದಬಹುದು, ಕೆಲವಕ್ಕೆ ತೊಂದರೆಯೇ ಆಗಬಹುದು. ಮೊದಲಿನ ಜೀವಿಗಳು ಚೆನ್ನಾಗಿ ಬೆಳೆದು ಹೆಚ್ಚು ದಿನ ಬದುಕಿದ್ದು ಎರಡನೇ ಗುಂಪಿನ ಜೀವಿಗಳಿಗಿಂತ ಹೆಚ್ಚು ಸಂತಾನೋತ್ಪತ್ತಿ ಮಾಡುತ್ತವೆ. ಹೀಗೆ ಪ್ರತಿ ತಲೆಮಾರಿಗೂ ಮೊದಲನೆ ಬಗೆ ಜೀವಿಗಳ ಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ. ಇದರ ಫಲಿತಾಂಶ ಏನೆಂದರೆ ಆ ಜಾತಿಯ ಜೀವಿಗಳ ಸಾಮಾನ್ಯ ಗುಣಗಳು ಮೊದಲನೆ ಗುಂಪಿನ ಜೀವಿಗಳ ಗುಣಗಳನ್ನೇ ಹೆಚ್ಚು ಹೆಚ್ಚಾಗಿ ಹೋಲುತ್ತದೆ. ಈ ಪ್ರಕ್ರಿಯೆಗೆ ಪ್ರಕೃತಿಯ ಆಯ್ಕೆ (Natural selection) ಎನ್ನುತ್ತಾರೆ. ಇದು ವೈಜ್ಞಾನಿಕ ಸಿದ್ಧಾಂತವೆನ್ನುವುದಕ್ಕಿಂತ ಹೆಚ್ಚಾಗಿ ಕಣ್ಣಿಗೆ ಕಂಡ ಸತ್ಯಾಂಶಗಳನ್ನು ಗಮನಿಸಿ ಅದರಿಂದ ನಿರೂಪಿಸಿಕೊಂಡ ಒಂದು ನಿಯಮ ಎನ್ನಬಹುದು. ಇದನ್ನು ತಿಳಿಯಲು ವಿಶೇಷ ಜ್ಞಾನ ಏನೂ ಬೇಕಿಲ್ಲ. ಜೀವಜಾತಿಗಳನ್ನು ಬದಲಾಯಿಸುವ, ವಿನಾಶ ಮಾಡುವ, ರಕ್ಷಿಸುವ ಶಕ್ತಿಗಳು ಪ್ರಪಂಚದಲ್ಲಿ ಏನೇನಿವೆಯೋ ಎಲ್ಲಾ ವಿಜ್ಞಾನಿಗಳಿಗೆ ಇನ್ನೂ ತಿಳಿಯದೆ ಇರಬಹುದು ; ಆದರೆ "ಪ್ರಕೃತಿಯ ಆಯ್ಕೆ" ನಡೆಯುತ್ತದೆಯೆಂದು ಒಪ್ಪದ ಮನುಷ್ಯನಿಗೆ ಜೀವನದ ಸರಳ ಸತ್ಯಗಳು ಗೊತ್ತಿಲ್ಲವೆಂದೋ ಅಥವಾ ಅವನಿಗೆ ಸಾಮಾನ್ಯ ಚಿಂತನೆ ಮಾಡುವ ಶಕ್ತಿ ಸಹ ಇಲ್ಲವೆಂದೋ ಹೇಳಬೇಕಾಗುತ್ತದೆ.

ಭೂಮಿಯಲ್ಲಿ ಜೀವ ಮೊದಲು ಹೇಗೆ ಹುಟ್ಟಿತು ಎಂದು ವಿಜ್ಞಾನಿಗಳನೇಕರು ವಿಚಾರ ಮಾಡಿದ್ದಾರೆ, ಈ ಊಹೆಗಳು ಸ್ವಾರಸ್ಯವಾಗಿದ್ದರೂ ಜೀವ ಹುಟ್ಟಿದ್ದು ಹೀಗೆಯೇ ಎಂದು ಹೇಳಲು ಇನ್ನೂ ಸಾಧ್ಯವಾಗಿಲ್ಲ. ಸೂರ್ಯನ ಬೆಳಕಿನಲ್ಲಿದ್ದ ಆಳವಿಲ್ಲದ ಚೌಳನೀರಿನಲ್ಲಿದ್ದ ಮಣ್ಣು ಅಥವಾ ಮರಳಿನಲ್ಲಿ ಜೀವ ಹುಟ್ಟಿ ಅಲ್ಲಿಂದ ಸಮುದ್ರದ ದಂಡೆಗೆ ಹರಡಿ ಉಬ್ಬರವಿಳಿತಗಳ ಗೆರೆ ದಾಟಿ ಸಮುದ್ರಕ್ಕೆ ಹರಡಿರಬೇಕೆಂದು ಅವರೆಲ್ಲರ ಅಭಿಪ್ರಾಯ.

ಆ ಕಾಲದಲ್ಲಿ ಸಮುದ್ರದ ಉಬ್ಬರವಿಳಿತಗಳೂ ಪ್ರವಾಹಗಳೂ ಬಹಳ ಜೋರಾಗಿದ್ದುವು. ಉಬ್ಬರದ ಜೊತೆಗೆ ಸಮುದ್ರದ ಆಚೆಗೆ ಎಸೆಯಲ್ಪಟ್ಟು ಉಬ್ಬರವಿಳಿದಮೇಲೆ ಒಣಗಿಹೋಗಿಯೋ, ಇಲ್ಲ ಸಮುದ್ರದ ಕಡೆಗೆ ನೀರಿನೊಂದಿಗೆ ಸಾಗಿ ಹೋಗಿ ಅಲ್ಲಿ ಗಾಳಿ ಬೆಳಕು ಸಿಗದಂತೆ ಮುಳುಗಿಹೋಗಿಯೋ ಮೊದಮೊದಲು ಎಷ್ಟೋ ಜೀವಿಗಳು ಸತ್ತು ಹೋಗಿರಬೇಕು. ಇಂತಹ ಸಂದರ್ಭಗಳಲ್ಲಿ ಪ್ರಾಣರಕ್ಷಣೆಯ ಸಲುವಾಗಿ ಗಟ್ಟಿಯಾಗಿ ಇದ್ದಲ್ಲಿ ನಿಲ್ಲುವುದಕ್ಕೆ ಸಹಾಯವಾಗಿ ಬೇರುಗಳೂ, ಒಣಗಿ ಹೋಗದಿರುವಂತೆ ಹೊರಗಣ ಚರ್ಮ ಮತ್ತು ಚಿಪ್ಪು ಹುಟ್ಟಿದುವು. ಹೊರಗಿನ ಪರಿಸ್ಥಿತಿಗನುಸಾರವಾಗಿ ಈ ಬಗೆಯ ಬೆಳವಣಿಗೆಗಳಿಗೆ ಪ್ರೋತ್ಸಾಹ ದೊರಕುತ್ತದೆ. ಬಹು ಮೊದಲಿನಿಂದಲೂ ರುಚಿಗ್ರಹಣ ಶಕ್ತಿ, ಬೆಳಕಿನಿಂದ ಉದ್ರೇಕಗೊಳ್ಳುವ ಶಕ್ತಿ ಜೀವಿಗಳಿಗೆ ಉಪಯೋಗಕರವಾಗಿದೆ. ರುಚಿಗ್ರಹಣ ಶಕ್ತಿ ಜೀವಿ ಆಹಾರದತ್ತ ತಿರುಗಲು ಸಹಾಯವಾಗಿವೆ. ಬೆಳಕಿನಿಂದ ಉದ್ರೇಕಗೊಳ್ಳುವ ಶಕ್ತಿ ಇದ್ದರೆ ಸಮುದ್ರದ ಒಳಭಾಗದಲ್ಲಿ ಕತ್ತಲೆ ಗವಿಗಳಲ್ಲಿ ಸಿಕ್ಕಿಬಿದ್ದಾಗ ಬೆಳಕಿನ ಕಡೆ ಬರುವುದಕ್ಕಾಗಿ ಹೆಣಗಾಡುವ ಶಕ್ತಿ ಬರುತ್ತದೆ. ಅತಿ ಬಿಸಿಲು ಬೆಳಕು ಇರುವ ಆಳವಿಲ್ಲದ ಸಮುದ್ರ ಭಾಗಗಳಲ್ಲಿ ಸಿಕ್ಕಿಬಿದ್ದಾಗ ಅಲ್ಲಿಂದ ಒದ್ದಾಡುತ್ತಾ ಹೊರಳುತ್ತಾ ಹಿಂದಿರುಗಿ ತನಗೆ ಸರಿಯೆನಿಸುವ ಸ್ಥಳಕ್ಕೆ ಬರುವ ಶಕ್ತಿ ಬರುತ್ತದೆ. ಹೀಗೆ ಮೊದಲಿನಿಂದಲೂ ಪ್ರಾಣಿಗಳಲ್ಲಿ ಇಂತಹ ಪ್ರವೃತ್ತಿಗಳು ಅಭಿವೃದ್ಧಿಯಾಗಲು ಉತ್ತೇಜನವಿದೆ.

ಜೀವಿಗಳ ಚಿಪ್ಪುಗಳು ಮತ್ತು ಮೇಲ್ಗವಚ ಮೊದಮೊದಲು ಜೀವಿಯನ್ನು ಒಣಗದಂತೆ ಇಟ್ಟಿರಲು ಉತ್ಪತ್ತಿಯಾಗಿರಬೇಕು. ಬೇರೆ ಪ್ರಾಣಿಗಳಿಂದ ರಕ್ಷಣೆ ಪಡೆಯಲು ಇರಲಾರವು. ಆದರೆ ಹಲ್ಲುಗಳು ಮತ್ತು ಪಂಜಗಳು (ಕಾಲಿನ ಮೊನೆಯುಗುರುಗಳು) ಬಹು ಮೊದಲಿನಿಂದಲೂ ನಮ್ಮ ಪ್ರಪಂಚದ ಕತೆಯಲ್ಲಿ ಕಂಡುಬರುತ್ತವೆ.

ಪ್ರಾಚೀನ ಕಾಲದ ನೀರು ಚೇಳುಗಳು ಎಷ್ಟು ದೊಡ್ಡವಾಗಿದ್ದುವೆಂದು ಈ ಮೊದಲೇ ನೋಡಿದ್ದೇವೆ. ಬಹುಕಾಲ ಅಂತಹ ಪ್ರಾಣಿಗಳೇ ಜೀವ ಪ್ರಪಂಚದ ರಾಜರಾಗಿದ್ದುವು. ಆ ಬಳಿಕ ಪ್ರಾಚೀನ ಜೀವಕಲ್ಪದ ಒಂದು ವಿಭಾಗವಾದ ಸೈಲ್ಯೂರಿಯನ್ ವಿಭಾಗದ ಬಂಡೆಗಳಲ್ಲಿ ಒಂದು ಹೊಸ ಮಾದರಿ ಪ್ರಾಣಿ ಕಂಡುಬರುತ್ತದೆ. ಈ ಬಂಡೆಗಳು ಸುಮಾರು 500 ಮಿಲಿಯ ವರ್ಷಗಳ ಹಿಂದಿನವೆಂದು ಭೂಗರ್ಭ ಶಾಸ್ತ್ರಜ್ಞರು ಹೇಳುತ್ತಾರೆ. ಹಲ್ಲು ಮತ್ತು ಕಣ್ಣುಗಳನ್ನು ಪಡೆದಿದ್ದ ಈ ಪ್ರಾಣಿಗೆ ಅವುಗಳಿಗಿಂತ

ಹೆಚ್ಚು ಬಲವಾಗಿ ಈಜುವ ಶಕ್ತಿಯೂ ಇತ್ತು. ಇದೇ ಮೊತ್ತ ಮೊದಲ ಮೀನು ; ಈಗ ಗೊತ್ತಿರುವ ಕಶೇರುಕ (ಬೆನ್ನು ಮೂಳೆಯುಳ್ಳ ಪ್ರಾಣಿ)ಗಳಲ್ಲಿ ಮೊತ್ತ ಮೊದಲನೆಯವೂ ಹೌದು.

ಮುಂದಿನ ಶಿಲಾ ವಿಭಾಗವಾದ ಡೆವೊನಿಯನ್ ಯುಗದಲ್ಲಿ (Devonian System) ಈ ಪ್ರಾಣಿಗಳ ಸಂಖ್ಯೆ ಬಹಳವಾಗಿ ಹೆಚ್ಚುತ್ತಾ ಹೋಗುತ್ತದೆ. ಇದರಿಂದಲೇ ಬಂಡೆಗಳ ದಾಖಲೆಗಳಲ್ಲಿ ಈ ಭಾಗವನ್ನು ಮೀನುಗಳ ಯುಗ ಎಂತಲೇ ಕರೆಯುತ್ತಾರೆ. ಈಗ ಲುಪ್ತವಾಗಿ ಹೋಗಿರುವ ಮಾದರಿಯ ಮೀನುಗಳೂ, ಈಗಿನ ಷಾರ್ಕ್, ಸ್ಟರ್ಜನ್ನಂತಹ ಮೀನುಗಳೂ ಆಗ ಜೀವಿಸುತ್ತಿದ್ದುವು. ರಭಸದಿಂದ ಈಜುತ್ತಾ ನಡುವೆ ಗಾಳಿಯಲ್ಲಿ ಹಾರುತ್ತಾ, ಸಮುದ್ರದ ಜೊಂಡುಗಳ ನಡುವೆ ವಿಹರಿಸುತ್ತಾ ಒಂದನ್ನೊಂದು ಬೇಟೆಯಾಡುತ್ತಿದ್ದ ಇವು ಒಟ್ಟಿನಲ್ಲಿ ಭೂಮಿಯ ಜಲ ವಿಭಾಗಗಳಿಗೆ ಹೊಸದೊಂದು ಜೀವ ಕಳೆಯನ್ನು ತಂದಿತ್ತುವು. ಇಂದಿನ ಜೀವಿಗಳ ಪ್ರಮಾಣವನ್ನು ತೆಗೆದುಕೊಂಡರೆ ಇವು ಯಾವುವೂ ಅಷ್ಟು ದೊಡ್ಡ ಗಾತ್ರದವಲ್ಲ ; ಕೆಲವನ್ನು ಬಿಟ್ಟರೆ ಉಳಿದ ಮೀನುಗಳು ಯಾವುವೂ ಎರಡು ಮೂರಡಿಗಳಿಗಿಂತ ಹೆಚ್ಚು ಉದ್ದವಿರುತ್ತಿರಲಿಲ್ಲ. ಆದರೆ ಕೆಲವು ಮಾತ್ರ ಅಪರೂಪವಾಗಿ ಇಪ್ಪತ್ತು ಅಡಿ ಉದ್ದ ಇರುತ್ತಿದ್ದುದೂ ಉಂಟು.

ಈ ಪ್ರಾಣಿಗಳ ಪೂರ್ವಜರ ವಿಷಯ ಭೂಗರ್ಭಶಾಸ್ತ್ರದಿಂದ ಏನೇನೂ ತಿಳಿಯುಬರುವುದಿಲ್ಲ. ಇವುಗಳ ಹಿಂದೆ ಕಂಡು ಬರುವ ಪ್ರಾಣಿಗಳಿಗೂ ಇವುಗಳಿಗೂ ಏನೂ ಸಂಬಂಧ ಕಾಣುವುದಿಲ್ಲ. ಪ್ರಾಣಿಶಾಸ್ತ್ರಜ್ಞರು ಮೀನುಗಳ ಪಿತೃವರ್ಗದ ಬಗ್ಗೆ ಸ್ವಾರಸ್ಯವಾದ ಅಭಿಪ್ರಾಯಗಳನ್ನು ಪಡೆದುಕೊಂಡಿದ್ದಾರೆ. ಆದರೆ ಈ ಅಭಿಪ್ರಾಯಗಳಿಗೆ ಇವುಗಳಿಗೆ ಸಂಬಂಧಿಸಿದ ಈಗಲೂ ಇರುವ ಮತ್ತು ಪ್ರಾಣಿಗಳ ತತ್ತಿಗಳ ಬೆಳವಣಿಗೆಯ ಅಧ್ಯಯನ ಮತ್ತು ಇತರ ಸಂಗತಿಗಳೇ ಮೂಲ. ಬಹುಶಃ ಕಶೇರುಕಗಳ ಪೂರ್ವ-ಪ್ರಾಣಿಗಳು ಪುಟ್ಟ ಗಾತ್ರದ ಈಜುವ ವೃದ್ಧ್ಯಂಗಿಗಳಾಗಿದ್ದಿರಬೇಕು. ಇವುಗಳಲ್ಲಿ ಮೊದಲು ವ್ಯಕ್ತವಾದ ಗಟ್ಟಿಭಾಗಗಳೆಂದರೆ ಬಾಯೊಳಗೆ ಮತ್ತು ಅದರ ಹತ್ತಿರ ಉಂಟಾದ ಹಲ್ಲುಗಳಿರಬೇಕು. ಈಗಲೂ ಸ್ಕೇಟ್ ಮತ್ತು ಡಾಗ್ ಮೀನಿನ ಹಲ್ಲುಗಳು ಅದರ ಬಾಯಿಯ ಅಂಗಗಳು ಮತ್ತು ತಳಭಾಗವನ್ನು ಪೂರ್ತಿ ಆವರಿಸಿದ್ದು ತುಟಿಯ ಹತ್ತಿರ ಚಪ್ಪಟೆಯಾದ ಹಲ್ಲಿನಂತಹುದೇ ಹುರುಪೆಗಳ ರೂಪ ಪಡೆದಿರುತ್ತದೆ. ಅದರ ಮೈಯ ಬಹುಭಾಗ ಇಂತಹುದೇ ಹುರುಪೆಗಳಿಂದ ಮುಚ್ಚಿರುತ್ತದೆ. ಅಂತು ಇಂತಹ ಗಟ್ಟಿ ಹಲ್ಲು ಹುರುಪೆಗಳನ್ನು ಪಡೆಯುತ್ತಲೂ ಮೀನುಗಳು ಭೂಗರ್ಭದ ದಾಖಲೆಗಳಲ್ಲಿ ಗೋಚರವಾಗಲು ಆರಂಭವಾಗುತ್ತದೆ. ಅದರಲ್ಲಿ ಕಂಡುಬರುವ ಪ್ರಥಮ ಕಶೇರುಕಗಳು ಇವೇ.

5. ಕಲ್ಲಿದ್ದಲು ಜೌಗುಗಳು

ಮೀನುಗಳ ಯುಗದಲ್ಲಿ ಬಹುಶಃ ಭೂಖಂಡಗಳಲ್ಲಿ ಯಾವ ಜೀವವೂ ಇರಲಿಲ್ಲ. ಭೂಖಂಡಗಳಲ್ಲಿ ಬರಿ ಎರಸು ಬಂಡೆ ಕಲ್ಲುಗಳಿದ್ದು ಬಿಸಿಲು ಮಳೆಗಳನ್ನು ಎದುರುಗೊಳ್ಳುತ್ತಿದ್ದುವು. ಈಗ ಇರುವಂತಹ ಮಣ್ಣಿನ ಮೇಲ್ಪದರ ಆಗ ಇರಲೇ ಇಲ್ಲ. ಏಕೆಂದರೆ

ಬಂಡೆಗಳು ಮಣ್ಣಾಗುವುದು, ಮಣ್ಣು ಹುಳುಗಳು ಮತ್ತು ಸಸ್ಯಗಳು ಇವುಗಳ ಚಟುವಟಿಕೆಯ ಫಲವಾಗಿ ಆಗ ಪಾಚಿ ಕಲ್ಲುಹೂಗಳ ಸುಳಿವು ಸಹ ಭೂಭಾಗಗಳಲ್ಲಿರಲಿಲ್ಲ. "ಜೀವ" ಸಮುದ್ರದಲ್ಲಿ ಮಾತ್ರ ಇತ್ತು.

ಆ ಕಾಲದಲ್ಲಿ ಹವಾಮಾನದಲ್ಲಿ ಬಹಳ ವ್ಯತ್ಯಾಸಗಳಾಗುತ್ತಿದ್ದುವು. ಹವಾಮಾನ ಆಗ ಏಕೆ ಅಷ್ಟು ಬದಲಾಗುತ್ತಿತ್ತು ಎಂದು ಇನ್ನೂ ಸ್ಪಷ್ಟವಾಗಿ ತಿಳಿದಿಲ್ಲ. ಭೂಮಿಯ ಪಥ, ಧ್ರುವಗಳು (ಅಂದರೆ ಭೂಮಿಯ ದೈನಂದಿನ ಚಲನೆಯ ಅಕ್ಷ) ಭೂಖಂಡಗಳ ಆಕಾರಗಳು, ಪ್ರಾಯಶಃ ಸೂರ್ಯನಿಂದ ಹೊರಬೀಳುತ್ತಿದ್ದ ಶಾಖ ಸಹ ಒಂದೇ ಸಮನಾಗಿರದೆ ಬದಲಾಯಿಸುತ್ತಿದ್ದುವು. ಇದರ ಫಲವಾಗಿ ಭೂಮಿಯ ಮೇಲ್ಮೈಯ ವಿಸ್ತಾರವಾದ ಭಾಗಗಳು ಬಹುಕಾಲ ಹಿಮದಿಂದ ಮುಚ್ಚಲ್ಪಟ್ಟಿರುತ್ತಿದ್ದುವು. ತಿರುಗಿ ಮಿಲಿಯ ವರ್ಷಗಟ್ಟಲೆ ಬೆಚ್ಚನೆ ಹಿತಕರ ವಾಯುಗುಣವನ್ನು ಪಡೆಯುತ್ತಿದ್ದುವು. ಭೂಮಿಯ ಚರಿತ್ರೆಯನ್ನು ಪರಿಶೀಲಿಸಿದರೆ ನಡುನಡುವೆ ಭೂಗರ್ಭದ ಚಟುವಟಿಕೆಗಳು ಕೆಲವು ಕಾಲಗಳಲ್ಲಿ ಅತಿ ಹೆಚ್ಚಾಗಿದ್ದಂತೆ ಕಂಡುಬರುತ್ತವೆ. ಇಂತಹ ಚಟುವಟಿಕೆಗಳು ಕೆಲವು ಮಿಲಿಯ ವರ್ಷಗಳು ಒಳಗೇ ನಡೆದು ಕೂಡಿ ಹಾಕಿಕೊಂಡು ಒಂದಾವೃತ್ತಿ ಹೊರಗೆ ತೋರಿಸಿಕೊಳ್ಳುತ್ತಿದ್ದುವು. ಆಗ ಸಾಲುಸಾಲಾಗಿ ಜ್ವಾಲಾಮುಖಿಗಳು ಸ್ಫೋಟಿಸಿ ಭೂಕಂಪಗಳಾಗಿ ಬೆಟ್ಟಗಳು ಮತ್ತು ಭೂಭಾಗಗಳ ಎಲ್ಲೆಗಳು ಬದಲಾಗುತ್ತಿದ್ದವು. ಸಮುದ್ರಗಳ ಆಳ, ಪರ್ವತಗಳ ಎತ್ತರ ಹೆಚ್ಚಾಗುತ್ತಿತ್ತು. ಹವಾಮಾನದಲ್ಲೂ ವೈಪರೀತ್ಯಗಳು ಹೆಚ್ಚಾಗುತ್ತಿದ್ದುವು. ಇಂತಹ ಒಂದು ಕಾಲಮಾನ ಕಳೆದ ಮೇಲೆ ಅನೇಕಾನೇಕ ವರ್ಷಗಳು ಇಂತಹ ವೈಪರೀತ್ಯಗಳು ಇಲ್ಲದೆ ಇವುಗಳಿಗೆ ಹೋಲಿಸಿದರೆ ಸೌಮ್ಯವೆನ್ನಬಹುದಾದ ಕಾಲ ಬರುತ್ತಿತ್ತು. ಆಗ ಹಿಮ, ಮಳೆ ಮತ್ತು ನದಿಗಳು ಪರ್ವತಗಳನ್ನು ಸವೆಯಿಸಿ ಮೆಕ್ಕಲನ್ನು ಸಮುದ್ರಗಳಲ್ಲಿ ತಂದು ಹಾಕುತ್ತಿದ್ದವು. ಇದರಿಂದ ಸಮುದ್ರದ ಆಳ ಕಡಿಮೆಯಾಗಿ ಅಗಲ ಹೆಚ್ಚುತ್ತಿತ್ತು. ಹೀಗೆ ಭೂಮಿಯ ಚರಿತ್ರೆಯಲ್ಲಿ "ಎತ್ತರ ಮತ್ತು ಆಳ" ಹೆಚ್ಚಾಗಿದ್ದ ಕಾಲಗಳೂ, "ತಗ್ಗು ಮತ್ತು ಸಮತಲದ" ಕಾಲಗಳೂ ಇವೆ. ಭೂಮಿಯ ಮೇಲ್ಪದರ ಹೆಪ್ಪುಗಟ್ಟಿದಂದಿನಿಂದ ಅದರ ಮೇಲ್ಮೈ ಒಂದೇ ಸಮನೆ ತಣ್ಣಗಾಗುತ್ತಾ ನಡೆದಿದೆಯೆಂದು ಯಾರೂ ತಿಳಿಯಬಾರದು. ಮೇಲ್ಪದರ ಹೆಪ್ಪುಗಟ್ಟುವಷ್ಟು ಆರಿದ ಮೇಲೆ ಭೂಮಿಯ ಒಳಗಿನ ಶಾಖದಿಂದ ಮೇಲ್ಮೈಯ ಮೇಲೆ ಪರಿಣಾಮವಾಗುವುದು ನಿಂತುಹೋಯಿತು. ಜೀವರಹಿತ ಯುಗದಲ್ಲಿ ಸಹ ಭೂಮಿ ಹಿಮದಿಂದ ಮುಚ್ಚಲ್ಪಟ್ಟ ಕಾಲಗಳಿದ್ದುವು ಎಂಬುದಕ್ಕೆ ಗುರುತುಗಳಿವೆ.

ಮೀನುಗಳ ಯುಗ ಮುಗಿಯುವುದಕ್ಕೆ ಮುಂಚೆ ಸಮುದ್ರಗಳು ಆಳವಿಲ್ಲದೆ ವಿಸ್ತಾರವಾಗಿದ್ದ ಕಾಲವೊಂದಿತ್ತು. ಆಗಲೇ ಜೀವ ನೀರಿನಿಂದ ನೆಲಕ್ಕೆ ಹರಡಿದ್ದು. ಆಗ ನೆಲದಲ್ಲಿ ವೃದ್ಧಿಯಾಗತೊಡಗಿದ ಜೀವಜಾತಿಗಳಂತಹುದೇ ಜೀವಿಗಳು ಅದಕ್ಕೆ ಮುಂಚೆಯೇ ಅನೇಕ ಮಿಲಿಯ ವರ್ಷಗಳಿಂದಲೂ ಬೆಳೆಯುತ್ತಿದ್ದಿರಬೇಕು. ಅವುಗಳಿಗೆ ಈ ಸಮಯದಲ್ಲಿ ವೃದ್ಧಿಯಾಗಲು ಒಳ್ಳೆ ಅವಕಾಶ ದೊರೆಯಿತು.

ಬಹುಶಃ ಸಸ್ಯಗಳೇ ಪ್ರಾಣಿಗಳಿಗಿಂತ ಮೊದಲು ನೀರಿನಿಂದ ನೆಲಕ್ಕೆ ಹರಡಿರಬೇಕು. ಆದರೆ ಪ್ರಾಣಿಗಳೂ ಇವುಗಳನ್ನೂ ಬಹುಬೇಗ ಹಿಂಬಾಲಿಸಿದವು. ತೇಲುವುದಕ್ಕೆ ಅವಕಾಶ ಕೊಟ್ಟು ಎಲೆಗಳನ್ನು ಸೂರ್ಯನ ಬೆಳಕಿಗೆ ಎತ್ತಿ ಹಿಡಿಯುತ್ತಿದ್ದ ನೀರಿನ ಆಧಾರ ತಪ್ಪಿದುದರಿಂದ ಎಲ್ಲಕ್ಕೂ ಮುಂಚೆ ಈ ಸಸ್ಯಗಳಿಗೆ ಎಲೆಗಳನ್ನು ಎತ್ತಿ ಹಿಡಿಯುವಂತಹ ಪೆಡಸಾದ ಭಾಗಗಳ ಅವಶ್ಯಕತೆ ಉಂಟಾಯಿತು. ಆಮೇಲೆ ಗಿಡದ ಎಲ್ಲಾ ಭಾಗಗಳಿಗೂ ನೀರು ಒದಗಲು ಏರ್ಪಾಟಾಗಬೇಕಾಯಿತು. ಇವೆರಡು ಸಮಸ್ಯೆಗಳೂ ಸಸ್ಯಗಳ "ದಾರು ಅಂಗಾಂಶ" ("ಕಾಷ್ಠ ಭಾಗ") ದಿಂದ ಪರಿಹಾರವಾದುವು(woody-tissue). ಈ ಘಟ್ಟದಲ್ಲಿ ಬಂಡೆಗಳ ದಾಖಲೆಗಳಲ್ಲಿ ಇದ್ದಕ್ಕಿದ್ದಂತೆ ಜೌಗಿನಲ್ಲಿ ಬೆಳೆಯುವ ಅನೇಕ ದೊಡ್ಡ ದೊಡ್ಡ ಕಾಷ್ಠ ಭಾಗವಿರುವ ಸಸ್ಯಗಳು ಕಂಡುಬರಲು ಮೊದಲಾಗುತ್ತದೆ. ಉದಾ- ದೊಡ್ಡಮರ ಪಾಚಿಗಳು (tree mosses), ಮರದಂತೆ ದೊಡ್ಡದಾಗಿ ಬೆಳೆಯುತ್ತಿದ್ದ ಜರಿಗಿಡಗಳು (tree ferns), ಭಾರಿ ಗಾತ್ರದ ಅಶ್ವಪುಚ್ಛ ಸಸ್ಯಗಳು (Horse tails) ಇತ್ಯಾದಿ. ಕಾಲ ಕಳೆದಂತೆ ಅನೇಕ ಪ್ರಾಣಿ ಜಾತಿಗಳೂ ನೀರನ್ನು ಬಿಟ್ಟು ಹೊರಬರಲಾರಂಭಿಸಿದುವು : ಶತಪದಿಗಳು (centipedes) ಸಹಸ್ರಪದಿಗಳು (millipedes), ಪ್ರಪ್ರಥಮ ಕೀಟಗಳು, ಇದಕ್ಕೂ ಹಿಂದಿನ ಯುಗದ ರಾಜ ಏಡಿಗಳಿಗೂ ಸಮುದ್ರ ಚೇಳುಗಳಿಗೂ (king crabs & sea scorpions) ಸಂಬಂಧಿಸಿದ ಪ್ರಾಣಿಗಳು- (ಇವುಗಳೇ ಮೊದಲಿನ ಜೇಡರ ಹುಳುಗಳು ಚೇಳುಗಳಾದವು)-, ಕೊನೆಗೆ ಬೆನ್ನು ಮೂಳೆಯುಳ್ಳ ಪ್ರಾಣಿಗಳೂ ನೀರಿನಿಂದ ಹೊರಬಿದ್ದವು.

ಪ್ರಾಚೀನ ಕಾಲದ ಕೆಲವು ಕೀಟಗಳು ಬಹಳ ದೊಡ್ಡವಾಗಿದ್ದವು. ಅಂದಿನ ಕೆಲವು ರಾಕ್ಷಸಾಕೃತಿಯ ಸೊಳ್ಳೆ (ಡ್ರಾಗನ್ ಫ್ಲೈ) ಗಳ ಅಗಲ ಈ ರೆಕ್ಕೆಯ ತುದಿಯಿಂದ ಆ ರೆಕ್ಕೆಯ ತುದಿಯವರೆಗೂ ಇಪ್ಪತ್ತೊಂಬತ್ತು ಅಂಗುಲ ಇರುತ್ತಿತ್ತು.

ಈ ಪ್ರಾಣಿಗಳಲ್ಲಿ ಗಾಳಿಯನ್ನು ಉಸಿರಾಡುವ ಸಲುವಾಗಿ ನಾನಾ ಪ್ರಕಾರವಾದ ಬದಲಾವಣೆಗಳನ್ನು ಹೊಂದಿದುವು. ಇದಕ್ಕೆ ಹಿಂದಿದ್ದ ಎಲ್ಲಾ ಪ್ರಾಣಿಗಳೂ ನೀರಿನಲ್ಲಿ ಕರಗಿದ್ದ ಗಾಳಿಯನ್ನೇ ಉಸಿರಾಡುತ್ತಿದ್ದುವು. ಹಾಗೆ ನೋಡಿದರೆ ಈಗಲೂ ಸಹ ಎಲ್ಲಾ ಪ್ರಾಣಿಗಳೂ ನೀರಿನೊಡಗೂಡಿದ ಗಾಳಿಯನ್ನೇ ಉಸಿರಾಡುವುದು. ಶ್ವಾಸಕೋಶಗಳು ಪೂರ್ತಿ ಒಣಗಿಹೋದರೆ ಮನುಷ್ಯ ಉಸಿರುಗಟ್ಟಿ ಸಾಯುತ್ತಾನೆ ಅಷ್ಟೆ. ಶ್ವಾಸಕೋಶಗಳ ಒಳಭಾಗಗಳ ಪೊರೆಗಳು ಒದ್ದೆಯಾಗಿದ್ದರೆ ಮಾತ್ರ ಗಾಳಿ ಅದರ ಮೂಲಕ ರಕ್ತವನ್ನು ಪ್ರವೇಶಿಸಬಲ್ಲುದು. ಆದರೆ ಈಗ ಪ್ರಾಣಿಗಳು ತಮ್ಮ ಅಂಗಗಳಿಗೆ ತಾವೇ ತೇವವನ್ನು ಒದಗಿಸಬಲ್ಲವಾದುವು, ಪ್ರಾಣಿಗಳ ಶ್ವಾಸಾಂಗರಚನೆ ಈ ಉದ್ದೇಶಕ್ಕೋಸ್ಕರ ಎರಡು ವಿಧದಲ್ಲಿ ಬದಲಾಯಿತು. ಕೆಲವು ಪ್ರಾಣಿಗಳಲ್ಲಿ ಹಳೆಯ ಶ್ವಾಸಾಂಗಗಳಾದ ಕಿವಿರುಗಳಿಗೇ ಒಂದು ಮುಚ್ಚಳ ಬೆಳೆಯಿತು. ಆಗ ಕಿವಿರುಗಳಿಂದ ನೀರು ಆವಿಯಾಗಿ ಹೋಗಿ ಒಣಗಿಹೋಗಲು ತಡೆ ಉಂಟಾಯಿತು. ಬೇರೆ ಕೆಲವು ಪ್ರಾಣಿಗಳಲ್ಲಿ ಶರೀರದ ಒಳಭಾಗಗಳಲ್ಲಿ ಕೊಳವೆಗಳಂತಹ ಅಥವಾ ಬೇರೆ ವಿಧದ ಹೊಸ ಶ್ವಾಸಾಂಗಗಳು

ಬೆಳೆದುವು. ಇವುಗಳನ್ನು ಶರೀರದಲ್ಲಿ ಸ್ರವಿಸುವ ದ್ರವ ಒದ್ದೆಯಾಗಿಟ್ಟಿರುತ್ತದೆ. ಕಶೇರುಕ ಭೂ ಪ್ರಾಣಿಗಳ ಪೂರ್ವಜರಾದ ಮೀನುಗಳ ಕಿವಿರುಗಳು ನೆಲದ ಮೇಲೆ ಉಪಯೋಗಕ್ಕೆ ಬರುವ ಶ್ವಾಸಾಂಗಗಳಾಗಿ ಬದಲಾಯಿಸಲು ತಕ್ಕುದಾಗಿರಲಿಲ್ಲವಾದುದರಿಂದ ಅವುಗಳಲ್ಲಿದ್ದ ಈಜುಬುರುಡೆಗಳು (swimming bladders) ಶರೀರದ ಒಳಭಾಗದಲ್ಲಿ ಅಳವಡಿಸಿರುವ ಹೊಸಬಗೆಯ ಶ್ವಾಸಾವಯವಗಳಾದುವು; ಇವೇ ಶ್ವಾಸಕೋಶಗಳು. ಈಗಲೂ ಕಪ್ಪೆಯಂತಹ ದ್ವಿಚರ ಪ್ರಾಣಿಗಳು ತಮ್ಮ ಜೀವನದ ಮೊದಲ ಭಾಗವನ್ನು ನೀರಿನಲ್ಲಿ ಕಳೆಯುತ್ತವೆ. ಆಗ ಅವು ಉಸಿರಾಡುವುದು ಕಿವಿರುಗಳಿಂದ. ಆದರೆ ಅವು ಬೆಳೆಯುತ್ತಾ ಬಂದಹಾಗೆ ಗಂಟಲಿನಿಂದ ಚೀಲದ ಹಾಗೆ ಹೊರಟುಕೊಂಡ ಅವಯವವೊಂದು (ಮೀನಿನ ಈಜುಬುರುಡೆಗಳು ಹೀಗೆಯೇ ಹುಟ್ಟಿಕೊಳ್ಳುವುವು) ಶ್ವಾಸಕೋಶವಾಗಿ, ಉಚ್ಛ್ವಾಸ ನಿಶ್ವಾಸಗಳನ್ನು ನಡೆಸಲು ಮೊದಲು ಮಾಡುತ್ತದೆ. ಆಗಲೇ ಆ ಪ್ರಾಣಿ ನೀರಿನಿಂದ ಹೊರಗೆ ಬರುತ್ತದೆ. ಕಿವಿರುಗಳು ನಶಿಸಿಹೋಗಿ ಕಿವಿರಿನ ರಂಧ್ರಗಳು ಕಾಣಿಸದಂತಾಗುತ್ತವೆ. (ಒಂದು ಅಂತಹ ರಂಧ್ರ ಮಾತ್ರ ಕಿವಿ ಅಂದರೆ ಶ್ರವಣೇಂದ್ರಿಯವಾಗುತ್ತದೆ.) ಈಗ ಆ ಪ್ರಾಣಿ ನೆಲದ ಮೇಲೆ ಮಾತ್ರ ಜೀವಿಸಬಲ್ಲ, ವಾತಾವರಣದ ಗಾಳಿಯನ್ನು ಮಾತ್ರ ಉಸಿರಾಡಬಲ್ಲ ಜೀವಿಯಾಯಿತು. ಆದರೆ ಮೊಟ್ಟೆಯಿಟ್ಟು ಸಂತಾನ ಪಡೆಯಲು ತಿರುಗಿ ಅದು ನೀರಿನ ಹತ್ತಿರ ಬರಲೇಬೇಕು.

ಹೀಗೆ ಗಾಳಿಯನ್ನು ಉಸಿರಾಡಲಾರಂಭಿಸಿದ ಅಂದಿನ ಕಶೇರುಕಗಳೆಲ್ಲಾ ದ್ವಿಚರ ಪ್ರಾಣಿಗಳೇ (Amphibians). ಇವುಗಳಲ್ಲಿ ಅಧಿಕ ಭಾಗವೆಲ್ಲಾ ಈಗಿನ ನ್ಯೂಟ್ ಪ್ರಾಣಿಯಂತಹವು. ಇವುಗಳಲ್ಲಿ ಕೆಲವು ಸಾಕಷ್ಟು ದೊಡ್ಡವಾಗಿಯೂ ಇದ್ದುವು. ಇವುಗಳು ಭೂಚರ ಪ್ರಾಣಿಗಳೆನ್ನುವುದೇನೋ ನಿಜ; ಆದರೂ ತೇವವುಳ್ಳ ಜೌಗು ಪ್ರದೇಶಗಳಿಂದ ದೂರ ಜೀವಿಸಲು ಇವುಗಳಿಗೆ ಆಗುತ್ತಿರಲಿಲ್ಲ. ಅಂದಿನ ಗಿಡಗಳೂ ಹೀಗೆಯೇ ನೀರಿನ ಹತ್ತಿರ ಮಾತ್ರ ಬದುಕಬಲ್ಲವಾಗಿದ್ದುವು. ಅವುಗಳನ್ನೂ ದ್ವಿಚರಗಳೆಂದೇ ಹೆಸರಿಸಬೇಕು. ನೆಲದ ಮೇಲೆ ಬೀಳುವ ಮಳೆ, ಇಬ್ಬನಿ, ಹಿಮ ಇವುಗಳಿಂದ ಸಿಗುವ ತೇವದಿಂದಲೇ ಮೊಳೆತು ಬೆಳೆಯುವ ಬೀಜಗಳು ಆ ಸಸ್ಯ ಜಾತಿಗಳಲ್ಲಿ ಇನ್ನೂ ಇರಲಿಲ್ಲ. ನೀರಿನಲ್ಲಿ ಬಿದ್ದಲ್ಲದೆ ಆ ಸಸ್ಯ ಬೀಜಗಳು ಮೊಳೆಯುತ್ತಿರಲಿಲ್ಲ.

ಜೀವಿಗಳು ಗಾಳಿಯಲ್ಲಿ ಬದುಕುವ ಸಲುವಾಗಿ ಅದೆಷ್ಟು ಆಶ್ಚರ್ಯಕರ ಬದಲಾವಣೆಗಳನ್ನೂ ಹೊಂದಿದುವು ಎಂದು ಪತ್ತೆ ಹಚ್ಚುವುದು ತುಲನ ಶರೀರ ಶಾಸ್ತ್ರ (Anatomy)ದ ಅತ್ಯಂತ ಸ್ವಾರಸ್ಯಕರ ಭಾಗ. ಜೀವಿಗಳೆಲ್ಲವೂ ಮೊದಲಿಗೆ ಜಲಚರಗಳೇ. ಉದಾಹರಣೆಗೆ ಮೀನಿಗಿಂತ ಮೇಲ್ಮಟ್ಟದ ಪ್ರಾಣಿ ಯಾವುದೇ ಆಗಿರಲಿ ಮನುಷ್ಯನೂ ಸಹ ಮೊಟ್ಟೆಯೊಡೆದು ಹೊರಬರುವ ಮುನ್ನ ಅಥವಾ ಹುಟ್ಟುವ ಮುನ್ನ ಭ್ರೂಣಾವಸ್ಥೆಯಲ್ಲಿ ಯಾವುದಾದರೊಂದು ಹಂತದಲ್ಲಿ ಕಿವಿರಿನ ರಂಧ್ರಗಳನ್ನು ಪಡೆದಿರುತ್ತದೆ. ಪ್ರಾಣಿ ಹುಟ್ಟುವ ಮುಂಚೆ ಇವು ಗುರುತಿಲ್ಲದಂತಾಗುತ್ತವೆ. ಮೀನಿನ ಕಣ್ಣುಗಳಿಗೆ ಮುಚ್ಚಳಗಳಿಲ್ಲ. ಏಕೆಂದರೆ ಅವುಗಳ ಮೇಲೆ ಯಾವಾಗಲೂ ನೀರಿದ್ದೇ ಇರುತ್ತದೆ.

ಅದೇ ಅದಕ್ಕಿಂತ ಮೇಲ್ದರ್ಜೆಯ ಪ್ರಾಣಿಗಳಲ್ಲಿ ಕಣ್ಣು ಒಣಗಿ ಹೋಗದಂತೆ ರಕ್ಷಿಸಲು ಕಣ್ಣಿನ ರೆಪ್ಪೆಗಳೂ, ದ್ರವವನ್ನು ಸ್ರವಿಸುವ ಗ್ರಂಥಿಗಳೂ ಉಂಟಾದವು. ಗಾಳಿಯಲ್ಲಿ ಶಬ್ದದ ಅಲೆಗಳು ದುರ್ಬಲವಾಗಿರುವುದರಿಂದ ಈ ಪ್ರಾಣಿಗಳಿಗೆ ಕಿವಿಯ ತಮಟೆ ಬೇಕಾಯಿತು. ಹೇಗೆ ಮೇಲ್ದರ್ಜೆಯ ಪ್ರಾಣಿಗಳಲ್ಲಿ ಪ್ರತಿ ಅಂಗದಲ್ಲೂ ಏನಾದರೊಂದು ಮಾರ್ಪಾಟು ತೇಪೆಕೆಲಸ ಕಾಣಸಿಗುತ್ತದೆ. ನೀರಿನಲ್ಲಿಯೇ ಇರುತ್ತಿದ್ದ ಪ್ರಾಣಿವರ್ಗ ನೆಲದ ಮೇಲೆ ಜೀವಿಸಲು ಬಂದಿದ್ದರ ಗುರುತುಗಳಿವು.

ಅಂತು ಇಂಗಾಲಯುಗ, ದ್ವಿಚರ ಪ್ರಾಣಿಗಳ ಯುಗ ಎಂದು ಕರೆಯುವ ಈ ಯುಗದಲ್ಲಿ ಜೀವವರ್ಗ ಜೌಗು ಪ್ರದೇಶಗಳಲ್ಲಿ, ಆಳವಿಲ್ಲದ ಲಗೂನ್‌ಗಳಲ್ಲಿ (Lagoon) ಮತ್ತು ನದಿ, ಸರೋವರ, ಸಮುದ್ರಗಳ ತಗ್ಗಾದ ತೀರಗಳಲ್ಲಿ ಮಾತ್ರ ಇರುತ್ತಿತ್ತು. ಜೀವ ಅಷ್ಟರವರೆಗೆ ಮಾತ್ರ ಹರಡಿತ್ತು. ಎತ್ತರದ ಪ್ರದೇಶಗಳು ಇನ್ನೂ ಬಂಜರಾಗಿಯೇ ಇದ್ದುವು. ಜೀವವರ್ಗ ಗಾಳಿಯನ್ನು ಉಸಿರಾಡಲು ಕಲಿತಿದ್ದರೂ ಅದರ ಮೂಲ ಆಧಾರ ಇನ್ನೂ ನೀರಿನಲ್ಲಿಯೇ ಇತ್ತು. ಸಂತಾನೋತ್ಪತ್ತಿಗೆ ಸಸ್ಯ ಪ್ರಾಣಿಗಳೆಲ್ಲಾ ನೀರನ್ನೇ ಆಶ್ರಯಿಸಬೇಕಾಗಿತ್ತು.

6. ಸರೀಸೃಪಗಳ ಯುಗ

ಇಂಗಾಲದ ಯುಗದಲ್ಲಿ ಜೀವವರ್ಗ ಹುಲುಸಾಗಿ ಬೆಳೆದು ಭೂಮಿ ಸಸ್ಯಪ್ರಾಣಿಗಳಿಂದ ತುಂಬಿತ್ತು. ಆದರೆ ಆಮೇಲೆ ಭೂಮಿಯ ಮೇಲ್ಮೈಯ ಪರಿಸ್ಥಿತಿ ಬಹಳವಾಗಿ ವ್ಯತ್ಯಾಸಗೊಳ್ಳಲಾರಂಭಿಸಿತು. ಭೂಮಿಯ ಮೇಲ್ಪದರದ ಉಷ್ಣಾಂಶದಲ್ಲಿ ವೈಪರೀತ್ಯಗಳು ತೋರಿ ಬಂದುವು. ಮಧ್ಯೆ ಮಧ್ಯೆ ಬಹುಕಾಲ ಭೂಮಿ ನೀರ್ಗಲ್ಲಿನಿಂದ ಮುಚ್ಚಿರುತ್ತಿತ್ತು. ಅನೇಕ ಪ್ರದೇಶಗಳಲ್ಲಿ ಹುಲುಸಾಗಿ ಬೆಳೆದಿದ್ದ ಜೌಗಿನ ಸಸ್ಯವರ್ಗ ಸತ್ತು ಹೋಯಿತು. ಈ ಕಾಲ ಬಂಡೆಗಳ ದಾಖಲೆಗಳಲ್ಲಿ ಮರಳುಗಲ್ಲು ಮತ್ತು ಅಂಥದೇ ಬೇರೆ ಕಲ್ಲುಗಳ ದಪ್ಪ ಪದರಗಳನ್ನು ತೋರಿಸುತ್ತದೆ. ಈ ಪದರಗಳಲ್ಲಿ ಎಷ್ಟೋ ಕೆಲವೇ ಕೆಲವು ಜೀವ್ಯವಶೇಷಗಳಿವೆ. ಇಂಗಾಲ ಯುಗದ ಸಸ್ಯಗಳ ಮೇಲೆ ಇಂತಹ ಹೊಸಪದರಗಳು ಬಿದ್ದು ಆ ಒತ್ತಡದಿಂದ ಆ ಸಸ್ಯಗಳು ಕಲ್ಲಿದ್ದಿಲಾಗಿ ಬದಲಾಯಿಸಲು ಆರಂಭವಾಯಿತು. ಈಗ ನಮಗೆ ಸಿಗುವ ಕಲ್ಲಿದ್ದಿಲೆಲ್ಲಾ ಹೀಗೆ ಆಗಿದ್ದೇ.

ಆದರೆ ಜೀವ ತ್ವರಿತಗತಿಯಲ್ಲಿ ಹೊಸರೂಪಗಳನ್ನು ಪಡೆಯುವುದು ಇಂತಹ ಸಮಯಗಳಲ್ಲೇ. ಯಾರೇ ಆಗಲಿ, ಕಷ್ಟ ಎದುರಾದರೇ ಹೊಸ ಪಾಠ ಕಲಿಯುವುದು. ತಿರುಗಿ ಭೂಮಿಯ ಮೇಲೆ ಶಾಖ–ತೇವ ಪರಿಸ್ಥಿತಿ ಉಂಟಾಗುತ್ತಲೂ ಹೊಸಬಗೆಯ ಪ್ರಾಣಿ ಸಸ್ಯಗಳ ಸಾಲುಸಾಲುಗಳೇ ಅಭಿವೃದ್ಧಿಯಾದುದನ್ನು ನಾವು ನೋಡುತ್ತೇವೆ. ಶಿಲೆಗಳ ದಾಖಲೆಗಳಲ್ಲಿ ಈಗ ಹೊಸಬಗೆಯ ಕಶೇರುಕಗಳು ಕಾಣಿಸಿಕೊಳ್ಳುತ್ತವೆ. ಇವುಗಳೂ ದ್ವಿಚರ ಪ್ರಾಣಿಗಳಂತೆಯೇ ಮೊಟ್ಟೆಯಿಡುತ್ತಿದ್ದರೂ ಅದು ಒಡೆದು ಹೊರಬೀಳುವ ಮರಿ ತಕ್ಷಣವೇ ಗಾಳಿಯಲ್ಲಿ ಜೀವಿಸುವ ಶಕ್ತಿಯುಳ್ಳದಾಗಿರುತ್ತಿತ್ತು. ಗೊದಮೊಟ್ಟೆ

ಮುಂತಾದ ದ್ವಿಚರ ಜೀವಿಗಳ ಮರಿಗಳಂತೆ ನೀರಿನಲ್ಲಿಯೇ ಸ್ವಲ್ಪಕಾಲ ಕಳೆಯಬೇಕಾದ ಅವಶ್ಯಕತೆ ಇವಕ್ಕೆ ಇರುತ್ತಿರಲಿಲ್ಲ, ಏಕೆಂದರೆ ಇವುಗಳಲ್ಲಿ ಭ್ರೂಣವು ಹೆಚ್ಚುಕಡಿಮೆ ಪೂರ್ಣ ವಯಸ್ಸು ಪ್ರಾಣಿಯಂತೆ ಆಗಿ ಗಾಳಿ ಉಸಿರಾಡುವಂತೆ ಆಗುವವರೆಗೂ ಮೊಟ್ಟೆ ಒಡೆದು ಮರಿ ಹೊರಬೀಳುತ್ತಿರಲಿಲ್ಲ. ಕಿವಿರಿನ ರಂಧ್ರಗಳು ಭ್ರೂಣಾವಸ್ಥೆಯಲ್ಲಿ ಮಾತ್ರ ಇರುತ್ತಿದ್ದುವು.

ಗೊದಮೊಟ್ಟೆ ಅವಸ್ಥೆ (Tadpole Stage) ಇಲ್ಲದಿದ್ದ ಈ ಪ್ರಾಣಿಗಳೇ ಸರೀಸೃಪಗಳು. ಈ ಹೊತ್ತಿಗೆ ಜೌಗು ಅಥವಾ ನೀರಿನ ಸಹಾಯವಿಲ್ಲದೆಯೇ ಮೊಳಕೆ ಒಡೆಯಬಲ್ಲ ಬೀಜಗಳನ್ನುಳ್ಳ ಮರಗಳೂ ಬೆಳೆಯುತ್ತಿದ್ದುವು. ಹೂ ಬಿಡುವ ಸಸ್ಯಗಳು ಮತ್ತು ಹುಲ್ಲುಗಳು ಇನ್ನೂ ಅಭಿವೃದ್ಧಿಯಾಗಿಲ್ಲದಿದ್ದರೂ ತಾಳೆಮರದಂತೆ ಇರುವ ಸೈಕಾಡ್ (Cycad) ಗಳೂ, ಉಷ್ಣವಲಯದ ನಿತ್ಯ ಹಸುರು ಬಣ್ಣದ ಶಂಕುಫಲಿಗಳೂ (Tropical evergreen conifers) ಬೇಕಾದಷ್ಟಿದ್ದುವು. ಅನೇಕ ಜರಿಗಳೂ ಇದ್ದುವು. ಅನೇಕ ಬಗೆಯ ಕೀಟಗಳೂ ಕಾಣಿಸಿಕೊಂಡಿದ್ದುವು. ದುಂಬಿ ಚಿಟ್ಟೆಗಳಿಲ್ಲದಿದ್ದರೂ, ಜೀರುಂಡೆ ಜಾತಿಯ ಕೀಟಗಳಿದ್ದುವು. ಜಲಪ್ರಾಣಿಗಳಲ್ಲವೇ ಅಲ್ಲ ಎನ್ನಬಹುದಾದ ಈ ಪ್ರಾಣಿಗಳ ಮತ್ತು ಸಸ್ಯಗಳ ಪೂರ್ವಜರು ಕಷ್ಟ ಪರಿಸ್ಥಿತಿಯಿದ್ದ ಆ ದೀರ್ಘಕಾಲದಲ್ಲಿಯೇ ಜನ್ಮವೆತ್ತಿರಬೇಕು. ಇವು ಭದ್ರವಾಗಿ ನೆಲೆಯೂರಿ ಪ್ರವರ್ಧಮಾನಕ್ಕೆ ಬರಲು ಸುತ್ತಣ ವಸ್ತುಸ್ಥಿತಿ ಅನುಕೂಲವಾಗಬೇಕಿತ್ತು ಅಷ್ಟೆ.

ಯುಗ ಯುಗಗಳು ಕಳೆದಂತೆ ಅಂತಹ ಪರಿಸ್ಥಿತಿಯೂ ಬಂದೊದಗಿತು. ಹೀಗೆ ಎಂದು ಊಹಿಸಲಾಗದಂತೆ ಭೂಮಿಯ ಮೇಲ್ಪದರ ಬದಲಾಯಿಸುತ್ತಿದ್ದುದು, ಭೂಮಿಯ ಪಥದಲ್ಲಿ ಮಾರ್ಪಾಡು, ಈ ಪಥ ಮತ್ತು ಧ್ರುವರೇಖೆಗಳ ನಡುವಿನ ಕೋನ ಹೆಚ್ಚು ಕಡಿಮೆಯಾಗುವುದು ಇವೆಲ್ಲಾ ಕಾರಣಗಳಿಂದ ಭೂಮಿಯ ಮೇಲಿನ ಅನೇಕ ಭಾಗಗಳು ಬಹುಕಾಲ ಬೆಚ್ಚನೆಯ ವಾಯುಗುಣವನ್ನು ಪಡೆದುವು. ಸುಮಾರು 200 ಮಿಲಿಯ ವರ್ಷಗಳಿಗಿಂತಲೂ ಹೆಚ್ಚುಕಾಲ ಇದೇ ರೀತಿ ಇತ್ತೆಂದು ಊಹಿಸಲಾಗಿದೆ. ಇದಕ್ಕೆ ಮಧ್ಯ ಜೀವಕಲ್ಪ (mesozoic period) ಎನ್ನುತ್ತಾರೆ. ಜೀವರಹಿತ ಯುಗ (azoic age) ಮತ್ತು ಪ್ರಾಚೀನ ಜೀವಿಕಲ್ಪ (palaeozoic period) ಗಳಿಗೂ (ಇವುಗಳು ಒಟ್ಟು 1400 ಮಿಲಿಯ ವರ್ಷ ನಡೆದುವು) ಈ ನಮ್ಮ ಕಾಲದವರೆಗಿನ ಆಧುನಿಕ ಜೀವಕಲ್ಪಕ್ಕೂ (Cainozoic age) ಮಧ್ಯಕಾಲವಾದುದರಿಂದ ಇದಕ್ಕೆ ಈ ಹೆಸರು ಬಂದಿತು. ಆ ಕಾಲದಲ್ಲಿ ಸರೀಸೃಪಗಳೇ ಪ್ರಮುಖ ಪ್ರಾಣಿಗಳಾಗಿದ್ದು ಆಶ್ಚರ್ಯಕರ ಉಚ್ಛ್ರಾಯ ಸ್ಥಿತಿಯನ್ನು ಪಡೆದಿದ್ದುದರಿಂದ ಅವಕ್ಕೆ ಸರೀಸೃಪಗಳ ಯುಗ ಎಂತಲೂ ಕರೆಯುವುದುಂಟು. ಈಗ್ಗೆ ಎಂಬತ್ತು ಮಿಲಿಯ ವರ್ಷಗಳ ಹಿಂದೆ ಈ ಯುಗ ಮುಗಿಯಿತು.

ಈಗ ಸರೀಸೃಪಗಳು ಭೂಮಿಯ ಕೆಲವೆಡೆಗಳಲ್ಲಿ ಮಾತ್ರ ವಾಸಿಸುತ್ತವೆ. ಇವುಗಳಲ್ಲಿ ಜಾತಿ ಪ್ರಭೇದಗಳೂ ಅಷ್ಟೇನೂ ಹೆಚ್ಚಾಗಿಲ್ಲ. ಅವರೂ ಇಂದು ಜೀವಿಸುತ್ತಿರುವ

ಇಂಗಾಲ ಯುಗದ ದ್ವಿಚರ ಪ್ರಾಣಿಗಳ ಸಂತತಿಯು ಪ್ರಾಣಿಗಳಿಗಿಂತ ಇವುಗಳಲ್ಲಿ ವೈವಿಧ್ಯ ಹೆಚ್ಚಾಗಿದೆಯೆಂದು ಒಪ್ಪಬೇಕು. ಹಾವುಗಳು, ಹಲ್ಲಿಗಳು, ಆಮೆಗಳು, ಮೊಸಳೆಗಳು ಮತ್ತು ಮೊಸಳೆ ಜಾತಿಯವು ಹೀಗೆ ಇವುಗಳಲ್ಲಿ ಬೇರೆ ಬೇರೆ ವಿಧದ ಪ್ರಾಣಿಗಳಿವೆ. ಆದರೆ ಇನ್ನೆಲ್ಲಕ್ಕೂ ವರ್ಷ ಪೂರ್ತಿ ಹೊರಗಿನಿಂದ ಶಾಖ ಒದಗಬೇಕು. ಅತಿ ಚಳಿಯಾದರೆ ಅವನ್ನು ಇವು ತಡೆದುಕೊಳ್ಳಲಾರವು. ಮಧ್ಯ ಜೀವಕಲ್ಪದ ಸರೀಸೃಪಗಳದ್ದೂ ಇದೇ ಪಾಡಾಗಿರಬೇಕು. ಈಗಿನ ಉಷ್ಣವಲಯದ ಜೀವಿಗಳಂತೆ ಅವುಗಳಿಗೆ ಹಿಮವನ್ನು ತಡೆಯಲು ಆಗುತ್ತಿರಲಿಲ್ಲ. ಈಗ ಉದ್ಯಾನವನಗಳಲ್ಲಿ "ಶಾಖದ ಮನೆ" ಗಳಲ್ಲಿ ಬೆಳೆಸುವ ಜೀವಿವರ್ಗದಂತಿದ್ದುವು ಇವು. ಆದರೂ ಇವು ಇಂಗಾಲ ಯುಗದ ಸಸ್ಯಪ್ರಾಣಿಗಳಿಗಿಂತ ಒಂದು ಹೆಜ್ಜೆ ಮುಂದಿದ್ದುವು. ಅವುಗಳಂತೆ ಇವು ನೀರು ಜೌಗುಗಳನ್ನೇ ಆಶ್ರಯಿಸಬೇಕಾಗಿರಲಿಲ್ಲ. ಇವುಗಳನ್ನು ನಿಜವಾಗಿಯೂ ಭೂಚರ ಪ್ರಾಣಿಗಳೆನ್ನಬಹುದು.

ಈಗ ನಾವು ನೋಡುವ ಸರೀಸೃಪಗಳೆಲ್ಲಾ ಆಗ ಸಾಕಷ್ಟಿದ್ದುವು. ದೊಡ್ಡ ದೊಡ್ಡ ಮೊಸಳೆಗಳು, ಆಮೆಗಳು ಮತ್ತು ಅನೇಕ ವಿಧದ ಹಲ್ಲಿ ಹಾವುಗಳಲ್ಲದೆ ಈಗ ಸಂಪೂರ್ಣ ಲುಪ್ತವಾಗಿ ಹೋಗಿರುವ ಅನೇಕ ಆಶ್ಚರ್ಯಕರ ಪ್ರಾಣಿಗಳೂ ಇದ್ದುವು. ಡಿನೋಸಾರ್‌ಗಳೆಂದು ಕರೆಯುವ ಅಗಾಧ ವೈವಿಧ್ಯದ ಪ್ರಾಣಿಗಳು ಆಗ ಜೀವಿಸುತ್ತಿದ್ದುವು. ಅಷ್ಟುಹೊತ್ತಿಗೆ ಭೂಖಂಡಗಳಲ್ಲಿ ತಗ್ಗಿನಲ್ಲಿದ್ದ ಪ್ರದೇಶಗಳಲ್ಲೆಲ್ಲಾ ಸಸ್ಯವರ್ಗ ಪಸರಿಸಿತ್ತು. ಹೀಗೆ ಬೆಳೆದಿದ್ದ ಜೊಂಡುಗಳು, ಮತ್ತು ಜರೀ ಗಿಡಗಳನ್ನು ಮೇಯುತ್ತಾ ಅನೇಕ ವಿಧದ ಸಸ್ಯಾಹಾರಿ ಸರೀಸೃಪಗಳು ಅಭಿವೃದ್ಧಿಯಾದುವು. ಮಧ್ಯ ಜೀವಕಲ್ಪದ ಉಚ್ಛ್ರಾಯ ಕಾಲದ ಹೊತ್ತಿಗೆ ಇವು ಅದ್ಭುತಾಕಾರವನ್ನು ಪಡೆದಿದ್ದುವು. ಉದಾಹರಣೆಗೆ ಡೈಪ್ಲೊಡೋಕಸ್ ಕಾರ್ನೆಗೈ ಎಂಬ ಪ್ರಾಣಿ ಮೂತಿಯ ತುದಿಯಿಂದ ಬಾಲದ ತುದಿವರೆಗೆ ಒಟ್ಟು ಎಂಬತ್ತು ನಾಲ್ಕು ಅಡಿ ಉದ್ದ ಇತ್ತು! ಜೈಗಾಂಟೋಸೋರಸ್ ಎಂಬುದು ಇನ್ನೂ ದೊಡ್ಡದು. ಇದು ನೂರಡಿ ಉದ್ದ ಇರುತ್ತಿತ್ತು! ಇಂತಹ ಭೂತಾಕೃತಿಯ ಪ್ರಾಣಿಗಳನ್ನು ತಿಂದು ಜೀವಿಸುತ್ತಿದ್ದ ಅಷ್ಟೇ ದೊಡ್ಡವಾದ ಮಾಂಸಾಹಾರಿ ಡಿನೋಸಾರ್‌ಗಳೂ ಇದ್ದುವು. ಇವುಗಳಲ್ಲಿ ಒಂದಾದ ಟಿರಾನೋಸಾರಸ್ ಎಂಬುದು ಅತ್ಯಂತ ಭೀಕರ ರೂಪ ಹೊಂದಿತ್ತು ಎಂದು ಹೇಳುತ್ತಾರೆ.

ಇದೇ ಸಮಯದಲ್ಲೇ ಇನ್ನೂ ಬೇರೆ ವಿಧದ ಸರೀಸೃಪಗಳು– ಇವುಗಳೂ ಈಗ ಲುಪ್ತವಾಗಿ ಹೋಗಿವೆ– ಕಾಣಬರುತ್ತಿದ್ದುವು. ಇವುಗಳ ಮುಂಗಾಲುಗಳು ಬಾವಲಿ (ಕಣ್ಣು ಕಪಟ) ಯ ಮುಂಗಾಲುಗಳಂತೆ ಪರಿವರ್ತನೆ ಹೊಂದಿದ್ದುವು. ಇವು ಕೀಟಗಳನ್ನು ಹಿಡಿಯುತ್ತಿದ್ದುವು. ಹೀಗೆಯೇ ಇವು ಎಗರುವುದು, ಪ್ಯಾರಾಚೂಟ್‌ನಂತೆ ಇಳಿಯುವುದು ಕಲಿತು ಕಡೆಗೆ ಅದ್ಭುತಾಕಾರದ ಡೈನೋಸಾರ್‌ಗಳು ಅಂದಿನ ಕಾಡುಗಳ ದೊಡ್ಡ ದೊಡ್ಡ ಜರಿಗಿಡಗಳು ಮತ್ತು ನಿತ್ಯ ಹಸುರು ಬಣ್ಣದ ಮರಗಳ ನಡುವೆ ಅವುಗಳನ್ನು ಮೇಯುತ್ತಾ ಒಂದನ್ನೊಂದು ಹಿಡಿಯುತ್ತಾ ತಿರುಗುತ್ತಿದ್ದಾಗಲೇ ಆ ಮರಗಳ ನಡುವೆ ಹಾರುವುದಕ್ಕೂ ಮೊದಲಿಟ್ಟವು. ಇವುಗಳಿಗೆ ಟೆರೋಡಾಕ್ಟೈಲ್‌ಗಳೆನ್ನು

ತ್ತಾರೆ (ptero dactyls). ಬೆನ್ನುಮೂಳೆಯುಳ್ಳ ಪ್ರಾಣಿಗಳಲ್ಲಿ ಇವುಗಳೇ ಮೊದಲು ಹಾರಲು ಕಲಿತಿದ್ದುವು. ಕಶೇರುಕಗಳ ಅಭಿವೃದ್ಧಿಯಲ್ಲಿ ಇದು ಒಂದು ಹೊಸ ಸಾಧನೆ.

ಇಷ್ಟೇ ಅಲ್ಲದೆ ಕೆಲವು ಸರೀಸೃಪಗಳು ಸಮುದ್ರದಲ್ಲಿ ವಾಸಿಸಲು ಆರಂಭಿಸಿದುವು. ಮೆಸೊಸಾರ್, ಇಕ್ತಿಯೋಸಾರ್ ಮತ್ತು ಪ್ಲೀಸಿಯೊಸಾರ್‌ಗಳೆಂಬ ಮೂರು ವಿಧದ ಪ್ರಾಣಿಗಳು ಹೀಗೆ ಸಮುದ್ರಕ್ಕೆ ಹಿಂತಿರುಗಿದುವು. ಇವುಗಳಲ್ಲಿ ಕೆಲವು ಇಂದಿನ ತಿಮಿಂಗಿಲಗಳಷ್ಟು ದೊಡ್ಡವಾದುವು. ಇಕ್ತಿಯೋಸಾರ್ ಪೂರ್ಣವಾಗಿ ಸಮುದ್ರದಲ್ಲಿ ವಾಸಿಸುತ್ತಿದ್ದಿರಬೇಕು. ಪ್ಲೀಸಿಯೋಸಾರ್‌ನಂತಹ ಪ್ರಾಣಿ ಈಗ ಯಾವುದೂ ಇಲ್ಲ. ಅದರ ದೇಹ ದಪ್ಪನಾಗಿ ಅದಕ್ಕೆ ದೋಣಿಯ ಹುಟ್ಟುಗಳಂಥ ಅಂಗಗಳಿದ್ದುವು. ನೀರಿನಲ್ಲಿ ಈಜಲು ಅಥವಾ ಆಳವಿಲ್ಲದ ಜಲಭಾಗಗಳಲ್ಲಿ ಮತ್ತು ಕೆಸರಿನಲ್ಲಿ ಮೆಲ್ಲನೆ ಚಲಿಸಲು ಇವು ಅನುಕೂಲವಾಗಿದ್ದುವು. ದೇಹದ ಗಾತ್ರಕ್ಕೆ ಚಿಕ್ಕದೆನಿಸುವ ತಲೆ, ಬಹು ಉದ್ದವಾದ ಹಾವಿನಂತಹ ಕತ್ತು, (ಹಂಸದ ಕತ್ತಿಗೂ ಇದಕ್ಕೂ ಹೋಲಿಕೆಯೇ ಇಲ್ಲ, ಇದು ಅಷ್ಟು ಉದ್ದವಾಗಿರುತ್ತಿತ್ತು) ಇದಕ್ಕೆ ಇದ್ದುವು. ಈ ಪ್ರಾಣಿ ಈಜುತ್ತಾ ಹಂಸಗಳಂತೆ ನೀರಿನೊಳಗೆ ತನ್ನ ಆಹಾರವನ್ನು ಹುಡುಕುತ್ತಿದ್ದಿರಬೇಕು, ಇಲ್ಲವೇ ನೀರಿನಲ್ಲಿ ಹೊಂಚು ಹಾಕುತ್ತಿದ್ದು ಹತ್ತಿರ ಹಾದುಹೋಗುವ ಮೀನು ಮತ್ತಿತರ ಪ್ರಾಣಿಗಳನ್ನು ಗಕ್ಕನೆ ಹಿಡಿಯುತ್ತಿದ್ದಿರಬೇಕು.

ಈ ವಿಧವಾಗಿತ್ತು ಮಧ್ಯ ಜೀವಕಲ್ಪದ ಜೀವರಾಶಿ. ಇವುಗಳಲ್ಲಿ ಭೂಚರಗಳೇ ಪ್ರಮುಖವಾಗಿದ್ದುವು. ಅದುವರೆಗಿದ್ದ ಎಲ್ಲಾ ಜೀವ ಮಾದರಿಗಳಿಗಿಂತ ಇವು ಬಹಳಷ್ಟು ಮುಂದುವರೆದಿದ್ದುವು. ಗಾತ್ರ, ಶಕ್ತಿ, ಚಟುವಟಿಕೆ ಮತ್ತು ವ್ಯಾಪ್ತಿ ಎಲ್ಲದರಲ್ಲೂ ಇವು ಅದುವರೆಗೂ ನಮ್ಮ ಭೂಮಿ ಕಂಡಿದ್ದ ಎಲ್ಲಾ ಪ್ರಾಣಿಗಳನ್ನೂ ಮೀರಿಸುತ್ತಿದ್ದುವು. ಒಟ್ಟಿನಲ್ಲಿ ಹೇಳುವುದಾದರೆ ಇವುಗಳಲ್ಲಿ ಅವುಗಳೆಲ್ಲವಕ್ಕಿಂತ ಜೀವಶಕ್ತಿ ತುಂಬಿಕೊಂಡಿತ್ತು. ಸಮುದ್ರ ಸಾಗರಗಳ ಜೀವವರ್ಗದಲ್ಲಿ ಈ ತೆರದ ಮುನ್ನಡೆ ಇರಲಿಲ್ಲ. ಅಲ್ಲಿ ಹೊಸ ಹೊಸ ವಿಧದ ಜೀವಿಗಳ ಸಂಖ್ಯೆ ಹೆಚ್ಚುತ್ತಿತ್ತು ಅಷ್ಟೆ. ಆಳವಿಲ್ಲದ ಸಮುದ್ರ ಪ್ರದೇಶಗಳಲ್ಲಿ ಅಮೊನೈಟ್‌ಗಳೆಂಬ (Ammonites) ಸ್ಕ್ವಿಡ್ (Squid) ನಂತಹ ಪ್ರಾಣಿಗಳು ಕಾಣಿಸಿಕೊಂಡಿದ್ದುವು. ಇವುಗಳಲ್ಲಿ ಬೇರೆ ಬೇರೆ ಕೋಣೆಗಳಾಗಿ ವಿಂಗಡಿಸಲ್ಪಟ್ಟ ಮುಕ್ಕಾಲು ಭಾಗವೆಲ್ಲಾ ಸುರುಳಿ ಸುತ್ತಿಕೊಂಡಿರುತ್ತಿದ್ದ ಮೈ ಚಿಪ್ಪು ಇರುತ್ತಿತ್ತು. ಪ್ರಾಚೀನ ಜೀವಕಲ್ಪದಲ್ಲಿಯೂ ಇವುಗಳ ಪೂರ್ವಜ ಪ್ರಾಣಿಗಳಿದ್ದುವು. ಆದರೆ ಇದು ಅವುಗಳ ಉಚ್ಛ್ರಾಯ ಕಾಲವಾಗಿತ್ತು. ಈಗ ಇವುಗಳ ಸಂತತಿ ಉಳಿದಿಲ್ಲ. ಉಷ್ಣವಲಯ ಸಮುದ್ರಗಳಲ್ಲಿ ವಾಸಿಸುವ ನಾಟಿಲಸ್ ಎಂಬ ಶಿರಪಾದಿ ಇದ್ದಿದ್ದರಲ್ಲಿ ಇವುಗಳ ಹತ್ತಿರ ಸಂಬಂಧಿಯಾಗಿದೆ. ಇದೇ ಕಾಲದಲ್ಲಿಯೇ ಮೀನುಗಳಲ್ಲಿಯೂ ಹೊಸ ಹೊಸ ವ್ಯತ್ಯಾಸಗಳು ಕಂಡುಬರಲಾರಂಭಿಸಿದುವು. ಅದುವರೆಗಿದ್ದ ಹಲ್ಲಿನಂತಹ ಮತ್ತು ತಟ್ಟೆಗಳಂತಹ ಹೊದಿಕೆಗಳ ಬದಲು ಲಘುವಾದ ಮತ್ತು ನಾಜೂಕಾದ ಹುರುಪೆಗಳು

ಇವುಗಳ ಮೇಲ್ಮೈ ಮಾರ್ಗದಲ್ಲಿ ಕಾಣಿಸಿಕೊಂಡುವು. ಇದುವರೆಗೂ ಇಂತಹ ಮೀನುಗಳೇ ಸಮುದ್ರ ಮತ್ತು ನದಿಗಳಲ್ಲಿ ಪ್ರಮುಖಸ್ಥಾನ ಪಡೆದಿರುವುದು.

(ಮುಂದುವರೆಯುವುದು)

ಟಿಪ್ಪಣಿಗಳು

1. ಈ ಸಂಖ್ಯೆಗಳಲ್ಲಿ ಒಂದಕ್ಕೊಂದಕ್ಕೆ ಯಾವ ಸಂಬಂಧವೂ ಇಲ್ಲವೆಂದು ಮೇಲ್ನೋಟಕ್ಕೆ ತೋರಬಹುದು. ಆದರೆ ಇವುಗಳಲ್ಲೂ ಒಂದು ನಿಯಮವಿದೆಯೆಂದು ತೋರಿಸಿಕೊಟ್ಟಿದ್ದಾರೆ. ಬೋಡ್–ತಿತಿಯುಸ್ ನಿಯಮ (Bode-Titius Law) ಎಂದು ಕರೆಯುವ ಈ ನಿಯಮವನ್ನು ಕ್ರಿ.ಶ. 1772ರಲ್ಲಿ ಕಂಡುಹಿಡಿದರು. ಸೌರವ್ಯೂಹ ಈಗಿರುವ ರೂಪವನ್ನು ಹೇಗೆ ಪಡೆಯಿತೆಂದು ವಿವರಿಸುವಾಗ ಗ್ರಹಪಥಗಳು ಹೀಗೆ ನಿಯಮಬದ್ಧವಾಗಿ ಹಂಚಿಕೆಯಾಗಿರುವುದಕ್ಕೂ ವಿವರಣೆ ಕೊಡಬೇಕಾಗುತ್ತದೆ.
2. 1930ರಲ್ಲಿ ಸೂರ್ಯನ ಸುತ್ತಲೂ ತಿರುಗುವ ಮತ್ತೊಂದು ಗ್ರಹ ಕಂಡುಹಿಡಿಯಲ್ಪಟ್ಟಿತು. ಇದಕ್ಕೆ ಪ್ಲೂಟೊ ಎಂದು ಹೆಸರಿಟ್ಟಿದ್ದಾರೆ. ಈ ಅಳತೆಗಳ ಪ್ರಕಾರ ಇದು ಸೂರ್ಯನಿಂದ ಸುಮಾರು 7 ಮೈಲಿ ದೂರದಲ್ಲಿರುತ್ತದೆ.
3. ವಿಶ್ವದಲ್ಲಿರುವ ಅಸಂಖ್ಯಾತ ಗ್ಯಾಲಾಕ್ಸಿಗಳಲ್ಲಿ ಎಲ್ಲಿಯಾದರೂ ಜೀವ ಇರಬಹುದೆಂಬುದು ಇತ್ತೀಚಿನ ಅಭಿಪ್ರಾಯ.
4. ವೆಲ್ಸರ ಈ ಗ್ರಂಥದ ಈ ಆವೃತ್ತಿ ಪ್ರಕಟವಾದದ್ದು 1946ರಲ್ಲಿ ; ಮಾನವ ಚಂದ್ರನನ್ನು ಮುಟ್ಟಿ ಅದರ ಮೇಲೆ ನಡೆದ ಈ ಯುಗದಲ್ಲಿ ಈ ಅಂಕಿಅಂಶಗಳು ಸರಿಯಿಲ್ಲವೆನಿಸಬಹುದು. ಅದರೂ ಭೂಮಿಯಲ್ಲಿ ಜೀವ ಸ್ವಾಭಾವಿಕವಾಗಿ ನೆಲೆಸಿರುವುದು ಅದರ ಮೇಲ್ಮೈಯಲ್ಲಿ ಮಾತ್ರ ಎಂದು ನೆನಪಿನಲ್ಲಿಡಬೇಕು.
5. 1943ರಲ್ಲಿ ವೈಸಾಕರ್ (weiszacker) ಎಂಬ ಜರ್ಮನ್ ವಿಜ್ಞಾನಿ ಸೌರವ್ಯೂಹದ ಉತ್ಪತ್ತಿಯ ಬಗೆಗೆ ಒಂದು ಸಿದ್ಧಾಂತವನ್ನು ಮುಂದಿಟ್ಟನು. ಸೌರವ್ಯೂಹ ಈಗಿನ ಸ್ಥಿತಿಯನ್ನು ಹೇಗೆ ಪಡೆಯಿತು ಎಂಬುದಕ್ಕೆ ಈತನು ಕೊಟ್ಟ ವಿವರಣೆಗಳು ತೃಪ್ತಿಕರವಾಗಿವೆ. ಬೇರೆ ಬೇರೆ ಗ್ರಹಗಳ ಮತ್ತು ಸೂರ್ಯನ ರಾಸಾಯನಿಕ ಸಂಯೋಜನೆ, ಬೋಡ್–ತಿತಿಯುಸ್ ನಿಯಮ ಇವೆಲ್ಲವನ್ನೂ ಈ ಸಿದ್ಧಾಂತ ವಿವರಿಸುತ್ತದೆ. ಇದಕ್ಕಿಂತ ಕುತೂಹಲಕರ ವಿಷಯವೆಂದರೆ ಈ ಸಿದ್ಧಾಂತವನ್ನು ಪರಿಶೀಲಿಸಿದಾಗ ನಮ್ಮ ಸೌರವ್ಯೂಹದಂತಹದ್ದೇ ವ್ಯೂಹಗಳು

ಈ ವಿಶ್ವದಲ್ಲಿ ಎಷ್ಟೋ ಇರಬೇಕೆಂದು ಎನಿಸುತ್ತದೆ. ಅಂದರೆ ನಮ್ಮ ಗ್ಯಾಲಾಕ್ಸಿಯಲ್ಲೇ ಭೂಮಿಯನ್ನು ಹೋಲುವ ಎಷ್ಟೋ ಮಿಲಿಯ ಗ್ರಹಗಳಿರಬಹುದು. ಇವುಗಳಲ್ಲಿಯೂ 'ಜೀವ' ಉತ್ಪತ್ತಿಯಾಗಿ ಇಷ್ಟುಹೊತ್ತಿಗೆ ಅಲ್ಲಿ ಮೇಲ್ಮಟ್ಟದ ಜೀವಿಗಳೂ ಇದ್ದರೆ ಆಶ್ಚರ್ಯವೇನಿಲ್ಲ.

6. ಇದು ಸುಮಾರು 4500 ಮಿಲಿಯ ವರ್ಷಗಳ ಹಿಂದೆ ನಡೆದಿರಬೇಕೆಂದು ಇತ್ತೀಚಿನ ಅಂದಾಜು. ಆಗ ಭೂಮಿ ಕೇವಲ ನಾಲ್ಕೇನಾಲ್ಕು ಘಂಟೆಗಳಲ್ಲಿ ತನ್ನ ಅಕ್ಷದ ಮೇಲೆ ಒಂದು ಸುತ್ತು ತಿರುಗುತ್ತಿತ್ತು.

7. ಇದು ವೆಲ್ಸ್‌ರವರ ಅಭಿಪ್ರಾಯ. ಆದರೂ ಈಗಲೂ ವಿಕಾಸವಾದ ಸರಿಯಲ್ಲವೆಂದು ಸಾಧಿಸಲು ಕೆಲವು ಶ್ರದ್ಧಾವಂತ ಕ್ರೈಸ್ತರು ಪ್ರಯತ್ನಿಸುತ್ತಾರೆ. 1926 ನೇ ಇಸವಿಯಲ್ಲಿ ಅಮೆರಿಕದ ಟೆನೆಸ್ಸೀ ಸಂಸ್ಥಾನದಲ್ಲಿ ವಿಕಾಸವಾದವನ್ನು ಬೋಧಿಸಿದ್ದಕ್ಕಾಗಿ ಶಾಲಾ ಉಪಾಧ್ಯಾಯರೊಬ್ಬರನ್ನು ವಿಚಾರಣೆಗೆ ಗುರಿ ಮಾಡಿದ್ದಲ್ಲದೆ ಈ ವಾದದ ಬೋಧನೆಯನ್ನೇ ಕಾನೂನಿನ ಮೂಲಕ ನಿರೋಧಿಸಿದರು.

ವಸ್ತುಕೋಶ

ಚೀನದಲ್ಲಿ ಹಿಂದೂ ಧರ್ಮ

ಆಧಾರಿತ : ದಿ ಹಿಂದೂ, ಬುಧವಾರ, 28-3-1984

ಪ್ರಾಚೀನ ಚೀನದಲ್ಲಿ ಹಿಂದೂ ಧರ್ಮ ಪ್ರಬಲವಾಗಿತ್ತು ಮತ್ತು ಅಲ್ಲಿನ ಅರಸರು ನಿಷ್ಠಾವಂತ ಹಿಂದೂಗಳಾಗಿದ್ದರೆಂದು ಚೀನಾ ದೇಶದ ವಿದ್ವಾಂಸ ಯಾನ್ ಕ್ಸಿಯೆನ್‌ಜಿ ಇತ್ತೀಚೆಗೆ ಮದ್ರಾಸಿನ ಡಾ|| ಸಿ.ಪಿ. ರಾಮಸ್ವಾಮಿ ಅಯ್ಯರ್ ಪ್ರತಿಷ್ಠಾನದಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು. ಚೀನದ ಆಗ್ನೇಯ ಭಾಗದಲ್ಲಿ ನಡೆದ ಸಂಶೋಧನೆಗಳಲ್ಲಿ ಪ್ರಾಚೀನ ಹಿಂದೂ ದೇವಾಲಯಗಳ ಭಗ್ನಾವಶೇಷಗಳು ದೊರೆತಿವೆ ; ಬೌದ್ಧ ಧರ್ಮ ಹಿಂದೂ ಧರ್ಮದ ಕವಲಾಗಿರುವುದರಿಂದ ಇದೇನೂ ಆಶ್ಚರ್ಯಕಾರಕವಲ್ಲವೆಂದರು.

ಹಿಂದೂ ಧರ್ಮ ಕ್ರಿ. ಶ. ಮೊದಲ ಶತಕದಲ್ಲಿ ಬೌದ್ಧ ಧರ್ಮದೊಂದಿಗೆ ಚೀನಕ್ಕೆ ಪದಾರ್ಪಣ ಮಾಡಿತು ಮತ್ತು ಆಗಿನ ಅರಸರು ಎರಡು ಧರ್ಮಗಳಿಗೂ ಆಶ್ರಯವಿತ್ತರು. ಆರನೇ ಶತಮಾನದಲ್ಲಿ ಎರಡು ತಲೆಮಾರುಗಳ ಕಾಲದಲ್ಲಿ ಅರಸರು ಹಿಂದೂಗಳಾಗಿದ್ದರು. ತದನಂತರ ಆಳಿದ ಟ್ಯಾಂಗ್ ರಾಜವಂಶ (7 ರಿಂದ 9ನೇ ಶತಮಾನ) ಎರಡು ಧರ್ಮಗಳಿಗೂ ಪ್ರೋತ್ಸಾಹ ನೀಡುತ್ತಿದ್ದರು. ಪ್ರಾಚೀನ ಚೀನದಲ್ಲಿ ಮತೀಯ ಕಲಹಗಳು ನಡೆಯುತ್ತಿರಲಿಲ್ಲ.

ಚೀನಿಯರು ಶಿವಂಬು ಎಂಬ ಹೆಸರಿನಿಂದ ದುರ್ಗೆಯನ್ನು ಪೂಜಿಸುತ್ತಿದ್ದರೆಂದು ಕ್ಸಿಯೆನ್‌ಜಿ ತಿಳಿಸಿದರು. ಭಾರತದಲ್ಲಿ ಏಳನೇ ಶತಮಾನದ ನಂತರ ಹಿಂದೂ ಧರ್ಮದ ಪುನರುತ್ಥಾನ ಮತ್ತು ಬೌದ್ಧ ಧರ್ಮದ ಅವನತಿ ಚೀನದ ಮೇಲೆ ಪ್ರಭಾವ ಬೀರಿ ಅನೇಕ ಮಹಾದೇವ ಮಂದಿರಗಳು ನಿರ್ಮಾಣಗೊಂಡವು ; ಅವುಗಳಲ್ಲಿ ಹಿಂದೂ ಪೂಜಾರಿಗಳಿರುತ್ತಿದ್ದರು.

ಚೀನದಲ್ಲಿ ಸುಯಿ ರಾಜವಂಶದ ಕಾಲದಲ್ಲಿ (ಸು. ಏಳನೇ ಶತಮಾನ) ಹಿಂದೂ ಧರ್ಮ ತನ್ನ ಔನ್ನತ್ಯವನ್ನು ತಲುಪಿತು ; ಆಗಿನ ರಾಜ ಮನೆತನದವರು ನಾರಾಯಣ, ಶಿವದಾಸ ಮುಂತಾದ ಹಿಂದೂ ಹೆಸರುಗಳನ್ನು ಹೊಂದಿದ್ದರು. ಇಂದಿಗೂ ಚೀನದಲ್ಲಿ ಬೌದ್ಧ ರೂಪದಲ್ಲಿ ಹಿಂದೂ ಧರ್ಮ ಅಸ್ತಿತ್ವದಲ್ಲಿದೆಯೆಂದು ಹೇಳಬಹುದು ; ಬೌದ್ಧ ವಿಹಾರಗಳು ಹಿಂದೂ ಅಂಶಗಳನ್ನೊಳಗೊಂಡಿವೆ ಮತ್ತು ಹಿಂದೂ ದೇವತೆಗಳನ್ನು ಹೋಲುವ ಅನೇಕ ದೇವತಾ ವಿಗ್ರಹಗಳನ್ನು ಹೊಂದಿರುವುದರಿಂದ ಅವುಗಳನ್ನು ಹಿಂದೂ

ದೇವಾಲಯಗಳೆಂದು ತಪ್ಪಾಗಿ ಭಾವಿಸಬಹುದಾಗಿದೆಯೆಂದು ಕ್ಸಿಯುನ್‌ಜಿ ಹೇಳಿದರು. ಚೀನದಲ್ಲಿ ಮತ ಧರ್ಮಸಹಿಷ್ಣುತೆ ಇದೆಯಾದರೂ ಸರ್ಕಾರದ ಪ್ರೋತ್ಸಾಹ ನೀಡುತ್ತಿಲ್ಲವೆಂದ ಕ್ಸಿಯುನ್‌ಜಿ ಮುಖ್ಯವಾಗಿ ವೃದ್ಧರು ಬೌದ್ಧವಿಹಾರಗಳಿಗೆ ಹೋಗುತ್ತಾರೆಂದೂ ಅವರ ಪೂಜೆ ಒಂದೂ ಧರ್ಮಕ್ಕೆ ಸೇರಿದ್ದೋ ಬೌದ್ಧ ಧರ್ಮಕ್ಕೆ ಸೇರಿದ್ದೋ ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟಸಾಧ್ಯವೆಂದೂ ತಿಳಿಸಿದರು.

ಬಿ. ಕೆ. ಜಿ.

ಔರಂಗಬಾದ್‌ನಲ್ಲಿ ಜರುಗಿದ ಭಾರತೀಯ ಪುರಾಭಿಲೇಖ ಪರಿಷತ್ತಿನ ಹತ್ತನೇ ಅಧಿವೇಶನದ ಸಂಕ್ಷಿಪ್ತ ವರದಿ :

ಭಾರತೀಯ ಪುರಾಭಿಲೇಖ ಪರಿಷತ್ (Epigraphical Society of India) 1974ರಲ್ಲಿ ಮೈಸೂರಿನಲ್ಲಿ ಸ್ಥಾಪಿತವಾಯಿತು. ಭಾರತದಲ್ಲಿ ಲಭ್ಯವಿರುವ ತಾಮ್ರಪತ್ರಗಳು ಶಿಲಾಶಾಸನಗಳೇ ತ್ಯಾದಿ ಪ್ರಾಚೀನ ವಸ್ತುಗಳನ್ನಾಧರಿಸಿದ ಚಾರಿತ್ರಿಕ ವಿಷಯಗಳನ್ನು ಸಾರಸ್ವತ ಲೋಕಕ್ಕೆ ಸಾದರಪಡಿಸುವುದು ಈ ಪರಿಷತ್ತಿನ ಧ್ಯೇಯವಾಗಿರುತ್ತದೆ. ಹತ್ತು ಅಧಿವೇಶನಗಳನ್ನು ಧಾರವಾಡ, ಉಡುಪಿ, ಇಂದೂರು, ಮದ್ರಾಸು, ಬೆಂಗಳೂರು, ಅಹಮದಾಬಾದ್, ಕಲಕತ್ತಾ, ಭೋಪಾಲ್, ಗೋರಖ್‌ಪುರ ಮತ್ತು ಔರಂಗಬಾದ್ ನಗರಗಳಲ್ಲಿ ಯಶಸ್ವಿಯಾಗಿ ಪೂರೈಸಿ ವಿದ್ವತ್ಪೂರ್ಣ ಲೇಖನಗಳನ್ನೊಳಗೊಂಡ "ಭಾರತೀಯ ಪುರಾಭಿಲೇಖ ಪತ್ರಿಕಾ" (Journal of the Epigraphical Society of India) ವೆಂಬ ಹತ್ತು ಸಂಪುಟಗಳನ್ನು ಈ ಪರಿಷತ್ತು ಪ್ರಕಟಿಸಿರುತ್ತದೆ. ಖ್ಯಾತಿವೆತ್ತ ವಿದ್ವನ್ಮಣಿಯೊಬ್ಬರು ಪ್ರತಿ ಅಧಿವೇಶನದ ಅಧ್ಯಕ್ಷ ಪದವಿ (General President) ಯನ್ನು ಅಲಂಕರಿಸುವುದು ಮತ್ತು ಶಾಸನಗಳ ಆಮೂಲಾಗ್ರ ಪರಿಶೋಧನೆಯಲ್ಲಿ ನಿಷ್ಣಾತರಾದ ಮಗದೊಬ್ಬರು ತಾಮ್ರಪತ್ರ ಸ್ವೀಕರಿಸುವುದರಿಂದ ಸನ್ಮಾನಿತರಾಗುವುದು ಪರಿಷತ್ತಿನ ಪ್ರತಿಯೊಂದು ಅಧಿವೇಶನದಲ್ಲಿ ಕಂಡುಬರುವ ಒಂದು ವಿಶೇಷವಾಗಿದೆ. ಡಾ|| ಬಹಾದುರ್‌ಚಂದ್ ಛಾಬ್ರಾ, ಪ್ರೊ|| ಟಿ. ವಿ. ಮಹಾಲಿಂಗಂ, ಡಾ|| ದಿನೇಶಚಂದ್ರ ಸರ್ಕಾರ್, ಶ್ರೀ ಆರ್. ಎಸ್. ಪಂಚಮುಖಿ, ಡಾ|| ಝಡ್.ಎ. ದೇಸಾಯಿ, ಡಾ|| ಕೆ.ಡಿ. ಬಾಜಪೇಯಿ, ಡಾ|| ಎಸ್. ಆರ್. ರಾವ್, ಶ್ರೀ ಕೆ.ಜಿ. ಕೃಷ್ಣನ್, ಪ್ರೊ|| ಜಗನ್ನಾಥ ಆಗರವಾಲ್ ಮತ್ತು ಶ್ರೀ ಕೆ.ವಿ. ಸೌಂದರರಾಜನ್‌ರವರು ಇದುವರೆಗೆ ಜರುಗಿದ ಪರಿಷತ್ತಿನ ಹತ್ತು ಅಧಿವೇಶನಗಳ ಸಮ್ಮೇಳನಾಧ್ಯಕ್ಷರಾಗಿ ಹಾಗೂ ಶ್ರೀ ಎನ್. ಲಕ್ಷ್ಮೀನಾರಾಯಣ ರಾವ್, ಡಾ|| ಜಿ.ಎಸ್. ಗಾಯಿ, ಪ್ರೊ|| ವಿ.ವಿ. ಮಿರಾಶಿ, ಡಾ|| ಡಿ.ಸಿ. ಸರ್ಕಾರ್, ಡಾ|| ಬಿ. ಸಿಎಚ್. ಛಾಬ್ರಾ, ಪ್ರೊ|| ಟಿ.ವಿ. ಮಹಾಲಿಂಗಂ, ಡಾ|| ಝಡ್.ಎ. ದೇಸಾಯಿ

ಮತ್ತು ಶ್ರೀ ಎಚ್.ಕೆ. ನರಸಿಂಹಸ್ವಾಮಿಯವರು ಅಧಿವೇಶನಗಳಲ್ಲಿ ಸನ್ಮಾನಿತರಾದವರಾಗಿಯೂ ಇರುತ್ತಾರೆ.

ಪ್ರಕೃತ, ಡಾ|| ಕೆ.ಡಿ. ಬಾಜಪೇಯಿಯವರು ಪರಿಷತ್ತಿನ ಅಧ್ಯಕ್ಷರಾಗಿ, ಡಾ|| ಅಜಯಮಿತ್ರ ಶಾಸ್ತ್ರಿ, ಡಾ|| ಎಸ್. ಆರ್. ರಾವ್ ಮತ್ತು ಡಾ|| ಝಡ್.ಎ. ದೇಸಾಯಿಯವರು ಉಪಾಧ್ಯಕ್ಷರುಗಳಾಗಿ ಹಾಗೂ ಡಾ|| ಶ್ರೀನಿವಾಸ ರಿತ್ತಿಯವರು ಕಾರ್ಯದರ್ಶಿ ಮತ್ತು ಕಾರ್ಯಕಾರೀ ಸಂಪಾದಕರಾಗಿಯೂ ಇರುತ್ತಾರೆ.

ಇದೇ 1984ನೇ ವರ್ಷದ ಮಾರ್ಚ್ ಮಾಹೆ 9, 10 ಮತ್ತು 1 ನೇ ದಿನಾಂಕಗಳಂದು ಪರಿಷತ್ತಿನ ಹತ್ತನೇ ಅಧಿವೇಶನವು ಮರಾಠವಾಡ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪ್ರಾಚೀನ ಭಾರತೀಯ ಸಂಸ್ಕೃತಿ ವಿಭಾಗದ ಆಶ್ರಯದಲ್ಲಿ ಇತಿಹಾಸ ಪ್ರಸಿದ್ಧವಾದ ಔರಂಗಾಬಾದ್‌ನಲ್ಲಿ ಜರುಗಿತು. ಈ ಅಧಿವೇಶನದಲ್ಲಿ ಸುಮಾರು 90ಕ್ಕೂ ಮೇಲ್ಪಟ್ಟ ಭಾರತದ ನಾನಾ ಭಾಗಗಳಿಂದ ಬಂದ ಸದಸ್ಯರು ಪಾಲ್ಗೊಂಡಿದ್ದರು.

ಮೊದಲ ದಿನ (9–3–84)ದ ಸಮಾರಂಭದ ಪ್ರಾರಂಭದಲ್ಲಿ ಇತಿಹಾಸ ವಿಭಾಗದ ಮುಖ್ಯಸ್ಥರೂ ಭಾರತೀಯ ಪುರಾಭಿಲೇಖ ಪರಿಷತ್ತಿನ ಹತ್ತನೇ ಅಧಿವೇಶನದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದವರೂ ಆದ ಡಾ|| ಟಿ. ವೆಂಕಟಪತಿಯವರು ಅಧ್ಯಕ್ಷರೇ ಮುಂತಾದ ಮುಖ್ಯಸ್ಥರನ್ನು ನೆರೆದಿದ್ದ ಸಭಿಕರಿಗೆ ಪರಿಚಯ ಮಾಡಿಕೊಟ್ಟು ಸ್ವಾಗತ ಭಾಷಣವನ್ನು ಮಾಡಿದರು. ಪರಿಷತ್ತಿನ ಅಧ್ಯಕ್ಷರಾದ ಡಾ|| ಕೆ.ಡಿ. ಬಾಜಪೇಯಿಯವರು ಉದ್ಘಾಟನಾ ಸಮಾರಂಭವನ್ನು ಮರಾಠವಾಡ ವಿಶ್ವವಿದ್ಯಾಲಯದ ಕಾರ್ಯಸೌಧವಲ್ಲಿ ನೆರವೇರಿಸಿಕೊಟ್ಟರು. ತದನಂತರ ಡಾ|| ಶ್ರೀನಿವಾಸ ರಿತ್ತಿಯವರು ಪರಿಷತ್ತಿನ ಕಾರ್ಯಚಟುವಟಿಕೆಗಳ ಬಗ್ಗೆ ವರದಿಯನ್ನು ನೀಡಿದರು, ಭಾರತೀಯ ಪುರಾತತ್ತ್ವ ಸರ್ವೇಕ್ಷಣಾಲಯದ ಶಾಸನ ಇಲಾಖೆಯ ನಿರ್ದೇಶಕರು ಹಾಗೂ ಪರಿಷತ್ತಿನ ಕಾರ್ಯಕಾರೀ ಸಮಿತಿಯ ಸದಸ್ಯರೂ ಆದ ಡಾ|| ಕೆ.ವಿ. ರಮೇಶ್ ಅವರು ತಾಮ್ರಪಟ ಪ್ರಶಸ್ತಿಯನ್ನು ಈ ಸಮಾರಂಭದಲ್ಲಿ ಪಠಿಸಿದ ನಂತರ ಪರಿಷತ್ತಿನ ಅಧಿಕೃತ ಮುದ್ರೆಯಿಂದೊಡಗೂಡಿದ ಆ ತಾಮ್ರಪತ್ರವನ್ನು ಡಾ|| ಬಾಜಪೇಯಿಯವರು ವಿಶ್ರಾಂತ ಶಾಸನಾಧಿಕಾರಿಗಳಾದ ಶ್ರೀಮಾನ್ ಎಚ್.ಕೆ. ನರಸಿಂಹಸ್ವಾಮಿಯವರಿಗೆ ನೀಡಿ ಶಾಲನ್ನು ಹೊದಿಸಿ ಸನ್ಮಾನಿಸಿದರು. ಸನ್ಮಾನಿತರು ಸಂದರ್ಭೋಚಿತವಾಗಿ ಕೆಲವು ಮಾತುಗಳನ್ನಾಡಿದರು. ಪರಿಷತ್ತಿನ ಹತ್ತನೇ ಸಂಪುಟವನ್ನು ಡಾ|| ಕೆ. ವಿ. ರಮೇಶ್‌ರವರು ಬಿಡುಗಡೆ ಮಾಡಿದರು. ಅನಂತರದಲ್ಲಿ ಕಳೆದ ಹತ್ತು ವರ್ಷಗಳಿಂದಲೂ ಸತತವಾಗಿ ಪರಿಷತ್ತಿನ ಪ್ರಶಸ್ತಿ ಪತ್ರಗಳನ್ನು ರಚಿಸಿ ಕೊಡುತ್ತಿರುವ ಶ್ರೀಮಾನ್ ಎ. ಎಸ್. ಸುಬ್ರಹ್ಮಣ್ಯನ್ (ವಿಶ್ರಾಂತ ಹಿರಿಯ ಶಾಸನ ಸಹಾಯಕರು) ಅವರನ್ನು ಈ ಸಂದರ್ಭದಲ್ಲಿ ಪರಿಷತ್ತಿನ ಪತಿಯಿಂದ ಸನ್ಮಾನಿಸಲಾಯಿತು. ಹತ್ತನೇ ಸಮ್ಮೇಳನಾಧ್ಯಕ್ಷರೂ, ಭಾರತೀಯ ಪುರಾತತ್ತ್ವ ಸರ್ವೇಕ್ಷಣಾಲಯದ ವಿಶ್ರಾಂತ ಅಧಿಕ ಮಹಾನಿರ್ದೇಶಕರೂ

ಆದ ಶ್ರೀ ಕೆ.ವಿ. ಸೌಂದರರಾಜನ್ ಅವರು ವಿದ್ವತ್ಪೂರ್ಣವಾದ ತಮ್ಮ ಅಧ್ಯಕ್ಷ ಭಾಷಣವನ್ನು ಸಾದರಪಡಿಸಿದರು. ಉದ್ಘಾಟನಾ ಸಮಾರಂಭವು ಡಾ|| ರಾನಡೆ (ಪ್ರವಾಚಕರು, ಇತಿಹಾಸ ಮತ್ತು ಪ್ರಾಚೀನ ಭಾರತೀಯ ಸಂಸ್ಕೃತಿ ವಿಭಾಗ, ಔರಂಗಾಬಾದ್) ಅವರ ವಂದನಾರ್ಪಣೆಯೊಡನೆ ಮುಕ್ತಾಯಗೊಂಡಿತು.

ಅದೇ ದಿನ ಮಧ್ಯಾಹ್ನ ವಿದ್ವಾಂಸರುಗಳ ಪ್ರಬಂಧಗಳ ಮಂಡನೆಯು ಇತಿಹಾಸ ವಿಭಾಗದ ಸಭಾಂಗಣದಲ್ಲಿ ಜರುಗಿತು. ಎರಡನೇ ದಿನದ (10-3-84) ಕಲಾಪಗಳು ಇತಿಹಾಸ ಪ್ರಸಿದ್ಧವಾದ ಎಲ್ಲೋರಾದಲ್ಲಿ ಜರುಗಿದವು. ಅಲ್ಲಿಯ ಪ್ರಖ್ಯಾತ ಗುಹೆಗಳ ಅದರಲ್ಲೂ ಕೈಲಾಸನಾಥ ಗುಹಾಲಯದ ಸಂದರ್ಶನವು ನೆರೆದಿದ್ದ ಸದಸ್ಯರ ಕಣ್ಮನಗಳಿಗೆ ರಸದೌತಣವಿತ್ತಿತು. ಇದಲ್ಲದೆ, ಅಲ್ಲಿಯ ಜೈನಾಶ್ರಮದವರು ಅಂದಿನ ಮಧ್ಯಾಹ್ನದ ಭೋಜನ ವ್ಯವಸ್ಥೆಯನ್ನು ಕೈಗೊಂಡಿದ್ದರು. ಮೂರನೇ ದಿನದ (11-3-84) ವಿಶೇಷ ಕಲಾಪವೆಂದರೆ ಇತಿಹಾಸ ಸಭಾಂಗಣದಲ್ಲಿ ನಡೆದ ಮರಾಠವಾಡಾ ಪ್ರದೇಶಕ್ಕೆ ಸೀಮಿತವಾದ ಪ್ರಬಂಧಗಳ ಮಂಡನೆ. ಇದರಲ್ಲಿ ಆ ಪ್ರದೇಶಕ್ಕೆ ಸಂಬಂಧಿಸಿದ ಪ್ರಾಚೀನ, ಮಧ್ಯಯುಗೀನ ಹಾಗೂ ಅರ್ವಾಚೀನ ಶಾಸನಗಳಿಗೆ ಸಂಬಂಧಿಸಿದ ಅನೇಕ ಹೊಸ ವಿಷಯಗಳು ಪ್ರಬಂಧ ರೂಪದಲ್ಲಿ ಬೆಳಕಿಗೆ ಬಂದವು. ಮಧ್ಯಾಹ್ನದ ಸಮಾರೋಪ ಸಮಾರಂಭದೊಡನೆ ಮೂರು ದಿನಗಳ ಕಾರ್ಯಕ್ರಮಗಳು ಮುಕ್ತಾಯವಾದವು.

ಮೂರು ದಿನಗಳ ಅವಧಿಯಲ್ಲಿ ಜರುಗಿದ ಹತ್ತನೇ ಅಧಿವೇಶನದಲ್ಲಿ ನಾಲ್ವತ್ತಕ್ಕೂ ಮೀರಿದ ವಿದ್ವತ್ಪೂರ್ಣವಾದ ಪ್ರಬಂಧಗಳು ಮಂಡಿಸಲ್ಪಟ್ಟವು. ಡಾ| ಕೆ.ವಿ. ರಮೇಶ್, ಶ್ರೀ ಆರ್. ತಿರುಮಲೈ, ಡಾ| ಎಸ್.ಸಿ. ಬೆಹ್ರಾ, ಡಾ| ಆರ್.ಎಸ್. ಸೈನಿ, ಡಾ| ಬಿ.ಕೆ. ಕೌಲ್ ದೆಯೊಂಬಿ, ಡಾ| ಶ್ರೀಮತಿ ಶೋಭ ನಾಗೋಯಿಲೇ ಮತ್ತು ಶ್ರೀ ಎನ್. ಸೇತುರಾಮನ್ ಮುಂತಾದ ವಿದ್ವಾಂಸರು ಚರ್ಚೆಗಳಲ್ಲಿ ಪಾಲ್ಗೊಂಡು ತಮ್ಮ ಸಲಹೆ-ಸಹಕಾರಗಳನ್ನು ತೋರುವುದರ ಮೂಲಕ ಅಧಿವೇಶನವನ್ನು ಯಶಸ್ವಿಗೊಳಿಸಿದರು.

ವೆಂಕಟೇಶ

ಬದಲಾಗದ ಕಾಡುಗೊಲ್ಲ ಜನಾಂಗ

ಆಧಾರಿತ : ದಿ ಹಿಂದೂ, ಶುಕ್ರವಾರ, 9-3-1984

ಗೊಲ್ಲರಹಟ್ಟಿಯು ಬಳ್ಳಾರಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿಗೆ ಸೇರಿದ ಒಂದು ಚಿಕ್ಕಹಳ್ಳಿ. ಈ ಹಳ್ಳಿಯಲ್ಲಿ ಸುಮಾರು 500 ಜನ ಕಾಡುಗೊಲ್ಲರು ವಾಸಿಸುತ್ತಿದ್ದಾರೆ. ಈ ಗೊಲ್ಲರ ಹಟ್ಟಿಯು ರಾಮದುರ್ಗ ಪಟ್ಟಣದಿಂದ ಎರಡು ಮೈಲಿ ದೂರದಲ್ಲಿದೆ. ಈ ಹಳ್ಳಿಯಲ್ಲಿ ಗೊಲ್ಲರೇ ವಾಸವಾಗಿರುವುದರಿಂದ ಇದಕ್ಕೆ ಗೊಲ್ಲರ ಹಟ್ಟಿ ಎಂದು ಹೆಸರು

ಬಂದಿದೆ. ಆಧುನಿಕ ಬೆಳವಣಿಗೆಯಿಂದಾಗಿ ಎಲ್ಲಾ ಸಮಾಜಗಳು ಬದಲಾವಣೆಯನ್ನು ಹೊಂದುತ್ತ ಮುಂದುವರಿಸರೆ ಈ ಕಾಡುಗೊಲ್ಲರ ಸಮಾಜವು ಯಾವ ರೀತಿಯ ಬದಲಾವಣೆಯನ್ನು ಕಾಣದೆ ಹಳೆಯ ಸಂಸ್ಕೃತಿಯನ್ನು ಉಳಿಸಿಕೊಂಡು ಅನಾಗರಿಕ ಜೀವನವನ್ನು ಮುಂದುವರಿಸಿಕೊಂಡು ಬರುತ್ತಿದೆ. ಈ ಕಾಡುಗೊಲ್ಲರ ಮುಖ್ಯ ಕಸಬು ಪಶು ಪಾಲನೆ ಮತ್ತು ಇತರ ವೃತ್ತಿಗಳು ತೋಟಗಾರಿಕೆ, ವ್ಯವಸಾಯ ಮತ್ತು ಕಂಬಳಿ ನೇಯುವುದು ಆಗಿವೆ. ಇವರು ತೋಟಗಾರಿಕೆಗೆ ಮತ್ತು ವ್ಯವಸಾಯಕ್ಕೆ ಮಳೆಯನ್ನೇ ನಂಬಿದ್ದಾರೆ, ಹೆಚ್ಚಾಗಿ ಖುಷ್ಕಿ ಜಮೀನನ್ನು ಹೊಂದಿರುತ್ತಾರೆ. ಇವರು ಬೆಳೆಯುವ ಮುಖ್ಯ ಬೆಳೆಗಳು ರಾಗಿ, ನವಣೆ, ಹುರುಳಿ, ಜೋಳ ಮುಂತಾದವುಗಳು. ಆಹಾರಕ್ಕಾಗಿ ಜೋಳ, ರಾಗಿ, ನವಣೆ ಮತ್ತು ಅಕ್ಕಿಯನ್ನು ಬಳಸುತ್ತಾರೆ. ಅಕ್ಕಿಯನ್ನು ರಾಮದುರ್ಗ ಮಾರುಕಟ್ಟೆಯಿಂದ ಕೊಂಡು ತರುತ್ತಾರೆ. ಉಳಿದವುಗಳನ್ನು ತಾವೇ ಬೆಳೆದು ಕೊಳ್ಳುತ್ತಾರೆ. ಈ ಕಾಡುಗೊಲ್ಲರು ಶಾರೀರಿಕವಾಗಿ ದೃಢಕಾಯರಾಗಿರುತ್ತಾರೆ. ಸುಮಾರು ಐದು ಅಡಿಯಿಂದ ಐದು ಅಡಿ ಐದು ಅಥವ ಏಳು ಅಂಗುಲ ಎತ್ತರವಾಗಿರುತ್ತಾರೆ. ದುಡಿಯುವುದಕ್ಕೆ ಯೋಗ್ಯವಾದ ಶರೀರವನ್ನು ಹೊಂದಿರುತ್ತಾರೆ. ಹೆಂಗಸರು ಸೀರೆ, ಕುಪ್ಪಸ ಮತ್ತು ಬಳೆಗಳನ್ನು ತೊಡುತ್ತಾರೆ ; ಹಣೆಗೆ ಕುಂಕುಮ ಹಚ್ಚುತ್ತಾರೆ. ಗಂಡಸರು ಶರಟು, ಪಂಚೆ, ಚಡ್ಡಿ, ವಲ್ಲಿಯನ್ನು ತೊಡುತ್ತಾರೆ.

ಈ ಕಾಡು ಗೊಲ್ಲ ಜನಾಂಗವು ಸಂಪ್ರದಾಯದಲ್ಲಿ ಮತ್ತು ಧರ್ಮದಲ್ಲಿ ನಂಬಿಕೆ ಉಳಿಸಿಕೊಂಡು ಬಂದಿದೆ. ಇವರಿಗೆ ಹಳ್ಳಿಯೇ ಒಂದು ಧಾರ್ಮಿಕ ಸ್ಥಳ ಮತ್ತು ಹಳ್ಳಿ ಇವರಿಗೆ ದೇವಸ್ಥಾನವಿದ್ದಂತೆ. ಚಪ್ಪಲಿ ತೊಡುವುದನ್ನು ಧಾರ್ಮಿಕವಾಗಿ ಬಹಿಷ್ಕರಿಸಲಾಗಿದೆ. ಈ ಪದ್ಧತಿಯನ್ನು ಬಹಳ ಕಾಲದಿಂದಲೂ ಆಚರಣೆಯಲ್ಲಿ ತರಲಾಗಿದೆ. ಈ ಹಳ್ಳಿಗೆ ಯಾರಾದರೂ ಬಂದರೆ ಚಪ್ಪಲಿಗಳನ್ನು ಊರ ಹೊರಗಡೆ ಬಿಟ್ಟು ಬರಬೇಕು. ಊರ ಹೊರಭಾಗದಲ್ಲಿ ಆ ಪದ್ಧತಿಗೆ ಸಂಬಂಧಿಸಿದಂತೆ ಒಂದು ನಾಮಫಲಕವನ್ನು ತೂಗು ಹಾಕಲಾಗಿದೆ. ಇದರಲ್ಲಿ ಈ ರೀತಿ ಬರೆಯಲಾಗಿದೆ. “ಚಪ್ಪಲಿ ಹಾಕಿಕೊಂಡು ಊರು ಪ್ರವೇಶಿಸುವುದನ್ನು ನಿಷೇಧಿಸಲಾಗಿದೆ. ಉಲ್ಲಂಘಿಸಿದವರನ್ನು ಶಿಕ್ಷಿಸಲಾಗುವುದು”. ಈ ರೀತಿಯ ಆಚರಣೆಗಳಿಗೆ ಇವರಲ್ಲಿ ಇರುವ ನಂಬಿಕೆಯೇ ಕಾರಣ.

ಈ ಹಳ್ಳಿಯ ಮಕ್ಕಳ ವಿದ್ಯಾಭ್ಯಾಸಕ್ಕೆ ಒಂದು ಸಾರ್ವಜನಿಕ ಪ್ರಾಥಮಿಕ ಪಾಠಶಾಲೆಯಿದೆ. ಈ ಪಾಠಶಾಲೆಗೆ ಒಬ್ಬನೇ ಉಪಾಧ್ಯಾಯ, 1 ರಿಂದ 4ನೇ ತರಗತಿಯವರೆಗೆ ಪಾಠ ಪ್ರವಚನಗಳು ನಡೆಯುತ್ತವೆ. ಈ ಶಾಲೆಯಲ್ಲಿ ಓದುತ್ತಿರುವ ಗೊಲ್ಲರ ಮಕ್ಕಳ ಸಂಖ್ಯೆ ಕೇವಲ ಎಂಟು ಮಾತ್ರ. ಐದು ವರ್ಷಕ್ಕೆ ಮೇಲ್ಪಟ್ಟು ಹತ್ತು ವರ್ಷಕ್ಕೆ ಕೆಳಪಟ್ಟು ಮಕ್ಕಳ ಸಂಖ್ಯೆ ಬಹಳವಿದ್ದರೂ ಶಾಲೆಗೆ ಬರುವುದಿಲ್ಲ. ಮಕ್ಕಳ ತಂದೆತಾಯಿಗಳು ಅವರ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಿಲ್ಲ. ಇದಕ್ಕೆ ಅವರಲ್ಲಿರುವ ಸಾಂಪ್ರದಾಯಿಕ ನಂಬಿಕೆ ಮತ್ತು ನಾಗರಿಕ ಜನರನ್ನು ಕಂಡರೆ ಅವರಲ್ಲಿ ಉಂಟಾಗುವ ಹೆದರಿಕೆಯೇ ಕಾರಣ. ಇವರು ಮಧ್ಯಪಾನವನ್ನು ನಿಷೇಧಿಸಿದ್ದಾರೆ. ಅತಿಯಾಗಿ

ಮಾಂಸಹಾರವನ್ನು ಸೇವಿಸುವುದಿಲ್ಲ. ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಸೇವಿಸುತ್ತಾರೆ. ಈ ರೀತಿಯ ಅಭ್ಯಾಸ ಇವರಲ್ಲಿ ಬೆಳೆದು ಬರಲು ಇವರಲ್ಲಿರುವ ಭೂತಾರಾಧನೆ ಮತ್ತು ಧಾರ್ಮಿಕ ನಂಬಿಕೆಗಳೇ ಕಾರಣ.

ಇವರು ಪ್ರಾಚೀನ ಕಾಲದಿಂದಲೂ ಉಳಿಸಿಕೊಂಡು ಬಂದಿರುವ ಒಂದು ಅಚಲವಾದ ನಂಬಿಕೆ ಎಂದರೆ ಕೆಲವು ಬಾರಿ ವಿಚಿತ್ರ ರೀತಿಯಲ್ಲಿ ವರ್ತಿಸುವುದರಿಂದ ಒಳ್ಳೆಯ ಆರೋಗ್ಯ ದೊರೆಯುತ್ತದೆ. ಚಿತ್ರ ವರ್ತನೆಗಳನ್ನು ಕೆಲವು ವಿಶೇಷ ಸಂದರ್ಭಗಳಲ್ಲಿ ಪ್ರದರ್ಶಿಸುತ್ತಾರೆ. ವರ್ಷದಲ್ಲಿ ಒಂದು ಬಾರಿ ಊರಿಂದ ಬಹಳ ದೂರ ಕಾಡಿಗೆ ಹೋಗಿ ಅಲ್ಲಿಯೇ ಹಲವು ದಿನಗಳು ನೆಲೆಸುವುದು ಇವರಿಗೆ ಒಂದು ವಿಶೇಷ ಸಂದರ್ಭ. ಈ ಸಂದರ್ಭದಲ್ಲಿ ಕುರಿ ಮಾಂಸದ ಊಟ ಮಾಡಿ ಅವರಿಗೆ ಇಷ್ಟವಿದ್ದವರ ಜೊತೆಗೆ ಮಲಗುವುದರಿಂದ ತಮ್ಮ ವಿಚಿತ್ರ ವರ್ತನೆಯನ್ನು ಪ್ರದರ್ಶಿಸುತ್ತಾರೆ. ಈ ಸಂದರ್ಭದಲ್ಲಿ ಕೋಳಿ ಮತ್ತು ಮೀನಿನ ಮಾಂಸ ನಿಷಿದ್ಧ.

ಆಧುನಿಕ ಸಮಾಜದ ವರ್ತಕರು ಈ ಕಾಡು ಗೊಲ್ಲರಿಗೆ ಮೋಸಮಾಡುತ್ತಿದ್ದಾರೆ. ಈ ಗೊಲ್ಲರಿಗೆ ಸೇರಿದ 150 ಎಕರೆ ತೋಟಗಳಿವೆ. ಇದರಿಂದ ಬಂದ ಬೆಳೆಗಳನ್ನು ಈ ವರ್ತಕರು ಕಡಿಮೆ ಬೆಲೆ ಕೊಟ್ಟು ಕೊಂಡು ಹೆಚ್ಚು ಲಾಭ ಗಳಿಸುತ್ತಾರೆ. ಇದು ಇವರಲ್ಲಿ ಬೆಳೆಯುತ್ತಿರುವ ಅನಕ್ಷರತೆ ಮತ್ತು ನಾಗರಿಕತೆ ಬೆಳೆಯದೆ ಇರುವುದರಿಂದ ಈ ಜನಾಂಗ ಈಗಾಗಲೇ ಈ ರೀತಿ ವಂಚನೆಗೆ ಗುರಿಯಾಗುತ್ತಿದ್ದಾರೆ.

ಬಾಲ್ಯ ವಿವಾಹ ಈ ಕಾಡು ಗೊಲ್ಲ ಸಮಾಜದಲ್ಲಿ ಬಹಳ ಕಾಲದಿಂದಲೂ ರೂಢಿಯಲ್ಲಿದೆ. ಹನ್ನೆರಡು ವರ್ಷ ತುಂಬಿದ ಹುಡುಗ ಮತ್ತು ಹುಡುಗಿಗೆ ಮದುವೆ ಮಾಡುತ್ತಾರೆ. ಇವರಲ್ಲಿ ವಧು ಶುಲ್ಕ ಜಾರಿಯಲ್ಲಿದೆ.

ವಧು ಶುಲ್ಕಕ್ಕಾಗಿ ಕುರಿಗಳನ್ನು ಬಳಸುತ್ತಾರೆ. ಅವರ ಆರ್ಥಿಕ ಮಟ್ಟಕ್ಕೆ ತಕ್ಕಂತೆ ಕುರಿಗಳನ್ನು ಗಂಡಿನ ಕಡೆಯವರು ಹೆಣ್ಣಿನ ಕಡೆಯವರಿಗೆ ಕೊಡುತ್ತಾರೆ. ಬಡವರಾದರೆ ಕೊನೆಪಕ್ಷ ಒಂದು ಕುರಿಯನ್ನಾದರೂ ಕೊಡಬೇಕು. ಮದುವೆ ಬಹಳ ಸರಳವಾಗಿರುತ್ತದೆ. ಈ ಸಂದರ್ಭದಲ್ಲಿ ವಿಶೇಷ ಊಟದ ವ್ಯವಸ್ಥೆ ಇರುತ್ತದೆ. ಮದುವೆ ಮುಗಿದ ನಂತರ ನೂತನ ವಧೂವರರು ಮಧುಚಂದ್ರಕ್ಕಾಗಿ ಊರ ಹೊರಗಡೆ ನಿರ್ಮಿಸಿರುವ ಹೊಸ ಗುಡಿಸಿಲಿಗೆ ಹೋಗಿ ಮೂರು ದಿನ ನೆಲಸಬೇಕು ; 4ನೇ ದಿನ ಊರ ಹಿರಿಯರು ಹೋಗಿ ಅವರುಗಳನ್ನು ಕರೆತಂದು ಸ್ನಾನ ಮಾಡಿಸಿ ಮನೆ ದೇವರಿಗೆ ಪೂಜೆ ಸಲ್ಲಿಸಿ ಮನೆಗೆ ಸೇರಿಸುತ್ತಾರೆ. ಪಿತೃಪ್ರಧಾನ ಕುಟುಂಬ ಪದ್ಧತಿ ಆಚರಣೆಯಲ್ಲಿದೆ. ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳು ಕಂಡುಬರುತ್ತವೆ.

ಬಾಣಂತಿಗೆ ಸಂಬಂಧಿಸಿದ ಕೆಲವು ಕಟ್ಟುಪಾಡುಗಳನ್ನು ನಾವು ಈ ಜನಾಂಗದಲ್ಲಿ ಕಾಣಬಹುದು. ಹೆರಿಗೆಯಾದ ನಂತರ ಮಗು ಮತ್ತು ತಾಯಿಯನ್ನು ಊರ ಹೊರಗಿನ ಗುಡಿಸಿಲಿನಲ್ಲಿ ಇರಿಸುತ್ತಾರೆ. ಅವರ ಸಹಾಯಕ್ಕಾಗಿ ಒಬ್ಬ ಹೆಂಗಸನ್ನು ನೇಮಿಸುತ್ತಾರೆ.

ಹೆಚ್ಚಾಗಿ ಆಕೆಯ ತಾಯಿಯನ್ನು ನೇಮಿಸುತ್ತಾರೆ. ತಾಯಿ ಇಲ್ಲದಿದ್ದರೆ ಇತರ ಸಂಬಂಧಿಕರನ್ನು ನೇಮಿಸುತ್ತಾರೆ. ಆ ಗುಡಿಸಿಲಲ್ಲಿ ಹದಿನೈದು ದಿನಗಳು ವಾಸವಾಗಿರಬೇಕು. ಪ್ರತಿದಿವಸ ಅವರಿಗೆ ಊಟ ಊರಿಂದ ಸರಬರಾಜಾಗುತ್ತದೆ. ಹದಿನೈದು ದಿನಗಳು ಕಳೆಯುವ ತನಕ ಆಕೆಯನ್ನಾಗಲಿ ಅಥವ ಮಗುವನ್ನಾಗಲಿ ಯಾರೂ ಮುಟ್ಟುವಂತಿಲ್ಲ. ಈ ಅವಧಿಯಲ್ಲಿ ಮಗುವನ್ನು ಮುಟ್ಟುವುದರಿಂದ ಏನಾದರು ರೋಗ ತಗಲಬಹುದೆಂಬ ನಂಬಿಕೆ ಇದೆ. ಈ ಹದಿನೈದು ದಿನಗಳ ಕಾಲಾವಧಿಯನ್ನು ಸೂತಕ ದಿನಗಳೆಂದೇ ಭಾವಿಸುತ್ತಾರೆ. 16ನೇ ದಿನ ತಾಯಿ ಮತ್ತು ಮಗುವನ್ನು ಊರಿಗೆ ಕರೆದುಕೊಂಡು ಬಂದು ಸ್ನಾನ ಮಾಡಿಸಿ ಮನೆ ದೇವರಿಗೆ ವಿಶೇಷ ಪೂಜೆ ಸಲ್ಲಿಸುವುದರಿಂದ ಸೂತಕ ಕಳೆಯಿತು ಎಂದು ನಂಬುತ್ತಾರೆ. ಇದಾದನಂತರವೂ ಮಗು ಮತ್ತು ತಾಯಿ ಮೂರು ತಿಂಗಳುಗಳು ಒಂದು ಪ್ರತ್ಯೇಕ ಗುಡಿಸಿಲಿನಲ್ಲಿ ವಾಸವಾಗಿರಬೇಕು. ಈ ಸಂದರ್ಭದಲ್ಲಿ ಆಕೆಯ ತಾಯಿ ಅಥವ ಸಂಬಂಧಿಕರು ಅಲ್ಲಿರುತ್ತಾರೆ. ಈ ಅವಧಿಯಲ್ಲಿ ಮಗು ಮರಣ ಹೊಂದಿದರೆ ಅದನ್ನು ತಾಯಿಯೇ ಹೂಳಬೇಕು ಮತ್ತು ಅದನ್ನು ಬೇರಾರೂ ಮುಟ್ಟುವಂತಿಲ್ಲ. ವಿಧವಾ ವಿವಾಹ ಇವರಲ್ಲಿ ಕಂಡುಬರುತ್ತದೆ. ವಿಧವೆಯರಿಗೆ ಯಾವ ನಿಬಂಧನೆಗಳು ಇಲ್ಲ. ಅವರು ಇತರ ಹೆಂಗಸರುಗಳಂತೆ ಕುಂಕುಮ, ಬಳೆ ಮತ್ತು ಬಣ್ಣದ ಬಟ್ಟೆಗಳನ್ನು ತೊಡಬಹುದು. ಗಂಡನ ವಿರುದ್ಧ ಅಸಭ್ಯ ವರ್ತನೆಯನ್ನು ತೋರಿದ ಹೆಂಗಸನ್ನು ಸಮಾಜವು ಬಹಿಷ್ಕರಿಸುತ್ತದೆ ಮತ್ತು ಶಿಕ್ಷೆಯನ್ನು ನೀಡುತ್ತದೆ.

ಈ ಕಾಡು ಗೊಲ್ಲ ಸಮಾಜವು ಮನುಷ್ಯನ ಮೈಮೇಲೆ ದೆವ್ವ, ಭೂತ ಮತ್ತು ದೇವರು ಬರುತ್ತವೆ ಎಂದು ನಂಬಿದೆ. ಇದನ್ನು ಗುರುತಿಸುವ ಬಗೆ ಎಂದರೆ, ಹೆಂಗಸು ತಾಮ್ರದ ಕಡಗವನ್ನು ಎಡಗೈಯಲ್ಲಿ ತೊಟ್ಟು ಕೂದಲನ್ನು ಚದುರಿಕೊಂಡು ಆರ್ಭಟಿಸಿದಾಗ, ಗಂಡಸರು ಕಂಬಳಿಯನ್ನು ನೇಯುವಾಗ, ಉಣ್ಣೆಯ ಗೊಂಚಲನ್ನು ಹಿಡಿದು ಆರ್ಭಟಿಸಿದಾಗ ದೇವರು, ದೆವ್ವ, ಅಥವ ಭೂತ ಬಂದಿದೆ ಎಂದು ನಂಬುತ್ತಾರೆ. ದೇವರಾದರೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ದೆವ್ವ ಅಥವ ಭೂತವಾದರೆ ಅವುಗಳ ಇಷ್ಟಾರ್ಥಗಳನ್ನು ಪೂರ್ತಿ ಮಾಡುವುದರಿಂದ ಹೋಗುತ್ತದೆಂದು ನಂಬುತ್ತಾರೆ.

ಈ ಗೊಲ್ಲರ ಹಟ್ಟಿಯ ಮಧ್ಯಭಾಗದಲ್ಲಿ ಎರಡು ದೇವಸ್ಥಾನಗಳಿವೆ. ಇವುಗಳಲ್ಲಿ ಚಿಣ್ಣಯ್ಯ ಮತ್ತು ಕರಿಯಯ್ಯ ಎಂಬ ದೇವರುಗಳಿವೆ ಮತ್ತು ಒಂದು ಮಾರಮ್ಮನ ಗುಡಿ ಇದೆ. ಇದು ದೇವಸ್ಥಾನದ ಆಕಾರದಲ್ಲಿ ಒಂದು ಬೇವಿನ ಮರದ ಕೆಳಗಿದೆ. ಮಾರಮ್ಮನಿಗೆ ಕುರಿ ಬಲಿ ಕೊಡುವುದು ರೂಢಿಯಲ್ಲಿದೆ. ಚಿಣ್ಣಯ್ಯ ಮತ್ತು ಕರಿಯಯ್ಯ ದೇವರುಗಳಿಗೆ ಪ್ರತಿದಿನ ಮತ್ತು ವಿಶೇಷ ದಿನಗಳಲ್ಲಿ ಪೂಜೆ ಸಲ್ಲಿಸುತ್ತಾರೆ.

ಈ ಜನಾಂಗದವರು ಇಟ್ಟುಕೊಳ್ಳುವ ಹೆಸರುಗಳು ಈ ರೀತಿ ಇರುತ್ತವೆ. ಗಂಡು ಮಕ್ಕಳಿಗೆ ನಾಗಪ್ಪ, ದೊಡ್ಡಪ್ಪ, ಕುಂಟಪ್ಪ, ಸಣ್ಣಪ್ಪ ಮುಂತಾದವುಗಳಿರುತ್ತವೆ. ಹೆಣ್ಣು ಮಕ್ಕಳಿಗೆ ನಾಗಮ್ಮ, ಸಣ್ಣಮ್ಮ, ಚಿಣ್ಣಮ್ಮ, ಕರಿಯಮ್ಮ ಎಂದೆಲ್ಲ ಇರುತ್ತವೆ. ಕೆಲವು ಬಾರಿ

ಅವರ ಶರೀರಕ್ಕೆ ಸಂಬಂಧಿಸಿದಂತೆ ಹೆಸರಿಸುತ್ತಾರೆ. ಉದಾ : ಹುಡುಗ ಸಣ್ಣವನಾಗಿದ್ದರೆ ಸಣ್ಣಪ್ಪ ಎಂದು ಕುಂಟನಾಗಿದ್ದರೆ ಕುಂಟಯ್ಯ ಎಂದೆಲ್ಲ ಇರುತ್ತವೆ.

ಈ ಗೊಲ್ಲರ ಹಟ್ಟಿಗೆ ರಾಮದುರ್ಗ ತಾಲ್ಲೂಕು ಅಭಿವೃದ್ಧಿ ಮಂಡಲಿಯಿಂದ ಹತ್ತು ಜನತಾ ಮನೆಗಳನ್ನು ನಿರ್ಮಿಸಿ ಕೊಡಲಾಗಿದೆ. ಆದರೆ ಯಾರೂ ಈ ಮನೆಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡು ವಾಸಿಸುತ್ತಿಲ್ಲ. ಇದಕ್ಕೆ ಕಾರಣ ಇವರು ಪ್ರಾಚೀನ ಕಾಲದಿಂದಲೂ ಗುಡಿಸಲುಗಳಲ್ಲಿ ವಾಸವಾಗಿರುವುದು, ಗುಡಿಸಲುಗಳು ಸಾಂಪ್ರದಾಯಿಕವಾಗಿ ಬಂದಿರುವುದರಿಂದ ಮತ್ತು ಕಟ್ಟಿಸಿ ಕೊಟ್ಟಿರುವ ಮನೆಗಳು ಮುರಿದು ಬೀಳಬಹುದೆಂಬ ನಂಬಿಕೆ ಈ ಜನಾಂಗದವರಲ್ಲಿರುವುದರಿಂದ ವಾಸವಾಗಿಲ್ಲ. ಕುಡಿಯುವ ನೀರಿಗಾಗಿ ಒಂದು ಕೊಳವೆ ಬಾವಿಯನ್ನು ಹಾಕಿಸಲಾಗಿತ್ತು. ಆದರೆ ಅದು ಕೆಟ್ಟಿದೆ. ಕುಡಿಯುವ ನೀರಿಗಾಗಿ ಈ ಜನಗಳು ಊರ ಹೊರಗೆ ಒಂದು ಮೈಲಿ ದೂರದಲ್ಲಿರುವ ಭಾವಿಯನ್ನು ಅವಲಂಬಿಸಿದ್ದಾರೆ. ಇವರಿಗೆ ಆರೋಗ್ಯ ಕೇಂದ್ರವಿಲ್ಲ. ಇವರುಗಳ ಆರೋಗ್ಯಕ್ಕಾಗಿ ರಾಮದುರ್ಗ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಅವಲಂಬಿಸಿದ್ದಾರೆ. ಇದರ ಉಪಯೋಗವನ್ನು ಸಹ ಸರಿಯಾಗಿ ಪಡೆದುಕೊಳ್ಳುತ್ತಿಲ್ಲ. ಕುಟುಂಬ ಯೋಜನೆಯ ಪ್ರಾಮುಖ್ಯತೆ ಇವರುಗಳಿಗೆ ತಿಳಿದಿಲ್ಲ. ಇದರ ಪ್ರಯೋಜನವನ್ನು ಯಾರೂ ಪಡೆದಿಲ್ಲ. ಇವರಲ್ಲಿ ಅವರದೇ ಆದ ಒಂದು ನ್ಯಾಯಪಂಚಾಯಿತಿ ಇದೆ. ಈ ಹಳ್ಳಿಯ ಹಿರಿಯ ಇದರ ಮುಖ್ಯಸ್ಥ ; ಇವನ ತೀರ್ಮಾನವೇ ಅಂತಿಮ ತೀರ್ಮಾನ.

ಈ ಗೊಲ್ಲರ ಹಟ್ಟಿಯು ರಾಮದುರ್ಗ ಪಟ್ಟಣಕ್ಕೆ ಸಮೀಪವಾಗಿದ್ದರೂ ಆಗಾಗ್ಗೆ ಆಧುನಿಕ ಜನಗಳ ಸಂಪರ್ಕವಾದರೂ, ದಿನನಿತ್ಯ ಬೆಳೆಯುತ್ತಿರುವ ಆಧುನಿಕತೆ, ತಾಂತ್ರಿಕತೆ ಇವುಗಳಾವುವೂ ಈ ಕಾಡುಗೊಲ್ಲ ಜನಾಂಗವನ್ನು ಒದಲು ಮಾಡುವುದರಲ್ಲಿ ಯಶಸ್ಸು ಕಂಡಿಲ್ಲ. ಇದಕ್ಕೆಲ್ಲ ಕಾರಣ ಈ ಜನಾಂಗದಲ್ಲಿ ಬೇರೂರಿರುವ ಸಾಂಪ್ರದಾಯಿಕತೆ ಮತ್ತು ಧಾರ್ಮಿಕ ನಂಬಿಕೆಯೇ ಕಾರಣ. ಇದರಿಂದಾಗಿ ಬದಲಾಗುತ್ತಿರುವ ಸಮಾಜದಲ್ಲಿ ಬದಲಾವಣೆಯನ್ನು ಕಾಣದೆ, ಪ್ರಾಚೀನ ಕಾಲದಿಂದಲೂ ಮುಂದುವರಿಸಿಕೊಂಡು ಬಂದ ಬಹಳಷ್ಟು ಹಿಂದುಳಿದ ಜೀವನವನ್ನು ನಡೆಸಿಕೊಂಡು ಬರುತ್ತಿದೆ.

ಎನ್. ಲಿಂಗಯ್ಯ

ಪುಸ್ತಕ ವಿಮರ್ಶೆ

ಪ್ಲೇಟೋನ ಆದರ್ಶ ರಾಜ್ಯ
ಲೇ : ಟಿ. ಮಲ್ಲಪ್ಪ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ; 1983
ಬೆಲೆ : 50 ಪೈಸೆ

ವಿಶ್ವದ ಸಾಂಸ್ಕೃತಿಕ ಇಸಹಾಸದಲ್ಲಿ ಪ್ಲೇಟೋವಿಗೆ ಒಂದು ಗಣ್ಯವಾದ ಸ್ಥಾನವಿದೆ. ಅವನು ರಾಜ್ಯಶಾಸ್ತ್ರ ಮತ್ತು ತತ್ವಶಾಸ್ತ್ರಗಳಲ್ಲಿ ಪ್ರತಿಪಾದಿಸಿದ ವಿಷಯಗಳನ್ನು ಕುರಿತು ನೂರಾರು ಗ್ರಂಥಗಳು ವಿಮರ್ಶಾರೂಪದಲ್ಲಿ ಹೊರಬಂದಿವೆ. ಆದರೂ ನಿತ್ಯ ನೂತನವಾಧ ಆ ವಿಷಯಗಳನ್ನು ಅಭ್ಯಾಸ ಮಾಡುವ ಹಂಬಲ ಮಾತ್ರ ನಿಂತಿಲ್ಲ. ಈ ಪ್ರಸ್ತುತ ಪುಸ್ತಿಕೆ ಆದರ್ಶ ರಾಜ್ಯದ ವಿಷಯದಲ್ಲಿ ಪ್ಲೇಟೋವಿನ ಸೂತ್ರಗಳನ್ನು ಸಾಮಾನ್ಯ ಜನರಿಗೆ ಪರಿಚಯ ಮಾಡಿಕೊಡುವ ಪ್ರಯತ್ನ ನಡೆಸಿದೆ. ಅರವತ್ತೆಂಟು ಪುಟಗಳ ಈ ಪುಟ್ಟ ಪುಸ್ತಕದಲ್ಲಿ ಲೇಖಕರು ಪ್ಲೇಟೋವಿನ ಪರಿಚಯದಿಂದ ಆರಂಭವಾಗಿ, ಅಕಾಡೆಮಿಗಳ ಸ್ಥಾಪನೆ ಸಮಾಜದ ವರ್ಗೀಕರಣ, ಶಿಕ್ಷಣ ವ್ಯವಸ್ಥೆ, ಸಮಾಜ ಕಲ್ಯಾಣ, ಆಳುವವರ ಯೋಗ್ಯತೆ, ಮುಖಂಡರ ಆಯ್ಕೆ ಮುಂತಾದ ಅನೇಕ ವಿಚಾರಗಳನ್ನು ಕಲೆ ಹಾಕಿದ್ದಾರೆ. "ಆರ್ಥಿಕ ವಿಷಮತೆ ಎಂಬುದು ಸಮಾಜದ ಪಿಡುಗು, ಶೋಷಣೆಯ ಮೂಲ. ಸಂಪತ್ತು ಕೇವಲ ಕೆಲವೇ ಜನರ ಕೈಯಲ್ಲಿ ಕೇಂದ್ರಿಕೃತವಾಗಿರಕೂಡದು, ಶ್ರೀಮಂತ ಬಡವರ ಮಧ್ಯೆ ಸಂಪತ್ತಿನ ಸಮಾನ ಹಂಚಿಕೆಯಾಗದ ಹೊರತು ಅಸಂತೋಷ, ಅತೃಪ್ತಿ ತಪ್ಪಿದ್ದಲ್ಲ". ಇಂತಹ ಮಾತುಗಳು ಇಂದಿಗೂ ಸತ್ಯವಾಗಿವೆ. ಅಧಿಕಾರ ಚಲಾಯಿಸುವವರು ಸಮರ್ಥರಾಗಿರಬೇಕು. ಅಸಮರ್ಥರು ಅಧಿಕಾರಕ್ಕೆ ಬಂದರೆ ಸಮಾಜಕ್ಕೆ ಕೇಡು ; ಜನಜೀವನ ದುರ್ಭರ ; ಅಧಿಕಾರ ಬೇಗ ದುರುಪಯೋಗವಾಗುತ್ತದೆ. ಹಾಗಾದಾಗಲೆಲ್ಲ ವ್ಯಕ್ತಿ ಸ್ವಾತಂತ್ರಹರಣವಾಗುವುದು. ಇದು ಆಳುವವರನ್ನು ಕುರಿತು ಪ್ಲೇಟೋವಿನ ಎಚ್ಚರಿಕೆಯ ಮಾತುಗಳು. ಪ್ಲೇಟೋ ಪ್ರಕಾರ ರಾಜ್ಯಭಾರ ಒಂದು ಕಲೆ. ಆದುದರಿಂದ ರಾಜ್ಯದ ಆಡಳಿತ ನಿರ್ವಹಿಸುವ ರಾಜ್ಯಭಾರ ಕ್ರಮಕ್ಕೆ ಯಾವ ತಾಂತ್ರಿಕ ನೈಪುಣ್ಯ ತರಬೇತು ಅಥವಾ ಪರಿಶ್ರಮ ಬೇಡವೆಂದರೆ ಹೇಗೆ ? ಹಾಸ್ಯಾಸ್ಪದವಲ್ಲವೇ ? ಎಂದು ಪ್ಲೇಟೋ ಪ್ರಶ್ನಿಸುತ್ತಾನೆ. ಈ ರೀತಿ ರಾಜರ್ಷಿಗಳೇ ಆಡಳಿತಗಾರರಾಗಬೇಕೆನ್ನುವುದು ಪ್ಲೇಟೋವಿನ ಅಭಿಪ್ರಾಯ., ಈ ಎಲ್ಲ ಅಭಿಪ್ರಾಯಗಳೂ ಕೇವಲ ಆದರ್ಶಗಳು ; ಅವು ವಾಸ್ತವ ಪ್ರಪಂಚಕ್ಕಲ್ಲ ಎನ್ನುವ ವಿಮರ್ಶಕರೂ ಇದ್ದಾರೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹೊಸ ಚಿಂತನ ಶಕ್ತಿ ಇಲ್ಲಿ ಅಡಗಿದೆ. ಆದೇ ಪ್ಲೇಟೋವಿನ

ಮುಖ್ಯ ಕೊಡುಗೆ. ಶ್ರೀ ಮಲ್ಲಪ್ಪನವರು ಬಹು ಸುಂದರವಾಗಿ, ಸರಳವಾಗಿ ಈ ಎಲ್ಲ ವಿಷಯಗಳನ್ನೂ ಚೆನ್ನಾಗಿ ಪರಿಚಯ ಮಾಡಿಕೊಟ್ಟಿದ್ದಾರೆ.

ಎ. ವಿ. ಎನ್.

ವೇದ ಕಾಲದ ವಿವಾಹಗಳು

ಲೇ ! ವಿದ್ವಾನ್ ಸಾಂಬ ದೀಕ್ಷಿತ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1982
ಬೆಲೆ : 50 ಪೈಸೆ

ಕೇವಲ 27 ಪುಟಗಳ ಪುಟ್ಟ ಪುಸ್ತಿಕೆ ಇದು. ವೇದಕಾಲದ ವಿವಾಹದ ವಿವಿಧ ರೂಪಗಳನ್ನು ಸಾಮಾನ್ಯ ಜನಗಳಿಗೆ ಪರಿಚಯ ಮಾಡಿಕೊಡುವ ಆಸೆಯಿಂದ ಲೇಖಕರು ಹೊರಟಿದ್ದಾರೆ. ಆದರೆ ಆ ಆಸೆ ಬಹುಮಟ್ಟಿಗೆ ಸಫಲವಾಗಿಲ್ಲವೆಂದು ಹೇಳಬೇಕಾಗಿದೆ. ಮುಖ್ಯವಾಗಿ ವಿಷಯವನ್ನು ವಿಂಗಡಿಸಿಕೊಂಡಿಲ್ಲ. ಸಾಮಾನ್ಯ ಜನಗಳಿಗಾಗಿಯೇ ಬರೆದ ಈ ಪುಸ್ತಕದಲ್ಲಿ ಪ್ರತಿ ಪುಟದಲ್ಲಿಯೂ ವೈದಿಕ ಸಾಹಿತ್ಯದಿಂದ ಆಯ್ದ ಸಂಸ್ಕೃತ ಶ್ಲೋಕಗಳಿವೆ. ಅವುಗಳಲ್ಲಿ ಕೆಲವಕ್ಕೆ ಕೊಟ್ಟಿರುವ ಭಾಷಾಂತರವೂ ಗೊಂದಲಮಯ. ವೇದಕಾಲ ಎಂಬುದು ಯಾವ ಕಾಲವನ್ನು ಸೂಚಿಸುತ್ತದೆ ಎನ್ನುವುದು, ಅದರ ಕಾಲ ಮಾನ ಮುಂತಾದ ಯಾವ ವಿವರಗಳೂ ಇಲ್ಲಿಲ್ಲ. ಇದ್ದಕ್ಕಿದ್ದಂತೆ ಇತರ ಧರ್ಮದಲ್ಲಿ ವಿವಾಹಗಳು ಎಂಬ ಶೀರ್ಷಿಕೆ ಪ್ರಾರಂಭವಾಗಿ ಕೇವಲ ಒಂದೇ ಪುಟದಲ್ಲಿ ಮುಕ್ತಾಯ ವಾಗುತ್ತದೆ. ಇದೇ ರೀತಿಯಲ್ಲಿ ಯಾವ ಸೂಚನೆಯನ್ನೂ ಕೊಡದೆ ಋಗ್ವೇದದ ಸೂಕ್ತ ದೊಂದಿಗೆ ಪುಸ್ತಕ ಹಠಾತ್ತಾಗಿ ಕೊನೆಗೊಂಡಿದೆ. ಒಟ್ಟಿನಲ್ಲಿ ವೇದಕಾಲದ ವಿವಾಹ ಗಳನ್ನು ತಿಳಿಯ ಬಯಸುವವರಿಗೆ ಈ ಪುಸ್ತಕ ಹೆಚ್ಚಿನ ನೆರವನ್ನು ಕೊಡುವುದಿಲ್ಲ.

ಎ. ವಿ. ಎನ್.

ಹಳ್ಳಿಯ ಬೃಹತ್ ಯೋಜನೆ

ಲೇ : ಎಂ.ಎಸ್. ಹುಲ್ಲೋಳಿ, ಪ್ರಸಾರಾಂಗ, ಕರ್ಣಾಟಕ ವಿಶ್ವವಿದ್ಯಾಲಯ,
ಧಾರವಾಡ, ೧೯೮೨, ಪುಟ ೧-೭೫

ಕರ್ಣಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ಉಪನ್ಯಾಸ ಗ್ರಂಥಮಾಲೆಯಲ್ಲಿ ಪ್ರಕಟವಾಗಿರುವ ಈ ಕಿರುಹೊತ್ತಿಗೆಯು 'ಹಳ್ಳಿಯ ಬೃಹತ್ ಯೋಜನೆ'ಯೆಂಬ ಶಿರೋ ನಾಮೆಯನ್ನು ಹೊಂದಿದ್ದು, ಈ ಶಿರೋನಾಮೆಯನ್ನು ಅವಲೋಕಿಸಿದಾಗ ಇದೊಂದು ಹಳ್ಳಿಗಳ ಆರ್ಥಿಕ ಯೋಜನೆಗೆ ಸಂಬಂಧಪಟ್ಟ ಪ್ರಕಟಣೆಯೆಂದು ಓದುಗರಿಗೆ ಅನ್ನಿಸದಿರ

ಲಾರದು. ಆದರೆ ಇದು ಹಳ್ಳಿಗಳ ಆರ್ಥಿಕ ಯೋಜನೆಗೆ ನೇರವಾಗಿ ಸಂಬಂಧಿಸಿರದೆ, ನಗರಗಳ ಯೋಜನೆಯಂತೆ, ಹಳ್ಳಿಗಳ ಯೋಗ್ಯ ವಾತಾವರಣ ಮತ್ತು ಪರಿಸರ ನಿರ್ಮಾಣಕ್ಕೆ ಸಂಬಂಧಿಸಿದ ಹಾಗೂ ಇಂಜಿನಿಯರಿಂಗ್ ಮತ್ತು ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಒಂದು ಬೃಹತ್ ಯೋಜನೆ ಅಥವಾ 'ಮಾಸ್ಟರ್ ಪ್ಲಾನ್' ಆಗಿದೆ. ಇದರ ಲೇಖಕರು ಸ್ವತಃ ಇಂಜಿನಿಯರ್ ಆಗಿದ್ದು ಈ 'ಬೃಹತ್ ಯೋಜನೆಯ' ಬಗ್ಗೆ ವಿಶ್ಲೇಷಿಸಿದ್ದಾರೆ. ಅವರ ಮಾತಿನಲ್ಲೇ ಹೇಳುವುದಾದರೆ ಹಳ್ಳಿಗರ ನೆಮ್ಮದಿಗಾಗಿ ಯೋಗ್ಯ ವಾತಾವರಣ ನಿರ್ಮಿಸುವ ವಿಜ್ಞಾನ ಹಾಗೂ ಕಲೆಗಳ ಸಮ್ಮಿಳಿತ ಕಾರ್ಯಕ್ರಮವೇ ಹಳ್ಳಿಯ ಬೃಹತ್ ಯೋಜನೆಯಾಗಿದೆ. ಎಂಜಿನಿಯರಿಂಗ್, ವಾಸ್ತುಶಿಲ್ಪ, ಆರ್ಥಿಕ ಸಾಮಾಜಿಕ ಪರಿಸ್ಥಿತಿ, ಆಡಳಿತ, ಕಾಯಿದೆ-ಕಾನೂನು ಮತ್ತು ಗ್ರಾಮೀಣ ಜೀವನಗಳನ್ನು ಕುರಿತ ಎಲ್ಲಾ ವಿಚಾರಗಳಿಗೂ ಈ ಕಾರ್ಯಕ್ರಮದೊಂದಿಗೆ ಸಂಬಂಧವಿದೆ." (ಪುಟ. ೩೮)

ಈ ಬೃಹತ್ ಯೋಜನೆಗೆ ಹಿನ್ನೆಲೆಯಾಗಿ ಲೇಖಕರು, ಭಾರತದಲ್ಲಿ ಗ್ರಾಮಾಭಿವೃದ್ಧಿಯ ಪ್ರಾಮುಖ್ಯತೆ, ಅದರ ದೃಷ್ಟಿಕೋನ ಮತ್ತು ಮಹತ್ವದ ಅಂಶಗಳು, ಗ್ರಾಮೀಣ ಅಭಿವೃದ್ಧಿಯ ಪ್ರಯತ್ನಗಳ ಸಮೀಕ್ಷೆ, ಅವುಗಳ ಪ್ರಮುಖ ಸೂತ್ರ ಹಾಗೂ ಯೋಗ್ಯ ತಂತ್ರಜ್ಞಾನ, ಸರಕಾರಿ ಸೇನಾಧಿಕಾರಿಗಳ ಅವಶ್ಯಕತೆ, ಪ್ರದೇಶಾಭಿವೃದ್ಧಿ- ಇವೆಲ್ಲವುಗಳ ಬಗ್ಗೆ ಸ್ಥೂಲ ಪರಿಚಯವನ್ನು ಮೊದಲನೆ ಎರಡು ಅಧ್ಯಾಯಗಳಲ್ಲಿ (ಸುಮಾರು ೩೫ ಪುಟಗಳಲ್ಲಿ) ಮಾಡಿಕೊಟ್ಟಿದ್ದಾರೆ.

ಮುಖ್ಯ ವಿಷಯವಾದ ಹಳ್ಳಿಯ ಬೃಹತ್ ಯೋಜನೆಯ ಬಗ್ಗೆ ಮಿಕ್ಕ ಮೂರು ಅಧ್ಯಾಯಗಳಲ್ಲಿ ಸುದೀರ್ಘವಾಗಿ ಚರ್ಚಿಸಿ, ಭಾರತದಲ್ಲಿ ಗ್ರಾಮ ಬೃಹತ್ ಯೋಜನೆಯ ಚಾರಿತ್ರಿಕ ಹಿನ್ನೆಲೆ, ಅದರ ತತ್ವ ಮತ್ತು ಪ್ರಕ್ರಿಯೆ, ಅದರ ತಯಾರಿಕೆಯ ವಿಧಿ ವಿಧಾನಗಳು, ಅದರ ಕಾರ್ಯಾಚರಣೆ ಮತ್ತು ಜನತೆಯ ಪಾತ್ರ, ಸರ್ಕಾರದ ಪಾತ್ರ, ಹಾಲಿ ಭಾರತದಲ್ಲಿರುವ ಹಳ್ಳಿಗಳ ಪುನರ್‌ನಿರ್ಮಾಣ, ಅದಕ್ಕೆ ಅವಶ್ಯಕವಾದ ಯೋಜನಾ ಮಾರ್ಗ ಮತ್ತು ಯೋಜನೆಯ ನಕ್ಷೆ ಇತ್ಯಾದಿ ತಾಂತ್ರಿಕ ವಿಷಯಗಳನ್ನು ಸರಳವಾದ ಶೈಲಿ ಮತ್ತು ಭಾಷೆಯಲ್ಲಿ ಎಲ್ಲಾ ಶ್ರೀಸಾಮಾನ್ಯರಿಗೂ ಸುಲಭವಾಗಿ ತಿಳಿಯುವಂತೆ ನಿರೂಪಿಸಿದ್ದಾರೆ.

ಹಳ್ಳಿಯ ಬೃಹತ್ ಯೋಜನೆಯ ವಿಚಾರ ಗ್ರಹಿಕೆಗೆ ಪೂರಕವಾಗಿಯೂ ಮತ್ತು ಈ ಯೋಜನೆಯ 'ಮಾಹಿತಿ, ಉಪಯೋಗ ಮತ್ತು ಪರಿಣಾಮಗಳ ಬಗ್ಗೆ ಸ್ಪಷ್ಟ ಕಲ್ಪನೆ ಮೂಡಿಬರಲಿ ಎಂಬ ಆಶಯದಿಂದಲೂ' ಸಹ 'ಹುಬ್ಬಳ್ಳಿ-ಧಾರವಾಡ ನಗರ ಯೋಜನಾ ಪ್ರಾಧಿಕಾರ ವ್ಯವಸ್ಥೆಯವರು ಮಹಾನಗರ ಯೋಜನೆ ತಯಾರಿಸಿದ ಸಂದರ್ಭದಲ್ಲಿ ನಮೂದಿತವಾಗಿರುವ 'ಗ್ರಾಮಗಟ್ಟಿ' ಗ್ರಾಮದ ಬೃಹತ್ ಯೋಜನೆಯ ನಕ್ಷೆಯನ್ನು ಲೇಖಕರು ಈ ಹೊತ್ತಿಗೆಯಲ್ಲಿ ಸೇರಿಸಿದ್ದಾರೆ. ಜೊತೆಗೆ ಕರ್ನಾಟಕದಲ್ಲಿ ಗ್ರಾಮ ಯೋಜನೆಯ ಬಗ್ಗೆಯೂ ಎರಡು ಮಾತನ್ನು ಹೇಳಿ ಉಪಸಂಹಾರ ಬರೆದಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಈ ಕಿರು ಹೊತ್ತಿಗೆಯು ಹಳ್ಳಿಯ ಬೃಹತ್ ಯೋಜನಾ ವಿಷಯ

ದಲ್ಲಿ ತಾಂತ್ರಿಕ ಹಾಗೂ ವೈಜ್ಞಾನಿಕ ವಿಷಯಗಳ ಬಗ್ಗೆ ಜನಸಾಮಾನ್ಯರಿಗೆ ಸರಳಭಾಷೆಯಲ್ಲಿ ಹಾಗೂ ಸರಳ ಶೈಲಿಯಲ್ಲಿ ಸುಲಭವಾಗಿ ಅರ್ಥವಾಗುವಂತೆ ನಿರೂಪಿಸಲ್ಪಟ್ಟ ಒಂದು ಉಪಯುಕ್ತವಾದ ಕೊಡುಗೆಯಾಗಿದೆ. ಆದರೆ ಇಲ್ಲಿ ನಿರೂಪಿಸಲ್ಪಟ್ಟಿರುವ ಎಲ್ಲಾ ವಿಷಯಗಳನ್ನು ಒಂದಕ್ಕೊಂದು ಪೂರಕವಾಗಿರುವಂತೆ ಅನುಕ್ರಮವಾಗಿ ನಿರೂಪಿಸಿದ್ದಲ್ಲಿ ಈ ಪ್ರಕಟಣೆಯ ಉಪಯುಕ್ತತೆ ಮತ್ತಷ್ಟು ಹೆಚ್ಚುತ್ತಿತ್ತೆಂದು ಅನಿಸುತ್ತದೆ. ಅದೇ ರೀತಿ ಲೇಖಕರು ಹೇಳಿರುವ ಹಾಗೆ ಈ ಬೃಹತ್ ಯೋಜನೆಯ ಕಾರ್ಯಕ್ರಮ ಮುಂದುವರಿಯುವದರಲ್ಲಿ ಹಣದ ಮುಗ್ಗಟ್ಟು, ಚಾರಿತ್ರ್ಯದ ಮುಗ್ಗಟ್ಟು, ಧ್ಯೇಯಗಳ ಅಭಾವ, ಹಳ್ಳಿಗರ ಅಜ್ಞಾನ, ಅಂಧಕಾರ, ಆಲಸ್ಯ — ಇವೇ ಮುಂತಾದುವುಗಳು ಮುಖ್ಯ ಸಮಸ್ಯೆಗಳಾಗಿವೆ. ಈ ಸಮಸ್ಯೆಗಳನ್ನು ಬಗೆಹರಿಸಿ ಜನಜಾಗೃತಿ ಉಂಟುಮಾಡುವಲ್ಲಿ ಸರ್ಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಗಳು ಮಹತ್ವದ ಪಾತ್ರ ವಹಿಸಬಲ್ಲುವು. ಇಂಥಹ ಮಹತ್ಕಾರ್ಯ ಸ್ಥಾಪನೆಗೆ ಬೇಕಾದ ಮನೋಧರ್ಮ ರೂಪಿಸಿಕೊಳ್ಳಲು ಸಾಹಿತಿ ಡಿ. ವಿ. ಜಿ. ಯವರು ಹೇಳಿರುವಂತೆ 'ಸ್ವಾರ್ಥ ತ್ಯಾಗದ ದೈವಭಕ್ತಿ, ಪಾಲುದಾರಿಕೆಯಿಲ್ಲದ ಪೌರುಷ ಸಂಧಾನ, ಉತ್ಸಾಹ ತುಂಬಿದ ಲೋಕಧರ್ಮ ಶ್ರದ್ಧೆ ಈ ತ್ರಿಗುಣಗಳ ಸಂಗಮವು ಅತ್ಯಾವಶ್ಯಕವೆಂದು ಲೇಖಕರು ಸೂಚಿಸಿದ್ದಾರೆ. ಈ ತ್ರಿಗುಣ ಸಂಗಮವು ನಮ್ಮ ದೇಶದ ಜನರಲ್ಲಿ ಸಾಧ್ಯವೇ ಎನ್ನುವ ಶಂಕೆ ನಮ್ಮೆಲ್ಲರ ಮನಸ್ಸಿನಲ್ಲಿ ಮೂಡುವುದು ಸಹಜವೇ.

ಎಸ್. ನಾಗರಾಜು